# ಪುಸ್ತಕ ಪ್ರಪಂಚ

## ಬೇಂದ್ರೆ ವಿಶೇಷ ಸಂಚಿಕೆ



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

# ಪುಸ್ತಕ ಪ್ರಪಂಚ

## ಮಾಸಿಕ

ಸಂಪುಟ ೪೭ ಸಂಚಿಕೆ ೨–೩

ನವಂಬರ್-ಡಿಸೆಂಬರ್–೧೯೯೫

ಮುಖ ಚಿತ್ರ : ದ. ರಾ. ಬೇಂದ್ರೆ



## ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price: Rupees Six

ಬಿಡಿಪ್ರತಿ: ರೂ. 6

ವಾರ್ಷಿಕ ಚಂದಾ: ರೂ. 60

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. 400

ಸಂಸ್ಥೆಗೆ: ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 006

## ಅಂಬಿಕಾತನಯದತ್ತ ಚಿರಾಯುವಾಗಲಿ

ಎಂಬತ್ತೈದು ವರ್ಷ (೩೧–೧–೧೮೯೬ ಜನನ) ಸಾರ್ಥಕ ಜೀವನವನ್ನು ನಡೆಸಿದ ರಸಋಷಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ೧೯೮೧ ರಲ್ಲಿ ನಿಧನರಾದರು. ಬೇಂದ್ರೆಯವರ ಭೌತಿಕ ದೇಹ ಪಂಚಭೂತಗಳಲ್ಲಿ ವಿಲೀನಗೊಂಡರೂ, ಅಂಬಿಕಾತನಯದತ್ತರು ವಾಙ್ಮಯ ಶರೀರಿಯಾಗಿ, ಭಾರತಿಗೆ ಬೆಳಕಾಗಿ, ಕನ್ನಡಿಗರಿಗೆ ಧ್ರುವತಾರೆಯಾಗಿ, ಕನ್ನಡಕ್ಕೆ ಆಶೀರ್ವಾದ ಶಕ್ತಿಯಾಗಿ ನಮ್ಮೊಡನಿದ್ದಾರೆ; ಕನ್ನಡ ಜನಮನದಲ್ಲಿ ಚಿರಾಯುವಾಗಿ ಉಳಿಯುತ್ತಾರೆ.

ಬೇಂದ್ರೆಯವರು ಹುಟ್ಟಿದ್ದು ಧಾರವಾಡದಲ್ಲಿ; ತಂದೆ ರಾಮಚಂದ್ರ ಪಂತರು, ತಾಯಿ ಅಂಬಾಬಾಯಿಯವರು, ಕೈಹಿಡಿದ ಮಡದಿ ಲಕ್ಷ್ಮೀಬಾಯಿಯವರು. ಧಾರವಾಡದಲ್ಲಿ ಮ್ಯಾಟ್ರಿಕ್ ಪರೀಕ್ಷೆ ಮುಗಿಸಿ, ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು, ೧೯೧೮ ರಲ್ಲಿ ತಾವು ಓದಿದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕರಾಗುತ್ತಾರೆ. ಅಷ್ಟು ಹೊತ್ತಿಗಾಗಲೇ ಅವರು ಬಲ್ಲವರಿಂದ, ಬಲ್ಲಿದರಿಂದ ನವಕವಿ ಎನಿಸಿಕೊಂಡು, ಕಾವ್ಯಜೀವನವನ್ನಪ್ಪಿಕೊಳ್ಳುತ್ತಾರೆ. ಜತೆಜತೆಯಲ್ಲಿಯೇ ವೇದೋಪನಿಷತ್ತು, ಭಗವದ್ಗೀತೆ, ಕಾಳಿದಾಸ, ಅಲ್ಲಮಾದಿ ವಚನಕಾರರು, ಜ್ಞಾನೇಶ್ವರ, ಅರವಿಂದ, ಶ್ರೀಮಾತಾ ಸಾಹಿತ್ಯ ಸಾಗರದಲ್ಲಿ ಮುಳುಗೇಳುತ್ತಾರೆ.

ಆರೇಳು ವರ್ಷಗಳನಂತರ ಅವರು ಮತ್ತೆ ಫರ್ಗ್ಯುಸನ್ ಕಾಲೇಜು ಸೇರಿ, ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯಗಳನ್ನಾರಿಸಿಕೊಂಡು ಎಂ.ಎ. ಪದವಿ ಪಡೆಯುತ್ತಾರೆ. ಅಲ್ಲಿ ವ್ಯಾಸ ವಾಲ್ಮೀಕಿಯರನ್ನು ಆಳವಾಗಿ ಅಭ್ಯಾಸಮಾಡಿದರಲ್ಲದೆ, ಶೇಕ್ಸ್‌ಪಿಯರ್, ಷೆಲ್ಲಿ, ಬೈರನ್, ಟೆನಿಸನ್ ಮೊದಲಾದ ಆಂಗ್ಲಕವಿ ಕೃತಿಗಳ ಅಧ್ಯಯನದಿಂದ, ತಮ್ಮ ಜ್ಞಾನದಿಗಂತವನ್ನು ವಿಸ್ತರಿಸಿಕೊಳ್ಳುತ್ತಾರೆ. ಬುದ್ಧಿ ಪ್ರತಿಭೆ ವಿದ್ವತ್ತುಗಳ ಸಂಗಮಕ್ಷೇತ್ರವಾಗಿದ್ದರೂ, ಅವರು ನೌಕರಿಗಾಗಿ ಹುಬ್ಬಳ್ಳಿ, ಗದುಗು ಮತ್ತು ಪುಣೆಗಳ ನಡುವೆ ಎರಡು ಮೂರುವರ್ಷ ಅಲೆದಾಡಬೇಕಾಗುತ್ತದೆ. ಆ ಸಮಯದಲ್ಲಿ ಪತ್ರಿಕಾ ಪ್ರಪಂಚಕ್ಕೂ ಕಾಲಿಡಬೇಕಾಗುತ್ತದೆ. ಕೊನೆಗೆ ೧೯೪೪ ರಲ್ಲಿ ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಹುದ್ದೆ ಅವರಿಗೆ ದೊರೆಯುತ್ತದೆ.

ನಿರುದ್ಯೋಗ ದಾರಿದ್ರ್ಯ ಹಾಗೂ ಆಧಿದೈವಿಕ ಪೀಡೆಗಳಿಂದ ನರಳಬೇಕಾಗಿದ್ದರೂ ಅವರು ಚಿತ್ತಸ್ವಾಸ್ಥ್ಯವನ್ನು ಕಳೆದುಕೊಳ್ಳದೆ ಕಾವ್ಯಶ್ರೀ ಉಪಾಸನೆಯಲ್ಲಿ ಮಗ್ನರಾಗಿ, ಲೌಕಿಕ ಬಾಧೆಗಳನ್ನು ಮರೆಯುತ್ತಾರೆ. ಸೊಲ್ಲಾಪುರದಲ್ಲಿ ಅವರು ಕಳೆದ ದಿನಗಳು ಅವರ ಕಾವ್ಯಜೀವನದ ಉತ್ಕೃಷ್ಟ ಕಾಲವೆಂದೇ ಹೇಳಬಹುದು. ಕೃಷ್ಣಾಕುಮಾರಿ (೧೯೨೨) ಅವರ ಮೊದಲ ಪ್ರಕಟಿತ ಖಂಡಕಾವ್ಯ. ೧೯೩೨ ರಲ್ಲಿಪ್ರಕಟವಾದ 'ಗರಿ'

ಅವರ ಮಾತ್ರವಲ್ಲ ಕನ್ನಡ ಭುವನೇಶ್ವರಿಯ ಕಿರೀಟದ ಚಿನ್ನದ ಗರಿಯಾಗುತ್ತದೆ. ಹಾಡು-ಪಾಡು (೧೯೪೬), ಗಂಗಾವತರಣ (೧೯೫೧), ಅರಳು–ಮರಳು (೧೯೫೭), ಸೂರ್ಯಪಾನ (೧೯೫೭), ಹೃದಯ ಸಮುದ್ರ (೧೯೫೭), ಮುಕ್ತಕಂಠ (೧೯೫೭), ವಿಚಾರಮಂಜರಿ (೧೯೪೫), ಹೊಸ ಸಂಸಾರ ಮತ್ತು ಇತರ ನಾಟಕಗಳು (೧೯೫೦)—ಇವೇ ಮೊದಲಾದ ಕೃತಿಗಳು ಸೊಲ್ಲಾಪುರದಲ್ಲಿದ್ದ ಅವಧಿಯಲ್ಲಿ ಪ್ರಕಟವಾಗುತ್ತವೆ. 'ಜ್ಞಾನಪೀಠ ಪ್ರಶಸ್ತಿ'ಯನ್ನಾಕರ್ಷಿಸಿದ ಕೃತಿ 'ನಾಕು ತಂತಿ' ಪ್ರಕಟವಾದದ್ದು ೧೯೬೪ ರಲ್ಲಿ.

ಭಾಷಾಂತರಗಳೂ (೭) ಸೇರಿ ಸುಮಾರು ಐವತ್ತು ಗ್ರಂಥಗಳನ್ನು ರಚಿಸಿ, ಕನ್ನಡ ಸಾರಸ್ವತ ಸಂಪತ್ತನ್ನು ಸಮೃದ್ಧಿಗೊಳಿಸಿರುವ, ಭಾವಗೀತೆಗಳ ಮಹಾಕವಿಯೆಂದು ಪ್ರಕೀರ್ತಿತರಾಗಿರುವ ಅಂಬಿಕಾತನಯದತ್ತರು ಕನ್ನಡಕ್ಕೆ ಅಸೀಮಕೀರ್ತಿಯನ್ನು ತಂದು ಕೊಟ್ಟ ಮಹಾನುಭಾವರು—ಅವರು ಮಹಾನುಭಾವರೆಂಬುದರಲ್ಲಿ ಸಂಶಯವೇ ಇಲ್ಲ. ಕನ್ನಡ ಭಾಷಾ ಸಾಹಿತ್ಯಗಳಿಗೆ ರಾಷ್ಟ್ರೀಯ ಮಾತ್ರವಲ್ಲ, ಅಂತರರಾಷ್ಟ್ರೀಯ ಗೌರವವನ್ನು ಗಳಿಸಿಕೊಟ್ಟ ಅಭಿನವ ಕಾಳಿದಾಸರು. ಅವರನ್ನು ಹೆತ್ತತಾಯಿ ಮರಾಠಿ! ಹಾಲೂಡಿದ ತಾಯಿ ಕನ್ನಡ. ಹಾಲು ತಾಯಿಯನ್ನು ಬಿಗಿಯಾಗಿ ಆಲಿಂಗಿಸಿಕೊಂಡರೂ, ಹೆತ್ತತಾಯಿಯನ್ನು ಮರೆಯದೆ ಮರಾಠಿಯಲ್ಲಿಯೂ ಗ್ರಂಥರಚನೆಮಾಡಿದ್ದಾರೆ, ಎರಡೂ ಭಾಷೆಗಳ ಜನರ ಸಮಾನ ಪ್ರೀತಿಗೆ ಪಾತ್ರರಾಗಿದ್ದಾರೆ.

ಬೇಂದ್ರೆಯವರು ಶಬ್ದಗಾರುಡಿಗರು, ಅವರ ಕವನಗಳು ಮಂತ್ರಗಳೆಂಬ ಮಾತು ಅಪ್ಪಟಸತ್ಯ. ಅವರ ಭಾಷಣಗಳನ್ನು ಕೇಳಿದವರಿಗೆ ಮಾತ್ರ ಅವರ ಗಾರುಡಿಗತನದ ನೆನಪಿದ್ದೀತು; ಅವರ ಗೀತೆಗಳನ್ನಾಲಿಸಿದವರಿಗೆ ಅವರ ಸಮ್ಮೋಹನ ಸಾಮರ್ಥ್ಯದ ಅರಿವಿದ್ದೀತು.

ಅಂಥ ಸರಸ್ವತೀ ಪುತ್ರನಿಗೆ ಇನ್ನೇನು ನೂರು ವರ್ಷ ತುಂಬಲಿವೆ. ಕನ್ನಡ ನಾಡಿನ ಉದ್ದಗಲಗಳಲ್ಲಿ ಸಂಚರಿಸಿ, ಹಾಡಿ ಪಾಡಿ ನಗಿಸಿ ಕನ್ನಡಿಗರನ್ನು ಆನಂದದಲ್ಲದ್ದಿದ, ಮುಂದೆಯೂ ಅವರ ಮನಹೃದಯಗಳನ್ನು ರಂಜಿಸುವ, ಬದುಕನ್ನು ಮಡಿಗೈಯುವ, ಅವರಿಗೆ ಸದಾಸ್ಫೂರ್ತಿಯಾಗುಳಿಯುವ ಆ ಅನಾದಿಕವಿಯ ಪ್ರತಿಬಿಂಬಕ್ಕೆ ಗೌರವ ಪೂರ್ವಕ ಕೃತಜ್ಞತೆಯನ್ನು 'ಪುಸ್ತಕ ಪ್ರಪಂಚ' ಈ ವಿಶೇಷ ಸಂಚಿಕೆಯ ಮೂಲಕ ಸಲ್ಲಿಸುತ್ತದೆ.

ಈ ವಿಶೇಷ ಸಂಚಿಕೆಯನ್ನು ಸಿದ್ಧಪಡಿಸಲು ನೆರವಾದ ಎಲ್ಲ ಬರಹಗಾರರನ್ನು ಸಂಪಾದಕ ಮಂಡಲಿ ಹಾಗೂ ವಯಸ್ಕರ ಶಿಕ್ಷಣ ಸಮಿತಿಯ ಪರವಾಗಿ ವಂದಿಸುತ್ತೇನೆ.

ದೇಜಗೌ



೧೯೧೯—ಬೇಂದ್ರೆಯವರ ವಿವಾಹ ಸಂದರ್ಭದ ಚಿತ್ರ :

ನಿಂತವರಲ್ಲಿ ಎಡಗಡೆಯಿಂದ—ಮೊದಲನೆಯವರು (ತಲೆಗೆ ರುಮಾಲು ಸುತ್ತಿರುವವರು)—ದ.ರಾ. ಬೇಂದ್ರೆ. ೨ ನೆಯವರು—ಬೇಂದ್ರೆ ಅವರ ತಮ್ಮ ಕೃಷ್ಣ ಬೇಂದ್ರೆ. ೩ ನೆಯವರು—ಗೆಳೆಯ ಶ್ರೀ ಶೀನಪ್ಪ. ಕುಳಿತಿರುವವರು—ಶ್ರೀಮತಿ ಲಕ್ಷ್ಮೀಬಾಯಿ ಬೇಂದ್ರೆ.



೧೯೨೩ರ ಸುಮಾರು ದ.ರಾ. ಬೇಂದ್ರೆ–ಬಿ.ಎಂ.ಶ್ರೀ. ಅವರೊಂದಿಗೆ.
ಕುಳಿತಿರುವವರಲ್ಲಿ—ಎಡದಿಂದ ೨ ನೆಯವರು: ಬೇಂದ್ರೆ. ೩ ನೆಯವರು: ಬಿ.ಎಂ.ಶ್ರೀ.



" ದ.ರಾ. ಬೇಂದ್ರೆ ೩೦-೩೫ ವರ್ಷದವರಿದ್ದಾಗ "



"೧೯೬೦-೬೨ ರ ಸುಮಾರಿನಲ್ಲಿ ಬೇಂದ್ರೆ ಅವರು
ಗೋಕರ್ಣದ ಸಮುದ್ರ ತೀರದಲ್ಲಿ"



೧೯೬೬ ರ ಸುಮಾರಿನ ಬೇಂದ್ರೆಯವರು.

# ದ. ರಾ. ಬೇಂದ್ರೆ ಮರಾಠಿ ಕನ್ನಡದ ಸಂಗಮತೀರ್ಥ

**ಮೀನಾ ವಾಂಗೀಕರ**

“ಕವಿ ಶಬ್ದವನ್ನು ಸೃಷ್ಟಿಸುತ್ತಾನೆ; ಸಹೃದಯ ಅದಕ್ಕೆ ಅರ್ಥ ಮೂಡಿಸುತ್ತಾನೆ. ಸರಸ್ವತ್ಯಾಸ್ತತ್ತ್ವಂ ಕವಿ ಸಹೃದಯಾಖ್ಯಂ ವಿಜಯತೇ.” ಹೀಗೆ ಶಬ್ದಾರ್ಥಗಳ ದಾಂಪತ್ಯದ ಮಂಗಲಸೂತ್ರವನ್ನು ಕವಿ-ಸಹೃದಯರು ಸೇರಿಯೆ ಪೋಣಿಸಬೇಕಾಗುತ್ತದೆ. ಕೊನೆಗೂ ಕಾವ್ಯದ ಮೌನದ ಬೆಪ್ಪನ್ನು ಒಡೆಯುವ ಕೆಲಸ ಹೃದಯ ಚತುರ್ಮುಖನಿಂದಲೆ ಆಗಬೇಕು. ಹೀಗೆ ಶಬ್ದ-ಅರ್ಥ-ಕವಿ-ಸಹೃದಯ ಈ ನಾಕು ತಂತಿಗಳ ಮೇಲೆ ಸಾಹಿತ್ಯದ ಪದನ್ಯಾಸ ನಡೆದಿದೆ. ಈ ಚತುಷ್ಪಾದಾ ಗಾಯತ್ರಿಯ ಆವಿಷ್ಕಾರಕ್ಕೆ ವಿಶ್ವಾಮಿತ್ರನ ತಪಸ್ಸು ಬೇಕು; ಛಲವೂ ಬೇಕು.

ಈ ಜಗ, ಅಪ್ಪಾ-ಅಮ್ಮನ ಮಗ
ಅಮ್ಮನೊಳಗ ಅಪ್ಪನ ಮೊಗ
ಅಪ್ಪನ ಕತ್ತಿಗೆ ಅಮ್ಮನ ನೊಗ

ಕಾಳಿದಾಸ “ವಾಗರ್ಥಾವಿವ ಸಂಪೃಕ್ತೌ” ಎಂದ; “ಜಗತಃ ಪಿತರೌ” ಎಂದ. ಇದರ ಮುಂದಕ್ಕೆ “ನಾ ಅವರ ಕಂದ” ಎಂಬ ಭಾವ ಬಂದಾಗ ಶೃಂಗಾರ-ವಾತ್ಸಲ್ಯ ಭಕ್ತಿಗಳ ಈ ತ್ರಿವೇಣೀ ಸಂಗಮದಲ್ಲಿ ಪುಣ್ಯ ಕಾವ್ಯ ಮೂಡಿಕೊಳ್ಳುತ್ತದೆ. ಉಳಿದದ್ದೆಲ್ಲ ಪುಣ್ಯಕಾವ್ಯ” ಬನ್ನಂಜೆ ಗೋವಿಂದಾಚಾರ್ಯರ ಈ ಸೂತ್ರರೂಪದ ನಿರೂಪಣೆ ಬೇಂದ್ರೆ ಪ್ರತಿಭೆಯ ಹಿನ್ನೆಲೆ ಹೇಳುತ್ತದೆ. ಇದು ಬೇಂದ್ರೆಯವರಿಗೆ ಸಿದ್ಧಿಸಿದ್ದು ಹೇಗೆ? ಮರಾಠೀ ಮಾತೆಯ ಸ್ತನ್ಯಪಾನ, ಕನ್ನಡಮ್ಮನ ಗಂಡು ಮೆಟ್ಟಿನ ನೆಲದ ಅಗಾಧ ಜ್ಞಾನ, ಸಂಸ್ಕೃತ ಗಂಗಾದೇವಿಯ ವರದಾನ ಮತ್ತು ಇಂಗ್ಲೀಷ್ ಭಾಷೆಯ ಮೂಲಕ ಆಧುನಿಕ ವಿಷಯಗಳ ಸಂಧಾನ—ಈ ನಾಲ್ಕು ತಂತಿ ನಡೆಯೇ ಇದರ ರಹಸ್ಯ. ವಿವರಗಳಿಗೆ ಈ 'ಸಂಗಮ ತೀರ್ಥ'ವನ್ನು ಸಮೃದ್ಧವಾಗಿ ಆಪೋಶಿಸಿ ನೋಡಿ.

ಸಮಾಜದಲ್ಲಿಯ ಸದ್ಭಾವನೆಗಳಿಗೆ ಸತತವಾಗಿ ಆಹ್ವಾನವನ್ನಿತ್ತು ಅವನ್ನು ಸದಾ ಜಾಗೃತವಾಗಿರಿಸಿ, ಆ ಸದ್ಭಾವನೆಗಳಿಂದಾಗಿ ಹುಟ್ಟುವ ಸತ್ಕಾರ್ಯಗಳಿಗೆ ಪ್ರೋತ್ಸಾಹ ನೀಡುವುದು ಮಹಾ ಕವಿಗಳ ಕಾರ್ಯ. ಅಂತೆಯೇ ನೂರಾರು ವರ್ಷ ಸಂದಿದ್ದರೂ ವ್ಯಾಸ ವಾಲ್ಮೀಕಿಯರ ಪುಣ್ಯಸ್ಮರಣೆಯನ್ನು ಇಂದಿಗೂ ಮಾಡುತ್ತೇವೆ. ಕನ್ನಡ ವರಕವಿ ದ.ರಾ. ಬೇಂದ್ರೆ ಈ ಮಹಾಕವಿಗಳ ಶ್ರೇಷ್ಠ ಪರಂಪರೆಗೆ ಸೇರುತ್ತಾರೆ.

ಆರು ದಶಕಗಳ ಕಾಲದಲ್ಲಿ ಕನ್ನಡ ಕಾವ್ಯಕ್ಕೆ ಪುನರುಜ್ಜೀವನ ನೀಡಿದುದಲ್ಲದೆ ಕನ್ನಡ ಕಾವ್ಯವನ್ನು ಭಾರತದ ಶ್ರೇಷ್ಠ ಮಟ್ಟಕ್ಕೆ ಒಯ್ದು ಒಬ್ಬ ಮಹಾನುಭಾವರು ಬೇಂದ್ರೆ. ಅವರ ನಿರ್ಮಲ ಕೀರ್ತಿಯ

ಪ್ರಭೆ ಕೇವಲ ಕರ್ನಾಟಕದಲ್ಲಲ್ಲ ಮಹಾರಾಷ್ಟ್ರದಲ್ಲಿಯೂ ಹಬ್ಬಿದೆ. ಅವರಲ್ಲಿ ಕವಿಯ ರಸಿಕತೆ, ಪಂಡಿತರ ಪಾಂಡಿತ್ಯ, ತತ್ವನಿಷ್ಠರ ವಿವೇಕ ಇವುಗಳ ಮಧುರ ಮಿಲನ ಕಾಣುತ್ತೇವೆ: ವೇದ, ಭಗವದ್ಗೀತಾ, ಜ್ಞಾನೇಶ್ವರ, ಕಾಳಿದಾಸ, ಶ್ರೀ ಅರವಿಂದ, ಶ್ರೀ ಮಾತಾ—ಭಾರತೀಯ ವೈದಿಕ ಪರಂಪರೆಯ ರಸಪಾಕವೇ ಬೇಂದ್ರೆ.

ಆತ್ಮಚಿಂತನೆಯಲ್ಲಿ ಮಗ್ನರಾದ ಕವಿವರ್ಯರಿಗೆ ಪರಿಚಿತರು ಭೆಟ್ಟಿಯಾದರೆ ಅವರೊಂದಿಗೆ ಆತ್ಮೀಯತೆಯಿಂದ ಹರಟುತ್ತಿದ್ದರು. ಅವರ ಮನಸ್ಸಿನಾಳದಲ್ಲಿ ಯಾವುದಾದರೂ ಗಹನಗೂಢವಾದ ಪ್ರಶ್ನೆಯ ಚಿಂತನೆ ಸದಾ ನಡೆದೇ ಇರುತ್ತಿತ್ತು! ಅವರ ಸಹವಾಸದಲ್ಲಿದ್ದವರಿಗೆ ಅವರ ಈ ವಿಚಾರ ಮಂಥನದ ಲಾಭ ಖಚಿತವಾಗಿ ದೊರೆಯುತ್ತಿತ್ತು. ಒಮ್ಮೆ ಅವರು ನಿಮಗೆ ಸಾಹಿತ್ಯದಲ್ಲಿಯ ಸಿದ್ಧಾಂತದ ಮಹತಿಯನ್ನು ಸೋದಾಹರಣ ತಿಳಿಸಿಯಾರು! ಇನ್ನೊಮ್ಮೆ ವಿಶ್ವರಚನೆಯಲ್ಲಿಯ ಗೂಢ ರಹಸ್ಯವನ್ನು ಭೂಮಿತಿಯ ಪ್ರಮೇಯದ ಮೂಲಕ ಹೇಗೆ ಬಿಡಿಸಬೇಕೆಂಬುದನ್ನು ವಿವರಿಸಿಯಾರು. ಮತ್ತೊಮ್ಮೆ ಪ್ರಚಲಿತ ಸಮಾಜ ಕಾರಣದಲ್ಲಿಯ ದುರ್ಗುಣಗಳ ಬಗ್ಗೆ ತೀವ್ರವಾಗಿ ಟೀಕಿಸಿಯಾರು! ಮಗುದೊಮ್ಮೆ ಜ್ಞಾನೇಶ್ವರಿ ಅಥವಾ ಇನ್ನೊಂದು ಧರ್ಮಗ್ರಂಥದಲ್ಲಿಯ ಮರ್ಮವನ್ನು ಬಿಡಿಸಿಟ್ಟಾರು!

ಕವಿವರ್ಯ ಬೇಂದ್ರೆಯವರ ಜೀವನವೇ ಒಂದು ಮಹಾ ಸಾಧನೆ ಎನ್ನಬಹುದು. ಅವರ ಜೀವನ-ಪಟದೆಡೆ ದೃಷ್ಟಿ ಹಾಯಿಸಿದರೆ ಅವರ ಜೀವನ ಅನೇಕ ತಗ್ಗು-ದಿನ್ನೆಗಳ ಸಹಿತವಾಗಿ ಕಷ್ಟಮಯವಾಗಿತ್ತೆನ್ನುವುದನ್ನು ಅರಿಯಬಹುದು. ಅವೆಲ್ಲವನ್ನೂ ದಾಟುತ್ತ ಅವರ ಜೀವನ ಪ್ರವಾಸ ಯಶಸ್ವಿಯಾಯಿತು.

ಆದರೂ ಈ ಪ್ರವಾಸದಲ್ಲಿ ಅವರ ಕಾವ್ಯಜ್ಯೋತಿ ಸತತವಾಗಿ ಪ್ರಜ್ವಲಿಸುತ್ತಿತ್ತು. ಅವರ ಜ್ಞಾನದೃಷ್ಟಿ ಹೆಚ್ಚು ಹೆಚ್ಚಾಗಿ ವಿಕಸಿಸಿತು. ವೇದೋಪನಿಷತ್ತುಗಳಿಂದ ಜ್ಞಾನೇಶ್ವರ ಅರವಿಂದರವರೆಗೆ ಅನೇಕರ ತತ್ವಪುರಾಣಗಳನ್ನು ಅವರು ಮನಗೊಟ್ಟು ಅಭ್ಯಸಿಸಿದ್ದರು. ತಮ್ಮ ಜೀವನನಿಷ್ಠೆಯನ್ನು ದ್ರಷ್ಟಾರರಾದ ಈ ಮಹಾಪುರುಷರ ಆದರ್ಶಗಳಲ್ಲಿ ಅಚಲವಾಗಿಯೂ ಜಾಗೃತವಾಗಿಯೂ ಇರಿಸಿದರು. ಅಧ್ಯಯನ ಅಧ್ಯಾಪನ ಆತ್ಮಚಿಂತನ ಹಾಗೂ ಈಶ್ವರನ ಅನುಸರಣೆಯಲ್ಲಿ ಬೇಂದ್ರೆ ಸದೈವಮಗ್ನರಾಗಿರುತ್ತಿದ್ದರು. ಈ ಮಹಾಪುರುಷನಿಗೆ ಶತಶಃ ನಮನಗಳು.

"ರಸವೆ ಜನನ, ವಿರಸ ಮರಣ, ಸಮರಸವೆ ಜೀವನ" ಎಂಬ ಶತಕಾಲ ಉಳಿಯುವ ಸಿದ್ಧಾಂತ ಬೋಧಿಸಿ ಕನ್ನಡ ಕಾವ್ಯಕ್ಕೆ ಹೊಸ ಆಯಾಮ ನೀಡಿದ ಕವಿ ಇವರು. ಆಶ್ಚರ್ಯದ ಮತ್ತು ಅಭಿಮಾನದ ಸಂಗತಿಯೆಂದರೆ ಇವರು ಮಹಾರಾಷ್ಟ್ರದವರಿಗೆ ತಮ್ಮವರೇ ಅನ್ನಿಸುತ್ತಾರೆ. ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿ ಜನಪ್ರಿಯರಾದ ಕೆಲವೇ ಜನರಲ್ಲಿ ಬೇಂದ್ರೆ ಬಲು ಗಣನೀಯರು. ಅವರನ್ನು ಕರ್ನಾಟಕದ ಟಾಗೋರರೆಂದು ಗೌರವಿಸುತ್ತಾರೆ. ಬೇಂದ್ರೆಯವರೆಂದರೆ ಕರ್ನಾಟಕಕ್ಕೆ ಮಹಾರಾಷ್ಟ್ರದ ಕೊಡುಗೆ ಎಂದೂ ಹೇಳುವವರಿದ್ದಾರೆ. ಆದರೆ ನಿಜವಾಗಿ ಹೇಳಬೇಕಾ

ದರೆ ಅವರು ಕನ್ನಡ ಹಾಗೂ ಮರಾಠಿ ಭಾಷೆಯ ಸಂಗಮತೀರ್ಥ. ಕನ್ನಡ ಹಾಗೂ ಮರಾಠಿ ಸಂಸ್ಕೃತಿಯ ಪ್ರಯಾಗ ಸ್ಥಳ!

ಕನ್ನಡ ಮತ್ತು ಮರಾಠಿ ಭಾಷೆಯನ್ನು ಬಲ್ಲ ಅನೇಕ ಕನ್ನಡ ಸಾಹಿತಿಗಳಿದ್ದಾರೆ. ಆದರೆ ಬೇಂದ್ರೆಯವರ ವೈಶಿಷ್ಟ್ಯಗಳು ಅನೇಕ. ಅವರು ಮರಾಠಿಯ ಸಂತ ಸಾಹಿತ್ಯ ವನ್ನು ಆತ್ಮಗತ ಮಾಡಿಕೊಂಡವರು. ಮಹಾರಾಷ್ಟ್ರದಲ್ಲಿಯ ಅವರ ಮರಾಠಿ ಭಾಷಣಗಳು ಇಂದಿಗೂ ಅವಿಸ್ಮರಣೀಯ ವಾಗಿವೆ. ಅವರು ಮರಾಠಿಯಲ್ಲಿ ಗದ್ಯ ಪದ್ಯ ವನ್ನು ರಚಿಸಿದ್ದಾರಷ್ಟೇ ಅಲ್ಲ, ಅವರ ಗದ್ಯ ಗ್ರಂಥಕ್ಕೆ ಮಹಾರಾಷ್ಟ್ರದ ಪ್ರತಿಷ್ಠಿತ ವಾದ ನ. ಚಿಂ. ಕೇಳಕರ ಪಾರಿತೋಷಿಕವೂ ದೊರೆತಿದೆ. ಮರಾಠಿಜನರಿಗೆ ಕನ್ನಡ ಭಾಷೆಯ ಮತ್ತು ಸಾಹಿತ್ಯದ ಪರಿಚಯ ಮಾಡಿಕೊಟ್ಟ ವರೇ ಬೇಂದ್ರೆ. ಸಾನೇ ಗುರುಜಿಯವರಿಂದ ಪು. ಲ. ದೇಶಪಾಂಡೆಯವರವರೆಗೆ, ಖ್ಯಾತ ಮರಾಠಿ ನಾಟಕಕಾರ ರಾಮಗಣೇಶ ಗಡಕರಿ ಯವರಿಂದ ಇಂದಿನ ಕವಿ ಅನಿಲರ ವರೆಗೆ ಬೇಂದ್ರೆ ಸುಪರಿಚಿತರು. ಅವರ ಕುರಿತಾಗಿ ಮರಾಠಿ ವೃತ್ತಪತ್ರಿಕೆಗಳಲ್ಲಿ ಬೇಕಾದಷ್ಟು ಲೇಖನಗಳು ಪ್ರಕಟವಾಗಿವೆ. ಇಂದಿಗೂ ಪುಣೆ, ಮುಂಬಯಿ, ಸೊಲ್ಲಾಪುರ, ಸಾಂಗಲಿಯಲ್ಲಿ ಬೇಂದ್ರೆಯವರ ಉಪಾಸ ಕರು, ಅಭ್ಯಾಸಿಗಳು ಇದ್ದಾರೆ. ಕವಿತೆಗಳನ್ನು ಹಾಡುವವರು ಇದ್ದಾರೆ. ಮರಾಠಿಯಲ್ಲಿ ಇಷ್ಟೊಂದು ಜನಪ್ರಿಯವಾದ ಕನ್ನಡ ಸಾಹಿತಿ ಇನ್ನೊಬ್ಬರಿಲ್ಲ.

ಈ ಹಿರಿಮೆ ಹೇಗೆ ಸಾಧ್ಯವಾಯಿತೆಂಬು ದನ್ನು ಅರಿಯಬೇಕಾದರೆ ಅವರ ವ್ಯಕ್ತಿತ್ವ ವಿಕಾಸವನ್ನು ಗಮನಿಸಬೇಕು. ಅವರು ಹುಟ್ಟಿದ್ದು ಧಾರವಾಡದಲ್ಲಿ ಯಾದರೂ ತಾಯಿ ಮಹಾರಾಷ್ಟ್ರ ದವರು. ಹೀಗಾಗಿ ಬೇಂದ್ರೆಯವರ ಮಾತೃ ಭಾಷೆ ಮರಾಠಿ. ಅವರ ಶಿಕ್ಷಣವೆಲ್ಲ ಕನ್ನಡ ದಲ್ಲಿಯೇ ಆಗಿದೆ. ಆದರೆ ಅಮ್ಮ-ಅಜ್ಜಿ ಮನೆ ಯಲ್ಲಿಯ ಮರಾಠಿ ಭಾಷೆಯನ್ನೂ ಕಲಿತರು. ಅಜ್ಜಿ ಮನೆಯವರು ಗೊಂಧಳೇಕರ ಮಹಾ ರಾಜರ ಭಕ್ತರು. ಅಧ್ಯಾತ್ಮದ ಅಭಿರುಚಿ ಆನುವಂಶಿಕವಾಗಿಯೇ ಬಂದಿತೆನ್ನಬಹುದು. ಆ ವಾತಾವರಣದಲ್ಲಿ ಅನೇಕ ಮರಾಠಿ ಭಜನೆ ಹಾಗೂ ಪ್ರವಚನಗಳು ಬೇಂದ್ರೆ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಸಂಸ್ಕಾರ ಛಾಪಿಸಿದುವು. ಇವರು ಮರಾಠಿ ಸಂತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದರು. ಹೀಗಾಗಿ ಆನುವಂಶಿಕವಾಗಿ ಬಂದ ಅಭಿರುಚಿಯನ್ನು ಆಧ್ಯಾತ್ಮಿಕ ನೆಲೆಗಟ್ಟ ನ್ನಾಗಿ ಪರಿವರ್ತಿಸಿದರು. ಹೀಗಾಗಿ ಬೇಂದ್ರೆ ಯವರ ಮೂಲ ವ್ಯಕ್ತಿತ್ವ, ಮರಾಠಿ ಸಂತರ ಪ್ರಭಾವದಿಂದಾಗಿ ರೂಪುಗೊಂಡಿತು ಎನ್ನ ಬಹುದು. ಮೆಟ್ರಿಕ್‌ವರೆಗಿನ ಶಿಕ್ಷಣ ವನ್ನು ಕನ್ನಡ ಮಾಧ್ಯಮದಲ್ಲಿ ಮುಗಿಸಿ (ಧಾರವಾಡ) ಅವರು ಫರ್ಗ್ಯುಸನ್ ಕಾಲೇಜಿನಲ್ಲಿ ಪದವಿ ಶಿಕ್ಷಣಕ್ಕಾಗಿ ಪುಣೆ ಸೇರಿದರು.

ಅಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯಗಳನ್ನು ಅಭ್ಯಸಿಸಿದರು. ಫರ್ಗ್ಯುಸನ್ ಕಾಲೇಜಿನಲ್ಲಿಯ ಸುಪ್ರಸಿದ್ಧ ಪ್ರೊಫೆಸರ್ ವಾ. ಮ. ಪಟವರ್ಧನ್ ಇಂಗ್ಲಿಷ್ ಸಾಹಿತ್ಯದ ಪ್ರಾಧ್ಯಾಪಕರಾಗಿ ದ್ದರು ಅವರೇ ಈ ಶಿಷ್ಯನಲ್ಲಿ ಸಾಹಿತ್ಯಾಸಕ್ತಿ ಯನ್ನೂ ಕಾವ್ಯದ ಪ್ರೀತಿಯನ್ನೂ ಬಿತ್ತಿ ದರು. ಈ ಕಾಲದಲ್ಲಿ ರಾಮಗಣೇಶ ಗಡಕರಿ,

ಶಿವರಾಮ ಪಂತ ಪರಾಂಜಪೆ ಇವರಂಥ ಹೆಸರಾಂತ ಲೇಖಕರನ್ನು ಹತ್ತಿರದಿಂದ ನೋಡುವ ಅವಕಾಶ ಬೇಂದ್ರೆಯವರಿಗೆ ದೊರೆಕಿತು. ಆ ಪ್ರಭಾವ ಇವರನ್ನು ರೂಪಿಸುವುದರಲ್ಲಿ ನಿಶ್ಚಿತವಾಗಿದೆ. ಅವರ 'ಏಚಕ ಪ್ಯಾಲಾ' ಈ ನಾಟಕದ ಕುರಿತಾಗಿ ಬೇಂದ್ರೆ ಅನಂತರವೂ ಅನೇಕ ವರ್ಷಗಳು ಭಾಷಣ ಮಾಡುತ್ತಿದ್ದರು. ಅದರ ಕುರಿತು ಲೇಖನ ಬರೆದಿದ್ದಾರೆ. ಇದೊಂದು ಅಜರಾಮರ ನಾಟಕ ಎಂದು ಅವರ ಅಭಿಪ್ರಾಯ. ಆಗ ಬೇಂದ್ರೆ ಮರಾಠಿ ಸಂತ ಸಾಹಿತ್ಯದೊಂದಿಗೆ ಟಿಳಕರ ಗೀತಾ ರಹಸ್ಯ ವನ್ನೂ ಆಳವಾಗಿ ಅಧ್ಯಯನಗೈದರು. ಕೇಶವಸುತ, ವಿನಾಯಕ ಹಾಗೂ ಗೋವಿಂದಾಗ್ರಜರ ಸಾಹಿತ್ಯವನ್ನೂ ಅಭ್ಯಸಿಸಿದರು.

ಇವರು ಪುಣೆಯಲ್ಲಿದ್ದಾಗ ಧಾರವಾಡದ ಬಾಬುರಾವ್ ಗೋಖಲೆಯವರ ದೊಡ್ಡಪ್ಪ ಬರೆದ ಕೆಲವು ಪತ್ರಗಳಿಂದ, ಬೇಂದ್ರೆಯವರು ಮರಾಠಿ ನಾಟಕಗಳಿಂದ ಎಷ್ಟೊಂದು ಪ್ರಭಾವಿತ ರಾಗಿದ್ದರೆಂಬುದು ತಿಳಿಯುವು ದೆಂದು ಮರಾಠಿ–ಕನ್ನಡದ ಸಾಹಿತ್ಯ ಸಂಶೋಧಕ ಡಾ. ಪಂಡಿತ ಅವಳೀಕರ ಹೇಳಿದ್ದಾರೆ. ವೀರ ವಾಮನರಾವ್ ಜೋಶಿ ಯವರ 'ರಾಕ್ಷಸೀ ಮಹತ್ವಾಕಾಂಕ್ಷಾ' ಹಾಗೂ ಅಚ್ಯುತ ಬಳವಂತ ಕೊಲ್ಹಟಕರರ ಮತ್ತು 'ನಾರಂಗೀ ನಿಶಾಣ' ಈ ನಾಟಕಗಳ ಶಿವರಾಮ ಪಂತ ಪರಾಂಜಪೆ ಅವರಭಾಷಣ ಗಳ ಉಲ್ಲೇಖ ಈ ಪತ್ರಗಳಲ್ಲಿದೆ.

ಪ್ರಖ್ಯಾತ ನಾಟಕಕಾರ ಖಾಡಿಲಕರರ ಅಣ್ಣನ ಮಗ ಬೇಂದ್ರೆಯವರ ಗೆಳೆಯ. ಖಾಡಿಲಕರರು ನಾಟಕ ಬರೆಯುತ್ತ ಹೋದಂತೆ ಇವರು ಅವುಗಳ ಬಗ್ಗೆ ಚರ್ಚಿಸು ತ್ತಿದ್ದರಂತೆ. 'ಮಾನಾಪಮಾನ,' 'ವಿದ್ಯಾ ಹರಣ' ನಾಟಕಗಳ ಚರ್ಚೆ ಹೇಗೆ ರಂಗೇರು ತ್ತಿತ್ತೆಂಬುದನು ಬೇಂದ್ರೆ ಸ್ಮರಿಸುತ್ತಿದ್ದರು. ಇವರ ಸಹವಾಸದಿಂದಲೇ ಗಡಕರಿಯವರ ನಾಟಕದಲ್ಲಿ ಯಾವಾಗಲೂ ಕನ್ನಡ ಧಾಟಿ ಯಲ್ಲಿ ಮರಾಠಿ ಮಾತಾಡುವ ಒಂದು ಪಾತ್ರವಿರುತ್ತಿತ್ತು. ಈ ಎಲ್ಲ ನಾಟಕ ಪ್ರೇಮದ, ಚರ್ಚೆಯ ಪರಿಣಾಮ ಮುಂದೆ ಬೇಂದ್ರೆ ಬರೆದ ನಾಟಕಗಳ ಮೇಲೆ ಆಗಿರು ವುದು ಸಹಜವೇ. ಶಿವರಾಮ ಪಂತ ಪರಾಂಜಪೆಯವರ ಶಬ್ದಗಳ ಬದಲಾವಣೆ ಯಿಂದ ಉಪಹಾಸ ನೇಯುವ ರೀತಿಯನ್ನು ಬೇಂದ್ರೆಯವರ ನಾಟಕಗಳಲ್ಲಿ ಕಾಣ ಬಹುದು.

ಇವರ ಮೊದಲ ಕವನ ಸಂಕಲನವಾದ 'ಗರಿ'ಯಲ್ಲಿ ಬೇಂದ್ರೆ ಪುಣೆಯಲ್ಲಿದ್ದಾಗ ಓದಿದ್ದು, ನೋಡಿದ್ದು, ಕೇಳಿದ್ದರ ನೆನಪಿನ ಗರಿಗಳನ್ನು ಕಾಣಬಹುದು. ಇವರ ಒಂದು ಕವನದ ಹೆಸರು 'ತುತ್ತೂರಿ.' ಇದು ಕವಿ ಕೇಶವಸುತರ 'ತುತಾರಿ' ಎಂಬ ಕವಿತೆಯ ನೆನ ಪನ್ನು ತರುವುದು. ಮರಾಠಿ ಕವಿ ವಿನಾಯಕರ ಕವಿತೆಯಂತೆಯೇ ಬೇಂದ್ರೆಯವರದೊಂದರ ಹೆಸರು 'ಕೃಷ್ಣ ಕುಮಾರಿ.' 'ಗಂಗಾವತರಣ' ದಲ್ಲಿ ಮರಾಠಿ ಕವಿ ಭಾ. ರಾ. ತಾಂಬೆಯವರ 'ರುದ್ರಾಸ ಆವಾಹನ' ಛಾಯೆ ಉಂಟು. ಕುಣಿಯೋಣು 'ಬಾರ' ಮತ್ತು ಕೇಶವ ಸುತರ 'ಝಪುರ್ಝಾ' ಕವಿತೆಗಳಲ್ಲಿಯ ವಿಲಕ್ಷಣ ಸಾಮ್ಯವನ್ನು ಡಾ. ಪಂಡಿತ ಅವಳೀಕರ ಎತ್ತಿ ತೋರಿಸಿದ್ದಾರೆ.

"ಈ ಎರಡು ಕವಿತೆಗಳಲ್ಲಿಯ ಸಾಮ್ಯ ಕೇವಲ ಹೆಸರಿಗಷ್ಟೇ ಸೀಮಿತವಾಗಿಲ್ಲ.

ಅವುಗಳ 'ಭಾವ'ದಲ್ಲಿಯೂ ವಿಲಕ್ಷಣ ಸಾಮ್ಯವಿದೆಯಲ್ಲದೇ ಭಾವ ಅಭಿವ್ಯಕ್ತಿ ಮಾಡುವಲ್ಲಿ ನೃತ್ಯಗತಿಯಿದೆ. ಸಾಮ್ಯ ವಿದ್ದರೂ ಎರಡೂ ಕವಿತೆಗಳಲ್ಲಿ ಮೌಲಿಕತೆ ಯಿದೆ:

'ಝುಂಪುಜಾರ್‍ ಗಡೆ ಝುಂಪುಜಾರ್‍ ಗಡೆ
ಝುಂಪುಜಾರ್‍....'

'ಕುಣಿಯೋಣು ಬಾರಾ ಕುಣಿಯೋಣು ಬಾ'

ನಾದದ ಧ್ವನಿ ಮತ್ತು ಅರ್ಥದ ಪ್ರತಿಧ್ವನಿ ಎರಡೂ ಸೇರಿದ್ದರಿಂದ ಕವಿತೆ ಶ್ರೇಷ್ಠ ಮಟ್ಟ ಕ್ಕೇರಿದೆ."

ಬೇಂದ್ರೆ ಹಾಗೂ ರಾಮಗಣೇಶ ಗಡಕರಿ ಇವರಲ್ಲಿ ಸಾಮ್ಯವಿತ್ತೆಂದು ಮರಾಠಿಯ ಖ್ಯಾತ ನಾಟಕಕಾರ ಪ್ರ.ಕೆ. ಅತ್ರೆ ಗುರುತಿಸಿ ದ್ದರು. ಈ ಮಾತನ್ನು ಇತರ ಅನೇಕ ಸಾಹಿತಿಗಳು ಒಪ್ಪಿದ್ದರು.

ಈ ಕಾಲದಲ್ಲಿ ಬೇಂದ್ರೆಯವರ ಮರಾಠಿ ಕನ್ನಡ ಮಿತ್ರಪರಿವಾರ ದೊಡ್ಡದಾಗಿತ್ತು. 'ಶಾರದಾ ಮಂಡಳ' ಎಂಬ ಒಂದು ಸಂಸ್ಥೆ ಯನ್ನು ಅವರು ನಿರ್ಮಿಸಿದ್ದರು. ಅದರಲ್ಲಿ ಕಾವ್ಯಶಾಸ್ತ್ರ ವಿನೋದ ನಡೆಯುತ್ತಿತ್ತು. ಬಳಿಕ ಬೇಂದ್ರೆ ಧಾರವಾಡಕ್ಕೆ ಹಿಂತಿರುಗಿದ ನಂತರ 'ಗೆಳೆಯರ ಗುಂಪು' ಸ್ಥಾಪಿಸಿ ದರು. ಅಲ್ಲಿ ಮುಗಳಿ, ಗೋಕಾಕ್‌ರಂತಹ ನವ್ಯಕವಿಗಳು ಕಾವ್ಯನಿರ್ಮಿತಿಯ ಪ್ರೇರಣೆ ಪಡೆದರು. ಈ ಗೆಳೆಯರ ಗುಂಪಿನ ಸ್ಥಾಪನೆಯ ಹಿಂದೆ ಪುಣೆಯಲ್ಲಿಯ 'ರವಿ ಕಿರಣ ಮಂಡಳ'ದ ಹಾಗೂ ಶಾರದಾ ಮಂಡಳದ ಪ್ರಭಾವ ಕಾಣಬಹುದು. ಅವರು 'ಅಂಬಿಕಾತನಯದತ್ತ' ಎಂದು ಕಾವ್ಯನಾಮ ಧರಿಸಿದರು. ಇದು ಕನ್ನಡಕ್ಕೆ ಹೊಸದಾದ ಪದ್ಧತಿಯಾಗಿತ್ತು. ಬೇಂದ್ರೆ ಯವರು ತಮ್ಮ ಭಾವ-ಗೀತೆಗಳನ್ನು ಭಾವ ತನ್ಮಯತೆಯಿಂದ ಹಾಡಿ ತೋರಿಸುವುದು ಒಂದು ಅವಿಸ್ಮರಣೀಯ ಅನುಭವವೆಂದು ಅವರ ಹಾಡನ್ನು ಕೇಳಿದವರೆಲ್ಲರೂ ಹೇಳು ತ್ತಾರೆ. ಈ ರೀತಿಯನ್ನು ಕನ್ನಡದಲ್ಲಿ ಬೇಂದ್ರೆಯವರೇ ಪ್ರಾರಂಭಿಸಿದರು. ಮರಾಠಿಯಲ್ಲಿಯ ಕಾವ್ಯಗಾಯನದ ಪ್ರಭಾವಿ ರೂಪ ಇವರಿಗೆ ಮೆಚ್ಚಿಗೆ ಯಾಗಿರಬೇಕೆಂದಲೇ ಅವರು ಅದನ್ನು ಉತ್ತಮ ರೀತಿಯಿಂದ ಅವಗತ ಮಾಡಿ ಕೊಂಡರು. ಮರಾಠಿ ಕವಿ ಯಶವಂತ ಕವಿ ಹಾಗೂ ರಸಿಕರ ಗುಂಪಿನಲ್ಲಿ ಬೇಂದ್ರೆ ತಮ್ಮ ಕನ್ನಡ ಕವನಗಳನ್ನು ಹಾಡಿ, ಅವುಗಳ ಇಂಗ್ಲೀಷ್ ಅನುವಾದವನ್ನು ಗೋಕಾಕರು ಮಾಡಿ ಕಾರ್ಯಕ್ರಮ ನಡೆಯುತ್ತಿದ್ದ ನೆನಪನ್ನು ಮರಾಠಿ ಕವಿ ಕುಂಜವಿಹಾರಿ ಒಂದು ಕಡೆ ಬರೆದಿದ್ದಾರೆ.

ಪುಣೆಯ ಪ್ರೀತಿ ಬೇಂದ್ರೆಯವರಲ್ಲಿ ಜೀವನವಿಡೀ ಉಳಿಯಿತು. ಕೆಲವು ವರ್ಷ ಗಳ ಬಳಿಕ ಅವರು ಫರ್ಗ್ಯುಸನ್ ಕಾಲೇಜಿ ನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. ಆ ಮೇಲೆಯೂ ಅವರು ಪುಣೆಗೆ ಅನೇಕ ಸಲ ಬರುತ್ತಿದ್ದರು. ಪುಣೆ ಯಲ್ಲಿಯ ಇಂಟರ್‌ನ್ಯಾಶನಲ್ ಬುಕ್ ಹೌಸ್‌ನ ದೀಕ್ಷಿತರು ಅವರ ಪರಮ ಸ್ನೇಹಿತರಾಗಿದ್ದರು. ಈ ಸಹವಾಸದಿಂದಾ ಗಿಯೇ ಅವರ ಗ್ರಂಥರಾಶಿಯಲ್ಲಿ ಮರಾಠಿ ಪುಸ್ತಕಗಳ ಸೇರ್ಪಡೆಯಾಗುತ್ತಿತ್ತು! ಪುಣೆಯಲ್ಲಿಯ ಜನರಿಗೆ ಅವರ ಸಂತ ಸಾಹಿತ್ಯದ ಕುರಿತಾದ ಭಾಷಣಗಳು ಇನ್ನೂ ಸ್ಮರಣೆಯಲ್ಲಿವೆ. ಬೇಂದ್ರೆಯವರನ್ನು

ಶ್ರೇಷ್ಠ ಸಾಹಿತಿಗಿಂತ ಮಿಗಿಲಾಗಿ ಅತ್ಯಂತ ಪ್ರಭಾವಿಯಾದ ಒಬ್ಬ ವಾಗ್ಮಿಯೆಂದು ಪುಣೆಕರರು ಸ್ಮರಿಸುತ್ತಾರೆ. ಕೌಶಿಕ ವ್ಯಾಖ್ಯಾನ ಮಾಲೆಯಲ್ಲಿ ವಸಂತ ವ್ಯಾಖ್ಯಾನ ಮಾಲೆಯಲ್ಲಿ 'ಪರಾಳ'ದ ಸಭಾಗೃಹ ದಲ್ಲಿ 'ವಿಠ್ಠಲ ಸಂಪ್ರದಾಯ' ಹಾಗೂ ತುಕಾರಾಮನ ಬಗ್ಗೆಯ ಅವರ ಭಾಷಣ ಗಳು ಭಾವುಕರಿಗೆ ಮತ್ತು ಅಭ್ಯಾಸಿಗಳಿಗೆ ಅಷ್ಟೇ ರುಚಿಸಿದುವು.

೧೯೩೨ರಲ್ಲಿ ಬೇಂದ್ರೆ ಸೊಲ್ಲಾಪುರದ ದಯಾನಂದ ಕಾಲೇಜನ್ನು ಕನ್ನಡ ವಿಭಾಗದ ಮುಖ್ಯರಾಗಿ ಸೇರಿದರು. ಸೊಲ್ಲಾ ಪುರದಲ್ಲಿಯ ಅವರ ವಾಸ್ತವ್ಯ ಅನೇಕ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಅದೊಂದು ತಪಶ್ಚರ್ಯದ ಕಾಲ. ಅವರ ಜೀವನದಲ್ಲಿಯ ಅನೇಕ ಮಹತ್ವಪೂರ್ಣ ಘಟನೆಗಳು ಸೊಲ್ಲಾಪುರದಲ್ಲಿ ನಡೆದುವು. ಕೌಟುಂಬಿಕ ದುಃಖವನ್ನೂ ಅವರಿಲ್ಲಿ ಎದುರಿಸಬೇಕಾಯಿತು. ಅಂತೆಯೇ ಅನೇಕ ಮಾನಸನ್ಮಾನಗಳೂ ಇಲ್ಲಿ ದೊರಕಿದುವು. ಸಂಕಟ ವೇಳೆಯಲ್ಲಿ ಅವರು ತಮ್ಮ ಮನಃ-ಶಾಂತಿ ಕಳೆದುಕೊಳ್ಳಲಿಲ್ಲವೆಂಬುದು ವಿಶೇಷ. ಅವರ ೫೦ನೆಯ ಮತ್ತು ೬೦ನೆಯ ಹುಟ್ಟುಹಬ್ಬಗಳು ಮೊದಲು ಸೊಲ್ಲಾಪುರ ದಲ್ಲಿಯೇ ಆಚರಿಸಲ್ಪಟ್ಟವು.

ಸೊಲ್ಲಾಪುರದಲ್ಲಿ ಅವರ ಜೀವನದ ಹೊಸ ಪರ್ವ ಪ್ರಾರಂಭವಾಯಿತೆನ್ನ ಬಹುದು. ಅವರು ಅಲ್ಲಿಯ ಪ್ರಭಾಕರ ಟೆಂಬೆ ಮಹಾರಾಜರ ಅನುಗ್ರಹ ಪಡೆದರು. ಅಂತೆಯೇ ಅಕ್ಕಲಕೋಟೆ ಮಹಾರಾಜ ಹಾಗೂ ಬಿರವಿಂದ ಅವರ ಅನುಗ್ರಹ ಕೂಡ. ಸೊಲ್ಲಾಪುರದ ಸುತ್ತಮುತ್ತಲಿನ ತುಳಜಾ ಪುರ, ಗಾಣಗಾಪುರ, ಪಂಢರಪುರ ಈ ತೀರ್ಥ ಕ್ಷೇತ್ರಗಳು ಅವರ ಸ್ಫೂರ್ತಿಸ್ಥಾನಗಳಾಗಿ ದ್ದುವು. ವಿಠ್ಠಲನಂತೂ ಅವರ ಪರಮ ಪ್ರೀತಿಯ ದೈವತವಾಗಿತ್ತು.

ಸೊಲ್ಲಾಪುರದಲ್ಲಿಯ ಹನ್ನೆರಡು ವರ್ಷದ ವಾಸ್ತವ್ಯದಲ್ಲಿ ಅವರು ಭೇಟಿ ನೀಡದ ಒಂದು ಸಂಸ್ಥೆಯೂ ಇಡೀ ಜಿಲ್ಲೆಯಲ್ಲಿರಲಿಲ್ಲ. ಅವರ ಭಾಷಣವೆಂದರೆ ಬೌದ್ಧಿಕ ಮೇಜವಾನಿ ಯಾಗಿರುತ್ತಿತ್ತು. ಅವರ ಒಬ್ಬ ಸಹಕಾರಿ "ಪ್ರಾ. ಬೇಂದ್ರೆಯವರೆಂದರೆ ಒಂದು ಜ್ಞಾನಭಾಂಡಾರ" ಎನ್ನುತ್ತಿದ್ದರು. ಇದು ಅವರ ಅಭ್ಯಾಸವೃತ್ತಿಯ ಪ್ರತೀಕವಾಗಿದೆ. ದಯಾನಂದ ಕಾಲೇಜಿನ ಪ್ರಾಂಶುಪಾಲರು ಬೇಂದ್ರೆಯವರ ಬಗ್ಗೆ ಗೌರವದಿಂದ "Our roving professor of Indian culture" ಎನ್ನುತ್ತಿದ್ದರು!

ಬೇಂದ್ರೆ ಕನ್ನಡದ ಪ್ರಾಧ್ಯಾಪಕರಾದರೂ ಸಾಹಿತ್ಯದ ಜೊತೆಗೆ ಗಣಿತ, ರಸಾಯನ ಶಾಸ್ತ್ರ, ಸಂಸ್ಕೃತ, ವಿಜ್ಞಾನ ಮುಂತಾದ ಅನೇಕ ವಿಷಯಗಳಲ್ಲಿ ಪಾರಂಗತರಾಗಿದ್ದರು. ಕಾಲೇಜಿನಲ್ಲಿ ಅವರ ಸುತ್ತು ಯಾವಾಗಲೂ ವಿದ್ಯಾರ್ಥಿಗಳ ಹಾಗೂ ಪ್ರಾಧ್ಯಾಪಕರ ಗುಂಪೇ ಜಮಾಯಿಸಿರುತ್ತಿತ್ತು. ಅವರ ಮಾತಿನಲ್ಲಿ, ಭಾಷಣಗಳಲ್ಲಿ ಅನೇಕ ವಿಷಯ ಗಳ ಸಂದರ್ಭ ಬರುತ್ತಿದ್ದುವು. ಅವರ ಭಾಷಣ ಕೇಳಿ ಭಾವೋದ್ವೇಗಕ್ಕೀಡಾಗದ ವರು ಇಲ್ಲವೇ ಇಲ್ಲವೆನ್ನಬಹುದು. ಆಧ್ಯಾತ್ಮಿಕ ಅಧಿಷ್ಠಾನವುಳ್ಳ ಜ್ಞಾನಿ ಯಾದರೂ ಬೇಂದ್ರೆಯವರು ತೀರಾ ಸರಳ ಸ್ವಭಾವದವರಾಗಿದ್ದರು. ಲೌಕಿಕ ವೃಷ್ಟಿ ಯಲ್ಲಿಯ ಬಾಹ್ಯ ಉಪಚಾರಗಳಿಗೆ ಮಹತ್ವ ಕೊಡುತ್ತಿರಲಿಲ್ಲ. ಎದುರಿನ

ವ್ಯಕ್ತಿಯ ಅಂತರಂಗ ಬಹಿರಂಗವನ್ನು ಅವರು ತಪ್ಪದೇ ಗುರುತಿಸುತ್ತಿದ್ದರು. ಯಾರ ಗುಣವನ್ನು ಹೇಗೆ ಎತ್ತಿಹಿಡಿಯಬೇಕು, ಹೇಗೆ ಅರಳಿಸಬೇಕೆಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಅವರು ತಮ್ಮದೇ ಕಲ್ಪನಾವಿಶ್ವದಲ್ಲಿ ಮಗ್ನರಾಗದೇ ಜನಸಾಮಾನ್ಯರ ಸುಖದುಃಖಗಳೊಂದಿಗೆ ಬೆರೆಯುತ್ತಿದ್ದರು. ತಮ್ಮ ಅಚ್ಚುಮೆಚ್ಚಿನ ಚಿಕ್ಕನೊಂದಿಗೆ ಆಡುವಾಗ ಈ ಮಹಾನ್ ಪ್ರತಿಭೆಯ ಪಂಡಿತ ಚಿಕ್ಕ ಮಗುವಿನಂತಾಗುತ್ತಿದ್ದರು.

'ಅಮೃತಾನುಭವ'ದ ಹಳೆಯ ಒಂದು ಪ್ರತಿ ಹುಡುಕುತ್ತ ಭೋರದ ಸಂಸ್ಥಾನಿಕರು ಸೊಲ್ಲಾಪುರಕ್ಕೆ ಬಂದಿದ್ದರು. ಇವರನ್ನು ಪು. ವಾ. ಬುವಾ ಬೇಂದ್ರೆ ಬಳಿಗೆ ಕರೆದುಕೊಂಡು ಹೋದರು. ಆಗ ಬೇಂದ್ರೆಯವರ ಮನೆಯಲ್ಲಿಯ ಹೋಟಕೋಣೆ ಗ್ರಂಥರಾಶಿಯಿಂದ ತುಂಬಿ ತುಳುಕುತ್ತಿತ್ತು. ನಟ್ಟನಡುವೆ ಇವರು ಕುಳಿತುಕೊಳ್ಳುವ ಆಸನವಿತ್ತು. ಆ ಆಸನದಲ್ಲಿ ಅವರ ಮನೆಯ ಬೆಕ್ಕು ಧ್ಯಾನಸ್ಥವಾಗಿ ಕುಳಿತಿತ್ತು. ಅದನ್ನು ನೋಡಿ ಮಹಾನ್ ಪಂಡಿತರಾದ ಸಂಸ್ಥಾನಿಕರು 'ಯಾರ ಮನೆಯಲ್ಲಿಯ ಬೆಕ್ಕು ಇಷ್ಟೊಂದು ವಿದ್ವತ್ಪೂರ್ಣವಾಗಿರುವುದೋ ಅದರ ಮಾಲಿಕರು ಹೇಗಿರಬೇಕು?' ಎಂದು ಉದ್ಗರಿಸಿದ್ದರಂತೆ!

ಬೇಂದ್ರೆ ಹಾಗೂ ಸಂಸ್ಥಾನಿಕರು ಎಷ್ಟೋ ಹೊತ್ತು ಕಾವ್ಯಶಾಸ್ತ್ರ ಮತ್ತು ಆಧ್ಯಾತ್ಮದ ಬಗ್ಗೆ ಚರ್ಚಿಸಿದರು. ಬೇಂದ್ರೆಯವರನ್ನು ಬೀಳ್ಕೊಟ್ಟು ಹೊರಗೆ ಬಂದಾಗ ಸಂಸ್ಥಾನಿಕರು ಆನಂದಾತಿಶಯದಿಂದ ಬುವಾರನ್ನು ಆಲಿಂಗಿಸಿ "ಬುವಾ, ಇಂದು ನಿಮ್ಮಿಂದಾಗಿ ನನಗೆ ಅಮೃತಾನುಭವ ದೊರಕಿತು, ಕೇವಲ ಪುಸ್ತಕವಲ್ಲ. ಪ್ರತ್ಯಕ್ಷ ಜ್ಞಾನೇಶ್ವರನ ಕಡೆಯಿಂದ!" ಎಂದು ಹೇಳಿದ ನೆನಪು ಪು. ವಾ. ಬುವಾ ಇಂದಿಗೂ ಸ್ಮರಿಸುತ್ತಾರೆ.

ಇಂಥ ಅಲೌಕಿಕ ಅಮೃತಾನುಭವವನ್ನು ಸೊಲ್ಲಾಪುರದ ಜನ ಹನ್ನೆರಡು ವರ್ಷ ಪಡೆದರು. 'ಭಾವ' ಕಾವ್ಯದ ಸ್ಥಾಯೀಭಾವವಾದರೂ ಬೇಂದ್ರೆಯವರು ಭಾವನಾವಿವಶರಾಗುತ್ತಿರಲಿಲ್ಲ. ಅವರ ವಿವೇಕ ಯಾವಾಗಲೂ ಜಾಗೃತವಾಗಿರುತ್ತಿತ್ತು. ಅಂತೆಯೇ ಸಾಮಾನ್ಯವಾಗಿ ಕಠೋರವೆನಿಸುವ ಅಭಿಪ್ರಾಯಗಳನ್ನು ಅವರು ಸಹಜವಾಗಿ ಹೇಳಬಲ್ಲವರಾಗಿದ್ದರು.

ಪ್ರ. ಕೆ. ಅತ್ರೆ ಬಗ್ಗೆ ಬೇಂದ್ರೆಯವರಿಗೆ ಆದರವಿದ್ದರೂ, ಅವರ ಕೆಲವು ಅಭಿಪ್ರಾಯಗಳನ್ನು ಅವರ ಎದುರಿಗೇ ಖಂಡಿಸಲು ಹಿಂದುಮುಂದು ನೋಡಲಿಲ್ಲ.

ಭಾಷಾವಾರು ಪ್ರಾಂತರಚನೆಯ ಸಂದರ್ಭದಲ್ಲಿ ಸಮಿತಿಯ ಎದುರಿಗೆ ಬೇಂದ್ರೆ ಸ್ಪಷ್ಟವಾಗಿ ಅಕ್ಕಲಕೋಟ ಗಾಣಗಾಪುರ, ಪಂಢರಪುರದಂಥ ಮಂದಿರಗಳು ಹಾಗೂ ಸಾಧುಗಳ ಆಶ್ರಯಸ್ಥಾನಗಳನ್ನು ಜೋಡಿಸುವ ಸೀಮಾರೇಷೆ ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳಿಗೆ ಇರಬೇಕು. ಎರಡೂ ರಾಜ್ಯದವರಿಗೆ ಈ ಧರ್ಮಸ್ಥಳಗಳು ಸಹಜವಾಗಿ ಹೋಗಿ ಬರುವಂತಿರಬೇಕು ಎಂದು ಸಾಕ್ಷಿ ನುಡಿದಿದ್ದರು!

ಸಾನೇ ಗುರೂಜಿಯವರಿಗೆ ಬೇಂದ್ರೆ ಕುರಿತಾಗಿ ಬಲು ಆದರವಿತ್ತು, ಇವರಿಗೂ

ಗುರೂಜಿ ಬಗ್ಗೆ ಅಷ್ಟೇ ಗೌರವ. ಅವರು ಪರಸ್ಪರ ಭೇಟಿಯಾಗಿರಲಿಲ್ಲ. ಗುರೂಜಿಯವರ 'ಸಾಧನಾ' ಸಾಪ್ತಾಹಿಕಕ್ಕೆ ಸಹಾಯ ಕೇಳಲು ಮರಾಠಿ ಕವಿ ಮಂಗೇಶ ಪಾಡಗಾಂವಕರರು ಸೊಲ್ಲಾಪುರಕ್ಕೆ ಬಂದಾಗ ಬೇಂದ್ರೆ ಪ್ರಯತ್ನಮಾಡಿ ಅವರಿಗೆ ತುಂಬಾ ಸಹಾಯವನ್ನು ಒದಗಿಸಿಕೊಟ್ಟಿದ್ದರು.

೧೯೭೩ರಲ್ಲಿ ಬೇಂದ್ರೆಯವರ ಅಮೃತ ಮಹೋತ್ಸವವನ್ನು (೭೫ನೆಯ ಹುಟ್ಟು ಹಬ್ಬ) ಅಮಿತ ಉತ್ಸಾಹದಿಂದ ಸೊಲ್ಲಾಪುರದಲ್ಲಿ ಮರಾಠಿ ಕವಿ ಅನಿಲ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಆ ಸಂದರ್ಭದಲ್ಲಿ ಒಂದು ಗೌರವ ಸಂಚಿಕೆಯನ್ನು ಪ್ರಕಟಿಸಿದರು. ಅದರಲ್ಲಿ ಅನೇಕ ಮರಾಠಿ ಸಾಹಿತಿಗಳು, ಬೇಂದ್ರೆಯವರ ಪರಿಚಿತರು, ಪ್ರಾಧ್ಯಾಪಕರು ಅವರ ಕುರಿತಾಗಿ ಬರೆದಿದ್ದಾರೆ. ಕವಿ ಅನಿಲ ಅವರು ಬೇಂದ್ರೆಯವರ ಮನೆಗೆ ಹೋದಾಗ ಅವರ ಗ್ರಂಥರಾಶಿಯನ್ನು ನೋಡಿ ಆಶ್ಚರ್ಯದಿಂದ "ಗ್ರಂಥವಸ್ತು ಣತಿ ಮಾಜೆ ಘರ" (ಈ ಮನೆ ನಮ್ಮದೇ ಎಂದು ಗ್ರಂಥಗಳು ಅನ್ನುತ್ತವೆ) ಎಂದು ಒಂದು ಲೇಖನ ಬರೆದಿದ್ದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಬೇಂದ್ರೆ ಕವಿರಾಜರಂತೂ ಅಹುದು; ಆದರೆ ಅವರನ್ನು ನಾವು ಆದರದಿಂದ ಯೋಗಿರಾಜರೆಂದು ಕರೆಯುತ್ತೇನೆ" ಎಂದು ಉದ್ಗರಿಸಿದ್ದಾರೆ.

ಕನ್ನಡ ಕಾವ್ಯದಲ್ಲಿ ಉತ್ತುಂಗ ಶಿಖರಗಳನ್ನು ಮುಟ್ಟುವಾಗಲೇ ಬೇಂದ್ರೆ ಮರಾಠಿಯಲ್ಲಿ ಲೇಖನಗಳನ್ನು ಬರೆದಿದ್ದಾರೆ. ಅವರು ಮಾಡಿದ ಉಭಯ ಭಾಷಾ ಅನುವಾದ ಕಾರ್ಯವೂ ಬಲು ದೊಡ್ಡದು. ರಾ. ದ. ರಾನಡೆಯವರ ಉಪನಿಷದ್ರಹಸ್ಯ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕಬೀರ ಹಾಗೂ ರವೀಂದ್ರನಾಥರ ಅನೇಕ ಕವನಗಳನ್ನು ಕನ್ನಡಿಸಿದ್ದಾರೆ. ಕೆ. ವಿ. ಅಯ್ಯರರ ಶಾಂತಲಾ ಕಾದಂಬರಿಯನ್ನು ಮರಾಠಿಗೆ ಅನುವಾದಿಸಿದ್ದಾರೆ. ಇನ್ನೂ ಅನೇಕ ಅನುವಾದಗಳನ್ನು ಅವರು ಮಾಡಿದ್ದಾರೆ. ಅವರು ಮರಾಠಿಯಲ್ಲಿ ಕೊಟ್ಟ ಭಾಷಣಗಳು, ಮರಾಠಿ ಕಾವ್ಯ ಸಂಕಲನಕ್ಕೆ, ಪುಸ್ತಕಗಳಿಗೆ ಬರೆದ ಮುನ್ನುಡಿಗಳು ಹಾಗೂ ಸಮೀಕ್ಷೆಯ ಲೇಖನಗಳನ್ನು ೪೪ ಮರಾಠಿ ಕವನಗಳನ್ನು ಸೇರಿಸಿ ೧೯೭೫ರಲ್ಲಿ ದಾ. ಗೋ. ದೇಶಪಾಂಡೆ ಸಂಪಾದಿಸಿ 'ಸಂವಾದ'ವನ್ನು ಪ್ರಕಟಿಸಿದರು. ಅದಕ್ಕೆ ನ. ಚಿಂ. ಕೇಳಕರ ಪಾರಿತೋಷಿಕ ದೊರೆತಿದೆ. "ಬೇಂದ್ರೆಯವರ ಪ್ರತಿಭೆ ಅರಳಿದಾಗ ಅದರ ಕಂಪು ಕನ್ನಡ ಸಾಹಿತ್ಯ ಮಂದಿರದಲ್ಲಿ ಹರಡಿತು. ಅವರ ಪ್ರತಿಭೆ ಪರಿಪಕ್ವವಾದಾಗ ಅದರ ಫಲ ಜ್ಞಾನೇಶನ ಅಮೃತಸಿಂಚನೆಯಿಂದ ಪಾವನವಾದ ಮರಾಠಿ ಭೂಮಿಯ ಮೇಲೆ ಉದುರಿದುವು" ಎಂದು ದಾ. ಗೋ. ದೇಶಪಾಂಡೆಯವರು ಸಂವಾದದ ಮುನ್ನುಡಿಯಲ್ಲಿ ಬರೆದಿದ್ದಾರೆ. 'ಸಂವಾದ'ವನ್ನು ಕುರಿತು ಅನೇಕ ಮರಾಠಿ ಸಮೀಕ್ಷಕರು ಲೇಖನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪ್ರಸಿದ್ಧ ಸಮೀಕ್ಷಕರಾದ ಡಾ. ಭೀಮರಾವ ಕುಲಕರ್ಣಿ ಬರೆದ ಲೇಖನ ಉಲ್ಲೇಖನೀಯವಾಗಿದೆ.

೧೯೮೧ರಲ್ಲಿ ಬೇಂದ್ರೆಯವರು ಇಹಲೋಕ ತ್ಯಜಿಸಿದ ಒಂದು ದಶಕದನಂತರ ಅವರ ೧೧೩ ಮರಾಠಿ ಕವಿತೆಗಳ ಸಂಕಲನ

'ಉಮಾಳಾ'ವನ್ನು ಬೇಂದ್ರೆಯವರ ಮಗ ಡಾ. ವಾಮನ ಬೇಂದ್ರೆಯವರು ಪ್ರಕಟಿಸಿದ್ದಾರೆ. ಈ ಕವಿತೆಗಳು ಬೇಂದ್ರೆಯವರ ಪ್ರತಿಭೆ ಹಾಗೂ ವಿದ್ವತ್ತಿಗೆ ಸಾಕ್ಷಿ.

"ಕವಿಯು ಪಾರಿಜಾತ ಹೂವಿನಂತಿರುವನು. ಆತ ಇಲ್ಲವಾದರೂ ಆ ಹೂವಿನ ಕಂಪು ಹರಡುತ್ತದೆ" ಎಂದು ಬೇಂದ್ರೆಯವರು ಅನ್ನುತ್ತಿದ್ದರು. ಅದು ಇಂದಿಗೂ ನಿಜವೆನಿಸುತ್ತದೆ. ಬೇಂದ್ರೆಯವರು ಇಲ್ಲವಾದರೂ ಮರಾಠಿ ಕವಿಗಳು ರಸಿಕರು ಅವರನ್ನು ಮರೆತಿಲ್ಲ. ಡಾ|| ಪಂಡಿತ ಅವಳೀಕರ, ಡಾ|| ಯ. ದಿ. ಫಡಕೆ, ಡಾ|| ಅನಂತ ತೋರೊ, ಡಾ|| ವಿ. ಮ. ಕುಲಕರ್ಣಿ, ಡಾ|| ಯು. ಮ. ಪಠಾಣ, ದಾ. ಗೊ. ದೇಶಪಾಂಡೆ ಮುಂತಾದ ಹೆಸರಾದ ಲೇಖಕರು ಅವರ ಕುರಿತಾಗಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಕನ್ನಡದಲ್ಲಿ ಅವರ ಸಾಹಿತ್ಯದ ಬಗ್ಗೆ ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಗಳಿಸಿದವರು ಅನೇಕರು ಇದ್ದಾರೆ. ಡಾ|| ವಿಜಯಾತೇಲಂಗ ಅವರು 'ಬೇಂದ್ರೆ–ಮರಾಠಿ ಕನ್ನಡದಲ್ಲಿಯ ಸೇತುವೆ' ಎಂಬ ವಿಷಯದಲ್ಲಿ ಮರಾಠಿಯಲ್ಲಿ ಡಾ|| ಪಂಡಿತ ಅವಳೀಕರವರ ಮಾರ್ಗದರ್ಶನದಲ್ಲಿ ೧೯೮೭ರಲ್ಲಿ ಪಿಎಚ್.ಡಿ. ಯನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗಳಿಸಿದ್ದಾರೆ.

ಬೇಂದ್ರೆ ಮರಾಠಿ, ಕನ್ನಡ ಎರಡೂ ಭಾಷೆಗಳ ಋಣ ತಮ್ಮ ಮೇಲಿದೆಯೆಂದು ನಂಬಿದ್ದರು. ಈ ಭಾಷೆಗಳೆಂದರೆ ತನ್ನೆರಡು ಮಾತೆಯರೆಂಬ ಗೌರವ ಭಾವನೆ ಅವರದಾಗಿತ್ತು. 'ಕಾನಡಾವೊ ವಿಠ್ಠಲು ಕರ್ನಾಟಕರು' ಎಂಬುದು ಅವರ ಪ್ರೀತಿಯ ವಾಕ್ಯವಾಗಿತ್ತು. ವಿಠ್ಠಲ ಹೇಗೆ ಇಬ್ಬರಿಗೂ ಪ್ರಿಯನೋ ಅಂತೆಯೇ ಎರಡೂ ರಾಜ್ಯಗಳು ಹತ್ತಿರ ಬರಬೇಕೆಂದು ಅವರು ಆಶಿಸುತ್ತಿದ್ದರು. ಅಂತೆಯೇ ಎರಡು ಭಾಷೆಗಳನ್ನು ಮಾತಾಡುವವರು ಪರಸ್ಪರ ಭಾಷೆಗಳನ್ನು ಟೀಕಿಸಿದರೆ, ನಿಂದಿಸಿದರೆ ಅವರು ಕೋಪಗೊಳ್ಳುತ್ತಿದ್ದರು.

ಡಾ|| ವಿಜಯಾ ತೇಲಂಗ ಅವರ ಮಾತಿನಲ್ಲಿ ಹೇಳುವುದಾದರೆ "ಬೇಂದ್ರೆಯವರು ಕನ್ನಡ ಮರಾಠಿ ಈ ಎರಡು ಭಾಷೆ, ಸಂಸ್ಕೃತಿ, ಪ್ರದೇಶಗಳ ಸೀಮೆಯಲ್ಲಿಯ ಹೊಸ್ತಿಲ ಮೇಲಿಟ್ಟ ದೇಹಲಿ ದೀಪವಾಗಿದ್ದಾರೆ. ಒಳಗಿನ ಹಾಗೂ ಹೊರಗಿನ ಪ್ರದೇಶಗಳನ್ನು ಪ್ರಕಾಶಮಾನವಾಗಿಸುವುದೇ ದೀಪದ ಪಾತ್ರ."

ಈ ದೀಪ ಯಾವಾಗಲೂ ನಂದಾದೀಪದಂತೆ ಬೆಳಗಬೇಕಾದರೆ ಕರ್ನಾಟಕ, ಮಹಾರಾಷ್ಟ್ರದಲ್ಲಿಯ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಉಭಯ ಭಾಷೆಗಳೂ ಭಗಿನಿಯರಂತಿರಬೇಕು. ಅದಕ್ಕೆ ಉಭಯ ಭಾಷಾವಿದರಿಂದ ಅಳಿಲಸೇವೆ ಸದಾ ಕಾಲವೂ ಸಲ್ಲುತ್ತಿರಲೇಬೇಕು.

---

# ದ. ರಾ. ಬೇಂದ್ರೆ

—ಲತಾ ರಾಜಶೇಖರ್

ಅವರ ಕಾವ್ಯದ ಉಯ್ಯಾಲೆಯನೇರಿ
ಲೋಕ ಲೋಕಗಳ ಜೀಕಿ
ಕಣ್ಣ ಬಟ್ಟಲಲಿ ದೀವಿಗೆ ಉರಿಸಿ
ತಂಬೆಳಕ ತೂರಿ ತೂರಿ.

ರಾಗರಂಜನ ಭಾವ ಮೋಹನ
ಸಖೀಗೀತ ಹಾಡಿ
ಕನಸ ಕಿನ್ನರಿ ನುಡಿಸುತ್ತ ಹಾರಿ
ಕುಣಿದೆ ಮೋಡಿ ಮಾಡಿ.

ಇಂದ್ರಛಾಪದ ಗರಿ, ಗರಿಗಳಲ್ಲಿ
ತೂರಿ ಬಂದ ಮಿಂಚು
ಎದೆಯ ತಟ್ಟಿ, ಮನದಾಳ ಮುಟ್ಟಿ
ಹೋಯ್ತು ಹಾರಿ ಹಾರಿ.

ಅರಳು ಮರುಳಿನ ಕರುಳ ಹೊರಳಿನ
ಬಾಳು ಜೀವಬಳ್ಳಿ
ಬಾನಸಾಗರದಿ ಬೆಳಕ ನಾವೆಯುದು
ಬಂತೊ ತೇಲಿ ತೇಲಿ.

ನಾಕು ತಂತಿಯ ಮಿಡಿದು ಮೆಲ್ಲಗೆ
ಸುರಲೋಕವನ್ನೆ ಸೃಜಿಸಿ
ಇರುಳ ಮಾಯದ ಬೆಡಗು ಬೆಳಗಾಗಿ
ನೀ ಸೇರಿ ಹೋದೆ ಅಲ್ಲಿ.

# ಬೇಂದ್ರೆ ವ್ಯಕ್ತಿಚಿತ್ರ

—ಎನ್ಕೆ

ನನಗೆ ಅಂಬಿಕಾತನಯದತ್ತರ ಪರಿಚಯವಾದುದು ಈಗ ೫೮ ವರ್ಷಗಳ ಹಿಂದೆ. ಆ ಸಂಪರ್ಕ ನನ್ನ ಮಿತ್ರರೊಂದಿಗೆ ನನ್ನ ಕಾಲೇಜ್ ದಿನಗಳಲ್ಲಿ ಆಗಾಗ ಕೈಕೊಳ್ಳುತ್ತಿದ್ದ ಸಾಧನಕೇರಿಯ ರಸಯಾತ್ರೆಯಿಂದಾಗಿ ನಿಕಟವಾಗತೊಡಗಿತು. ಸಾಧನಕೇರಿಯಾತ್ರೆ ಕೈಕೊಂಡಾಗೊಮ್ಮೆ ಸಮೀಚೀನವಾದ ಬೇಂದ್ರೆ ಕಾವ್ಯವಾಚನದ ಮೇಜವಾನಿ ನಮಗೆ. ಅವರ ಕವನಗಳು, ಜಾನಪದ ಗತ್ತಿನ ಭಾವಗೀತೆಗಳನ್ನು ಕೇಳಿ ಕೇಳಿಯೇ ನಮಗೆಲ್ಲಾ ಅದು ಕಂಠಪಾಠ. ಆ ಕುರುಚುಲುಗಡ್ಡ, ಆ ಮುಂಗ್ಯಾನ ಟೊಪ್ಪಿಗೆ, ಬಚ್ಚಬಾಯಿ, ಜುಬ್ಬಾ ಮೇಲಿನ ಲಂಡಕೋಟು, ಕಾಲಲ್ಲಿ ಕೆರ (ಒಮ್ಮೊಮ್ಮೆ ಬರಿಗಾಲ್ನಡಿಗೆ) ಮಸ್ತಕ ತುಂಬಿ ಹೆಚ್ಚಾದ ಪುಸ್ತಕ ಚೀಲ! ಇದು ಬೇಂದ್ರೆ ಅವರ ಬಾಹ್ಯ ವ್ಯಕ್ತಿತ್ವ, ಅಂತರ್ಯದಲ್ಲಿ ದಾರ್ಶನಿಕ ಕವಿ, ಚಿಂತಕ, ಪ್ರಪಂಚ ನಿರೀಕ್ಷಕ!

೧೯೭೪ ರಲ್ಲಿ ಬೇಂದ್ರೆಯವರಿಗೆ 'ನಾಕು ತಂತಿ'ಗಾಗಿ ಜ್ಞಾನಪೀಠ ಪ್ರಶಸ್ತಿ. ಕರ್ನಾಟಕದ ಅನೇಕ ನಗರಗಳಲ್ಲಿ, ಕರ್ನಾಟಕದ ಹೊರಗೆ ಬೇಂದ್ರೆ ಅವರಿಗೆ ಸತ್ಕಾರ, ಸನ್ಮಾನ ಸಮಾರಂಭಗಳು. ನನ್ನನ್ನೂ ಬೇಂದ್ರೆಯವರು ಜೊತೆಗೆ ಕರೆದೊಯ್ಯುತ್ತಿದ್ದರು. ಬೇಂದ್ರೆ ಜೊತೆ ಸಂಚಾರವೆಂದರೆ ಜ್ಞಾನಪೀಠದೊಂದಿಗೇ ಸಂಚಾರ ಮಾಡಿದಂತೆ, ದಾರಿಯುದ್ದಕ್ಕೂ "ಜ್ಞಾನಾಮೃತಂ ಭೋಜನಂ" "ನಿಮಗೆ ಏನು ಬೇಕು ಅದನ್ನು ತಿನ್ ಲಿಕ್ಕೆ ತಗೊಳ್ರಿ ಮತ್ತ, ನಾ ಖಿಸೇದಾಗ ಒಂದಿಷ್ಟು ಪೆಪ್ಪರ್ಮಿಂಟ್ ಹಾಕೇನ್ರಿ ಸಾಕು—ನನ್ನ ಆಲಸ್ಯತನ ಸವಿ ಮಾಡಿಕೊಳ್ಳಲಿಕ್ಕೆ. ನೀವು ನಿಮ್ಮ ಸಿಕ್ಕಲೆಂಟೂ ಹಾಂಗ ಮಿರ್ಚಿ ಮ್ಯಾಲೆ ಚಟ್ನಿ ಹಚ್ಚಿಕೊಂಡು ತಿನ್ರಿ' ಎಂದು ಚೇಷ್ಟೆ ಮಾಡುವರು. ಆದರೆ ನನಗೆ ಮಿರ್ಚಿ ಭಜಿ ಮ್ಯಾಲೆ ಚಟ್ನಿಗಿಂತಲೂ ರುಚಿ ಅವರ ಮಾತು. ಬೇಂದ್ರೆ ಅಂದರೇನು ಮಾತು, ಮಾತು, ಮಾತು. ಮರಣಶಯ್ಯೆಯಲ್ಲೂ ಮಾತೇ. ಅವರಿಗೊಂದು ಸಂಗಾತಿಯಾಗಿತ್ತು. 'ಮಾತು ತೂತು' ಎಂಬ ಕವನ ಅವರ ಮಾತಿನ ಮೋಡಿಗೊಂದು ಮಾದರಿ!

ಜ್ಞಾನಪೀಠ ಸಂಚಾರದಲ್ಲಿ ಬೇಂದ್ರೆ ಕಾವ್ಯ, ಬೇಂದ್ರ ಸಂಖ್ಯಾಶಾಸ್ತ್ರ ಬೇಂದ್ರೆ ವಿನೋದಗಳಿಂದ ನಮಗೆ ತಿಳಿಯದೆಯೇ ಕಾವ್ಯ, ಶಾಸ್ತ್ರ, ವಿನೋದದ ಕಾಲ ಕಳೆದು ಹೋಗುತ್ತಿತ್ತು. ಬೆಂಗಳೂರಿನಲ್ಲಿ ಬೇಂದ್ರೆ

ಜ್ಞಾನಪೀಠ ಪೌರ ಸನ್ಮಾನ. ಬೇಂದ್ರೆ ಅವರೊಂದಿಗೆ ನಾನೂ ಹೋಗಿದ್ದೆ. ಬೇಂದ್ರೆ ಪೌರ ಸನ್ಮಾನ, ಪುರಸಭೆಯಲ್ಲಿ ಜರುಗಿತು. ಪೂರ್ಣಕುಂಭ ಸ್ವಾಗತ, ವೇದಘೋಷ, ಪುಷ್ಪವೃಷ್ಟಿ, ಮಂಗಲವಾದ್ಯಗಳಿಂದ ವಾತಾವರಣ ರೋಮ ಹರ್ಷಣೀಯವಾಗಿತ್ತು. ಸಭಾಗೃಹ ವಿ.ಐ.ಪಿ ಗಳಿಂದ, ಪತ್ರಿಕಾಕರ್ತರಿಂದ, ಸಾಹಿತಿಗಳಿಂದ, ಕವಿಗನುಕಿವಾದಿವಾಗ್ಮಿಗಳಿಂದ, ಭಾರತ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಂದ, ಮಂಗಲರೂಪಿ ಮಹಿಳೆಯರಿಂದ ಕಿಕ್ಕಿರುದು ತುಂಬಿತ್ತು. ಸನ್ಮಾನ ಪತ್ರ ವಾಚನ, ಸ್ವಾಗತ ಭಾಷಣಗಳು ಜರುಗಿದ ಮೇಲೆ ಸನ್ಮಾನಿತರು ಉತ್ತರರೂಪವಾಗಿ ಮಾತನಾಡಲು ಎದ್ದು ನಿಂತರು. ಬೇಂದ್ರೆ ಅವರು ಭಾಷಣ ಮಾಡುವಾಗ ಯಾವುದೇ ಟಿಪ್ಪಣಿ ಮಾಡಿಕೊಂಡು ಅದನ್ನನುಸರಿಸಿದವರಲ್ಲ. ಈಗ ಇಂತಹ ಸನ್ಮಾನ ಸಭೆಯಲ್ಲಿ, ಇಂತಹ ಒಂದು ರೋಮಾಂಚಕ ಸನ್ನಿವೇಶದಲ್ಲಿ, ಮೇಲಿನಿಂದ ಪುಷ್ಪವೃಷ್ಟಿ ಸುರಿಯುತ್ತಿದ್ದಾಗ, ಪ್ರೇಕ್ಷಕರ ಮೈಯ್ಯಲ್ಲಿ ಮುಳ್ಳು ಸಿಡಿದೇಳುತ್ತಿರುವಾಗ ಮಾತನಾಡಲು ಎದ್ದು ನಿಂತಾಗ, ಹೇಗೆ ಸನ್ನಿವೇಶಕ್ಕೆ ಸರಿಯಾಗಿ ಆರಂಭ ಮಾಡಿರಬೇಕು ಊಹಿಸಿ ನೋಡೋಣ? ಬೇಂದ್ರೆ ಅವರ ಭಾಷಣದ ಮೊದಲನೆಯ ವಾಕ್ಯವೇ ಯಾವಾಗಲೂ ಕ್ಲಿಕ್ ಆಗುವ ಒಂದು ಸಿಕ್ಸರ್' ಇದ್ದಂತೆ; ಇಂತಹ ಇನ್ನೊಬ್ಬ ಭಾಷಣಕಾರರನ್ನು ನೆನೆಯಬಹುದಾದರೆ ಶ್ರೀರಂಗ. ಇರಲಿ ಅಂತೂ ಬೇಂದ್ರೆ ಅವರು ಮಾತನಾಡಲು ಎದ್ದು ನಿಂತರು. ಸುತ್ತಲೂ ನೋಡಿ ಸರ್ವರಿಗೂ ವಾಡಿಕೆಯ ನಮಸ್ಕಾರ ಮಾಡಿದರು. ಸಂಬೋಧಿಸಬೇಕಾದವರಿಗೆಲ್ಲಾ ಸಂಬೋಧಿಸಿ ಮಾತಿಗೆ ಮೊದಲು ಮಾಡಿದರು. ಅದು ಹೀಗೆ:

"ಮನಶಾ ದುಃಖ ಹ್ಯಾಂಗಾದರೂ ತಡಕೋಬಹುದು, ಅದರ ಸುಖಾ ತಡಕೊಳ್ಳೋದು ಬಹಳ ಕಷ್ಟದ." ಈ ಮೊದಲನೆಯ ವಾಕ್ಯದ ಓವರ್ ಬೌಂಡ್ರಿಗೆ ನೆರೆದ ಬ್ರಹ್ಮಾಂಡ ಸಭೆಯಲ್ಲಿ ಪ್ರಚಂಡ ಕರ ತಾಡನ; ಎರಡು ಮೂರು ನಿಮಿಷಗಳ ವರೆಗೂ ಈ ಕಿವಿಗಡಚಿಕ್ಕಿಸುವ ಚಪ್ಪಾಳೆ, ಹರ್ಷೋದ್ಗಾರಗಳು ನಿಲ್ಲಲಿಲ್ಲ.

ಕರ್ನಾಟಕ ರಾಜಧಾನಿಯಲ್ಲಿ ಜರುಗಿದ ಈ ಪೌರ ಸನ್ಮಾನದ ವೈಭವಕ್ಕೆ ಕಡಿಮೆಯದೇನೂ ಆಗಿರಲಿಲ್ಲ. ನರಗುಂದದ ಐತಿಹಾಸಿಕ ಸ್ಥಳದಲ್ಲಿ ಜರುಗಿದ ಸನ್ಮಾನ ಸಮಾರಂಭ ಆ ಸಮಾರಂಭಕ್ಕೆ ಮೊದಲು, ಅಂದಿನ ಮೆರವಣಿಗೆ ಹೆಚ್ಚು ಅದ್ಭುತವಾಗಿತ್ತು. ನಾಲ್ಕೆಂಟು ಜೋಡಿ, ಎತ್ತಿನ ಬಂಡಿಯಲ್ಲಿ ಅಲಂಕೃತವಾದ ಎತ್ತುಗಳು, ಅಲಂಕೃತ ಚಕ್ಕಡಿ ಅದರಲ್ಲಿ "ನಾಕುತಂತಿ" ಕಾವ್ಯ ಗ್ರಂಥದ ಮೆರವಣಿಗೆ, ಅದರೊಂದಿಗೆ ಅದರ ಕರ್ತೃ ಅಂಬಿಕಾತನಯದತ್ತರ ಮೆರವಣಿಗೆ. ಅಂಬಿಕಾತನಯದತ್ತರ ಜೊತೆ ಅವರ ಬಾಲಾಗನೆಯಾಗಿ ನಾನೂ ಇದ್ದೆ. ಕರಡಿ ಮಜಲಿನ ಅಬ್ಬರದಲ್ಲಿ ನಮ್ಮಿಬ್ಬರ ಮಾತು ನಮ್ಮಿಬ್ಬರಿಗೇ ಮಾತ್ರ ಕೇಳುವ ಹಾಗೆ ನಡೆದಿತ್ತು ನಮ್ಮ ಸಂವಾದ. ಬೇಂದ್ರೆ ನಗುತ್ತ ನನ್ನ ಕಿವಿಯಲ್ಲಿ ನುಡಿದರು— "ನಿಮ್ಮ ಮದಿವಿಯೊಳಗಾರ ಇಂಥಾ ಮೆರೆವಣಿಗೆ ಕಂಡಿದ್ದಿರೇನು?" ಎಂದು ಅವರ ಚೇಷ್ಟೆಗೆ ಉತ್ತರಿಸುತ್ತ ನಾನೆಂದೆ—"ಛೀ, ಛೀ, ಸಾಧ್ಯವೇ ಇಲ್ಲ. ಅದು ಮದುವಣಿಗನಾಗಿದ್ದಾಗಿನ ಮೆರೆವಣಿಗೆ, ಇದು ವಿಧುರನ

ಮೆರೆವಣಿಗೆ, ನಾವಿಬ್ಬರೂ ವಿಧುರರು ನೋಡ್ರಿ. ಇಂಥಾ ವಿಧುರರ ನಾಡೆ ಯಾರು ಕಂಡಾರ?" ಎಂದು

ಚಕ್ಕಡಿಯ ಮೆರವಣಿಗೆ ನಡೆದಾಗ ಬೇಂದ್ರೆಯವರಿಗೆ ನರಗುಂದದ ಹಳೆಯ ನೆನಪುಗಳ ನರುಗಂಪು, ಕಿಕ್ಕಿಮುಕ್ಕ ತೊಡಗಿತು. "ನಮ್ಮ ಅಜ್ಜಿಗೋಡೂ ಬಾಯಳ ತವರೂರು ಇದು" ಎಂದು ಉದ್ಗಾರ ತೆಗೆದರು. ಎಂಟು ವರ್ಷದ ಹುಡುಗಿ ನಮ್ಮಜ್ಜಿ. ನರಗುಂದ ಬಂಡಾಯದ ಮರ್ದಿ ಹೊಗಿಯೊಳಗ ನಮ್ಮ ಅಜ್ಜಿಯ ತಂದಿ ತಾಯಿನ್ನ ಬ್ರಿಟಿಶ್ ಸಾಹೇಬರು ತಿಳಿರ್ತಿಬಾಯ್ರ್‌ಗೆ ಕೊಡಲಿಲ್ಲಾ; ಹಾಂಗಾರ ತಾವು ಬಾಬಾ ಸಾಹೇಬಗ ದ್ರೋಹಿ ಆದ್ದೆಲ್ಲಾ ಅಂತ ನರಗುಂದ ಬಿಟ್ಟು ಕಾಶಿಗೆ ಹೋಗಿಬಿಟ್ಟರು. ಅನಾಥ ಮಗು, ನಮ್ಮಜ್ಜಿನ್ನ ಯಾರೋ ಜೋಪಾನಮಾಡಿದರು. ಯಾರೋ ಮದಿವಿಮಾಡಿ ಮುಳಗುಂದದ ನಾತು ಮನೆತನಕ್ಕ ಕೊಟ್ಟರು. ಆಕಿ ಜೀವನಾನ ವ್ಯಥೆಯು ಒಂದು ದುರಂತ ಕಥೆ. ಖಾನಾವಳಿ ಇಟ್ಟು ಈ ಒಬ್ಬ ಮೊಮ್ಮಗನಿಗೆ ಶಿಕ್ಷಣಾ ಕೊಡಬೇಕು ಅಂತ ಧಾರವಾಡದ ಕಾನುನ ಕಟ್ಟಿ ಹಿಡಿದಳು" ಎಂದು ಗದ್ಗದಿತವಾಗಿ ಅಜ್ಜಿಯ ಬಗ್ಗೆ ತಾವು ಬರೆದ ಸಾಲುಗಳನ್ನು ನೆನಪು ಮಾಡಿಕೊಟ್ಟರು:

> ಆಕೆಯು (ತಾಯಿ ಅಂಬಿಕೆಯು)
> ತಾಯಿಯು ಸ್ತ್ರೀಮಾತ್ರಛಾಯೆಯು
> ಪುರುಷಾರ್ಥ ಕ್ಷೇತ್ರದ ಮೂರ್ತಿಯದು
> ಹದಿನೇಳು ಹಡೆದರು ಹೆಣ್ಣೊಂದು
> ಉಳಿದರು, ಜಗ್ಗದ ಕುಗ್ಗದ ಎದೆ
> ಯವಳು ವೃದ್ಧೆಯಾದರು ಅವಳ
> ಶ್ರದ್ಧೆಯೆಂತಹದಿತ್ತು, ಕರ್ತವ್ಯ
> ಬದ್ಧಳು ಕೊನೆವರಿಗೂ ಜೀವವನೆ
> ಮಹಾಯಜ್ಞ ಮಾಡಿದ ಹಾಗೆ
> ಸ್ವಾಹಾ ಸ್ವಾಹಾ ಎಂದು ನಡೆಸಿ
> ದಳು.

ಬೇಂದ್ರೆ ಅವರು ಹಳೆಯದಿರ್ನಗಳನ್ನು ನೆನೆಸಿಕೊಂಡಾಗಲೆಲ್ಲಾ ಪ್ರಸನ್ನ ಚೇತನರಾಗುತ್ತಿದ್ದರು.

ಒಮ್ಮೆ ಅಜ್ಜಿಯನ್ನು ನೆನೆದು ಗದ್ಗದಿತರಾದರೆ ಇನ್ನೊಮ್ಮೆ ಇನ್ನೊಂದು ಪ್ರಸಂಗದಲ್ಲಿ ಕೈಹಿಡಿದ ಧರ್ಮಪತ್ನಿಯನ್ನು ನೆನೆದು ವ್ಯಥೆಪಡುವರು. ಕನ್ನಡ "ಮೇಘದೂತ" ಬರೆದು ಬಂದ ರಾಯಲ್ಟಿ ಹಣದಲ್ಲಿ ಪತ್ನಿ ಯಾವಾಗಲೂ ಅಪೇಕ್ಷಿಸುತ್ತಿದ್ದ ಮುತ್ತಿನ ಹಾರವೊಂದನ್ನು ಕಾಣಿಕೆಯಾಗಿ ಕೊಟ್ಟು ನಾಲ್ಕು ಸಾಲು ಮೇಘದೂತದಲ್ಲಿ ಹಾಡಿದ ಸಂದರ್ಭವನ್ನೂ ಜ್ಞಾಪಿಸಿಕೊಂಡಿದ್ದರು.

> ಕಾಳಿದಾಸನ ಕಡಲ, ಮುತ್ತುಮಾಲೆ
> ಯನಿತ್ತೆ
> ಮುಡುಪನೊಪ್ಪಿದೆಯೆಂದು ಮುಕ್ತ
> ಳಾಗು।
> ಓ ಯಕ್ಷಿ, ಬೈಲಾಕ್ಷಿ, ಚೆನ್ನೆ ಹೃದಯದ
> ಸಾಕ್ಷಿ
> ನನ್ನ ಕಲ್ಯಾಣಕ್ಕೆ ಯುಕ್ತಳಾಗು॥

ಇದೀಗ ಧರ್ಮಪತ್ನಿಯನ್ನು ನೆನೆದು ವ್ಯಥೆಪಡುವರು—ಎಂದೆನಲ್ಲವೆ? ಒಮ್ಮೆ ನಮ್ಮ ಮನೆಯಲ್ಲಿ ಸಖಿಗೀತದ ಎರಡು ಸಾಲುಗಳನ್ನು ಸ್ಮರಿಸಿ ಉಚ್ಚರಿಸುತ್ತ, ಉಮ್ಮಳಿಸಿದುದನ್ನು ನಾನು ಮರೆಯಲಾರೆ:

> "ನಿನ್ನೆದೆ ಎತ್ತರಕ್ಕೆ ನಾನೇನು ಬಂದೇನು
> ಕಲಿತವರ ಬೆಡಗಿಲ್ಲ ನಮ್ಮ ಕಡೆ

ನಿಮ್ಮ ಕಣ್ಮುಂದೆಯೆ ಕಣ್ಮುಚ್ಚಿದರೆ ಸಾಕು
ಗೆದ್ದೆನು—ಎಂದೆ ನೀ ಕಣ್ಮುಚ್ಚಿಯೆ"

ಕಾಳಿದಾಸನ ನೆನಪು ಬಂದಾಗಲೆಲ್ಲಾ ಬೇಂದ್ರೆಯವರು ಹಿಂದಿನ ಜನ್ಮದಲ್ಲಿ ತಾನೇ ಕಾಳಿದಾಸನಾಗಿದ್ದೆನೇನೋ ಎಂಬ ಒಂದು ಪ್ರತ್ಯಯದಿಂದ ಮಾತನಾಡುತ್ತಿದ್ದರು. ಕಾಳಿದಾಸನ ಮೇಘದೂತ ಮನನ ಮಾಡಿ ಕನ್ನಡ ಮೇಘದೂತ ಮಾಡಿದರೆ, ಆತನ ಶಾಕುಂತಲದಲ್ಲಿ, ಬಿಚ್ಚು ಹೋದ "ಮಿಸ್ಸಿಂಗ್ ಲಿಂಕ್ಸ್" ಹುಡುಕುತ್ತಿದ್ದರು. ಜ್ಞಾನಪೀಠ ಪ್ರಶಸ್ತಿ ನಿಮಿತ್ತ ಗೋವೆಯ ಸಂಸ್ಕೃತ ಪ್ರಚಾರಿಣೀ ಸಭೆಯಲ್ಲಿ ಸನ್ಮಾನ; ಗೋವೆಯ ಖ್ಯಾತ ಮರಾಠಿ–ಕಂ–ಕೊಂಕಣಿ ಕವಿ ಬಿ. ಬಿ. ಬೇಳರ್ಕರ್ ಅಧ್ಯಕ್ಷತೆ. ಗೋವೆಯ ರಸಿಕ ಜನ ದಿನಗಟ್ಟಲೆ ದೀರ್ಘವಾಗಿ ಕಾಯುತ್ತಿದ್ದರು. ಮಡಗಾಂವನಲ್ಲಿ ಈ ಸಂದರ್ಭ, ಈ ಸಮಾರಂಭಕ್ಕಾಗಿ. ಬೇಂದ್ರೆ ಅವರೊಡನೆ ನಾನೂ ಇದ್ದೆ. ಸಭೆಗೆ ಮೊದಲು ಬೇಂದ್ರೆ ಬೋರ್ಕರ್ ಅನೌಪಚಾರಿಕ ಭೆಟ್ಟಿ. ಬೋರ್ಕರ್ ತಾವು ಕನಸಿನಲ್ಲಿ ಕಾಳಿದಾಸನನ್ನು ಕಂಡ ದೃಷ್ಟಾಂತವನ್ನು ಉತ್ಸಾಹದಿಂದ ಹೇಳಿದರು. ಗೋವೆಯ ಜೀವನ ಪದ್ಧತಿಯೂ ಅವರ ಹರಟೆಯಲ್ಲಿ ಚರ್ಚಿಸಲ್ಪಟ್ಟಿತು. "ಒಂದು ಬಟ್ಟಲು ಕಾಳಿದಾಸನ ಹೆಸರಿನಲ್ಲಿ ಮಧುರ ಮದಿರಾಪಾನವೇನೂ ಅಪ್ರಾಪ್ತ ಅನಿಸಲಾರದು. ಸ್ವಲ್ಪ ಮಾಸಲೆ ನೋಡ್ತೀರೇನು?" ಎಂದು ಬೋರ್ಕರ್ ಸಸ್ಮಿತರಾಗಿ ಪ್ರಶ್ನಿಸಿದಾಗ ಸರ್ಪದಂತೆ ಕೆರಳಿದ ಬೇಂದ್ರೆ—ಮರಾಠಿಯಲ್ಲೇ ಉತ್ತರಿಸಿದರು: "ಅರೇ ಚೀ ಕಾಳಿದಾಸಾ ಲಾಚ ಪ್ಯಾನ ಆಲೋ" ಎಂದು, ಮತ್ತೆ ಮುಂದುವರೆಸಿ—"ನನಗೆ ಶಾಕುಂತಲ ಅಂದರೆ ಒಂದು ಅಕ್ಷಯ ಮಧು ಪಾತ್ರೆ" ಅಂತ ಕಾಳಿದಾಸನ ನಶೆಯೇರಿ ನುಡಿದಾಗ ಬೋರ್ಕರ್ ಬೇಂದ್ರೆ ಮಾತಿನ ಮಾದಕತೆಗೆ ಹೊಟ್ಟೆ ತುಂಬ ನಕ್ಕದ್ದಲ್ಲದೆ "ಖರೇ ಕಾಳಿದಾಸನ್ನ ಪ್ರತ್ಯಕ್ಷ ಮಾಡಿಕೊಂಡವರು ನೀನೇ ಬೇಂದ್ರೆ" ಎಂದು ಕೈ ಕುಲುಕಿದರು. ಈಗ ಬೋರ್ಕರ್‌ರರೂ ಇಲ್ಲ, ಬೇಂದ್ರೆ ಅವರೂ ಇಲ್ಲ. ಈ ಮಾತನ್ನು ರುಜುವಾತು ಪಡಿಸಲಿಕ್ಕೆ. ಆದ್ದರಿಂದ ನನ್ನ ಮಾತೆ ಒಂದು ಪುರಾವೆ ಅಂತ ನೀವು ನಂಬದೇ ಗತಿ ಇಲ್ಲ. ಅಂದಿನ ಭಾಷಣದಲ್ಲಿ ಬೇಂದ್ರೆ ಶಾಕುಂತಲದ ಪುರಾವೆ ವಿಷಯವಾಗಿಯೇ ಹೇಳಿದ್ದರು. "ದುಷ್ಯಂತಗ ತಾಸು ಶಕುಂತಲೆಯನ್ನು ಮರಿವಿ ಆಗೀನಿ ಅಂತ ನಂಬಲಿಕ್ಕೆ ತಾನು ಕೊಟ್ಟಿದ್ದ ಆ ಉಂಗುರದ ಪುರಾವೆ ಬೇಕಾಗಿತ್ತು. ಅಲ್ಲಾ ಸಾಕ್ಷಾತ್ ಶಕುಂತಲಾನೇ ಜೀವಂತವಾಗಿ ಇದಿರಿಗೆ ನಿಂತಾಗ—"ಹಾಂಗಾದರ ಉಂಗುರಾ ತೋರಿಸು" ಅಂತಾನ. ಅಲ್ಲಾ ಮಾರೀ ನೋಡಿ ಗುರುತಿಸದವ ಉಂಗುರ ನೋಡಿ ಗುರುತಿಸತಿದ್ದವ? 'ಪ್ರಮಾಣಮಂತಃಕರಣ ಪ್ರವೃತ್ತಯಃ' ಅಂತ ಹೇಳಿ ಶಕುಂತಲೇ ಕ್ಷತ್ರಿಯ ವಧೂನೇ ಇದ್ದಿರಬೇಕು ಅಂತ ನಿಶ್ಚಯಿಸಿದವ ಅರಮನೆಗೆ ಬಂದಮ್ಯಾಲೆ, ಬಸುರಿಯಾದ ಶಕುಂತಲೆಯನ್ನು ನೋಡಿದಾಗ ಈ "ಪ್ರಮಾಣತುಂತಃಕರಣ ಪ್ರವೃತ್ತಯಃ; ಎಲ್ಲಿ ಹೋಗಿತ್ತು? ಮರೆತು ಹೋಗಿತ್ತು" ಎಂದೆಲ್ಲಾ ಶಾಕುಂತಲೆಯ ಬಗ್ಗೆ, ನಿಜವಾಗಿಯೂ ಇನ್ನೊಬ್ಬ ಕಾಳಿದಾಸನಾಗಿಯೇ ಬೇಂದ್ರೆ ವಿಶ್ಲೇಷಣಾತ್ಮಕ ವಿಮರ್ಶೆ ಮಾಡಿದ್ದರು. ಉಂಗುರ ಕಳೆಯದೆ ಇದ್ದಿದ್ದರೆ

ಏನಾಗುತಿತ್ತು? ಇದನ್ನು ಬೇಂದ್ರೆ ಕಾಳಿದಾಸನಾಗಿಯೇ ಪ್ರಶ್ನಿಸಿ—"ಐದು ಅಂಕಿಗೇ ನಾಟಕ ಮುಕ್ತಾಯ ಆಗಿ ಹೋಗುತ್ತಿತ್ತು. ಅಂದರೆ ಕಾಳಿದಾಸನ ಖರೇ ಪ್ರತಿಭಾ ಹೊರ ಹೊಮ್ಮುತಿದ್ದಿಲ್ಲಾ—ಅಂತ. ಶಕುಂತಲೆಯ ಕಣ್ಣೀರಿನ ಕಥೆ ಸುರುವಾಗೋದೆ ಐದನೆಯ ಅಂಕಿನಿಂದ"—ಎಂದು ಶಾಕುಂತಲದ ವಿಶ್ಲೇಷಣೆ ಮಾಡಿದ ಅಂದಿನ ಅವರ ಭಾಷಣ ನೆನೆದುಕೊಂಡರೆ ಇಂದಿಗೂ ಮೈಯೊಳಗೆ ಮಿಂಚಾಡುತ್ತದೆ.

ಒಡಗಾಂವ್‌ದಿಂದ ಹಿಂತಿರುಗುವಾಗಲೂ ಕಾಳಿದಾಸನ ಶಾಕುಂತಲದ ಚರ್ವಿತ ಚರ್ವಣವೆ. ಕಣ್ವರ ವ್ಯಥೆ ಕಡಿಮೆಯದೆ? ಗೌತಮಿಯ ಸಂಯಮದ ಜೀವನ ಎಂಥಾದ್ದು ಎಂದುಕೊಂಡು ಮಾಸ್ತಿಯವರ "ಗೌತಮಿ ಹೇಳಿದ ಕಥೆ"ಯನ್ನು ಮನಕರಗುವಂತೆ ತಾನೇ ಮಾಸ್ತಿಯವರಾಗಿ ಹೇಳಿದರು. ಕಥೆ ಹೇಳುವಲ್ಲಿ ಬೇಂದ್ರೆ ನಿಷ್ಣಾತರು. ಗೋವೆಯಿಂದ ಲೋಂಡಾ ಮುಟ್ಟುವವರೆಗೂ ಕಾಳಿದಾಸನ ಅಕ್ಷಯ ಮಧುಪಾತ್ರೆ ಸವಿದದ್ದೆ ಸವಿದದ್ದು. ಶಕುಂತಲೆಗೆ ತಂಪಾಗಲಿ ಅಂತ ಗೌತಮಿ ತೀರ್ಥ ತಂದ ಪ್ರಸಂಗವನ್ನು ಪ್ರಸ್ತಾಪಿಸುತ್ತ "ಆದರೆ ಶಕುಂತಲೆಗೆ ಅದದ್ದು ಸನ್ ಸ್ಟ್ರೋಕ್ ಅಲ್ಲಾ, ಮೂನ್ ಸ್ಟ್ರೋಕ್ ಉ" ಎಂದಾಗ ನನಗೆ ಹುಚ್ಚುನಗೆ, ಅವರಿಗೂ ಅಷ್ಟೆ.

ಬೇಂದ್ರೆಯವರು ಒಂದೊಂದು ಸಂದರ್ಭದಲ್ಲೂ ಆಡಿದ ಮಾತು ನೆನೆದುಕೊಂಡರೆ ನಾನೊಬ್ಬನೇ ನನ್ನಷ್ಟಕ್ಕೇ ನಗುತ್ತೇನೆ. ೧೯೪೬ರಲ್ಲಿ ಎಂದರೆ ೪೬ ವರುಷಗಳ ಹಿಂದೆ ಬೇಂದ್ರೆ ಅವರ ಐವತ್ತನೆಯ ಹುಟ್ಟುಹಬ್ಬ ಧಾರವಾಡದಲ್ಲೇ ಆಚರಿಸಲ್ಪಟ್ಟಿತು. ಅವರಿಗೆ ಆ ಕಾಲಕ್ಕೆ ಹತ್ತು ಸಾವಿರ ಹಮ್ಮಿಗೆ ಅರ್ಪಿಸಲಾಯಿತು. ನಿರುದ್ಯೋಗದ ಬಡತನದಲ್ಲಿ ಆ ಹತ್ತು ಸಾವಿರ ರೂಪಾಯಿ ಬೇಂದ್ರೆ ಅವರು ಸಂಸಾರಕ್ಕಾಗಿ ಇಟ್ಟುಕೊಳ್ಳಲಿಲ್ಲ. ಪುಸ್ತಕ ಕೊಳ್ಳುವುದಕ್ಕಾಗಿ ವಿನಿಯೋಗಿಸಿದರು. 'ಹೆಂಡತಿಗೆ ಸೀರಿ ತರಲಿಕ್ಕೆ ಅಂತ ಹೋಗಿ ಪುಸ್ತಕ ಖರೀದಿಸಿಕೊಂಡು ಬಂದವ ನಾನು' ಎಂದು ಹೇಳುತ್ತಿದ್ದರು ಬೇಂದ್ರೆ. ತಮ್ಮ ಐವತ್ತನೆಯ ಹುಟ್ಟುಹಬ್ಬದ ಗೌರವಕ್ಕೆ ಉತ್ತರಿಸುತ್ತ ಬೇಂದ್ರೆ ತಮಗಿರುವ ಪುಸ್ತಕದ ವ್ಯಸನವನ್ನೇ ಕುರಿತು ಹೇಳಿದರು. ಕಾಮುನಟ್ಟಿ ತಮ್ಮನಿಂದ ಲೈಬ್ರರಿ ಕೀಲಿ ಕೈ ಪಡೆದುಕೊಂಡು ಆತ ತಿರುಗಿ ಬರುವವರೆಗೆ ಲೈಬ್ರರಿ ನೋಡಿಕೊಳ್ಳುತ್ತೇನೆ ಎಂದು ಕಪಾಟಿನ ಪುಸ್ತಕಗಳನ್ನು ಹೊರ ತೆಗೆದು ನೆಲದ ಮೇಲೆ ಹಾಸಿಗೆ ತುಂಬಾ ಹರಡಿ ಪುಸ್ತಕಗಳ ಮೇಲೆ ಉಳ್ಳಾಡುತ್ತಿದ್ದರಂತೆ. ಒಮ್ಮೆ ಆಲೂರ ವೆಂಕಟರಾಯರು—ಅವರ ಮೇಲ್ವಿಚಾರಕರು—ಲೈಬ್ರರಿ ಅವಸ್ಥೆ ನೋಡ್ರಿ ಬೇಂದ್ರೆ ಅವರನ್ನು ಲೈಬ್ರರಿಯಿಂದ ದೂರಿರಿಸಿದಾಗ, ಬೇಂದ್ರೆ ಕದ್ದು ಕದ್ದು ಪುಸ್ತಕ ಓದುತ್ತಿದ್ದರಂತೆ. ಇದೇ ವಿಷಯ ಅಂದು ಹುಟ್ಟಿದ ಹಬ್ಬದಂದು ಹೇಳುತ್ತ ಅವರು ನುಡಿದರು—"ನಾ ಏನೋ ಕದ್ದು ಕದ್ದು ಪುಸ್ತಕಾ ಓದಲಿಕ್ಕೆ ಸುರು ಮಾಡಿದೆ. ಆದರೇನು? ಕದ್ದು ಉತ್ತತ್ತಿ ತಿಂದರೆ ಅದು ಪೌಷ್ಟಿಕ ಆಗೋದು ಬಿಡತದೇನು? ಪುಸ್ತಕ ಕದ್ದು ಓದಿದರೂ ಅವು ಕೊಡೋ ಅಷ್ಟು ಜ್ಞಾನ ಪುಷ್ಟಿಕೊಟ್ಟಿಕೊಟ್ಟವು" ಎಂದು. ಈ ಮಾತು ಇನ್ನೂ ನನ್ನ ಕಿವಿಗಳಲ್ಲಿ ಅನುರಣಿಸುತ್ತಲೇ ಇವೆ.

ಧಾರವಾಡದ ಏಳು ಗುಡ್ಡಗಳು, ಏಳು ಕೆರೆಗಳ ಸುತ್ತಲೂ ಬೇಂದ್ರೆ ವಾಮನ ಪಾದಗಳ ಹೆಜ್ಜೆಗಳು ಮೂಡಿವೆ. ಗೋಕಾಕ್–ಬೇಂದ್ರೆ ಕೂಡಿ ನಡೆದರೆ ಉತ್ತರ ಕರ್ನಾಟಕವೇ ಕೂಡಿ ನಡೆದಂತಾಗುತ್ತಿತ್ತು. ಏಕೆಂದರೆ "ದಿ ಲಾಂಗ್ ಅಂಡ್ ಶಾರ್ಟ್ ಆಫ್ ಕನ್ನಡ ಪೊಯಟ್ರಿ ಈಸ್ ಗೋಕಾಕ್ ಅಂಡ್ ಬೇಂದ್ರೆ....ಎಂದು ಮಿತ್ರರೊಬ್ಬರು ನುಡಿದಿದ್ದರು. ಈ ಇಬ್ಬರು ವ್ಯಕ್ತಿಗಳ ಜೊತೆಗೆ ಇರುವುದೆಂದರೆ ಜ್ಞಾನದೇಗುಲದಲ್ಲಿ ಇದ್ದಂತೆ. ನಾನೊಮ್ಮೆ ಬೇಂದ್ರೆ ಅವರನ್ನು ಕುರಿತು ಒಂದು ಗ್ರಂಥ ಬರೆಯಬೇಕೆಂದು ಅವರ ಮುಂದೆ ಪ್ರಸ್ತಾಪಿಸಿದಾಗ–"ಐದು ಖಂಡಗಳನ್ನು ಸುತ್ತಾಡಿ ಬಂದ ಗೋಕಾಕರ ಬಗ್ಗೆ ಮೊದಲು ಬರೆಯಿರಿ" ಎಂದು ನೇಮಿಸಿದರು. ಅದರ ಫಲವೇ "ವಿನಾಯಕ ಮಹಾದರ್ಶನ" ಅದರ ಹಿಂದಿದೆ ಬೇಂದ್ರೆ ಮಹಾ ವ್ಯಕ್ತಿತ್ವದ ಪ್ರೇರಣೆ. ಬೇಂದ್ರೆಯವರನ್ನು 'ಕಾವ್ಯಗುರು" ಎಂದು ಗುರುತಿಸಿಕೊಂಡಿದ್ದ ಗೋಕಾಕರು ಕೊನೆಯುಸಿರೆಳೆದ ಮುಂಬಯಿ ಮಣ್ಣಿನಲ್ಲೇ ಸಮಾಧಾಸ್ಥರಾದರು. ಅದೂ ಕರ್ನಾಟಕದ ಹೊರಗೆ.

ಒಮ್ಮೆ ಬೇಂದ್ರೆ ಅವರ ಸೂಚನೆಯ ಮೇರೆಗೆ ಧಾರವಾಡದೊಳಗಿನ ಹನುಮಂತ ದೇವರ ಗುಡಿಗಳನ್ನೆಲ್ಲಾ ನೋಡಿ ಬರುವುದೆಂದು ನಾನೂ ಅವರೂ ಹೊಸಯಲ್ಲಾಪುರದಿಂದ ಹೆಜ್ಜೆ ಹಾಕಲು ತೊಡಗಿದೆವು. ಹೊಸಯಲ್ಲಾಪುರದ ಹನುಮಂತ ದೇವರನ್ನು ಬಳಸಿ ಮೂರು ಬಟ್ಟೆಗಳು ಕೂಡುವ ತಮ್ಮ "ಜೋಗಿ....ಕಾವ್ಯದ ನಿರ್ದೇಶನವನ್ನೆಲ್ಲಾ ತೋರಿಸುತ್ತಾ ಸಾಗಿದರು. ಆ ಮಸಣ ನಾಚಿ, ಆ ಪಾಚಿಯು ಹೊಂಡ, ಆ ಕಪ್ಪು ನೀರು, ಆ ಹುಣಸೆಯ ಮರ, ಭರತಿ ಹಗಲಲ್ಲಿ ಚೀರಾಡುವ ಆ ತೊಗಲ ಬಾವಲಿ, ಆ ಮಾತಿನ ಗಡದಡಿ ಇದ್ದಿರಬಹುದಾದ ಏಳು ಹೆಡೆಯ ಹಾವು, ಅವರ ಮೇಲೆ ಗಿರಣಿ ಕೂಗಿಧಾಂಗ ಅಸರಂತ ಕೂಗುವ ಕೋಗಿಲೆ ಸಮಗ್ರ ಚಿತ್ರ ಮತ್ತೊಮ್ಮೆ ಕಣ್ಮುಂದೆ ಕಟ್ಟಿತ್ತು. ಆಮೇಲೆ ಕಾಮನಕಟ್ಟೆಗೆ ಬಂದೆವು. ಅಲ್ಲಿ ಮೂಲೆಯ ಆ ಗೋಖಲೆ ಅವರ ಮನೆ, ಅವರ ಮನೆ ಹಿತ್ತಲದ ಹುಣಸೀಮರದ ಮೇಲಿನ ಕೋಗಿಲೆಯ ಕೂಗನ್ನು ಕೇಳಿಯೇ ತಾವು ೧೯೧೮ರಲ್ಲಿ ಬರೆದ 'ಕೋಗಿಲೆ'ಯ ಕವನ ಮೂಡಿಬಂದಿತ್ತು. "ತುತೂರಿ"ಯ ಜೊತೆಗೆ ಆದೇವರು ಹಾಡಾಗಿ ಮೂಡಿಬಂದ ಈ 'ಕೋಗಿಲೆ' ಇವೇ ಅವರ ಪ್ರಥಮ ಕವನಗಳು. ೧೯೧೮ರ 'ಪ್ರಭಾತ' ಪತ್ರಿಕೆಯಲ್ಲಿ 'ತುತೂರಿ' ಪ್ರಕಟವಾಗಿತ್ತು. ಉತ್ತರ ಕರ್ನಾಟಕದ ಏಕೆ ಅಖಿಲ ಕರ್ನಾಟಕದ ನವೋದಯವನ್ನು ಘೋಷಿಸಿದವು ಈ ಎರಡು ಗೀತೆ. ಇವೆಲ್ಲಾ ಆತ್ಮೀಯ ನೆನಪುಗಳು—ಸವಿ ಸವಿ ಕೈ ತುತ್ತುಗಳು:

ಕಾಮನಕಟ್ಟೆಯ ವಾಮನಮೂರ್ತಿ
ತ್ರಿವಿಕ್ರಮ ಲೀಲೆಯ ಏನೆಂಬೇನು ?
ನೆನೆಸಿದ ಹಾಗೆಯೇ ಕನಸಿನ ನೆಲೆಯೇರಿ
ಬೆಲೆ ಬಂತು ನೆನಪಿನ ಪೇಟಿಯಲು ॥

ಎಂಬ ಸಾಲುಗಳು ನೆನಪಿಗೆ ಬಂದವು. ಬೇಂದ್ರೆ ತಾವು ವಾಸವಾಗಿದ್ದ ಮನೆಯನ್ನೇ ಹುಳು ಹುಳು ನೋಡುತ್ತ ನಿಂತು 'ಒಳಗ ಹೋಗಿ ನೋಡಿ ಬರೋಣೇನು ?" ಎಂದು ಉತ್ಸುಕತೆಯಿಂದ ಕೇಳಿದಾಗ, ಇನ್ನೂ

ಇಂದಿಗೂ ಆ ವಿದೇಹ ಜೀವ ಹೀಗೆಯೇ ಕೇಳುತ್ತಿದೆಯೇನೋ ಎನಿಸುತ್ತದೆ ನನಗೆ.

ನಾವು ಹಾಲಗೆರೆಯ ಹಣುಮಂತ ದೇವರ ಗುಡಿಗೆ ಬಂದಾಗ ಬೇಂದ್ರೆ ನಾಲ್ಕು ವರ್ಷದ ಬಾಲಕನಾಗಿದ್ದಾಗ ತಾಯಿಯ ಜೊತೆ ಒಮ್ಮೆ ಈ ಕೆರೆಗೆ ಬಂದಾಗ, ಮೆಟ್ಟಿಲು ಮೇಲೆ ಜಾರಿ ಕೆರೆಯೊಳಗೆ ಬಿದ್ದು ತಾಯಿ ಜಾರಿದ ಮಗನ ಕಾಲು ಹಿಡಿದು ಮೇಲಕ್ಕೆತ್ತಿದಳಂತೆ. ಅಂತೇ "ಅಂಬಿಕಾತನಯದತ್ತ"ನಾಗಿ ಬೆಳೆದ ಮೇಲೆ ತಾಯಿ ತನಗಿತ್ತುದನ್ನು ಈ ತನಯ, ಲೋಕಕ್ಕೆ ಕಾವ್ಯರೂಪದಿಂದ ಇತ್ತ—ಎಂದೆಲ್ಲಾ ವಿವರಿಸಿ ಹೇಳುತ್ತಿದ್ದಾಗ ಎಂಭತ್ತನಾಲ್ಕರ ಬೇಂದ್ರೆ ನಾಲ್ಕು ವರ್ಷದ ಬಾಲಕನಾಗಿ ಎಂಭತ್ತು ವರ್ಷ ಹಿಂದಕ್ಕೆ ಸರಿದಿದ್ದರು. ನಾನು?... ಇನ್ನೂ ಇದ್ದಲ್ಲೇ ಇದ್ದೇನೆ.

---

ಕಪ್ಪು ನೀರ ಕುಡಿಯಬಹುದು
ಉಪ್ಪು ನೀರ ಬಾಳು ಸಲ್ಲ,
ಬಾಳು ಸಲ್ಲದೆಲ್ಲ ಅಹುದು
ಅಲ್ಲಿ ಇಲ್ಲಿ ಎಲ್ಲ ಕಡೆಗು
ಉಪ್ಪು ನೀರೆ ಉಪ್ಪು ನೀರು
ಅದರ ಮೇಲೆ ಒಪ್ಪ ಹಾಕಿ–
ದಂತೆ ಮೂಡಿ ಮುಳುಗುವಂಥ
ನಗೆಯು ಕಾಣೊ ಬರಿಯ ಬರುಗು

('ನಾದಲೀಲೆ'—ತಾಯಿ ಪು. ೭೯)

# ಬೇಂದ್ರೆ ಅವರಿಂದ ಪುಸ್ತಕ ಭಂಡಾರ ಉದ್ಘಾಟನೆ

**ಚಂದ್ರಶೇಖರಾರಾಧ್ಯ**

ವಯಸ್ಕರ ಶಿಕ್ಷಣ ಸಮಿತಿ ವತಿಯಿಂದ ಬಳ್ಳಾರಿಯಲ್ಲಿ ೧೯೫೪ ರಲ್ಲಿ ಒಂದು ಕೇಂದ್ರ ಪುಸ್ತಕ ಭಂಡಾರ ಸ್ಥಾಪಿಸಲಾಯಿತು. ಇದರ ಉದ್ಘಾಟನೆಯನ್ನು ದಿನಾಂಕ ೪–೧೧–೧೯೫೪ ರಂದು ವರಕವಿ ದ.ರಾ. ಬೇಂದ್ರೆ ಅವರು ನೆರವೇರಿಸಿ ಹೀಗೆ ತಿಳಿಸಿದರು.

ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕ ಭಂಡಾರ ನೋಡಿ ನನಗೆ ಸಂತೋಷವಾಯಿತು. ಅವರಲ್ಲಿಯೂ ವಿಶೇಷವಾಗಿ ಹೊಸದಾಗಿ ಓದು ಬರಹ ಕಲಿತವರನ್ನು ಗಮನದಲ್ಲಿರಿಸಿಕೊಂಡು ಈ ಪುಸ್ತಕ ಭಂಡಾರ ಸ್ಥಾಪಿಸಿರುವ ವಿಷಯ ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ. ಹೊಸದಾಗಿ ಓದು ಬರಹ ಕಲಿತವರು ಈ ಹಿಂದೆ ತಾವು ಕಲಿತಿರುವುದನ್ನು, ಉಳಿಸಿಕೊಂಡು ಬೆಳೆಸಿಕೊಳ್ಳುವುದು ಕಷ್ಟ. ಇದಕ್ಕೆ ಕಾರಣಗಳು ಹಲವಾರು. ಆದರೂ ಇದು ಆಗಲೇಬೇಕು. ಹಾಗಾದಾಗ ಮಾತ್ರ ಹಿಂದೆ ಕಲಿತದ್ದು ಸಾರ್ಥಕವಾಗುತ್ತದೆ. ಇದರ ಪ್ರತಿಫಲ ಕೂಡಲೇ ದೊರೆಯದಿರಬಹುದು. ಆದರೆ, ಅದಕ್ಕಾಗಿ ನಿರಾಶೆಯಿಂದ ಪ್ರೇರಣೆ ಕಳೆದುಕೊಳ್ಳಬಾರದು.

ಹೊಸದಾಗಿ ಅಕ್ಷರ ಕಲಿತವರಿಗಾಗಿಯೇ ವಿಶೇಷ ಸಾಹಿತ್ಯ ಸಿದ್ಧಪಡಿಸಿ, ಶ್ರೀಸಾಮಾನ್ಯರಿಗೆ ಇದು ಕೈಗೆಟಕುವಂತೆ ವ್ಯವಸ್ಥೆ ಮಾಡಿರುವ ವಯಸ್ಕರ ಶಿಕ್ಷಣ ಸಮಿತಿಯ ಸೇವೆ ಶ್ಲಾಘನೀಯ. ವಯಸ್ಕರ ಶಿಕ್ಷಣ ರಂಗದಲ್ಲಿ ಸಂಶೋಧನೆ ಕೈಗೊಂಡು ಇದರ ಫಲವನ್ನು ಜನಸಾಮಾನ್ಯರಿಗೆ ಹಂಚುತ್ತಿರುವ ಈ ಸಂಸ್ಥೆಯ ಸಾಧನೆ ಉಲ್ಲೇಖಾರ್ಹವಾದುದು. ಈ ಪುಸ್ತಕ ಭಂಡಾರದ ಜೊತೆಯಲ್ಲಿ ಒಂದು ವಸ್ತು ಪ್ರದರ್ಶನಾಲಯವನ್ನೂ ತೆರೆಯುವುದು ಸೂಕ್ತ. ಇದರಿಂದ ಜನರು ಪ್ರತ್ಯಕ್ಷ ತಿಳುವಳಿಕೆ ಪಡೆಯಲು ಸಾಧ್ಯವಾಗುತ್ತದೆ. ಈ ಪ್ರದರ್ಶನಾಲಯ ಹೇಗಿರಬೇಕು ಎಂಬ ಬಗ್ಗೆ ಸಂಬಂಧಪಟ್ಟವರು ಸಮಾಲೋಚಿಸಿ ಕಾರ್ಯತತ್ಪರವಾಗುವುದು ಒಳ್ಳೆಯದು. ವಯಸ್ಕರ ಶಿಕ್ಷಣ ಸಮಿತಿಗೆ ಈ ಕೆಲಸ ಅಸಾಧ್ಯ ಎಂದು ನಾನು ತಿಳಿದಿಲ್ಲ. ಇಲ್ಲಿ ಉತ್ಸಾಹೀ ಮತ್ತು ನಿಸ್ವಾರ್ಥ ಕಾರ್ಯಕರ್ತರಿದ್ದಾರೆ. ಉತ್ತಮ ಮಾರ್ಗದರ್ಶಕರಿದ್ದಾರೆ. ಒಂದು ಒಳ್ಳೆಯ ಕೆಲಸ ಮಾಡಲು ಇದಕ್ಕಿಂತ ಇನ್ನೇನು ಬೇಕು? ಜ್ಞಾನದಾನದ ಉದಾತ್ತ ಧ್ಯೇಯ ನಿಮ್ಮದಾಗಿದೆ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ಕೈಗೊಂಡಿರುವ ಕಾರ್ಯ ಯಶಸ್ವಿಯಾಗಲೆಂದು ಹಾರೈಸಿ, ಈ ಪುಸ್ತಕ ಭಂಡಾರವನ್ನು ಹರ್ಷದಿಂದ ಉದ್ಘಾಟಿಸಿದ್ದೇನೆ.

# ದ. ರಾ. ಬೇಂದ್ರೆ: ಶಬ್ದಗಾರುಡಿಗ

ಡಾ॥ ಆರ್. ರಾಮಕೃಷ್ಣ

ಅಂಬಿಕಾತನಯ ಕಟ್ಟಿದ ಕಗ್ಗಾ
ಜಗ್ಗಬ್ಯಾಡಾ ನೀ ಹಿಗ್ಗಾಮುಗ್ಗಾ
ಹುರಿ ಐತಿ ಒಳಗ, ಬರಿದಲ್ಲಾ ಹಗ್ಗಾ

ಆಧುನಿಕ ಕನ್ನಡ ಕಾವ್ಯದ ಅಸಾಧಾರಣ ವ್ಯಕ್ತಿ, ಶಕ್ತಿ ಮತ್ತು ಚೈತನ್ಯ ಬೇಂದ್ರೆ. ಇಪ್ಪತ್ತನೆಯ ಶತಮಾನದ ಶ್ರೇಷ್ಠ ಕವಿ. ವರ ಕವಿ. ಜ್ಞಾನಪೀಠ ಪ್ರಶಸ್ತಿ ವಿಜೇತ. ಕಾವ್ಯಸೃಷ್ಟಿಯನ್ನು ವ್ಯಕ್ತಿಯ ಉಸಿರಾಟದಂತೆ ಸಹಜ ಮಾಡಿಕೊಂಡ ಪ್ರತಿಭಾವಂತ ಕವಿ. ಶಬ್ದದ ಕಗ್ಗಡಲ್ಲಿ ಆಡಿದ ಮಾಯಾಲಾಂದ್ರ.

ಬೇಂದ್ರೆಯವರು ಭಾವಗೀತೆಗಳನ್ನು ಕಟ್ಟಿ ಹಾಡುವಲ್ಲಿ ಸಿದ್ಧಹಸ್ತರು. ಅವರಲ್ಲಿ ಭಾಷೆ, ಭಾವಕ್ಕೆ ತಕ್ಕಂತೆ ಹೊಂದಿಕೊಳ್ಳುವ ರೀತಿ ಅಪೂರ್ವವಾದುದು. ಹೊಸ ಗನ್ನಡ ಕವಿಗಳ ಪೈಕಿ ಅವರಂಥ ಮಿತಭಾಷಿಗಳನ್ನು ಅರಸುವುದು ಕಷ್ಟ. ಬೇಂದ್ರೆಯವರಿಗೆ ಚಿಕ್ಕ ವಯಸ್ಸಿನಿಂದಲೂ ಕಾವ್ಯದತ್ತ ಹೆಚ್ಚು ಆಸಕ್ತಿ. ವಾಲ್ಮೀಕಿ, ವ್ಯಾಸ, ಕಾಳಿದಾಸ, ಬ್ರೌನಿಂಗ್, ಕೀಟ್ಸ್, ವರ್ಡ್ಸ್‌ವರ್ತ್ ಇವರ ಮೆಚ್ಚಿನ ಕವಿಗಳು. ಶ್ರೀ ಅರವಿಂದರು ಮತ್ತು ಟಾಗೂರರು ಇವರಿಗೆ ಗುರು ಸಮಾನರು.

ಬೇಂದ್ರೆಯವರ ಮೊದಲ ಕವನ ಬೆಳಗು ೧೯೧೮ ರಲ್ಲಿ ಅಚ್ಚಾಯಿತು, ಪ್ರಭಾತ ಎಂಬ ಪತ್ರಿಕೆಯಲ್ಲಿ. ೧೯೨೧ ರಲ್ಲಿ 'ಗೆಳೆಯರ ಗುಂಪು' ಕಟ್ಟಿ ನವೋದಯ ಕಾವ್ಯ ಮಾರ್ಗಕ್ಕೆ ನಾಂದಿ ಹಾಡಿದರು. ಬೇಂದ್ರೆಯವರ ಪ್ರಥಮ ಕವನ ಸಂಕಲನ ಗರಿ ೧೯೩೧ ರಲ್ಲಿ ಪ್ರಕಟವಾಯಿತು. ಮುಂದೆ ಅವರ ಅನೇಕ ಕವನ ಸಂಕಲನಗಳು ಪ್ರಕಟವಾದುವು. ಈ ಸಂಕಲನಗಳಲ್ಲಿ ನೂರಾರು ಉತ್ತಮ ಕವನ ಮುಕ್ತಾಫಲಗಳನ್ನು ಓದುಗರಿಗೆ ನೀಡಿದ್ದಾರೆ. ಇವುಗಳ ಪೈಕಿ ಕೆಲವನ್ನಿಲ್ಲಿ ಪರಿಭಾವಿಸಬಹುದು :

ಕವಿಗಳು ಸೌಂದರ್ಯೋಪಾಸಕರು. ಅಂತೆಯೇ ಅವರ ರಹಸ್ಯವನ್ನು ಭೇದಿಸುವ ಶೋಧಕರೂ ಕೂಡ. 'ನನಗ್ಯಾಕ ಹುಟ್ಟಿನ ಡೊಂಕ. ನನ ಚಿತ್ತದಾಗಿನ ಚಿತ್ರಗಾರ ಬರೆದಾನ ಚಿತ್ರಕ ಕಣ್ಣ' ಎಂದಿದ್ದಾರೆ ಬೇಂದ್ರೆ :

ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ
  ಕಣ್ಣಿಗು ಕಣ್ಣಾಗಿ ಒಳಗಿಹುದು
ರೂಪಲಾವಣ್ಯಕ್ಕೆ ಅಳೆಯಲು ಬಾರದು
  ಅವುಗಳೆ ಇದರೊಂದು ಕಣವಿಹವು

—ಸಖೀಗೀತ, ಪು. ೨೩

ಎಂದೂ ಹಾಡಿದ್ದಾರೆ.

ಬಾಳಿನಲ್ಲಿ ಬೇವನ್ನುಂಡು ಬೆಲ್ಲವನ್ನ ಹಂಚುವ ಗುಣ ಬೇಂದ್ರೆಯವರದು. ಕಾಲವು ಬದುಕಿನಲ್ಲಿ ಒಮ್ಮೆ ಸುಖ ತಂದರೆ ಮತ್ತೊಮ್ಮೆ ದುಃಖ ತರುತ್ತದೆ. ಆದರೆ ವ್ಯಕ್ತಿ ಸದಾ ಆಶಾವಾದಿಯಾಗಿರಬೇಕು. ಬರಲಿರುವ ದಿನಗಳು ಸದಾ ಸುಖವನ್ನು ತರುತ್ತವೆ ಎಂಬಾಸೆಯೇ ವ್ಯಕ್ತಿಯ ಬಾಳಿಗೆ ಬೆಳಕನ್ನು ತಂದುಕೊಡುತ್ತದೆ. ಕಂಗೆಡಿಸುವ ಮಂಜು ಹಿಂದಾದರೆ, 'ಕಂಗೊಳಿಸುವ ಕೆಂಪು ಮುಂದೆ ಕಾಣುತ್ತದೆ' ಎನ್ನುತ್ತಾರೆ ಕವಿ. ಕಾಲಚಕ್ರಕ್ಕೆ ಪಕ್ಷಿಯನ್ನು ಹೋಲಿಸಿದ್ದಾರೆ. ಹಕ್ಕಿ ಹಾರುತಿದೆ ನೋಡಿದಿರಾ? ಎಂಬುದು ಉದ್ಗಾರವಾಗಿರುವಂತೆಯೇ ಪ್ರಶ್ನೆಯೂ ಆಗಿದೆ. ಇಲ್ಲಿಯ ಹಕ್ಕಿ-ಕಾಲಪಕ್ಷಿ.

ಹಕ್ಕಿ ಹಾರುತಿದೆ ನೋಡಿದಿರಾ? ಒಂದು ಉತ್ತಮ ಭಾವಗೀತೆ. ಇದರಲ್ಲಿ ಐದೈದು ಸಾಲುಗಳಿಗೆ ಒಂದು ನುಡಿಯಂತೆ ಒಟ್ಟು ಏಳು ನುಡಿಗಳಿವೆ. ಮೂವತ್ತೈದು ಸಾಲುಗಳಿವೆ. ಈ ಕವನವನ್ನು ಓದುತ್ತಾ ಇದು ಸಾಮಾನ್ಯ ಪಕ್ಷಿಯಲ್ಲ ಎಂಬುದು ಅರಿವಾಗುತ್ತದೆ.

ನೀಲಮೇಘಮಂಡಲ ಸಮಬಣ್ಣ!
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ!
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ!

—ವಿನಯ, ಪು. ೩೮

ಬೇಂದ್ರೆಯವರು ನೀತಿ ಬೋಧೆಯನ್ನು ನೇರವಾಗಿ ಮಾಡದಿದ್ದರೂ ನಿತ್ಯಸತ್ಯವೂ ಆಧ್ಯಾತ್ಮಿಕ ವಿಚಾರವೂ ಅಂತರಿಕವಾಗಿ ಧ್ವನಿಸುವಂಥದು. ಮನಸ್ಸಿನ ತೂಗುಯ್ಯಾಲೆಯ ಚಿತ್ರವು ಸಹಜವಾಗಿ ಮೂಡಿಬಂದಿರುವ ಒಂದು ಪದ್ಯವಿದು:

'ಯಾರು ನಿಂದವರಲ್ಲಿ ತಾಯಿ' ಎಂದೆ
'ಯಾರು ಕೇಳುವರೆನಗೆ ಯಾಕೆ ತಂದೆ'
'ಬೇಸರದ ದನಿಯೇಕೆ ಹೆಸರ ಹೇಳಲ್ಲ'
'ಹೆಸರಾಗಿಯೂ ಕೂಗ ಹೇಳ ಹೆಸರಿಲ್ಲ'
'ನೀನಾರ ಮನೆಯವಳೊ ಮುತ್ತೈದೆ ಹೇಳು'
'ನಾನಾರ ಮನೆಯವಳೊ ಬಯಲನ್ನೆ ಕೇಳು'

—ಕನಸಿನೊಳಗೊಂದು ಕಣಸು

ದೇಶಮಾತೆಯ ಸೇವೆಗೆ ಹೇಡಿಯಾಗಿ ಹಿಂಜರಿಯುವ ವ್ಯಕ್ತಿಯನ್ನು ಜಾಗೃತಗೊಳಿಸುವ ವಾಣಿಯು ಅಂತರಿಕವಾಗಿ ನುಡಿಯುತ್ತಿದೆ.

ಬೇಂದ್ರೆಯವರ ಜನಪ್ರಿಯ ಭಾವಗೀತೆಗಳ ಪೈಕಿ 'ಕುಣಿಯೋಣು ಬಾರ' ಒಂದು. ಇದೊಂದು ಸುದೀರ್ಘವಾದ ಕವನ. ಇದರಲ್ಲಿ ನೂರಮೂವತ್ತೈದು ಸಾಲುಗಳಿವೆ. ಮೊದಲಿನೆರಡು ಸಾಲು ಪಲ್ಲವಿ. ಈ ಕವನದಲ್ಲಿ ಹತ್ತೊಂಬತ್ತು ನುಡಿಗಳಿವೆ. ಪ್ರತಿಯೊಂದು ನುಡಿಯಲ್ಲೂ ಏಳು ಸಾಲುಗಳಿವೆ. ಈ ಕವನಕ್ಕೆ ಬಳಸಿಕೊಂಡ ಜನಪದ ಧಾಟಿ ಮನಸೆಳೆಯುವಂಥದು:

ಚಿಗಂಡ್ಯಾಗಿ ತಿಗರ್‍ಯಾಗಿ
ನಿದ್ದಿಯ ಬಗರ್‍ಯಾಗಿ
ಗಾಳೀಗು ಹಗುರಾಗಿ ಕುಣಿಯೋಣು ಬಾ
ಕೈ ಮೈ ಬೀಸಾಡಿ
ಇಳೆಗೂದಲೀಸಾಡಿ
ಬೆವರ್‍ಹನಿ ಸೂಸಾಡಿ ಕುಣಿಯೋಣು ಬಾ

—ಗರಿ, ಪು. ೧೧೯-೧೩೬

ಸೃಷ್ಟಿಯಲ್ಲಿಯ ಸೌಂದರ್ಯ ಕವಿಯ ಮನವನ್ನು ವಿಶೇಷವಾಗಿ ಆಕರ್ಷಿಸಿರುವ ಒಂದು ಪದ್ಯ:

ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ

—ನಾದಲೀಲೆ, ಪು. ೫೦

ಪ್ರಪಂಚದ ಸಕಲ ವ್ಯಾಪಾರಗಳಲ್ಲಿಯೂ ಅನಂತಪ್ರಣಯವನ್ನು ಗಮನಿಸಿರುವ ಪದ್ಯವಿದು. ಉತ್ತರಧ್ರುವದಿಂದ ದಕ್ಷಿಣಧ್ರುವದವರೆಗೂ ಬೀಸುವ ಈ ಚುಂಬಕ ಗಾಳಿಯ ಸೆಳೆತದಲ್ಲಿ ಗ್ರಹ ಚಂದ್ರ ತಾರಾದಿಗಳೂ ತಿರುಗುತ್ತಿವೆ. ಒಂದನ್ನೊಂದು ಆಕರ್ಷಿಸುವಂಥದು ಈ ಚುಂಬಕ ಗಾಳಿ.

ಆತ್ಮದ ಆಕರ್ಷಣೆಯೇ ಪ್ರೀತಿ. ಹೆಣ್ಣಿಗೆ ಗಂಡಾಗಿ, ಗಂಡಿಗೆ ಹೆಣ್ಣಾಗಿ ಪರಸ್ಪರರನ್ನು ಆಕರ್ಷಿಸುವ ಈ ಪ್ರೀತಿಯ ಶಕ್ತಿ ಅಪಾರವಾದುದು. ವೇಶ್ಯಾ ಪ್ರೇಮದ ಬಗೆಗೆ ಸಮಾಜದ ತಿರಸ್ಕಾರವೇ ಹೆಚ್ಚು. ವೇಶ್ಯೆಯ ಪ್ರೇಮ ನೈಜ ಪ್ರೇಮವಲ್ಲ ಅದು ವ್ಯಕ್ತಿಯ ಪತನಕ್ಕೆ ಕಾರಣವಾಗುವಂಥದು ಎಂಬ ಕಾರಣಗಳಿಂದ. ಆದರೆ ಬೇಂದ್ರೆಯವರ 'ಹುಬ್ಬಳ್ಳಿಯಾಂವಾ' ಈ ಮಾತಿಗೆ ವಿರುದ್ಧವಾಗಿದೆ. ಸಾಮಾನ್ಯ ಸ್ತ್ರೀಯೊಬ್ಬಳ ಆಡು ನುಡಿಯಲ್ಲಿಯೇ ರಚಿತವಾಗಿದೆ ಈ ಕವನ. ದಿನಗಳುರುಳಿದರೂ ಬಾರದ ಪ್ರಿಯಕರನನ್ನು ನೆನೆದು ಹಂಬಲಿಸುತ್ತಿದ್ದಾಳೆ ಆ ಹೆಣ್ಣು :

ಇನ್ನೂ ಯಾಕ ಬರಲಿಲ್ಲವ್ವಾ
ಹುಬ್ಬಳ್ಳಿಯಾಂವಾ
ವಾರದಾಗ ಮೂರು ಸರತಿ ಬಂದು
ಹೋದಾಂವಾ ॥

ಅವಳು ಅವನಲ್ಲಿ ಮೋಹಗೊಂಡಿರುವುದಕ್ಕೆ ಅವನು ಅವಳಲ್ಲಿ ಇಟ್ಟಿರುವ ಅಧಿಕ ಪ್ರೀತಿಯೇ ಕಾರಣ.

ಇರು ಅಂದರ ಬರತೇನಂತ ಎದ್ದು
ಹೊರಡಾಂವಾ
ಮಾರಿ ಕೆಳಗ ಹಾಕಿತೆಂದರೆ ಇದ್ದು ಬಿಡಾಂವಾ
ಹಿಡಿಹಿಡೀಲೆ ರೊಕ್ಕಾ ತಗದು ಹಿಡಿ ಹಿಡಿ
ಅನ್ನಾಂವಾ
ಖರೇ ಅಂತ ಕೈಮಾಡಿದರ ಹಿಡದ ಬಿಡಾಂವಾ
ಇನ್ನೂ ಯಾಕ...

—ವಿನಯ, ಪು. ೩೬

ಅವನ ಎಲ್ಲೆಯಿಲ್ಲದ ಪ್ರೀತಿ ಹಾಗೂ ಔದಾರ್ಯಗಳನ್ನು ಮೇಲಿನ ನುಡಿಗಳು ಚಿತ್ರಿಸಿವೆ. ಈ ರೀತಿ ಪ್ರೇಮದ ಶಕ್ತಿಯುತ ಆಕರ್ಷಣೆಯನ್ನು ತೋರಿಸಿ ಓದುಗರನ್ನು ಬೆರಗುಗೊಳಿಸಿದ್ದಾರೆ ಕವಿ.

'ನಾನು ಬಡವಿ' ಎಂಬ ಕವನ ಬೇಂದ್ರೆಯವರ ಅತ್ಯುತ್ತಮ ಪ್ರೇಮ ಕವನಗಳ ಪೈಕಿ ಒಂದು.

'ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ
ಕೆನ್ನೆ ತುಂಬ ಮುತ್ತು

ಕುಂದುಕೊರತೆ ತೋರಲಿಲ್ಲ
ಬೇಕು ಹೆಚ್ಚಿಗೇನು !
ಹೊಟ್ಟೆಗಿತ್ತ ಜೀವಫಲವ
ತುಟಿಗೆ ಹಾಲು ಜೇನು

—ವಿನಯ, ಪು. ೨೪

ಇದಕ್ಕಿಂತ ಹೆಚ್ಚಾಗಿ, ಪ್ರೀತಿಯಲ್ಲಿ ಅರಸುವುದಾದರೂ ಏನು ?

ಸಮಾಜದಲ್ಲಿಯ ಕೆಲವು ಮೂಢನಂಬಿಕೆಗಳು ಬೇಂದ್ರೆಯವರನ್ನು ಕೆರಳಿಸಿವೆ. ಬಡತನದ ಗೋಳನ್ನು ಕಂಡಾಗ ಕವಿ ರೊಚ್ಚಿಗೇಳುತ್ತಾರೆ. 'ಬಡತನದ ಬಲಿಯಾಗ, ಕರುಳಿನ ಕೊಲೆಯಾಗ ಬಾಳ್ವೆಯ ಒಲಿವ್ಯಾಗ ಸುಟ್ಟುಹೋದ ಹೆಣ್ಣನ್ನು' ಕಂಡು ಕವಿ ಕೊರಗುತ್ತಾರೆ. 'ತುತ್ತಿನ ಚೀಲ' ಕವನದ ಕೆಲ ನುಡಿಗಳಿವು:

ದೇವರದೊಂದು
ಗೋರಿಯ ಕಟ್ಟಿ
ಧರ್ಮದ ಧೂಪಕೆ
ಬೆಂಕಿಯನಿಕ್ಕಿ

—ಗರಿ, ಪು. ೬೧

ನೆಲವನ್ನೆಲ್ಲ ತುತ್ತುವೆನೆಂದು ಬಡವರ ತುತ್ತಿನ ಚೀಲ ಹೇಳುತ್ತಿದೆ.

ಬದುಕಿನಲ್ಲಿ ಸುಖವನ್ನು ಕಾಣುವ ಉದ್ದೇಶದಿಂದ ಮದುವೆಯಾದ ಹೆಣ್ಣು, ತನ್ನ ಬಾಳಸಂಗಾತಿಯನ್ನು ಕಳೆದುಕೊಂಡು ನಿಸ್ಸಹಾಯಕಳಾಗಿ, ಬದುಕು ಭಾರವೆನಿಸಿದಾಗ, ಅವಳು ಪಡುವ ಕಷ್ಟಗಳನ್ನು 'ಪುಟ್ಟವಿಧವೆ' ಕವನ ಚಿತ್ರಿಸುತ್ತದೆ. ಬಾಲ್ಯವಿವಾಹದ ಒಂದು ದುರಂತ ಚಿತ್ರಣವನ್ನು ಹೃದಯ ಸ್ಪರ್ಶಿಯಾಗುವಂತೆ ಚಿತ್ರಿಸಿದ್ದಾರೆ ಕವಿ. ಈ ಕವನದಲ್ಲಿ ಮೊದಲ ನಾಲ್ಕು ಸಾಲುಗಳು ವಿವಾಹದ ಸಂಭ್ರಮವನ್ನು ವಿವರಿಸುತ್ತವೆ. ಬಳಿಕ ಎಂಟೆಂಟು ಸಾಲುಗಳ ಐದು ಘಟನೆಗಳ ಚಿತ್ರಣವಿದೆ.

ಆಕೆಯಿದ್ದಳೂ ಕೂಸು ; ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು !
ಧರ್ಮದಾ ಹೆಸರಿನಲಿ ಅವರ ಕೈ ಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು

ವರ್ಷವೆಂಬುದರೊಳಗೆ ಚೊಚ್ಚಿಲದ ಸಂಭ್ರಮವು
ದೈವದಾಟವು ಎಂದಿತಿಡಿಯ · ಊರು
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ
ಕ್ಷೀರಸಾಗರವಾಯ್ತು ಉಪ್ಪು ನೀರು

ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು, ತಾಯಿಗುಳಿದಿತೇನು ?
ಮೈ-ಗೋರಿಯಲಿ ಮಡಗಿ ಜೀವ,
ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು

ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ
ಆದರಯ್ಯೋ ಪಾಪ ! ಆಕೆಯಿನ್ನೂ ಮಗುವು
ಸಿಂಗಾರವಿದೆ ! ಆ ಮಾತೆ ಬೇರೆ

ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿಳೊ
ಹೂಬತ್ತಿ ಹೊಸೆಯಲಿಕೆ ಮೈತಳೆದಳೊ
ಎಂಬಂತೆ ಬಾಳ ಕಳೆದಳು ಬಾಲೆ, ಹೂಮಾಲೆ
ಮುಳ್ಳುಕಂಟಿಯ ಮೇಲೆ ತಾನೆಳೆದಳೊ !

—ವಿನಯ, ಪು. ೫೩-೫೪

ಎಂಬುದಾಗಿ ಪುಟ್ಟ ವಿಧವೆಯ ಸ್ಥಿತಿಯನ್ನು ಬೇಂದ್ರೆ ವರ್ಣಿಸಿದ್ದಾರೆ. ಸರಳ ಸುಂದರ ಮಾರ್ಮಿಕ ಪದ್ಯವಿದು. ವಿವರಣೆಯ ಆಗತ್ಯವೇ ಇಲ್ಲ.

ಸಮಾಜದ ಆರ್ಥಿಕ ಅವ್ಯವಸ್ಥೆಯನ್ನು ಹಿಡಿದಿಟ್ಟಿರುವ 'ಕುರುಡು ಕಾಂಚಾಣ' ಕವನದ ಕೆಲವು ಸಾಲುಗಳನ್ನಿಲ್ಲಿ ಗಮನಿಸಬಹುದು.

ಕುರುಡು ಕಾಂಚಾಣಾ ಕುಣಿಯುತ್ತಲಿತ್ತು ।
ಕಾಲಿಗೆ ಬಿದ್ದವರ ತುಳಿಯುತಲಿತ್ತೋ ॥
ಕುರುಡು ಕಾಂಚಾಣಾ ॥

ಶ್ರೀಮಂತಿಕೆಯ ಕುರುಡು ನೃತ್ಯಕ್ಕೆ ಕುಣಿಯುವ ಈ ಕುರುಡು ಕಾಂಚಾಣ ಮೂರ್ತಿಯ ಸ್ವರೂಪವಾದರೂ ಯಾವುದು?

ಬಾಣಂತಿಯೆಲುಬ ಸಾ-
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೊ ;
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲಿ ಕೊರಳೊಳಗಿತ್ತೋ !
ಕೂಲಿಕುಂಬಳಿಯವರ
ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ ;

ಈ ಕುರುಡು ಕಾಂಚಾಣ ತೊತ್ತುಳ ದುಳಿದ ಸ್ತ್ರೀಯರ, ಮಕ್ಕಳ, ಕೂಲಿ ಕುಂಬಳಿಯವರ–ವೇದನೆ ಎಂಥ ಧ್ವನಿಯುಕ್ತ ಶೈಲಿಯಲ್ಲಿ ಪ್ರತಿಮಾತ್ಮಕವಾಗಿ ಮೂಡಿಬಂದಿದೆ! ಇಂದಿನ ಅವ್ಯವಸ್ಥೆಯನ್ನು ಇದಕ್ಕಿಂತ ಧ್ವನಿಪೂರ್ಣವಾಗಿ ಶಕ್ತಿಯುತವಾಗಿ ಹೇಳಲು ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಮೇಲಿನ ನುಡಿಚಿತ್ರ ಚಿತ್ರಿತವಾಗಿದೆ.

ಬೇಂದ್ರೆಯವರ ಅತ್ಯಂತ ಹೃದಯವಿದ್ರಾವಕ. ಕವನ 'ನೀ ಹಿಂಗ ನೋಡ ಬ್ಯಾಡ ನನ್ನ' ಎಂಬುದು.

ನೀ ಹೀಂಗ ನೋಡಬ್ಯಾಡ ನನ್ನ ।
ನೀ ಹೀಂಗ ನೋಡಿದರ ನನ್ನ ತಿರುಗಿ ನಾ
ಹ್ಯಾಂಗ ನೋಡಲೀ ನಿನ್ನ ॥ ಪ ॥

ಇದು ಕವನದ ಪಲ್ಲವಿ. ಸತಿಯ ತುಟಿಯ ಬಣ್ಣ ಹಾರಿದೆ. ಗದ್ದ, ಗಲ್ಲ, ಹಣೆ, ಕಣ್ಣು– ಇವಾವುದನ್ನೂ ನೋಡುವಂತಿಲ್ಲ. ಮಾರೀಗೆ ಮಾರಿಯ ರೀತಿ, ಸಾವನ ತನ್ನ ಕೈ ಸವರಿತಿಲ್ಲಿ, ಬಂತೆನಗ ಇಲ್ಲದ ಭೀತಿ. ಅದೇ ತಾನೇ ಸಾವು ಮನೆಗೆ ಬಂದು ಮಗುವನ್ನು ಒಯ್ದಿದೆ. ಸತಿಯ ಸ್ಥಿತಿಯನ್ನು ಹೃದಯಂಗಮವಾಗಿ ವ್ಯಕ್ತಿ ತತ್ತರಿಸುವಂತೆ ಚಿತ್ರಿಸಿದ್ದಾರೆ ಕವಿ. ಈಗ ಆಕೆ ಪ್ರಿಯಪತ್ನಿಯಲ್ಲ, ತನ್ನ ಮಗುವನ್ನು ಕಳೆದುಕೊಂಡು ಕೆರಳಿ ನಿಂತ ಮಾತೆ. ಆಕೆಯ ನೋವನ್ನು ನೋಟವನ್ನು ಪತಿಯಾದವನು ಅಂಥ ಸ್ಥಿತಿಯಲ್ಲಿ ಎದುರಿಸಲು ಸಾಧ್ಯವಿಲ್ಲ. ಆದರೆ ಬಾಳಸಂಗಾತಿಗೆ ಸಮಾಧಾನ ಹೇಳುವ ಒಂದು ಪ್ರಯತ್ನವಿಲ್ಲಿದೆ.

ಸಂಸಾರ ಸಾಗರದಾಗ, ಲೆಕ್ಕವಿರದಷ್ಟು
ದುಃಖದ ಬಂಡಿ
ನಾ ಬಲ್ಲೆ ನನಗೆ ಗೊತ್ತಿಲ್ಲದಿದ್ದರೂ ಎಲ್ಲಿ
ಅಚೆಯಾ ದಂಡಿ
ಮಲಗಿರುವ ಕೂಸು ಮಲಗಿರಲಿ ಅಲ್ಲಿ,
ಮುಂದಿನದು ದೇವರ ಚಿತ್ತ
ನಾ ತಡೀಲಾರೆ ಅದು, ಯಾಕ ನೋಡತೀ
ಮತ್ತ ಮತ್ತ ನೀ ಇತ್ತ ?

ದುಃಖದ ಬಂಡಿ ತುಂಬಿದ್ದರೇನು? ಈ ಸಂಸಾರ ಸಾಗರಕ್ಕೆ ಇನ್ನೊಂದು ದಡ ಇದ್ದೇ ಇದೆ ಎಂಬ ಭರವಸೆಯನ್ನು ಕವಿ ನೀಡುತ್ತಿದ್ದಾರೆ. ಕೂಸು ಸತ್ತಿದೆ. ದುಃಖದ ನಡುವೆ ವಿವೇಕಶೂನ್ಯವಾದ ಪ್ರಲಾಪದ ಬದಲು, ಸ್ಥಿತಪ್ರಜ್ಞೆಯನ್ನು ತಂದುಕೊಳ್ಳಲು ಪ್ರಯತ್ನಿಸುತ್ತಿರುವ ಕವಿಯಾತ್ಮ ಇಂಥ ಮಾತುಗಳನ್ನಾಡುತ್ತಿರುವುದು ವಿಚಿತ್ರವಾಗಿ ಕಾಣುತ್ತದೆ. ಆದರೂ ಸಮಾಧಾನಕರವಾಗಿದೆ. ಕೊನೆಗೆ

ಅತ್ತಾರೆ ಅತ್ತುಬಿಡು, ಹೊನಲು ಬರಲಿ,
ನಕ್ಯಾಕ ಮರಸತೀ ದುಕ್ಕ ?
ಎವೆಬಡಿಸಿ ಕೆಡವು, ಬಿಗಿಗಣ್ಣು ಬ್ಯಾಡ, ತುಟಿ
ಕಚ್ಚಿ ಹಿಡಿಯದಿರು ಬಿಕ್ಕ

—ವಿನಯ ಪು. ೩೫

ಈ ರೀತಿ ಕವನ ಮುಕ್ತಾಯಗೊಳ್ಳುತ್ತದೆ. ಪೂರ ಬಂದು ಕೆರೆ ತುಂಬಿದಾಗ ಕೋಡಿ ಒಡೆದು ನೀರು ಹರಿದು ಹೋಗುವುದೇ ಒಳ್ಳೆಯದು. ಅಂತೆಯೇ ಅಳುವನ್ನು ಬಿಗಿ ಹಿಡಿದರೆ ಎದೆ ಒಡೆದೀತು. ಶೋಕವುಂಟಾದಾಗ ಅಳುವುದೇ ದುಃಖನಿವಾರಣೆಗೆ ದಾರಿ ಎಂಬುದಾಗಿ ಕವಿ, ಸತಿಗೆ ಸೂಚಿಸಿದ್ದಾರೆ ಈ ಕವನದಲ್ಲಿ.

ಭಾವತೀವ್ರತೆಯಿಂದ ವಿಶಿಷ್ಟತೆಯನ್ನು ಪಡೆದಿರುವ ಹಲವಾರು ಕವನಗಳನ್ನು ರಚಿಸಿದ್ದಾರೆ ಬೇಂದ್ರೆಯವರು. ಗಾನ ಪ್ರಧಾನವಾಗಿಯೂ ಅತ್ಯಪೂರ್ವ ವರ್ಣನೆಗಳಿಂದಲೂ ಕೂಡಿರುವ ಒಂದು ಕವನ ಅವರ 'ಬೆಳಗು' ಅಪಾರ ಜನಪ್ರಿಯತೆಯನ್ನು ಪಡೆದಿರುವ ಕವನವಿದು.

ಕವನದ ಆರಂಭವೇ ವಿಶಿಷ್ಟವಾಗಿದೆ.

ಮೂಡಲ ಮನೆಯ ಮುತ್ತಿನ ನೀರಿನ
  ಎರಕsವ ಹೊಯ್ದಾ
ನುಣ್ಣ-ನ್ನೆರಕ್ಕsವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
  ಜಗವೆಲ್ಲಾ ತೊಯ್ದಾ
ಹೋಯ್ತೋ-ಜಗವೆಲ್ಲಾ ತೊಯ್ದಾ

—ವಿನಯ, ಪು ೫೭

ಪ್ರಕೃತಿಪ್ರಿಯ ಕವಿಯಾತ್ಮ ಬೆಳಗಾಗುವ ದೃಶ್ಯವನ್ನು ಕಂಡಿರುವ ಪರಿ ಅಪೂರ್ವವಾದುದು, ವೈಶಿಷ್ಟ್ಯಪೂರ್ಣವಾದುದು. ಮನೆಬಾಗಿಲನ್ನು ತೆರೆದು ಬೆಳಗಾಗ ನೀರನ್ನು ಎರಚುವಂತೆ, ಮೂಡಲ ಮನೆಯ ಬಾಗಿಲು ತೆರೆದು ಮುತ್ತಿನ ನೀರಿನ ಸೇಚನೆಯಾಗುತ್ತಿದೆ. ಬೆಳಕು ಹರಿದು ಜಗವೆಲ್ಲಾ ತೊಯ್ದಿದೆ. ಬೆಳಕು ಮುತ್ತಿನ ನೀರಾಗಿ ರತ್ನದ ರಸದ ಕಾರಂಜಿಯಾಗಿ ಕವಿಗೆ ಕಂಡಿದೆ. ಶಾಂತಿ ಮತ್ತು ಪ್ರೀತಿಗಳಿಂದ ಆಗುವ ಬೆಳಕಿನ ದರ್ಶನದ ಅನುಭವ ಅವರ್ಣನೀಯ ಎಂಬ ವಿಚಾರವನ್ನು ಈ ಕವನದಲ್ಲಿ ಸೂಚಿಸಲಾಗಿದೆ.

ಬೇಂದ್ರೆಯವರ ಜೀವನ ದರ್ಶನದ ಪರಿಯಿದು:

ಚತುರ್ಮುಖಗಳ ಏಕಪಿಂಡವಾದ ಚೈತ್ರೋದ್ಭವವು ಹುಟ್ಟು ಯಜಮಾನಿಕೆ ಧರಿಸಿದಾಗ ಅದರ ವೈಭವವೇ ಬೇರೆ. ಅದು ಜನ್ಮಾಂತರ ಪರಿಣತಿ; ಜನನಾಂತರ ಸೌಹೃದದ ಹಾಡುಗಳು ಆಗ ತಮ್ಮ ಭಾವ ಸ್ಥೈರ್ಯದಿಂದ ರಮಣೀಯತೆಯ ರಂಗಕ್ಕಿಳಿಯುವುವು. 'ಅಂಬಿಕಾತನಯದತ್ತ' ಅದರ ಮೂಕಸನ್ನೆಯ ಮುನ್ನುಡಿ.

ಬೇಂದ್ರೆಯವರ ಕಾವ್ಯ ವಸ್ತುಗಳಿಗೆ ಪರಿಮಿತಿಯೇ ಇಲ್ಲ. ಮೂರ್ತ ಅಮೂರ್ತ ಎಲ್ಲವೂ ಇವರ ಕಾವ್ಯವಸ್ತುವೆ. ಬದುಕಿನ ಅದರಲ್ಲೂ ಬಡತನದ ವಿವಿಧ ಮುಖಗಳನ್ನು ಎತ್ತಿ ತೋರಿಸಿದವರಲ್ಲಿ ಬೇಂದ್ರೆ ಪ್ರಮುಖರು. ಅವರ ಕವನಗಳಲ್ಲಿ ಭಾವದಂತೆ ಭಾಷೆಯೂ ನಾನಾ ರೂಪದಲ್ಲಿ ಬಳಕೆಯಾಗಿದೆ. ಜನಪದ ಧಾಟಿಗೆ ಜೀವಕಳೆಯನ್ನು ತುಂಬಿದವರು ಬೇಂದ್ರೆ. ಅವರ ಹಲವಾರು ಕವನಗಳಲ್ಲಿ ಜನಪದ ಲಯವನ್ನು ಕಾಣಬಹುದು. ಒಟ್ಟಿನಲ್ಲಿ ಕನ್ನಡ ಭಾಷೆಯ ಹಿರಿಮೆ, ಅಭಿವ್ಯಕ್ತಿ ಸಾಮರ್ಥ್ಯ, ಸಿರಿವಂತಿಕೆಗಳನ್ನು ಪ್ರತಿನಿಧಿಸುವ ಅದ್ಭುತ ಶಕ್ತಿ ಬೇಂದ್ರೆಯವರ ಕಾವ್ಯಕ್ಕೆ ಇದೆ ಎಂದು ಹೇಳಬಹುದು.

# ಬೇಂದ್ರೆಯವರ ಕಾವ್ಯದಲ್ಲಿ ಸಂಗೀತ ಪ್ರಜ್ಞೆ

ಪ್ರೊ|| ಎಂ. ರಾಜಗೋಪಾಲಾಚಾರ್ಯ

ಕಾವ್ಯವನ್ನು ಸಂಗೀತ ಕೃತಿಗಳಂತೆ ಹಾಡಬೇಕೆ? ಒಂದು ಲಯ ಹಿಡಿದು ವಾಚನ ಮಾಡುವುದೆ? ರಾಗದಲ್ಲೆ ಹಾಡಬೇಕೆ? ರಾಗ ಬೇಕೆಂಬುದೂ ಐಚ್ಛಿಕವಲ್ಲವೆ? ಬರೇ ಓದಿದರೆ ಸಾಲದೆ? ಇಂಥ ಪ್ರಶ್ನೆಗಳು ಹುಟ್ಟಿಕೊಂಡದ್ದು ಈಚೆಗೆ. ಸುಮಾರು ಅರ್ಧ ಶತಮಾನದ ಮೊದಲು ಈ ಪ್ರಶ್ನೆಗಳು ಏಳುತ್ತಿರಲಿಲ್ಲ. ಕಾವ್ಯಗಳೆಲ್ಲಾ ಛಂದೋಬದ್ಧವಾಗಿಯೇ ಇದ್ದುವು, ಛಂದಸ್ಸಿನಲ್ಲಿ ಒಂದಲ್ಲೊಂದು ರೀತಿಯ ಲಯವಿರುವುದು ಅನಿವಾರ್ಯವಾಗಿತ್ತು. ಗದ್ಯಕಾವ್ಯ–ಚೂರ್ಣಿಕೆ–ವಚನ–ದಂಡಕ ಮುಂತಾದುವನ್ನು ಓದುವ ಕ್ರಮವೂ ವಿಶಿಷ್ಟವಾಗಿಯೇ ಇತ್ತು. ದಂಡಿಯ ಗದ್ಯ, ಬಾಣನಗದ್ಯ, ಮುದ್ದಣನಗದ್ಯ ಇವುಗಳಲ್ಲೆಲ್ಲ ಒಂದು ತರದ ಲಯದ ಸೊಗಸು, ಬಿಗಿ, ಬನಿಗಳು ಇವೆ. ಸುಮ್ಮನೆ ವಾರ್ತಾ ಪತ್ರಿಕೆಯನ್ನು ಓದಿದ ಹಾಗೆ ಓದುವುದಲ್ಲ. ನಾಟಕದ ಮಾತುಗಳನ್ನು ಕಲಿತು ತಕ್ಕ ಸ್ವರಭಾರಗಳೊಡನೆ ಹೇಳಬೇಕಿತ್ತು. ಅಗ ರಮ್ಯಪಂಥದ ಕವಿಗಳೂ ಒಂದು ಛಂದಸ್ಸಿನಲ್ಲೆ ಬರೆಯುತ್ತಿದ್ದರು, ಬಳಿಕ ಪ್ರಾಸಬಿಟ್ಟು ಬರೆಯತೊಡಗಿದರೂ ಲಯವನ್ನು ಮಾತ್ರ ಯಾರೂ ಬಿಡಲಿಲ್ಲ. ಪ್ರಾಸಕ್ಕೆ ಪ್ರಾಣಾಕ್ಷರ ಎಂಬ ಹೆಸರಿತ್ತು ಆದರೂ ಅದು ನಾಲ್ಕಾರು ಸಾಲುಗಳನ್ನು ಪೋಣಿಸುವ ತೂತು. ಆದ್ದರಿಂದ ಸಹಜವಲ್ಲದ ಪ್ರಾಸದ ಪರಿಣಾಮ ತೀರ ಗೌಣ ಎಂಬ ಭಾವ ಬಲಿಯಿತು. ಗದ್ಯವನ್ನು ಓದಿದ ಹಾಗೆ ಪದ್ಯದ ಒಂದು ಸಾಲನ್ನು ಎರಡು ಬಾರಿ ಓದಿದರೆ ಕವನ ಎಂದು ಭಾವಿಸುವ ಪರಿಪಾಟ ಈಚೆಗೆ, ಆದರೆ ಬಹುಶಃ ನವ್ಯಕಾವ್ಯ ಕಾಣಿಸಿಕೊಂಡ ಬಳಿಕವೇ ಬಂದಿರಬೇಕು.

ಕಾವ್ಯವಾಚನ ಮಾಡುವುದೂ ಒಂದು ಕಲೆ, ಅದಕ್ಕೆ ತಕ್ಕ ಮಟ್ಟಿನ ಅಭ್ಯಾಸವೂ ಬೇಕು. ಆದರೆ ಈಗ ಕಾವ್ಯವನ್ನು ಬರೇ ಓದಿದರೆ ಸಾಕು. ಗದ್ಯವೋ ಪದ್ಯವೋ ಹೇಳಿದ ಮೇಲೇ ತಿಳಿಯಬೇಕು, ಹೀಗೆ ಓದುವಕ್ರಮ ಬಹಳ ಈಚೆಗಿನದೆಂದು ತೋರುತ್ತದೆ. ಇದಕ್ಕೆ ಕಾರಣ ಸಾರಾಸಗಟಾಗಿ ಕವಿಗಳು ಛಂದಸ್ಸಿನ ನಿಯತಲಯವನ್ನು ಬಿಟ್ಟುದು, ಮಾತ್ರವಲ್ಲದೆ, ಛಂದೋಬಂಧದಲ್ಲಿ ಓದಲಿಕ್ಕೂ ಕೆಲವರಿಗೆ ಬಾರದಿದ್ದುದು. ಇದು ನನ್ನ ಅನಿಸಿಕೆಯಲ್ಲ, ಆಕ್ಷೇಪವೂ ಅಲ್ಲ. ಕೆಲವರು ಸ್ವರಚಿತ ಕವನಗಳನ್ನು (ಕಾವ್ಯವನ್ನು ಎಂದರೆ ಅಥವಾ ಕವಿತೆ ಎಂದರೂ ಈಗ ಅರ್ಥ ಬೇರಾದೀತು.) ಓದುವಾಗ 'ನನಗೆ ಹಾಡಲು ಬರುವುದಿಲ್ಲ,

ಹಾಡಿದರೂ ಇಲ್ಲಿ ನೀವು ಯಾರೂ ನಿಲ್ಲಲಿಕ್ಕಿಲ್ಲ, ಆದ್ದರಿಂದ ನನ್ನದೇ ಆದ ಧಾಟಿಯಲ್ಲಿ ಓದುತ್ತೇನೆ, ಕ್ಷಮಿಸಿ' ಎಂದು ತಮ್ಮ ಕವನಗಳನ್ನು ಓದುವುದನ್ನು ಕೇಳಿದ್ದೇನೆ. ಕವನಗಳ ವಾಚನದ ಕುರಿತು ಇದು ಇಂದಿನ ಕವಿಗಳ, ವಿಮರ್ಶಕರ ಧೋರಣೆ.

ಮಾತಿಗಿರುವ ಸ್ವಾಭಾವಿಕವಾದ ಧ್ವನಿಯ ಏರುಪೇರುಗಳನ್ನು ನಿರ್ದಿಷ್ಟ ಸ್ಥಾನಗಳಿಗೆ ಒಳಪಡಿಸಿದರೂ ಸಾಕು, ಅದರ ಭಾವ ಸೌಂದರ್ಯವು ಹೆಚ್ಚು ಸ್ಫುಟವೂ ಹೃದಯಂಗಮವೂ ಆಗುವುದು. ಮಾತನ್ನೆ ವಿರಹಿತಗೊಳಿಸಿದರೆ ಅಥವಾ ಹಿಂದಕ್ಕೆ ತಳ್ಳಿದರೆ ಶುದ್ಧ ಸಂಗೀತವಾಗುವುದು. ಕಾವ್ಯಕ್ಕೆ ಮಾತು ಮತ್ತು ಅದರ ಧ್ವನಿ ಎರಡರ ಹದವಾದ ಬೆಸುಗೆ ಆವಶ್ಯಕ. ಕಾವ್ಯವನ್ನು ಹಾಡುವುದಾಗಲಿ ವಾಚನಮಾಡುವುದಾಗಲಿ ಕೊನೆಗೆ ಬರೀ ಓದುವುದೇ ಆಗಲಿ ಅದೊಂದು ಕಲೆ. ಅದಕ್ಕೆ ಒಂದುತರದ ಸ್ವರಭಾರ, ಲಯದ ಸಾಮರಸ್ಯ ಇರಬೇಕಾಗುತ್ತದೆ. ರಮ್ಯ ಪಂಥದ ಕವಿಗಳ ಕಾವ್ಯಗಳು ಲಯಬದ್ಧವಾಗಿಯೇ ಇದ್ದುವು. ಬೇಂದ್ರೆಯವರೂ ರಮ್ಯ ಪಂಥಕ್ಕೆ ಸೇರಿದ ಒಬ್ಬ ಉತ್ತಮಕವಿ. ಅವರ ಕಾವ್ಯಗಳನ್ನು ಹಾಡಿದಾಗ—ಅದರಲ್ಲೂ ಅವರೇ ತಮ್ಮ ಕವಿತೆಗಳನ್ನು ಹಾಡಿದಾಗ ರಸಭಾವಗಳು ಪೂರ್ಣವಾಗಿ ಹೊಮ್ಮುತ್ತಿದ್ದುವು. ಅವರ ಕಾವ್ಯ ವಾಚನ ಶೈಲಿಯಲ್ಲಿ ಒಂದು ತರದ ಸಂಗೀತ ಪ್ರಜ್ಞೆ ತುಂಬಿರುತ್ತಿತ್ತು, ಬೇಂದ್ರೆಯವರು ಆದಿಪುರಾಣದ 'ಅಲಕಂ ಮಂದಾರಶೂನ್ಯಂ' ಎಂಬ ಪದ್ಯವನ್ನು ಓದುವುದೇ ಒಂದು ಸ್ವಾರಸ್ಯವಾಗಿತ್ತು.

ಆ ಪದ್ಯದ ಭಾವ—

ಲಲಿತಾಂಗದೇವ ಸ್ವರ್ಗದಿಂದ ಚ್ಯುತನಾದಾಗ ಅವನ ಪ್ರಿಯೆ ಸ್ವಯಂಪ್ರಭೆಗೆ ಇಡೀ ಸ್ವರ್ಗಲೋಕವೇ ಶೂನ್ಯವಾಗಿ ಕಂಡ ಬಗೆಯನ್ನು ಪಂಪ ಮಹಾಕವಿ ಇದರಲ್ಲಿ ಬಣ್ಣಿಸಿದ್ದಾನೆ.

ಅಲಕಂ ಮಂದಾರಶೂನ್ಯಂ ಕದಪು ಮಕರಿಕಾ
ಪತ್ರಶೂನ್ಯಂ, ಲಲಾಟಂ
ತಿಲಕಾಲಂಕಾರ ಶೂನ್ಯಂ, ಘನಕುಚಯುಗಲಂ
ಹಾರಶೂನ್ಯಂ, ನಿತಂಬಂ।
ಕಲಕಾಂಚೀದಾಮಶೂನ್ಯಂ, ಚರಣಯುಗಲ
ಮುಂ ನೂಪುರಾಲಾಪಶೂನ್ಯಂ
ಲಲಿತಾಂಗಂ ಪೋದೊಡಾಯ್ತಾಕೆಗೆ
ದಿವಮುನಿತುಂ ನಿರ್ಜರಾರಣ್ಯಶೂನ್ಯಂ ॥

(ಆದಿ, ೩-೧೪)

ಈ ಪದ್ಯದಲ್ಲಿ ಒಟ್ಟಿಗೆ ಹತ್ತೊಂಭತ್ತು ಶೂನ್ಯಗಳಿವೆ. ಈ ಪದ್ಯವನ್ನು ಓದುವಾಗ ಬೇಂದ್ರೆಯವರು ಅನುಸ್ವಾರ (೦) ಇದ್ದ ಕಡೆಯಲ್ಲೆಲ್ಲ ತುಟಿಮುಚ್ಚಿ ಸ್ವಲ್ಪ ಹೊತ್ತು ನಿಂತು ಓದುತ್ತಿದ್ದ ಸೊಬಗು ಅನ್ಯಾದೃಶ. ಇಡೀ ಪದ್ಯವನ್ನು ಓದಿದ ಬಳಿಕವೇ ನಮಗೆ ಆ ಪದ್ಯದಲ್ಲಿ ಪಂಪ ಎಷ್ಟು ಶೂನ್ಯವನ್ನು ತುಂಬಿದ್ದಾನೆ, ಇದರಿಂದ ಸುತ್ತಲಿನ ವಾತಾವರಣದಲ್ಲಿ ಎಂಥ ಶೂನ್ಯತೆ ಆವರಿಸಿದೆ ಎಂಬ ಅರಿವಾಗುತ್ತಿತ್ತು. ಇದೂ ಒಂದು ಧ್ವನಿಯ ತತ್ವ. ಕವಿತೆಯಲ್ಲಿ ಶಬ್ದಾರ್ಥಗಳು ಮಾತ್ರವಲ್ಲದೆ ರಾಗಲಯಗಳೂ ವ್ಯಂಜಕಗಳು ಎಂಬುದು ಬೇಂದ್ರೆಯವರು ಓದುವಾಗಲೇ ಕೇಳುವವರಿಗೆ ಭಾಸವಾಗುತ್ತಿತ್ತು.

ಕುಮಾರವ್ಯಾಸನ ಕಾವ್ಯ 'ಸಕ್ಕರೆ ಬೊಂಬೆ' ಅದನ್ನು ಎಲ್ಲಿ ಸವಿದರೂ ಮಧುರ

ರಸ ಅನುಭವಕ್ಕೆ ಬರುತ್ತದೆ, ಎಂದು ಅಲ್ಲಲ್ಲಿ ಕುಮಾರವ್ಯಾಸನನ್ನು ಹಾಡಿಯೇ ತೋರಿಸುತ್ತಿದ್ದರೆ, ಮತ್ತೆ ಆ ಪದ್ಯಗಳ ಅರ್ಥ ಹೇಳಬೇಕಾಗಿಲ್ಲ ಹಾಗಿತ್ತು ಅವರ ವಾಚನ ವೈಖರಿ. 'ಕಾವ್ಯವು ಚಂದ್ರಾಪೀಡನ ಕಳೇಬರವಿದ್ದಂತೆ, ಗಮಕಿಯು ತನ್ನ ಉಸಿರೂದಿ ಅದಕ್ಕೆ ಜೀವಕಳೆಯನ್ನು ಚೈತನ್ಯವನ್ನು ತುಂಬಬೇಕು ಎಂದು ಅವರೇ ಒಂದೆಡೆ ಹೇಳಿದ್ದುಂಟು.

ಅನಿರ್ವಚನೀಯವಾದುದನ್ನು ವಚನದೊಳಗಿಂದಲೇ ಧ್ವನಿತವಾಗುವಂತೆ ಮಾಡುವುದೇ ಕಾವ್ಯ. ಇದಕ್ಕೆ ಛಂದಸ್ಸು-ರಾಗ-ಲಯಗಳ ಆಸರೆಯೂಬೇಕು. ಕಾವ್ಯದಲ್ಲಿ ಶಬ್ದ-ಅರ್ಥ-ಛಂದಸ್ಸು ಇವು ಮೂರೂ ಒಂದಾಗುತ್ತವೆ ಎಂಬ ತತ್ವ ಬೇಂದ್ರೆಯವರದು. ಅವರ ಕಾವ್ಯಗಳು ಛಂದೋಬದ್ಧವಾಗಿರುವುದಲ್ಲದೆ ಒಂದು ನೆಲೆಯಲ್ಲಿ ಗೇಯಗುಣವನ್ನು ಪಡೆದುಕೊಂಡಿದೆ. ಛಂದಸ್ಸಿನಲ್ಲೂ ಸ್ವಚ್ಛಂದತೆಯ ಹೊಳಹು ಇರದಿದ್ದರೆ ಅದು ಬರೇ ಯಾಂತ್ರಿಕವೆನಿಸಬಹುದು. ಛಂದವು ಹೋಗಿ, ಬಂಧವೂ ಆದೀತು, ಈ ಒಂದು ಸಂಸ್ಕೃತ ಪದ್ಯವನ್ನು ನೋಡಿರಿ—

ಗರ್ಜಿತ್ವಾ ಮೇಘಧೀರಂ ಪ್ರಥಮ ಮಥಶನೈ
ರ್ಮಂಡಲೀ ನೃತ್ಯದೇಹಂ
ಶೃಂಗಾಭ್ಯಾಂಭೀಷಯಂ ತಾಪಭಿಮುಖ
ಮವನೀಂದಾರಯಂತಾ ಖುರಾಗ್ರೈಃ ।
ಮಂದಂ ಮಂದಂ ಸಮೇತ್ಯ ಸ್ಥಿರನಿಹಿತಪದಂ
ದತ್ತಘಾತಾ ನರೋಷಂ
ಯುದ್ಧ್ಯೇತೇ ಬಾಲಯುಂತಾ ಕುಟಿಲಿತಮ
ಸಕೃತ್ಪ್ರಚ್ಯಮೇತಾ ಮಹೋಕ್ಷೌ ॥

ಇದರಲ್ಲಿ ಯತಿ ಸರಿಯಾಗಿರುವುದರಿಂದ ಇದರಲ್ಲಿ ವರ್ಣಿತವಾದ ಗೂಳಿಗಳು ಕವಾಯತು ಕಲಿತ ಕವಿಲೆತ್ತುಗಳಂತೆ ಕಾಣುವುವು, ಛಂದಸ್ಸಿನಲ್ಲಿ ಸ್ವಚ್ಛಂದವಿಲ್ಲ. ಇದೇ ಭಾವವನ್ನು ಬಿಂಬಿಸುವ ನೇಮಿಚಂದ್ರನ ಕನ್ನಡ ಪದವನ್ನು ನೋಡಿರಿ—

ಅಡಿಯಂ ಕೋದೆತ್ತುತುಂ, ಮಾರ್ದನಿಗೆ
ಮುಸಗುತುಂ, ದರ್ಪದಿಂ ಛಾಯೆಯೊಳ್‌ಗೋ
ಡಿಡುತುಂ, ಮುನ್ನಾದ ಪುಣ್ಬುಂಠಿಣಗೆರಗೆ
ನೋಣಂ, ಶೀರ್ಣಶೃಂಗಾಗ್ರದಿಂ ಮಾ-।
ರ್ದಡೆಯುತ್ತುಂ, ಪಾಯ್ದು, ಪಿಂಡಂ ಕಲಕೆ
ಕೆಲೆಯುತುಂ, ಬೆರ್ಚಿಬಲ್ಗೋಗಿಗಳ್ ಬೆಂ
ಗುಡೆ, ಗಂಡಂ ಸೂಸುತುಂ ಬಂದುದು
ಮದವಿದಳತ್ ಪಿಂಗಳಾಕ್ಷಂ ಮಹೋಕ್ಷಂ ॥

ಇದರ ಛಂದೋಬಂಧವಲ್ಲೆ ಹೆಚ್ಚು ಸತ್ವವಿರುವಂತೆ ಕಾಣುತ್ತದೆ. ಇದು ಬೇಂದ್ರೆಯವರ ಅನಿಸಿಕೆ. ಮಾತು ಅರ್ಥಕ್ಕಿರುವ ಬಹಳ ಕಳವೆಯ ಸಂಕೇತ, ಕವಿಯು ಶಬ್ದಶಿಲ್ಪಿ ಶಬ್ದಕ್ಕಿರುವ ವಿಲಕ್ಷಣ ಸಾಮರ್ಥ್ಯವನ್ನು ತಿಳಿದವನು, ಶಬ್ದವನ್ನು ಸಾಕಷ್ಟು ಪ್ರಮಾಣದಲ್ಲಿ ದುಡಿಸಿ ಅರ್ಥದ ಬಂಧವಿಂದ ಅದನ್ನು ಮುಕ್ತಗೊಳಿಸಿ ಭಾವಪ್ರಪಂಚದ ಸಂಚಾರಕ್ಕೆ ಅಣಿಗೊಳಿಸುತ್ತಾನೆ. ಆದ್ದರಿಂದ ಕಾವ್ಯವನ್ನು ಓದಿದಾಗ ಮಾತ್ರ ಭಾವಪ್ರಪಂಚ ತೆರೆದುಕೊಳ್ಳುತ್ತದೆ. ರಾಜಶೇಖರ ಈ ಮಾತನ್ನು ಬಹಳ ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತಾನೆ.

ಕರೋತಿಕಾವ್ಯಂ ಪ್ರಾಯೇಣ ಸಂಸ್ಕೃತಾತ್ಮಾ
ಯಥಾ ತಥಾ ।
ಪಠಿತುಂ ವೇತ್ತಿಸಪರಂ ಯಸ್ಯ ಸಿದ್ಧಾ
ಸರಸ್ವತೀ ॥

ಯಥಾಜನ್ಮಾಂತರಾಭ್ಯಾಸಾತ್ ಕಂಠೇಕಸ್ಯಾಪಿ
ರಕ್ತತಾ ।
ತಥೈವ ಪಾಠಸೌಂದರ್ಯಂ ನೈಕ ಜನ್ಮ
ವಿನಿರ್ಮಿತಮ್ ॥

—ಕಾವ್ಯ ಮೀಮಾಂಸೆ

ಕವಿ ಕಾವ್ಯವನ್ನೇನೋ ರಚಿಸುತ್ತಾನೆ, ಆದರೆ ಯಾರಿಗೆ ಆ ವಾಗ್ದೇವಿಯ ಅನುಗ್ರಹವಿರುವುದೋ ಅವನು ಮಾತ್ರ ಕಾವ್ಯದ ಜೀವನಾಡಿಯನ್ನು ಹಿಡಿದು ಓದಲು ಸಮರ್ಥನಾಗುತ್ತಾನೆ. ಹಾಗೆ ಪಾಠಕ್ರಮ ಇಂಪಾಗಿರುವುದಕ್ಕೆ ಪೂರ್ವಜನ್ಮದ ಪುಣ್ಯವಿರಬೇಕು, ಎನ್ನುತ್ತಾನೆ.

ಬೇಂದ್ರೆಯವರ ಮಾತಿನಲ್ಲೆ ಹೇಳುವುದಾದರೆ–

'ನನಗೆ ಲಕ್ಷ್ಮೀಶ ಅತಿಪ್ರಿಯನಾದ ಕವಿ, ನಾನು ಮೊಟ್ಟಮೊದಲು ಬರೆದದ್ದು 'ಕೃಷ್ಣಕುಮಾರಿ' ಎಂಬ ಕಾವ್ಯ, ಅದರೊಳಗಿನ ೨೭ ಪದ್ಯಗಳನ್ನು ಲಕ್ಷ್ಮೀಶನ ಆಸ್ಯಚಂದ್ರನಿಗೆ ಈ ನಕ್ಷತ್ರ ಮಾಲೆಯನ್ನು ಹಾಕಿದ್ದೇನೆ. ನನ್ನ ಮಾತಿನಲ್ಲಿ ಅಂಶ ಸಂಖ್ಯೆಗಳ ರಹಸ್ಯವನ್ನು ತಿಳಿದುಕೊಳ್ಳುವ ಕುತೂಹಲವಿದ್ದರೆ, ಆ ಅಂಕೆ ಸಂಖ್ಯೆಗಳ ಹುಚ್ಚು ನನಗೆ ಹಿಡಿಸಿದವರಲ್ಲಿ ಲಕ್ಷ್ಮೀಶನೂ ಒಬ್ಬ"

—ಮಾತೆಲ್ಲ ಜ್ಯೋತಿ

ಲಕ್ಷ್ಮೀಶನೋ ನಾದಲೋಲ. ಅವನ ಇಂಪಾದ ಪದಗಳ ಪೊಂಭಾವಣೆ ಧ್ವನಿಗರ್ಭಿತವಾದ ಮಾತಿನ ಶ್ಲೇಷ ಮತ್ತು ಗೇಯಗುಣ ಇವು ಬೇಂದ್ರೆಯವರ ಕಾವ್ಯಗಳಲ್ಲೂ ಇವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಬೇಂದ್ರೆಯವರ ಕಾವ್ಯದಲ್ಲಿ ವಸ್ತುವನ್ನು ನೋಡುವ ದೃಷ್ಟಿ, ಕಲ್ಪನೆ ಮತ್ತು ನವುರಾದ ಭಾವಗಳ ಅಭಿವ್ಯಕ್ತಿಗೆ ಪ್ರಾಸ-ನಾದ-ಛಂದಸ್ಸು-ಎಲ್ಲವೂ ಒಟ್ಟಿಗೇ ದುಡಿಯುತ್ತವೆ. ಭಾವಗೀತೆ ಮುಂತಾದುವುಗಳಲ್ಲಿ ಲಯ-ಧಾಟಿ ಇವು ಅರ್ಥದ ಭಾಗಗಳೇ ಆಗುತ್ತವೆ.

ಬೇಂದ್ರೆಯವರ ಪದ್ಯವನ್ನು ಸುಮ್ಮನೆ ಒಂದು ಧಾಟಿ ಹಿಡಿದು ಓದಿದರೆ ಸಾಕೆ? ದಾಸ ಸಾಹಿತ್ಯದಂತೆ ರಾಗ-ತಾಳ ಹಾಕಿ ಹಾಡಬೇಕೆ? ಅಥವಾ ತ್ಯಾಗರಾಜರ ಕೀರ್ತನೆಗಳ ಹಾಗೂ ಹಾಡಬಹುದೆ? ಈ ಪ್ರಶ್ನೆಗಳಿಗೆ ಒಂದೇ ಉತ್ತರವಲ್ಲ ಕಾವ್ಯದ ಪದ ಬಂಧ-ಭಾವಗತಿ ಎಲ್ಲವನ್ನೂ ನೋಡಿ ನಿರ್ಣಯಿಸಬೇಕಾಗುತ್ತದೆ. ಅದರಲ್ಲಿ ಗೇಯಸ್ಪಂದವಿದೆಯೆಂದ ಮಾತ್ರಕ್ಕೆ ತೀವ್ರಲಯಗತಿ ಇರುವ ಹಾಡನ್ನು ವಿಲಂಬಿತಲಯದಲ್ಲಿ ಹಾಡಿವರೆ ಯಾವ ಪ್ರಯೋಜನವೂ ಆಗದು. ಕೆಟ್ಟಪರಿಣಾಮವೂ ಆಗಬಹುದು. ಬೇಂದ್ರೆಯವರ ಬುದ್ಧ ಕವನದ ಸಾಲುಗಳು–

ಬುದ್ಧ, ಬುದ್ಧ,
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ,
ಮಡದಿ ಮಗು ಮನೆಮಾರು ರಾಜ್ಯಗೀಜ್ಯ,
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ ।
ಹಿಂದೆ ಬಿದ್ದವೊ ಎಲ್ಲೊ ಕುದುರೆ ಕಾಲಾಳು
ಬಿಚ್ಚಿ ಉದುರಿತು ಎಲ್ಲೊ ಮನದ ಬಾಳು ।
ಹೊರಟ, ಹೊರಟೇ ಹೊರಟ ಹೊರಟ
ನೆತ್ತೋ ।
ಸಾಹಸಿಯು ಗೊತ್ತುಗುರಿ ಅವಗು
ಗೊತ್ತೊ !

* * * *

ಬುದ್ಧನ ಸಮಾಧಿಯಿದು ಮಾನವನ
ಹೃದಯ ।
ಅದು ಕಾಣುತ್ತಲಿದೆ ಕಲ್ಕಿ ಉದಯ ।

ಇದು ಪಂಚಮಾತ್ರಾಲಯದಲ್ಲಿ, ತುಸು ತೀವ್ರ ನಡೆಯಲ್ಲಿದೆ. ಇದನ್ನು ದಾಸರ

ಹಾಡಿನ ಹಾಗೆ ವಿಲಂಬಿತಲಯದಲ್ಲಿ ಹಾಡಿದರೆ ಉದ್ದಿಷ್ಟಭಾವ ಕಾಣಿಸದೆ ಹೋಗಬಹುದು. 'ಮಡದಿ ಮಗು ಮನೆ ಮಾರು ರಾಜ್ಯ ಗೀಜ್ಯ' ಈ ಸಾಲುಗಳು ಐಹಿಕಭೋಗದ ಸುಖಸಾಧನದ ಸಂಕೇತವಾಗಿ ಬರುತ್ತವೆ. ಈ ವರ್ಗದಲ್ಲಿ ಇನ್ನೂ ಅನೇಕ ಆಮಿಷಗಳಿರಬಹುದು. ಅವೆಲ್ಲವೂ ಅವನ ಮನಸ್ಸಿನಲ್ಲಿ ಹೊತ್ತಿಕೊಂಡ ಬೇಗುದಿಯಲ್ಲಿ ಉರಿಯುತ್ತಿವೆ ಎಂಬ ಭಾವವಿದೆ. ಇದನ್ನು ಸ್ವಲ್ಪ ದ್ರುತಲಯದಲ್ಲಿ ಆಯಾಪದಗಳ ಮೇಲೆ ಒತ್ತು (ಸ್ವರಭಾರ) ಬೀಳುವಂತೆ ಓದಿದರೆ ಸರಿಯಾದ ಪರಿಣಾಮವುಂಟಾದೀತು. ಇದು ವಿಲಂಬಿತಲಯದಲ್ಲಿ ಇಲ್ಲ ಎಂಬುದು ಓದುವಾಗಲೇ ತಿಳಿಯುತ್ತದೆ. ಬುದ್ಧ ಈಗ ಇಲ್ಲ, ಆದರೆ ಅವನ ನೆನಪು ಎಲ್ಲರ ಹೃದಯದಲ್ಲಿದೆ. ಅದು ಮುಂದಿನ ಕಲ್ಕಿಯುವತಾರದ ನಿರೀಕ್ಷೆಯಲ್ಲಿದೆ ಎಂಬುದು ಇಲ್ಲಿಯ ಭಾವಬಿಂದು.

ಇದು ಕಾವ್ಯದ ಭಾಷೆ. ಇಲ್ಲಿಯ ಪದಗಳಿಗೆ ನಿಯತವಾದ ಅರ್ಥವಲ್ಲದೆ ಇನ್ನು ಕೆಲವು ಅರ್ಥಗಳು ಹೊಳೆಯುತ್ತವೆ. ಕವಿಯದು ಭಾವ ಗಮ್ಯವಾದ ಸತ್ಯ, ಅದು ವ್ಯಾವಹಾರಿಕ ಸತ್ಯವಲ್ಲ, ಭೂಮಿಯನ್ನು ತಾಯಿಯೆಂದರೂ ಸರಿ, ನೀತಿಗೆಟ್ಟ ಹೆಂಗಸೆಂದರೂ ಸರಿ (ಏಕೆಂದರೆ ಇಂದು ರಾಜನ ಪತ್ನಿಯಾದವಳು ನಾಳೆ ಅವನ ಮಗನಿಗೂ ಮಡದಿಯಾಗುತ್ತಾಳೆ. ಆಕೆ ಯಾವಾಗಲೂ ಮೊದಲಗಿತ್ತಿ ಎಂದು ಬೇಂದ್ರೆಯವರೇ ಒಂದು ಕಡೆ ಹೇಳಿದ್ದಾರೆ) ಎರಡೂ ಸಂಕೇತಗಳು, ತಾತ್ವಿಕವಾಗಿ ಎರಡೂ ಮಿಥ್ಯ. ಆದರೆ ಭಾವಗೀತೆಯಲ್ಲಿ ಇಂಥ ಭಾಷೆಯನ್ನು ಬಳಸುವುದು ರೂಢಿ.

ಒಮ್ಮೊಮ್ಮೆ ಈ ಮಾತುಗಳು ತೀರ ಸುಳ್ಳಿನ ಹಂತವನ್ನು ತಲುಪುವುದೂ ಇದೆ. ಆಗ ಅಂಥ ಮಾತುಗಳು ತತ್ವತಃ ಸುಳ್ಳು ನುಡಿಯಾದರೂ ಕಾವ್ಯದಲ್ಲಿ 'ಅಲಂಕಾರ' ವೆನಿಸಿ ಅಲ್ಲಿ ಬೆಲೆಯನ್ನು ಪಡೆಯುತ್ತವೆ. ಅಂಥ ಅಲಂಕಾರಗಳಲ್ಲಿ ಭಾವ ಮಾತ್ರ ಗ್ರಾಹ್ಯ ಹೊರತು ವಸ್ತುಸ್ಥಿತಿಯಲ್ಲ, ಮುಖಚಂದ್ರ ಎಂದಾಗ ಯಾವ ಮೂರ್ಖನಿಗೂ ಮುಖವು ಚಂದ್ರನೂ ಅಲ್ಲ. ಅದು ಚಂದ್ರನ ಹಾಗೆ ಇಲ್ಲವೂ ಇಲ್ಲ ಎಂಬುದು ತಿಳಿದೇ ಇರುತ್ತೆ. ಬೇಂದ್ರೆಯವರು ಭಾಷೆಯನ್ನು ಭಾವಕ್ಕೆ ಒಗ್ಗುವಂತೆ, ಹಿಗ್ಗುವಂತೆ ಮಣಿಯಿಸಿಕೊಂಡಿದ್ದರು. ಆದ್ದರಿಂದ ಅದು ಬಹುಮಟ್ಟಿಗೆ ಗೇಯಗುಣವನ್ನು ಪಡೆದುಕೊಳ್ಳುತ್ತದೆ.

ಬೇಂದ್ರೆಯವರ ಕವನಗಳು ಸರಲವಾಗಿ, ಕೆಲವೆಡೆ ಜಟಿಲ-ಮಧುರವಾಗಿ, ಒಮ್ಮೊಮ್ಮೆ ಲಲಿತವೂ ಸಂಕೀರ್ಣವೂ ಆಗಿರುವುದುಂಟು. ಕವನದ ಭಾವ ಮನಸ್ಸಿಗೆ ಹೊಳೆದರೂ ಅದನ್ನು ಬಾಯಿಯಿಂದ ವಿವರಿಸಲಾಗುವುದಿಲ್ಲ. ವಿವರಿಸಿದರೂ ಅದು ಅಪೂರ್ಣವೆನಿಸುತ್ತದೆ. ಇದು ಮಹಾಕವಿಯ ನುಡಿಯ ಬೆಡಗು, ಕಾಣುವ ಸತ್ಯವನ್ನೂ ಕಾಣದ ಸತ್ಯವನ್ನೂ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಬಣ್ಣಿಸುವ ಬೇಂದ್ರೆಯವರ ಶೈಲಿ ತುಂಬ ರಮ್ಯ ಮತ್ತು ಸರಲ. ಅಂಥ ಕಡೆ ಗೇಯ ಗುಣ ತುಂಬ ನಾಜೂಕಾಗಿರುತ್ತದೆ. ಈ ಪದ್ಯ ನೋಡಿ.

ಟೊಂಕದ ಮೇಲೆ ಕೈ ಇಟಕೊಂಡು
ಬಿಂಕದಾಕಿ ಯಾರ ಈಕಿ
ಒಂಕೀ ತೋಳ ತೋರಸತಾಳ
ಸುಂಕದ ಕಟ್ಟ್ಯಾವಗ-ಸುಂಕಾದ
ಕಟ್ಟ್ಯಾವಗ ॥

ಯಣ್ಣಾ ಮಾವಾ ಅಂತರಮಿಸಿ
ಬಣ್ಣದಮಾತ ಆಡಿಕೋತ
ಕಣ್ಣಾಗ್ ಮಣ್ಣ ತೂರುವಾಕಿ
ಸಣ್ಣನ್ನಡದಾಕಿ-ಸಣ್ಣನ್ನ ನಡದಾಕಿ ॥

ಟೊಂಕದ ಮೇಲೆ ಕೈಯಿಟ್ಟುಕೊಂಡ ಈ ಹೆಣ್ಣು ವ್ಯವಹಾರ ಪ್ರಪಂಚಕ್ಕೆ ಸೇರಿದ ಎಲ್ಲರ ಆಕರ್ಷಣೆಯ ಕೇಂದ್ರ, ಸುಂಕದ ಕಟ್ಟೆಯವನಿಗೂ ತನ್ನ ಬಳುಕುವ ತೋಳನ್ನು ತೋರಿಸಿಯೇ ಅವನ ಕಣ್ಣಿಗೆ ಮಣ್ಣೆರಚುತ್ತಾಳೆ. ಈ ಹಾಡಿನ ಜಾನಪದ ದಾಟಿಯ ಸೊಗಡು ಕಾಣುತ್ತದೆ. ಇಂಥ ಅನೇಕ ಜಾನಪದ ಧಾಟಿಯ ಹಾಡುಗಳನ್ನು ಅವರ ಸಂಕಲನದಲ್ಲಿ ಕಾಣಬಹುದು.

ಇನ್ನು ಯಾಕ ಬರಲಿಲ್ಲವ್ವಾ ಹುಬ್ಬಳ್ಳಿ
ಯಾಂವಾ ।
ವಾರದಾಗ ಮೂರು ಸರ್ತಿ ಬಂದು
ಹೋದಾಂವಾ ॥
ಭಾರಿ ಜರದ ವಾರಿ ರುಮ್ಮಾಲ್ ಸುತ್ತಿ
ಕೊಂಡಾವಾ
ತುಂಬ ನಿಮಾಸಿ ತೀಡಿಕೋತ ಹುಬ್ಬ ಹಾರ
ಸಾಂವಾ ।
ಮಾತು ಮಾತಿಗೆ ನಕ್ಕ ನಗಿಸಿ ಆಡಿಸ್ಯಾಡಾಂವಾ ॥
ಇನ್ನು ಯಾಕ...
ಏನೋ ಅಂದರ ಏನೋ ಕಟ್ಟಿ ಹಾಡ
ಹಾಡಾಂವ ॥

ಅಂಗಡಿ ಜಗಲಿಯ ಮೇಲೆ ಕುಳಿತ ಒಬ್ಬ ಹುಚ್ಚ ಧಾರವಾಡದಲ್ಲಿ ಈ ಪದ್ಯದ ಪಲ್ಲವಿಯನ್ನು ಹಾಡುತ್ತಿದ್ದುದನ್ನು ಕೇಳಿದ ಕವಿ ಬೇಂದ್ರೆಯವರು, ಅದೇ ಧಾಟಿಯಲ್ಲಿ ಈ ಕವನವನ್ನು ಪೂರ್ತಿ ಮಾಡಿದರು ಎಂಬ ಮಾತನ್ನು ನನ್ನ ಗೆಳೆಯ ಡಾ॥ ಬಿ. ಬಿ. ರಾಜಪುರೋಹಿತರು ಹೇಳುತ್ತಿದ್ದರು. ಇಂಥ ಪದ್ಯಗಳಲ್ಲಿ ಬೇಂದ್ರೆಯವರು ಬಹುಮಟ್ಟಿಗೆ ಜಾನಪದ ರಾಗವನ್ನೆ ಬಳಸಿದ್ದಾರೆ. ಇಂಥವನ್ನು ರಾಗ ರಹಿತವಾಗಿ ಓದಿದರೆ ಬರೀ ಸಪ್ಪೆಯೆಂದು ಕಾಣಬಹುದು. ಇವುಗಳಲ್ಲಿ ಸತ್ಯಾಂಶವು ವಿಡಂಬನಾತ್ಮಕವಾಗಿ, ಮನಸ್ಸಿಗೆ ನಾಟುವಂತೆ ಬಂದಿದೆ. ಇಂಥ ಗೀತೆಯಲ್ಲಿ ಬರೀ ಜಾನಪದದ ಮಟ್ಟುಗಳ ಗಂಧವಿದ್ದು, ಸರಳವಾಗಿ ಹಾಡಿದರೆ ಸಾಕು ಭಾವಸ್ಪಂದವಾಗುತ್ತದೆ. ('ಪಾತರಗಿತ್ತಿ ಪಕ್ಕ' ಮುಂತಾದುವು)

ಕೆಲವು ಕವಿತೆಗಳು ಹೀಗಲ್ಲ, ಇವರ ಕಾವ್ಯದ ವಸ್ತು ವಿವಿಧ, ವಿಪುಲ, ವಿಶಾಲ. ಕಾವ್ಯ ಕೇವಲ 'ಸದ್ಯಃ ಪರನಿರ್ವೃತಿಯೇ' ಎನ್ನುವಂತಿಲ್ಲ, ಅವೆಲ್ಲ ಎಂದೂ ಮೆಲುಕು ಹಾಕುವಂಥ ಭಾವಸ್ಪಂದವಿರುವುವು.

## ತಾಯಿ–ಕೂಸು

ಹಸುಗೂಸು ಮಲಗಿಹುದು । ಹುಸಿನಗೆಯು
ತೊಲಗಿಹುದು
ಕನಸಿನಾಚೆಗೆ ಇರುವ ನಿದ್ದೆಯಲ್ಲಿ ।
ತನ್ನನೂ ಮರೆತಿಹುದೊ ತನ್ನೊಳಗೆ ಬೆರೆತಿ
ಹುದೊ
ಹಸಿವು ಭಯ ಮುದ್ದಾಟವಿಲ್ಲವಲ್ಲಿ ।
ಉಸಿರದಾರದ ತುದಿಗೆ ಹಾರುಪಕ್ಕಿಯು ಬದಿಗೆ
ಜೀವಪಟ ಹೆಡೆಯಾಟವಾಡುತಿಹುದು ।
ಮೇಲ್ಮುಗಿಲಗಾಳಿಯಲಿ । ತನ್ನೊಂದು
ಲೀಲೆಯಲಿ
ತೀರಲದು ತಾನೆ ಇಳಿಗಿಳಿಯಲಹುದು ॥ ೧ ॥

ಕೆಲಸದಲಿ ಬಿಡುವಿಲ್ಲ ಕೂಸಿನಲಿ ಮನವೆಲ್ಲ
ತಾಯಿಯೋಗಿನಿ ಮೈಲಿ ದುಡಿಯುತಿಹಳು
ತನ್ನೆಡೆಯ ತೊಟ್ಟಿಲಲಿ ಕಂದನನು ಇಟ್ಟಲ್ಲಿ
ಕಂಠದಲಿ ಜೋಗುಳವ ನುಡಿಸುತಿಹಳು ।

ಇತ್ತ ಮರುಳಾಟದಲೊ ಜೀವದೊಳ
ತೋಟಿಯಲೊ
ಮುಖರಂಗ ಮಂಡಲದಿ ಭಾವ ಭಾವ
ಹುಬ್ಬುಗಂಟಿಕ್ಕುವುದು ; ಎದೆಯೊಳಕೊ
ಬಿಕ್ಕುವುದು
ತುಟಿಯು ನಗುವುದು ಅದನು
ಕಂಡನಾವ ॥ ೨ ॥

ಈ ರೀತಿಯ ನವುರಾದ ಭಾವವನ್ನು ಬಿಂಬಿಸುವ ಹಾಡುಗಳೂ ಹಲವಿವೆ. ಇದು ಹೆಚ್ಚಿನ ರಾಗಭಾವವನ್ನು ತುಸು ವಿಲಂಬಿತ ನಡೆಯನ್ನೂ ತೆಗೆದುಕೊಳ್ಳಬಹುದು. ಸಾಹಿತ್ಯ ಸೃಷ್ಟಿಗೆ ಒಂದು ಪ್ರತಿಭೆ ಬೇಕು. ಹಾಗೆ ಅದನ್ನು ಹಾಡುವವನಲ್ಲೂ ಒಂದು ಪ್ರತಿಭೆ ಇರಬೇಕು. ಎರಡೂ ಸೃಷ್ಟಿ ಕ್ರಿಯೆಗಳೇ. ಕೆಲವೊಮ್ಮೆ ಕವಿಗೆ ಕಾಣದಿರುವ ಅಥವಾ ಕವಿತೆಯಲ್ಲಿ ಹುಡುಕಿದರೂ ಸಿಗದ ಭಾವವನ್ನು, ಹಾಡುವಾತ ಹಿಡಿದು ತೋರಿಸಬಹುದು. ಅತೀಂದ್ರಿಯವೆನ್ನಬಹುದಾದ ಸಂಗತಿಗಳನ್ನು ಕೂಡ ಅನುಭವ ವೇದ್ಯವಾಗುವಂತೆ ಮಾಡಬಲ್ಲ ಶಕ್ತಿ ಕಾವ್ಯದ ಭಾಷೆಗೂ ಇದೆ. ನಾದ ಲಯಗಳಿಗೂ ಇದೆ. ಆದ್ದರಿಂದ ಕಾವ್ಯದ ಭಾಷೆ ಒಂದು ನೆಲೆಯಲ್ಲಿ ಸುಲಭವಾಗಿ ಅರ್ಥವಾಗುವಂತಿರಬಾರದು. ಹಾಗಿದ್ದರೆ ಅದಕ್ಕೆ ಭಾವದ ಅನುರಣನ ಶಕ್ತಿ ದೊರೆಯುವಹಾಗಿಲ್ಲ. ಕಾವ್ಯದಲ್ಲಿ ಗದ್ಯದ ಸತ್ವವೂ ಗೇಯತೆಯ ಸ್ಪಂದವೂ ಇರಬೇಕು ಇವೆರಡೂ ಬೇಂದ್ರೆಯವರ ಕಾವ್ಯಗಳಲ್ಲಿವೆ. ಇದಕ್ಕೆ ಉದಾಹರಣೆಯಾಗಿ ಇವರ ಕನ್ನಡ ಮೇಘದೂತವನ್ನು ನೋಡಬಹುದು—

ಮರೆದೆ ನಡುವೆ ಬಿಳಿಹಾಸುಗಲ್ಲು ಬಂಗಾರ
ಕೋಲು ನಡುಕೆ
ಎಳೆ ಬಿದಿರ ಬಣ್ಣ ಬೆಳೆಹರಳಿನಿಂದ ನೆಲೆಗಟ್ಟು
ಅದರ ಬುಡಕೆ
ಆ ಕೋಲಿನಲ್ಲಿ ಕುಣಿಸುವಳು ನವಿಲ ನನ್ನಾಕೆ
ಸಂಜೆಯಲ್ಲಿ
ಕೈತಟ್ಟಿ ಮಾಟಬಳೆ ತಾಳಲಾಟ ಥಕಥೈಯ
ಥಾಟಿನಲ್ಲಿ ॥

*   *   *

ಹಗಲು ಹೊತ್ತು ಹೋದೀತು ಕೆಲಸದಲಿ
ಹೇಗೋಬಲ್ಲೆ ನಾನು ।
ಇರುಳು ಅವಳ ಗತಿಯೇನೋ? ನೆನೆಯಲೊಲ್ಲೆ
ನಾನು ।
ನನ್ನ ಸುದ್ದಿ ಹೇಳಿದರೆ ಸಾಕು, ನೀನಿಜಕೆ
ನೋಡು, ಪಾಪಾ
ಸಾಧ್ವಿ ನೆಲದೊಳೇ ನಿದ್ದೆ ಇಲ್ಲದೇ ಹೊರಳು
ತಿರುವ ತಾಪಾ ॥

ಮೂಲದಲ್ಲಿ ಮಂದಾಕ್ರಾಂತ ವೃತ್ತದಲ್ಲಿದ್ದ ಸಂಸ್ಕೃತ ಶ್ಲೋಕ ಇಲ್ಲಿ ೩+೫ ಗಣಗಳ ಮಾತ್ರಾ ಬಂಧವಾಗಿ ಲಯಬದ್ಧವಾದ ಹಾಡಾಗಿದೆ. ಭಾಷೆಯಲ್ಲಿ ಬಳಸಲಾಗುವ ಶಬ್ದಗಳನ್ನೇ ಕವಿಬಳಸುವುದು ; ಆದರೆ ಆ ಶಬ್ದಗಳ ಮೇಲೆ ಅರ್ಥ ಸಂಸ್ಕಾರ ಈ ಮೊದಲೇ ದಟ್ಟವಾಗಿರುತ್ತದೆ. ಕವಿಯ ಭಾವಕ್ಕೂ, ಜನ ತಿಳಿದುಕೊಂಡ ಭಾವಕ್ಕೂ ಹೊಂದಿಕೆಯಾಗದಿದ್ದರೆ ಸ್ವಲ್ಪ ಗಲಿಬಿಲಿಯುಂಟಾಗುತ್ತದೆ. ಆಗ ಕವಿಯ ಭಾಷೆ ಒಗಟೆನಂತೆಯೂ ಕಾಣಬಹುದು, ಅಲ್ಲಿ ಕವಿ ಭಾಷೆಯನ್ನು ವಿಶೇಷ ಜವಾಬ್ದಾರಿಯಿಂದ ಬಳಸಬೇಕಾಗುತ್ತದೆ. ಉದಾ—

### ಭಾವಗೀತ

ಭೃಂಗದ ಬೆನ್ನೇರಿಬಂತು ಕಲ್ಪನಾವಿಲಾಸಾ
ಮುಗಿದ ಗಾಳಿಪಕ್ಕ ಪಡೆಯುತಿತ್ತು
ಸಹಜಪ್ರಾಸಾ
ಮಿಂಚಿ ಮಾಯವಾಗುತಿತ್ತು ಒಂದು
ಮಂದಹಾಸಾ ॥
ಭೃಂಗದ ಬೆನ್ನೇರಿ ಬಂತು...

ಬೇಂದ್ರೆಯವರು ಈ ಕವನವನ್ನು ಒಂದು ಭೃಂಗದ ಹಾರಾಟವನ್ನು ನೋಡಿ ಬರೆದುದು, ಆದರೆ ಇದರಲ್ಲಿ ಭಾವಗೀತೆ ಹುಟ್ಟಿಗೊಳ್ಳುವ ಪರಿಯನ್ನು ಅನ್ಯಾದೃಶವಾಗಿ ಚಿತ್ರಿಸಿದ್ದಾರೆ. ಇಲ್ಲಿ ಬಳಸಿದ ಶಬ್ದಗಳು ತಮ್ಮ ವಾಚ್ಯಾರ್ಥವನ್ನು ತೂರಿ ಭಾವಸ್ಯಂದಿಯಾಗುತ್ತವೆ. ಇಂಥ ಕಡೆ ಹಾಡು ಬಹಳ ಮೃದುವಾಗಿರಬೇಕು, ಕಾವ್ಯಕ್ಕೆ ಕುರುಡೋದು ಸಲ್ಲದು. ಗಾನದಲ್ಲಿ ಸಾಹಿತ್ಯವನ್ನು ತೇಲಿಸಬೇಕು, ಮುಳುಗಿಸಬಾರದು. ತಾಳ ಲಯ ಸ್ವರ ಜ್ಞಾನ ಬಹಳ ಮುಖ್ಯ. ಛಂದಸ್ಸು, ಭಾಷೆ, ಅಲಂಕಾರಗಳನ್ನು ಹದವರಿತು ಬಳಸಿಕೊಂಡು, ಕವಿತೆಯ ಪರಿಣಾಮವನ್ನು ನಿರ್ವಹಿಸುವುದರಲ್ಲಿ ಬೇಂದ್ರೆಯವರಿಗಿರುವ ಶಕ್ತಿ ಹಲವರಿಗಿಲ್ಲ.

ಕೆಲವೊಮ್ಮೆ ಬೇಂದ್ರೆಯವರ ಕಾವ್ಯ ಮುಗಿಲಿನ ಹಾರೈಕೆಯನ್ನು ನೆಲದ ರಸವನ್ನೂ ಹೀರಿಕೊಂಡು ಹಾಯಾಗಿ ಗಾಳಿಯಲ್ಲಿ ತೇಲುವಂತಿರುತ್ತದೆ ಅಂತಹಕಡೆ ಗೇಯಗುಣ ಹೆಚ್ಚಾಗಿಯೇ ಇರುತ್ತದೆ. ಅಂತಹ ಗೀತೆಗಳು ದಾಸರ ಕೃತಿಗಳನ್ನೂ ಕೆಲವೊಮ್ಮೆ ವಾಗ್ಗೇಯಕಾರರ ಕೃತಿಗಳನ್ನೂ ಹೋಲುತ್ತವೆ.

## ಎದೆಯ ಒಕ್ಕಲಿಗ

ಬೆದೆಯರಿತು ಹದಮಾಡು ಹೃದಯದೀ
ಹೊಲವನ್ನು
ಹದ ಬೆದೆಯ ನರಿತಂಥ ಹೃದಯವಾಸೀ।

ಗರುವ ಗ್ರಹಿಕೆಗಳೆಂಬ ಹುಲ್ಲುಗರಿಕೆಗಳಿಂದ
ಸರುವವೂ ಕೆಟ್ಟಿಹುದು ನಟ್ಟುಬೆಳೆದು
ಬರುವ ಸುಗ್ಗಿಯ ಬೆಳೆಯು ಭರದಿಂದ
ಬರುವಂತೆ
ಗುರುವೆ, ಮಾಡೋ ಕಲ್ಪತರುವೆ ಮಾಡೋ
॥ ೧ ॥

ಇಂತ ಕವಿತೆಗಳ ಭಾಷೆ ಮತ್ತು ಲಯ ಎರಡೂ ದಾಸ ಸಾಹಿತ್ಯವನ್ನು ಹೋಲುತ್ತದೆ. ಇವನ್ನು ರಾಗ ತಾಳಗಳಲ್ಲಿ ಹೇಳಿದರೆ ಸೊಗಸು ಹೆಚ್ಚು. ಈ ಸಾಲಿನಲ್ಲಿ 'ಬಾ ಭೃಂಗವೆ ಬಾ' 'ನನ್ನ ಹರಣ ನಿನಗೆ ಶರಣ' 'ಬಾ ಕೈತಾ' ಮುಂತಾದ ಹಲವು ಕವಿತೆಗಳು ಸೇರುತ್ತವೆ. ಕೆಲವು ಹಾಡುಗಳಿಗೆ ವಾಗ್ಗೇಯಕಾರರ ಕೃತಿಗಳ ಹಾಗೆ ಶುದ್ಧ ಸಂಗೀತವೂ ಒಪ್ಪುತ್ತದೆ. ಇದರ ಅನುಬಂಧದಲ್ಲಿ ಅವರ **'ಕೊನೆಯ ಹೇಳಿಕೆ'** ಎಂಬ ಪದ್ಯಕ್ಕೆ ರಾಗ-ತಾಳ ಹಾಕಿ ನಿರ್ದೇಶಿಸಿದೆ. ಈ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಬೇಂದ್ರೆಯವರ ಕಾವ್ಯ ಗೇಯತೆಯ ಸ್ಪರ್ಶರಹಿತವಾದ ಶುದ್ಧ ಚಿಂತನಪರವಾದ ನವ್ಯವರ್ಗಕ್ಕೆ ಸೇರುವಂಥದ್ದಲ್ಲ ಎಂದು ಕಾಣಬಹುದು.

### ಅನುಬಂಧ

## ಕೊನೆಯ ಹೇಳಿಕೆ

ರಾಗ-ಮಲಯಮಾರುತ-ಝಂಪೆತಾಳ

ಆ :— ಸ$_4$ ಗ$_3$ ಪ ದ$_2$ ನಿ$_2$ ಸ
ಅವ :— ಸ ನಿ$_2$ ದ$_2$ ಪ ಗ$_3$ ಸ ॥

ಪಲ್ಲವಿ। ಸಾಂಗಪ। ದನಿದಾದ। ದಾದಾನಿ।
ದಾಪಗ ಪಾಪ।
ಬೇಡಿವಾ-। ಡುವದೇನು।
ಬಂದೆಂದು। ಬಾ....ನೀನು।
ಗಾಪದನಿ-। ದದಪದನಿ। ಸಾನಿದಪ।
ಗರಿ ಸಾ,॥
ಹಿಗ್ಗಿನಿಂ। ಗಡಲಹುನೆ।
ಹೋ ಕಡಲ। ಮನೆ ಯೀ,॥

ಅ। ಪ। ಗಪದಾನಿ। ಸಾಸಾಸ। ನೀನಿನಿದ।
ಸಾಸ ಸಸ।

ಬಾಡೇನು। ಎಂದೆಂದು। ಅರದಿರು।
ಹಾರದಿರು।

ಸರಿಗರೀ। ಸನಿದದನಿ। ಸಾನಿದಪ।
ಗರಿಸಾ,।

ಗಾಡಹೂ। ಜೇನ-ಹನಿ। ಯೋಜೇನ।
ಹನಿಯೋ॥

ಚರಣ॥ ದದನಿದಾ। ದನಿದಾದ। ನಿನಿನಿನೀ।
ದಾಪಗ ಪಾಪ।

ಹೆಣಗಿವಾ। ಡುವದೇನು।
ದೊರೆವಂದು। ದೊ-ರೆ ನೀನು।

ನಿದಪಗರಿ। ಸನಿದರಿಸ। ರೀರಿಸರಿ।
ಗಗಪಾ।

ಕನಿಯುಬಿಳಿ। ಹರಳಗಣಿ।
ಯೋ ಹರಳ। ಗಣಿಂಯೋ॥

(ಅನುಪಲ್ಲವಿಯಂತೆ)

ಬಣಗೇನು। ಎಂದೆಂದು।
ಉರುಳದಿರು। ತೆರಳದಿರು।

ಬಡಹುಲ್ಲು। ಮಂಜುಮಣಿಯೋ,
ಮಂಜುಮಣಿಯೋ॥

---

ನಿನ್ನ ಸೊಲ್ಲ ನಂಬಿ ಎದ್ದೆ
ಮೈಯೆಲ್ಲ ನಡುಕವಿದ್ದು
ನೀನೆ ಶುಭ ನುಡಿಯುವಾಗ
ಏನಿದ್ದೇನು? ಎಲ್ಲಾ ಶುಭವೇ!
ಶುಭ ನುಡಿಯೆ
ಶುಭ ನುಡಿಯೆ ಶಕುನದ ಹಕ್ಕಿ।
ಶುಭ ನುಡಿಯೆ।

(ನಾದಲೀಲೆ—ಪು. ೫)

# ಬೇಂದ್ರೆ, ವಿಜ್ಞಾನ ಮತ್ತು ನಾನು

**ಜಿ. ಟಿ. ನಾರಾಯಣರಾವ್**

"ಧರ್ಮರಹಿತ ವಿಜ್ಞಾನ ಪಂಗು, ವಿಜ್ಞಾನ ರಹಿತ ಧರ್ಮ ಅಂಧ" ಎಂದರು ದಾರ್ಶನಿಕ ವಿಜ್ಞಾನಿ ಐನ್‌ಸ್ಟೈನ್. ಇಲ್ಲಿ "ಧರ್ಮ" ಎಂದರೆ ನಾಗರಿಕತೆಯ ನಿರಂತರ ಪಥ ಕ್ರಮಣದಲ್ಲಿ ಕೆನೆಗಟ್ಟುವ ಮೌಲ್ಯಗಳ ಸಮುಚ್ಚಯ. ಉದಾಹರಣೆಗೆ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸ ಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲ ಸಂಗನೊಲಿಸುವ ಪರಿ." ಇಲ್ಲಿ "ಕೂಡಲಸಂಗ" ಮಾನವ ಕುಟುಂಬವನ್ನು ಪ್ರತೀಕಿಸುತ್ತದೆ. ಇಂಥ ಕುಟುಂಬದಲ್ಲಿ ವ್ಯಕ್ತಿ ಉಪಕಾರಿಯಾಗಿ ಬಾಳುವುದು ಸ್ವತಃ ಆತನಿಗೆ ಒಳ್ಳೆಯದು, ಸಮಾಜಕ್ಕೆ ಹಿತಕಾರಿ. ತದ್ವಿರುದ್ಧವಾಗಿ ಬಾಳಿದರೆ? ಖಂಡಿತ ಆತನಿಗೆ ಸುಖಪ್ರದ ಗದು, ಸಮಾಜಕ್ಕೆ ಪೀಡೆ ತಟ್ಟುತ್ತದೆ. ಇಂಥ ವ್ಯಕ್ತಿ–ಸಮಾಜ ಅನ್ಯೋನ್ಯ ಸಾಮರಸ್ಯ ಸಾರುವ ಮೌಲ್ಯಗಳ ಸಮಗ್ರತೆಯೇ ಧರ್ಮ. ಇದು ನರ್ತನ ವಿಜ್ಞಾನ, ಸಂಸ್ಕೃತಿಯ ಸಾರ ಮತ್ತು ಸಕಲಸೃಜನ ಶೀಲ ಕ್ರಿಯೆಗಳ ಪ್ರೇರಕ.

ಆದ್ದರಿಂದ ಜೀವನಪಥಕ್ಕೆ ಗುರಿ ನಿರ್ಣಯಿಸುವುದು ಧರ್ಮ. ಆ ಗುರಿ ಯೆಡೆಗೆ ದಾರಿ ನಿರ್ಮಿಸುವುದು ವಿಜ್ಞಾನ. ಅದು ಅಮೂರ್ತ, ಆದರೂ ಖಚಿತ, ಇದು ಮೂರ್ತ, ಆದ್ದರಿಂದ ವಾಸ್ತವ. ಗುರಿ ಇರ ದಾಗ ದಾರಿಗೆ ದಿಕ್ಕಿಲ್ಲ, ದಾರಿ ಇರದಾಗ ಗುರಿಗೆ ನೆಲೆ ಇಲ್ಲ. ಎಂದೇ ಗುರಿ–ದಾರಿ ಅಥವಾ ಧರ್ಮ–ವಿಜ್ಞಾನ ಸಂಬಂಧ ಅನ್ಯೋನ್ಯವಾದದ್ದು. ಇವುಗಳಲ್ಲಿ ಯಾವುದು ಶ್ರೇಷ್ಠ ಎಂಬ ವಿತಂಡವಾದ ಧರ್ಮವನ್ನು ವಿರೂಪಗೊಳಿಸುತ್ತದೆ, ವಿಜ್ಞಾನವನ್ನು ವಿಕೃತಿಗೊಳಿಸುತ್ತದೆ.

ಕವಿ, ವಿಜ್ಞಾನಿ, ದ್ರಷ್ಟಾರ ಮೊದಲಾದ ಸೃಜನಶೀಲ ಚೇತನಗಳು ತಮ್ಮ ನಡೆ ನುಡಿ ಬಗೆಗಳಿಂದ ಮೌಲ್ಯಾಕರವನ್ನು ಪುಷ್ಟೀ ಕರಿಸುತ್ತಲೇ ಇರುತ್ತವೆ. ನೆಲದ ಅನುಭವ ದಿಂದ ಸೇಚಿತನಾದ ಕವಿ, ಕಲ್ಪನೆಯ ನಾವೆ ಹತ್ತಿ, ಸೃಜನಶೀಲತೆಯ ಔನ್ನತ್ಯವೈದಿ ಅಲ್ಲಿಂದ ನೆಲದ ಹರವನ್ನು ದರ್ಶಿಸಿ ತನ್ನ ಮಾಧ್ಯಮದ ಮೂಲಕ ಮೌಲ್ಯ ಪ್ರತಿ ಪಾದಕನಾಗುತ್ತಾನೆ. ವಿಜ್ಞಾನಿಗಾದರೂ ಮೂಲ ಅನುಭವದ ಸೆಲೆ ನೆಲವೇ. ಮುಂದೆ ಆತ ಈ ಭೌತ ಪರಿಮಾಣಗಳನ್ನು ನಿರಪೇಕ್ಷ

ಗಣಿತರಾಶಿಗಳಾಗಿ ರೂಪಾಂತರಿಸಿ ಸಮೀಕರಣಗಳ ಪ್ರಪಂಚದಲ್ಲಿ ವಿಹರಿಸಿ ತಾನು ಕಂಡ ವಿವರಗಳನ್ನು ತನ್ನ ಮಾಧ್ಯಮದಲ್ಲಿ ಚಿತ್ರಿಸುತ್ತಾನೆ ಮತ್ತು ಭೌತ ವಿಶ್ವಕ್ಕೆ ವ್ಯಾಖ್ಯಾನ ಬರೆಯುತ್ತಾನೆ. ಅಂದ ಮೇಲೆ ಕವಿಯ ಸೃಜನಶೀಲತೆ ಶ್ರೇಷ್ಠವೋ ವಿಜ್ಞಾನಿಯ ಸೃಜನಶೀಲತೆ ಶ್ರೇಷ್ಠವೋ ಎಂಬ ಪ್ರಶ್ನೆಗಳು ಗಾವಿಲರಿಗೆ ಮತ್ತು ಶೂನ್ಯವಾದಿಗಳಿಗೆ ಮಾತ್ರ ಮೊಳೆಯುವುದು ಸಾಧ್ಯ. ಕವಿ ಮತ್ತು ವಿಜ್ಞಾನಿ ಇಬ್ಬರ ಪ್ರೀತಿ ಗೌರವಯುಕ್ತ ಸಹಕಾರ ಸಾಹಚರ್ಯವೇ ಜೀವನದ ನಿಜಪೋಷಕ.

ಸಮಕಾಲೀನ ವ್ಯಕ್ತಿ ಬೇಂದ್ರೆ ತಮ್ಮ ಕಾವ್ಯ ಕೃಷಿಯಿಂದ ಸಾರ್ವಕಾಲಿಕ ರಸ ಋಷಿಯಾಗಿ ಉತ್ತಾರಣೆಗೊಂಡಿರುವರು. ಎಂದೇ ಪ್ರಸಕ್ತ ಲೇಖನದಲ್ಲಿ ಬೇಂದ್ರೆ ಪದವನ್ನು ಒಂದು ರೂಪಕವಾಗಿ (metaphor) ಬಳಸಿದ್ದೇನೆ.

ಮಾನವಮತಿ ನಿಸರ್ಗದ ಜೊತೆ ಕಾರ್ಯ-ಕಾರಣ ಪಾತಳಿಯಲ್ಲಿ ಅಂತರವರ್ತಿಸಿದಾಗ ವಿಜ್ಞಾನ (science) ಮೈದಳೆಯುತ್ತದೆ. ಇದು ಪೂರ್ಣಜ್ಞೇಯನಿಷ್ಠ (objective). ವೈಜ್ಞಾನಿಕ ಸಿದ್ಧಾಂತವೊಂದರ ನಿಕಷ, ಅಂತಿಮವಾಗಿ, ನಿಸರ್ಗವೆಂದರ್ಥ—ಯಾವ ಗ್ರಂಥವೂ ಅಲ್ಲ, ಸಂತನಂತೂ ಖಂಡಿತ ಅಲ್ಲ. ಆದ್ದರಿಂದ ವಿಜ್ಞಾನದ ವಿಕಾಸಕ್ಕೆ ವ್ಯಕ್ತಿ ಒಂದು ಅನಿವಾರ್ಯ ಮಾಧ್ಯಮ ಮಾತ್ರ.

ಆಧುನಿಕ ವಿಜ್ಞಾನದ ಯಾವುದೇ ಪ್ರಕಾರದ ಬಗೆಗೆ ಕನ್ನಡದಲ್ಲಿ ಬರೆಯುವ, ಅಂದರೆ ಕನ್ನಡದಲ್ಲಿ ವಿಜ್ಞಾನವಾಙ್ಮಯ ರಚಿಸುವ, ಒಬ್ಬ ಲೇಖಕ ಇಲ್ಲಿಯ 'ನಾನು.' ಆದ್ದರಿಂದ ಈ ಬಳಗದ ಒಬ್ಬ ಸದಸ್ಯ ಪ್ರಸಕ್ತ ಲೇಖಕ ಕೂಡ.

ಕನ್ನಡದಲ್ಲಿ ವಿಜ್ಞಾನ ಬರೆಯುವಾಗ ನನಗೆ ಎದುರಾಗುವ ಸವಾಲು ವಿಷಯ ಕುರಿತದ್ದಲ್ಲ. ಅದು ಸಾಪೇಕ್ಷತಾ ಸಿದ್ಧಾಂತ, ನಕ್ಷತ್ರ ಜೀವನ ವೃತ್ತಾಂತ, ಗಣಿತದ ಗಹನ ಪ್ರಮೇಯ ಯಾವುದೇ ಇರಬಹುದು—ಈ ಎಲ್ಲ ವಿಷಯಗಳ ಬಗ್ಗೆ ಇಂಗ್ಲಿಷಿನಲ್ಲಿ ಆಕರಗ್ರಂಥಗಳೂ ಜನಪ್ರಿಯ ವಾಙ್ಮಯವೂ ಸಮೃದ್ಧವಾಗಿ ಲಭ್ಯವಿರುವುದರಿಂದ ಪರಿಕಲ್ಪನೆಗಳ ಸ್ವಾಂಗೀಕರಣ (assimilation of the concepts) ನನಗೆ ಕಷ್ಟವಲ್ಲ. ನಿಜವಾದ ಸವಾಲೆಂದರೆ ಈ ಸ್ವಾಂಗೀಕೃತ ಪರಿಕಲ್ಪನೆಗಳನ್ನು ಕನ್ನಡದಲ್ಲಿ ಪುನಸ್ಸೃಷ್ಟಿಗೈಯುವುದು ಹೇಗೆ?

ಸಮರ್ಥ ಲೇಖನವೊಂದರ ಪ್ರಮುಖ ಆವಶ್ಯಕತೆಗಳು ಮೂರು: ಪರಿಕಲ್ಪನೆಯಲ್ಲಿ ಸ್ಪಷ್ಟತೆ, ನಿರೂಪಣೆಯಲ್ಲಿ ಸುಂದರತೆ ಮತ್ತು ಲೇಖನಕ್ರಿಯೆಯಲ್ಲಿ ಉಲ್ಲಾಸ. ಈ ಮೂರೂ ಗುಣಗಳು ಲೇಖನದಲ್ಲಿ ಮೇಳೈಸಿರದಿದ್ದರೆ ಆತನ 'ವಾಙ್ಮಯ' ಗೊಂದಲಮಯವಾಗುತ್ತದೆ—ಧೃತರಾಷ್ಟ್ರ-ಪ್ರಜೆಗಳಿಗೆ ಶುಕ್ರಾಚಾರ್ಯ ಚಕ್ರವರ್ತಿಯಾದಾಗ ಆ ರಾಷ್ಟ್ರದ 'ಪ್ರಗತಿ'ಯಂತೆ.

ಇಂಗ್ಲಿಷಿನಲ್ಲಿಯ ಒಂದು ಉತ್ಕೃಷ್ಟ ವಿಜ್ಞಾನ ಗ್ರಂಥ, ಸಾಹಿತ್ಯ ದೃಷ್ಟಿಯಿಂದಲೂ, ಒಂದು ಉತ್ತಮ ಕೃತಿಯಾಗಿರುತ್ತದೆ. ಅಲ್ಲಿ ವಿಜ್ಞಾನದ ಪರಿಕಲ್ಪನೆಗಳು ಭಾಷೆಗೆ ಹೊಸ ಆಯಾಮ ನೀಡುತ್ತವೆ, ಭಾಷೆಯ ನಮ್ಯತೆ ವಿಜ್ಞಾನದ ಕಠಿಣ ಪರಿಕಲ್ಪನೆಗಳಿಗೆ ಮಾರ್ದವತೆ ಪೂಸುತ್ತದೆ. ಲೇಖಕನ ಉಲ್ಲಾಸ ಸರ್ವತ್ರ ಸುಂದರತೆಯನ್ನು ಸೂಸುತ್ತದೆ.

ಕನ್ನಡದಲ್ಲಿಯು ಒಬ್ಬ ಪ್ರಜ್ಞಾವಂತ ವಿಜ್ಞಾನಲೇಖಕ ಈ ಎಲ್ಲ ಗುಣಗಳನ್ನೂ ತನ್ನ ಕೃತಿಯಲ್ಲಿ ಯುಕ್ತವಾಗಿ ಮೇಳೈಸಲು ಪ್ರಯತ್ನಿಸಲೇಬೇಕು. ವಾಸ್ತವವಾಗಿ ಇಂಗ್ಲಿಷ್ ವಿಜ್ಞಾನ–ಲೇಖಕನಿಗಿಂತ ಕನ್ನಡ ವಿಜ್ಞಾನ–ಲೇಖಕನ ಸಮಸ್ಯೆ ಗುರುತರವಾದುದು. ಅಲ್ಲಿ ಭಾಷಾಸಮಸ್ಯೆ ಅವನಿಗಿಲ್ಲ. ಇಲ್ಲಿ ಹಾಗಲ್ಲ—ಕನ್ನಡವನ್ನು ವಿಜ್ಞಾನದ ಸಂವಹನ ಮಾಧ್ಯಮವಾಗಿ ಪಳಗಿಸುವ ಹೆಚ್ಚಿನ ಹೊಣೆಯೂ ಲೇಖಕನಿಗಿದೆ. ಒಂದು ಸುಲಭ ಉದಾಹರಣೆ. ಸೂರ್ಯನ ಸುತ್ತ ಭೂಮಿ ಸುತ್ತುತ್ತದೆ, ತನ್ನ ಸುತ್ತ ಕೂಡ ಸುತ್ತುತ್ತದೆ. ಈ ವಿಭಿನ್ನ ಬಗೆಯ ಚಲನೆಗಳಿಗೆ ಇಂಗ್ಲಿಷಿನಲ್ಲಿ revolution ಮತ್ತು rotation ಎಂಬ ಪದಗಳು ಶತಮಾನಗಳ ಬಳಕೆಯಿಂದ ಸುಲಭ ಲಭ್ಯವಾಗಿವೆ. ಕನ್ನಡದಲ್ಲಿ? ನಾವು ಯುಕ್ತ ಪದಗಳನ್ನು ಆಯ್ದು, ಅರ್ಥ ತುಂಬಿ, ಚಲಾವಣೆಗೆ ತಂದು ಸುಲಭಗೊಳಿಸಬೇಕಾಗುತ್ತದೆ. ಈ ಪದಗಳು ಅನುಕ್ರಮವಾಗಿ ಪರಿಭ್ರಮಣೆ ಮತ್ತು ಆವರ್ತನೆ.

ಕನ್ನಡವನ್ನು ಈ ತೆರನಾಗಿ ಪಳಗಿಸುವ ದಿಶೆಯಲ್ಲಿ ವಿಜ್ಞಾನ ಲೇಖಕರಿಗೆ ಅಕ್ಷಯ ಪಾತ್ರೆಯಂತೆ ಒದಗಿಬರುವವರು ನಮ್ಮ ಶ್ರೇಷ್ಠ ಕವಿಗಳು—ಪ್ರಾಚೀನರು ಮತ್ತು ಅರ್ವಾಚೀನರು. ಪ್ರಸಕ್ತ ಲೇಖನ ಬೇಂದ್ರೆಯವರನ್ನು ಕುರಿತದ್ದಾದುದರಿಂದ ಅವರ ಕಾವ್ಯದಿಂದ ಕೆಲವು ನಿದರ್ಶನಗಳನ್ನಿಲ್ಲಿ ಉಲ್ಲೇಖಿಸುತ್ತೇನೆ.

‘ಕಾಲ’ (time) ಎಂದರೆ ಘಟನೆಗಳ ನಡುವಿನ ‘ಅವಧಿ.’ ನಿನ್ನೆಯ ಸೂರ್ಯೋದಯ ಒಂದು ಘಟನೆ, ಇಂದಿನದು ಇನ್ನೊಂದು. ಇವೆರಡರ ನಡುವಿನ ‘ಅವಧಿ’ಯನ್ನು ದಿವಸ ಎನ್ನುತ್ತೇವೆ. ಇದು ಕಾಲದ ಒಂದು ಮಾನಕ. ಈ ಪರಿಕಲ್ಪನೆಯನ್ನು ವಿಸ್ತರಿಸುತ್ತ ಭೌತವಿಶ್ವಕ್ಕೂ ಅದರ ಅಸಂಖ್ಯ ವಿದ್ಯಮಾನಗಳಿಗೂ ವ್ಯಾಖ್ಯಾನ ಬರೆಯುವಾಗ ಬೇಂದ್ರೆ ಪಾತ್ರ ನೋಡಿ:

ಇರುಳಿರುಳಳಿದು ದಿನ ದಿನ ಬೆಳಗೆ
ಸುತ್ತು ಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆ ತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ?

ಇಲ್ಲಿ ಇನ್ನೂ ಒಂದು ಸೂಕ್ಷ್ಮ ಉಂಟು. ನಮ್ಮ ಅಸ್ತಿತ್ವ ದೇಶ (space), ಕಾಲ (time) ಮತ್ತು ಚಲನೆ (movement) ಎಂಬ ಮೂರು ಅವಿನಾ ಘಟಕಗಳಿಂದ ನೇಯಲ್ಪಟ್ಟಿದೆ. ಒಂದಿಲ್ಲದಿದ್ದರೆ ಉಳಿದೆರಡಕ್ಕೆ ಅರ್ಥವಿಲ್ಲ. ‘ದೇಶ’ ಇಲ್ಲವಾದರೆ ನಮ್ಮ ನೆಲೆ ಎಲ್ಲಿ? ‘ಕಾಲ’ ಇಲ್ಲವಾದರೆ ಬದಲಾವಣೆಯೇ ಇಲ್ಲ. ಆದ್ದರಿಂದ ವಿಶ್ವವಿದ್ಯಮಾನಗಳು ಕೈದಾಗುವುವು. ‘ಚಲನೆ’ಯೇ ವಿಶ್ವದ ನಿಯಮ: ನಮ್ಮ ನೆಲೆಯ ಸುತ್ತ ನಾವು, ಸೂರ್ಯನ ಸುತ್ತ ಭೂಮಿ, ಆಕಾಶಗಂಗೆಯ ಸುತ್ತ ಸೂರ್ಯ—ಹೀಗೆ ಬೆಳೆಯುತ್ತದೆ ಈ ಹನುಮಂತ ಲಾಂಗೂಲ. ಈಗ ಮಗುದೊಮ್ಮೆ ಓದಿ “ಗಾವುದ ಗಾವುದ ಮುಂದೆ ಎವೆತೆರೆದಿಕ್ಕುವ ಹೊತ್ತಿನ ಒಳಗೆ” ಬೇಂದ್ರೆ–ವಿಜ್ಞಾನ ಸ್ವಾರಸ್ಯವರಿಯಲು ಮತ್ತು ಸವಿಯಲು.

ಚಲನೆ ಎಂದೆ. ಸಪ್ತರ್ಷಿಮಂಡಲ (Ursa Major) ಉತ್ತರಾಕಾಶದ ಒಂದು ಪ್ರಮುಖ ನಕ್ಷತ್ರಪುಂಜ. ಖಗೋಳದ

ನಿರಂತರ ಪೂರ್ವ-ಪಶ್ಚಿಮ ದಿಶಾವರ್ತನೆಯನ್ನೂ ವಿವಿಧ ನಕ್ಷತ್ರ ಪುಂಜಗಳ ಭಂಗಿ ವಿನ್ಯಾಸ ಲಹರಿಗಳನ್ನೂ ನೋಡಿ ಆನಂದಿಸಿ ಬೆರಗಾಗುವ ಯಾರಿಗಾದರೂ ಈ ಮುಂದಿನ ಬೇಂದ್ರೆ-ಉದ್ಗಾರದ ಸರಳತೆ, ಸುಂದರತೆ ಮತ್ತು ಉಲ್ಲಾಸ ಮನವರಿಕೆ ಆಗದಿರದು:

ಸಪ್ತಋಷಿಗಳೇಳೆತ್ತು ತಿರುಗುತಿವೆ ಹಾಕಿ
ಧ್ರುವದ ಗಾಣಾ
ಮೇರು ದಂಡದಾ ಇಕ್ಷುರಸವು ಹಿಂಡುತ್ತ
ಲಿಹುದೊ ಜಾಣಾ
ವಿವಿಧವಾಗಿ ಸಂಚರಿಸಿ ಠಾಯಿಯಲಿ ಬ್ರಹ್ಮದೇಶ
ತಾನಾ
ಕರೆಯುತಿಹುದು ಸ್ವರ ಮೇಳಕಾಗಿ ಗ್ರಹ
ಗೋಲ ವಿಶ್ವಗಾನಾ

ನಕ್ಷತ್ರ ಸೌಂದರ್ಯಾನುಭವಶೂನ್ಯರಿಗೆ ಈ ಸಾಲುಗಳು ಕೇವಲ ಶಬ್ದ ಚಮತ್ಕಾರವೆಂದೆನ್ನಿಸಿದರೆ (ಇಂಥ ವಿಮರ್ಶೆ ಕೇಳಿದ್ದೇನೆ) ತಪ್ಪು ಬೇಂದ್ರೆಯವರದಲ್ಲ.

ಬೆಂಕಿ-ಶಾಖ, ದ್ರವ್ಯರಾಶಿ-ಗುರುತ್ವಾಕರ್ಷಣೆ, ಕಾಂತ-ಕಾಂತತ್ವ ಮುಂತಾದವು ನಿಸರ್ಗದಲ್ಲಿಯ ಅವಿನಾಸಂಬಂಧಗಳು. ಈ 'ಶುಷ್ಕ' (?) ವಿಜ್ಞಾನ ಪರಿಕಲ್ಪನೆಗಳನ್ನು ಸ್ಪಷ್ಟವಾಗಿಯೂ ಆಕರ್ಷಕವಾಗಿಯೂ ಚಿತ್ರಿಸುವಾಗ ಬೇಂದ್ರೆ ಹೇಗೆ ಪ್ರಸ್ತುತರಾಗುತ್ತಾರೆ ನೋಡಿ:

ಸೂಜಿಗಲ್ಲು ತಿರುಗುತಿತ್ತೋ ಹೊಳಿವ್ಯಾಗ
ಸೂಜಿಯೊಂದು ತೇಲುತಿತ್ತೊ ಹೊಳಿಯಾಗ

ಆಧುನಿಕ ರಸಾಯನವಿಜ್ಞಾನದ ಮೂಲ ಸೆಲೆಯನ್ನು ಪ್ರಾಚೀನರ ರಸವಿದ್ಯೆಯಲ್ಲಿ (alchemy) ಕಾಣುತ್ತೇವೆ: 'ಕೀಳು' ಲೋಹವಾದ ಸೀಸವನ್ನು 'ಮೇಲು' ಲೋಹವಾದ ಚಿನ್ನವಾಗಿ ದ್ರವ್ಯಾಂತರಿಸುವ (transmutation) ಪ್ರಯತ್ನವಿದು. ರಾಘವಾಂಕನ "ಪರುಷಸಂಗಣದ ಕಲು ಸುರಭಿ ಕರೆಹಂ" ಸಾಲಿನಲ್ಲಿ ಅಥವಾ ಸಮುದ್ರಮಥನದಿಂದ ಅಮೃತ ಪಡೆಯುವ ಕಲ್ಪನೆಯಲ್ಲಿ ಈ ಹಂಬಲ ಅಭಿವ್ಯಕ್ತವಾಗಿದೆ. ಬೇಂದ್ರೆಯವರ ಪ್ರತಿಭಾ ಮೂಸೆಯಲ್ಲಿ

ಪರಸುಗಲ್ಲಾಗಿ ಬಾ, ಜೀವಗಬ್ಬಿಣವನ್ನು
ಬಂಗಾರ ಮಾಡುವೆನು ಸೋಂಕಿ, ತಾಗಿ
ಕರಗಿಸುತ ಎರಕವನು ಹೊಯ್ಯೆ, ನಿನ್ನಲಿ,
ಚುಂಬಿಸೆನ್ನನ್ನು ಬಿಳಿಗಾವ ಬೆಂಕಿಯಾಗಿ

ಖಭೌತವಿಜ್ಞಾನಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ಎಸ್. ಚಂದ್ರಶೇಖರ್ (೧೯೧೦-೧೯೯೫) ಇವರ ಅಧ್ಯಯನ ಕೊಠಡಿಯಲ್ಲಿ ಒಂದು ಆಧುನಿಕ ಚಿತ್ರಪಟ ರಾರಾಜಿಸುತ್ತಿದೆ: ಅಮೂರ್ತಕಲೆ. ಅಜ್ಞಾತ ಭೂತದಲ್ಲಿ ನಿಂತು ಅವ್ಯಕ್ತ ಭವಿಷ್ಯಕ್ಕೆ ಅಂತು ಗೋಚರ ವರ್ತಮಾನದಲ್ಲಿ ಪ್ರಕಟವಾಗುತ್ತಿರುವ ಏಣಿ. ಇದರಲ್ಲಿ ಮೇಲೇರಲು ಪ್ರಯತ್ನಿಸುತ್ತಿರುವ ವ್ಯಕ್ತಿ. ಏಣಿಗೆ ಎದುರಾಗಿ ಇದರ ಕನ್ನಡಿ ಪ್ರತಿಬಿಂಬದಂಥ ನೆರಳೂ ಇದೆ. ನೆರಳೇಣಿಯಲ್ಲಿಯ ನೆರಳು-ವ್ಯಕ್ತಿ ತುಸು ಕೆಳಗಿನ ಪಾವಟಿಗೆಯಲ್ಲಿ ನಿಂತು ಮೇಲೇರಲು ಹವಣಿಸುತ್ತಿದೆ. ಈ ಅಮೂರ್ತ ಕಲೆಗೆ ಚಂದ್ರಶೇಖರ್ ವ್ಯಾಖ್ಯಾನ ನೀಡಿದ್ದಾರೆ: "ಅಭೀಪ್ಸೆಗಳನ್ನು ಸಾಧಿಸುವ ದಿಶೆಯಲ್ಲಿ ವ್ಯಕ್ತಿ ಪ್ರಯತ್ನಶೀಲನಾಗಿರುವಾಗ ಆತನ ಆಂತರಿಕ ತುಡಿತ

ಗಳ ಗೋಚರ ಬಿಂಬವಿದು. ಏಣಿ ಏರು ತ್ತಿರುವ ವ್ಯಕ್ತಿ ಅರೆದಾರಿ ಕ್ರಮಿಸಿರುವನು ನಿಜ. ಆದರೆ ಆತನಿಗೆ ಕಾಣುವ ಸಮಗ್ರ ರಚನೆಯ (ವಿಶ್ವದ) ಕೆಲವೇ ಸ್ಥೂಲರೇಖೆ ಗಳು—ಇವನ್ನು ಐದಬೇಕೆಂಬುದು ಆತನ ಅಭಿಲಾಷೆ—ಪೂರ್ಣವಾಗಿ ಅಗಮ್ಯ. ಏಣಿಯ ತುತ್ತ ತುದಿ ತಲಪಿದಾಗಲೂ ಇದು ನಿಜ. ವ್ಯಕ್ತಿಗೆ ತನ್ನ ಧ್ಯೇಯಗಳ ಸಾಧನೆ ಎಂದೆಂದೂ ಕೈಗೂಡದು ಎಂಬ ಅರಿವನ್ನು ಆತನ ನೆರಳು—ಇದು ಇನ್ನೂ ಕೆಳಗಿನ ಹಂತಿಯಲ್ಲಿದೆ ಎಂಬುದನ್ನು ಗಮನಿಸ ಬೇಕು—ಮತ್ತೆ ಮತ್ತೆ ಎತ್ತಿ ತೋರಿಸು ತ್ತದೆ."

ಚಂದ್ರಶೇಖರರ ಸಾನ್ನಿಧ್ಯದಲ್ಲಿ ನಾನು ಈ ಅಮೂರ್ತ ಕಲೆ ನೋಡುತ್ತಿದ್ದಾಗ ಮತ್ತು ಅವರ ವಿವರಣೆ ಆಲಿಸುತ್ತಿದ್ದಾಗ "ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾಃ" ಆ ವಿಲಾಸವಿದು :

ಜೋಲುವುದೇತಕೆ ನೇಣಿಗೆ ಗೆಳೆಯಾ?
ಏಣಿಗೆ ಇದೆ, ಹಿಡಿ ಅದರೆಳೆಯಾ
ಹಂತಿಗೆ ಹಂತಿಗೆ ಬೇರೆ ಲೋಕವಿದೆ
ಅಲ್ಲಲ್ಲಿಗೆ ನವಪಾಕವಿದೆ
ನೂರಿಗೆ ಊರದೆ, ಸಾವಿರಕೇರದೆ
ಅಲಕ್ಷವಿರುವುದು ಯಾವ ಎಡೆ?

ಉತ್ತಮ ಕಾವ್ಯದ ಒಂದು ಮುಖ್ಯ ಲಕ್ಷಣ : ಅದು ಸದಾ ಸಕಲರಿಗೂ ಪ್ರಸ್ತುತ ವಾಗಿರುತ್ತದೆ. ಎಷ್ಟರಮಟ್ಟಿಗೆ ಪ್ರಸ್ತುತ ಎನ್ನುವುದಕ್ಕೆ ಉತ್ತರ "ಅವರವರ ದರುಶ-ನಕೆ, ಅವರವರ ಭಾವಕ್ಕೆ!"

ಇಂಥ ನಿದರ್ಶನಗಳನ್ನು ಎಲ್ಲ ಸೃಜನಶೀಲ ಕವಿಗಳ ಕೃತಿಗಳಲ್ಲಿಯೂ ಗುರುತಿಸಬಹುದು —ಅರಿಯುವ ಕುತೂಹಲವಿದ್ದರೆ. ಹೀಗೇಕೆ? ಕವಿಯೂ ಒಬ್ಬ ಮನುಷ್ಯ. ಸರ್ವವಿದ್ಯಾ ಪಾರಂಗತನಾಗಿರಲಾರ. ಅಂದ ಮೇಲೆ ಆತನ ಸ್ಫೂರ್ತಿವಂತ ಉದ್ಗಾರಗಳು ವಿಜ್ಞಾನ ದಂಥ "ಶುಷ್ಕ" ಮತ್ತು "ರಸಶೂನ್ಯ" ಕ್ಷೇತ್ರದಲ್ಲಿ ಸಾಧುವಾಗುವುದು ಹೇಗೆ? ಮೂಲದಲ್ಲಿರದ ಮತ್ತು ಮೂಲದಲ್ಲಿ ಉದ್ದೇಶಿತವಾಗಿರದ ಧ್ವನಿಯನ್ನು ಓದುಗ ತನ್ನ ಕಲ್ಪನಾನುಸಾರ ಹಿಂಡುವು ದಾಗಿರಲಾರದೇ? ನನ್ನ ವಿಜ್ಞಾನ ಕೃತಿ ಗಳನ್ನು ಮರೆತುಬಿಡಿ, ಬೆಳ್ಳಾವೆ ವೆಂಕಟ ನಾರಣಪ್ಪ, ಆರ್. ಎಲ್. ನರಸಿಂಹಯ್ಯ, ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಮೊದಲಾದ ಗತ ಮಹಾಲೇಖಕರ (ಈ ಪೀಳಿಗೆಯ ಲೇಖಕರು ಕನ್ನಡದಲ್ಲಿ ವಿಜ್ಞಾನ-ವಾಙ್ಮಯ ರಚಿಸುವಾಗ ಕಾವ್ಯದಿಂದ ವಿಶೇಷ ಸ್ಫೂರ್ತಿ ಹೀರಿದ್ದರೆಂಬುದು ಅವರ ವಿಜ್ಞಾನ ಕೃತಿಗಳಲ್ಲಿ ಪ್ರಕಟ ವಾಗುತ್ತದೆ) ಸೃಜನಶೀಲ ವಿಜ್ಞಾನ ವಾಙ್ಮಯದ ಬಗೆಗೆ ಕೂಡ, "ತಜ್ಞ" ವಿಮರ್ಶ ಕರು ಈ ತೆರನಾದ ಸಂದೇಹಗಳನ್ನು ಎತ್ತುವು ದುಂಟು. "ನಕ್ಷತ್ರ ದರ್ಶನ" (೧೯೩೪) ಗ್ರಂಥದಲ್ಲಿ ಆರ್. ಎಲ್. ನರಸಿಂಹಯ್ಯ ನವರು ನಾಲ್ಕನೆಯ ಅಧ್ಯಾಯವನ್ನು "ಪರ್ವತರ್ತು ನಕ್ಷತ್ರಗಳು" ಆರಂಭಿಸುವುದು ಬೇಂದ್ರೆಯವರಿಂದಲೇ :

ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ
ಬಂತು ಬೀಡಿಗೆ ಶ್ರಾವಣಾ ಬಂತು
ಕಡಲಿಗೆ ಬಂತು ಶ್ರಾವಣಾ ಕುಣಿದ್ಹಾಂಗ
ರಾವಣಾ
ಕುಣಿದಾವ ಗಾಳಿ ಭೈರವನ ರೂಪ ತಾಳಿ

ಬೇರೆ ಬೇರೆ ಸಂದರ್ಭಗಳಲ್ಲಿ ಈ ಮೂಲಭೂತ ಪ್ರಶ್ನೆಗಳನ್ನು ನಾನು ಮುಖ್ಯವಾಗಿ ಡಿವಿಜಿ, ಕುವೆಂಪು, ಬೇಂದ್ರೆ ಮತ್ತು ಅಡಿಗರ ಜೊತೆ ಚರ್ಚಿಸಿದ್ದುಂಟು. ಅವರ ಕೃತಿಗಳಿಂದ ಅನೇಕ ಸಾಲುಗಳನ್ನು ಉದಾಹರಿಸುತ್ತ, ಅಲ್ಲಿಯ ರೂಪಕಗಳು ಹೇಗೆ ಆಧುನಿಕ ವಿಜ್ಞಾನದ ಪರಿಕಲ್ಪನೆಗಳ ಜೊತೆ ಅದ್ಭುತವಾಗಿ ಹೊಂದುವುವೆಂದು ವಿವರಿಸುತ್ತ "ನೀವು ವಿಜ್ಞಾನದ ಈ ಪರಿಕಲ್ಪನೆಗಳನ್ನು ಮೊದಲು ಪರಿಗ್ರಹಿಸಿ ಬಳಿಕ ನಿಮ್ಮ ಪ್ರತಿಭಾಮೂಸೆಯಲ್ಲಿ ಈ ತೆರನಾಗಿ ಎರಕ ಹೊಯ್ಯುದ್ದಾಗಿರಬಹುದೇ" ಎಂದು ಪ್ರಶ್ನಿಸಿದ್ದೇನೆ.

ಡಿವಿಜಿಯವರ ಉತ್ತರ ಈ ಎಲ್ಲ ಮಹಾಕವಿಗಳ ಅಭಿಪ್ರಾಯಗಳನ್ನೂ ಸೂತ್ರರೂಪದಲ್ಲಿ ಹೇಳುತ್ತದೆ: "ನಾನು ಆಧುನಿಕ ಅಥವಾ ಪ್ರಾಚೀನ ವಿಜ್ಞಾನ ಓದಿದವನಲ್ಲ. ನಿಮ್ಮ ಈ ಅಯಾಚಿತ ಮತ್ತು ಅನಿರೀಕ್ಷಿತ ವಿವರಣೆ ಮತ್ತು ಪ್ರಶ್ನೆ ನನಗೆ ಒಂದು ಅಂಶವನ್ನು ಸ್ಪಷ್ಟಪಡಿಸಿದೆ. ನಾನು ತಪ್ಪುದಾರಿ ತುಳಿದಿಲ್ಲ". ಜ್ಞಾನಮೇರುವಿಗೆ ಮಾರ್ಗ ಹಲವು. ವಿಜ್ಞಾನಿ, ಕವಿ, ದಾರ್ಶನಿಕ, ಕಲಾವಿದ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವಕ್ಕೆ ಒಪ್ಪುವ ದಾರಿ ಅರಸಿ, ಅವಶ್ಯವಾದರೆ ದಾರಿ ಕಡಿದು, ಮೇಲೆ ಮೇಲೆ ಸಾಗುತ್ತಾನೆ ಮತ್ತು ಹೀಗೆ ಏರುತ್ತಿರುವಾಗ ತಾನು ಕಂಡ ದೃಶ್ಯವನ್ನು ಯಥಾಮತಿ, ಯಥಾ ಶಕ್ತಿ ತನ್ನ ಮಾಧ್ಯಮದಲ್ಲಿ ನಿರೂಪಿಸುತ್ತಾನೆ. ಈಗ, ಯಾವುದೋ ಎತ್ತರದಿಂದ ಕವಿ ಕಂಡ ಹರವಿಗೂ, ವಿಜ್ಞಾನಿ ಕಂಡ ಹರವಿಗೂ ಸಾಮಾನ್ಯ ಪ್ರದೇಶವಿರುವುದು ಶಕ್ಯ. ಅಂಥಲ್ಲಿ ಒಬ್ಬನ ವರ್ಣನೆಯಲ್ಲಿ ಇನ್ನೊಬ್ಬ ಸಾಮ್ಯ ಗುರುತಿಸಿದರೆ ಅರ್ಥವೇನು? ಅವರು ತಪ್ಪು ದಾರಿ ತುಳಿದಿಲ್ಲ!"

ವಿಜ್ಞಾನಿ ವಾಸ್ತವತೆಯಿಂದ ಮೌಲ್ಯವನ್ನು ಬಟ್ಟಿ ಇಳಿಸುವ ಪ್ರಯೋಗಚತುರ. ಕವಿ ಈ ಮೌಲ್ಯವನ್ನು ಸಾರ್ವತ್ರೀಕರಿಸಿ ಅದಕ್ಕೆ ಸಾರ್ವಕಾಲಿಕತೆ ಆವಾಹಿಸುವ ದ್ರಷ್ಟಾರ. ಆದ್ದರಿಂದ ಮನುಕುಲಕ್ಕೆ ಗಮ್ಯವನ್ನು ಕೊಡುವಾತ ಕವಿ, ಗಮನವನ್ನು ನೀಡುವಾತ ವಿಜ್ಞಾನಿ; ಮೌಲ್ಯವನ್ನು ರೂಪಿಸುವಾತ ವಿಜ್ಞಾನಿ, ಅದನ್ನು ರಕ್ಷಿಪಿಸುವಾತ ಕವಿ. ಎಂದೇ ಬೇಂದ್ರೆಯವರ ಮಾತು "ರಸವೆ ಜನನ ವಿರಸ ಮರಣ ಸಮರಸವೆ ಜೀವನ" ಅಥವಾ ಡಿವಿಜಿಯವರ ಸೂಕ್ತಿ "ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನ ಜೀವನಕೆ" ಸದಾ ನಮಗೆ ಪ್ರಸ್ತುತ.

ಬೇಂದ್ರೆಯವರನ್ನು ಅವರ ಕಾವ್ಯ ಒದಗಿಸುವ ರಸೋಲ್ಲಾಸ ಸವಿಯಲು ಓದೋಣ, ನಮ್ಮ ನಮ್ಮ ಚಿಂತನೆಗಳಿಗೆ ಅಧಿಕ ರಸಪುಷ್ಟಿ ಊಡಲು ಹಾಡೋಣ, ನಮ್ಮ ಹೃದಯ ಸಂಸ್ಕಾರದ ಸಲುವಾಗಿ ತಿಳಿಯೋಣ—ಆದರೆ ಅಲ್ಲಿ ಜ್ಞಾನ ವಿಜ್ಞಾನ ಸರ್ವಸ್ವವೂ ಘನೀಭವಿಸಿವೆ, "ಇಲ್ಲಿಲ್ಲದುಳಿದುದೇ" ಎಂಬ ಅಂಧಭಕ್ತಿಯನ್ನು ಎಂದೂ ಪ್ರದರ್ಶಿಸದಿರೋಣ. ಬೇಂದ್ರೆಯವರ ಗಣಿತವನ್ನು ಖುದ್ದು ನಾನೇ ಅವರ ಬಾಯಿಯಿಂದ ಕೇಳಿದ್ದೇನೆ. ಈ ಬಗ್ಗೆ ಪತ್ರವ್ಯವಹಾರವೂ ನಡೆಸಿದ್ದುಂಟು. ಅವರ ಸಂಖ್ಯಾವಿಹಾರಗಳು ಆ ಮಹಾ ಸೃಜನಶೀಲಮತಿಯ ಅನ್ಯ (ಬೇಕಾದರೆ ಅನನ್ಯ ಕೂಡ) ಆಸಕ್ತಿಗಳೆಂದು ಪರಿಭಾವಿಸಿ ಬೆರಗಾಗೋಣ, ಆದರೆ

ಅವು ವಿಜ್ಞಾನದ ದೃಢ ಪ್ರಯೋಗ-ವೀಕ್ಷಣೆ ನಿಕಷೋತ್ತೀರ್ಣ ಸತ್ಯಗಳೆಂದು ಭ್ರಮಿಸದಿರೋಣ. "ಎಲ್ಲ ಬಲ್ಲವರಿಲ್ಲ." ಬೇಂದ್ರೆಯವರೂ ಮನುಷ್ಯರೇ. ಈ ಕಾರಣದಿಂದಲೇ ಅವರು ನಮಗೆ ಅಧಿಕ ಪ್ರಿಯರಾಗುತ್ತಾರೆ, ಅಧಿಕ ಸಮೀಪವರ್ತಿಗಳಾಗುತ್ತಾರೆ.

ವಿಜ್ಞಾನಪಥಿಕರಾಗಿ ತಾವು ಕಂಡ ಸತ್ಯ ಕುರಿತಂತೆ ಚಂದ್ರಶೇಖರ್ ಎರಡು ಧ್ಯೇಯ ವಾಕ್ಯಗಳನ್ನು ಬರೆದಿದ್ದಾರೆ:

The simple is the seal of the true
Beauty is the splendor of truth

ಋತದ ಪರಿಮುದ್ರೆ ಸರಳತೆ
ಸತ್ಯದ ಪ್ರಕಾಶ ಸೌಂದರ್ಯ

(ಕನ್ನಡಾನುವಾದ: ಜಿ. ಎನ್. ಚಕ್ರವರ್ತಿ)

ಬೇಂದ್ರೆಯವರ ಕಾವ್ಯ ಓದುವಾಗ ಪ್ರತಿಸಲವೂ ಮನದಲ್ಲಿ ಮಿಡಿಯುವ ಭಾವ ವಾದರೂ ಇದೇ.

---

'ಎಲ್ಲೆನ್ನದೆ ನಡೆ', ಏಕೆನ್ನದೆ ಬಾ'
ಗಾಳಿಯ ಗೂಳಿಯೆ ಇಲ್ಲಿ ಜತೆ
ಪಿಸುಮಾತಿನ ಹುಸಿ ಸಂಧಿಯ ಹಾಸಿ
ಸತ್ಯಾಲಾಪದ ಮಿಥುನಕತೆ

ಅವರವರೆದೆಯಲಿ ವರತರ ಭಾವ
ಅವರವರಿಗೆ ಇದೆ ಸಾರ್ಥಕತೆ.
ಜೋಲುವುದೇತಕೆ ನೇಣಿಗೆ ಗೆಳೆಯಾ?
ಏಣಿಗೆ ಇದೆ, ಹಿಡಿ ಅದರೆಳೆಯಾ,
ಹಂತಿಗೆ ಹಂತಿಗೆ ಬೇರೆ ಲೋಕವಿದೆ
ಅಲ್ಲಲ್ಲಿಗೆ ನವ ಪಾಕವಿದೆ
ನೂರಿಗೆ ಊರಿದೆ, ಸಾವಿರಕೇರದೆ
ಅಲಕ್ಷವಿರುವುದು ಯಾವ ಎದೆ?

(ಬಾಹತ್ತರ ಪು. ೧೦)

# ದತ್ತಾತ್ರೇಯ ರಾಮಚಂದ್ರ ಬೇಂದ್ರೆ

**ಕೆ. ಮೊಹಮದ್ ಷರೀಫ್**

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಸಾವಿರ; ಸಾವಿರದ ಕವನಗಳನ್ನು ರಚಿಸಿ 'ಸಾವಿರದ ಮನಗಳಲ್ಲಿ' ಮನೆಯ ಮಾಡಿದ ಅಮರ ಕವಿ. ಆಧುನಿಕ ಕವಿಗಳಲ್ಲಿ, ಅಗ್ರಗಣ್ಯರಲ್ಲಿ, ಒಬ್ಬರಾದ ಅವರ ಕಾವ್ಯನಾಮ 'ಅಂಬಿಕಾತನಯದತ್ತ'. ಅವರು ದಿ. ೩೧–೧–೧೮೯೬ ರಲ್ಲಿ ಧಾರವಾಡದಲ್ಲಿ ಹುಟ್ಟಿದರು. ತಂದೆ ರಾಮಚಂದ್ರಭಟ್ಟ. ತಾಯಿ ಅಂಬಕ್ಕ ಅಥವ ಅಂಬಿಕ. "ಅವರ ಜನನದ ಜೊತೆಯಲ್ಲಿಯೇ ಕನ್ನಡದ ಭಾಗ್ಯೋದಯವೂ ಬೇಂದ್ರೆ ಮನೆತನದ ಭಾಗ್ಯೋದಯವೂ ಏಕಕಾಲದಲ್ಲಿ ಆದವು"; "ಬೇಂದ್ರೆಯವರು ಕವಿಯಾಗಲೆಂದೇ ಹುಟ್ಟಿ ಬಂದವರು, ಅದಕ್ಕಾಗಿ ಬಡತನದ ಬಾಳಿನಲ್ಲೆ ಬೆಂದು ಬೆಳೆದರು", "ಬಾಳಿನಲ್ಲಿ ಬೆಂದರೆ ಮಾತ್ರ ಕವಿ ಬೇಂದ್ರೆ ಆದಾನು" ಎಂಬ ಮಾತುಗಳನ್ನು ಬೇಂದ್ರೆ ಅವರ ಬಗೆಗೆ ವಿಮರ್ಶಕರು ಹೇಳಿದ್ದಾರೆ. ಮಾಸ್ತಿಯವರ ಆಶ್ರಯವೇ ಬೇಂದ್ರೆಯವರಿಗೆ ಅಸ್ತಿತ್ವದ ಆಸ್ತಿಯಾಗಿತ್ತು. ರಾಜಾಶ್ರಯವಿಲ್ಲದ ಈ ಕವಿಗೆ ಮಿತ್ರಾಶ್ರಯವೇ ಕಾವ್ಯ ಸ್ಫೂರ್ತಿ, ಜೀವಿತಾಧಾರವೂ ಆಗಿತ್ತು.

೧೯೧೮ ರಲ್ಲಿ ಬಿ.ಎ., ಪದವಿ, ಅನಂತರ ಕೆಲಕಾಲ ಧಾರವಾಡದ ವಿಕ್ಟೋರಿಯ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿ, ೧೯೧೯ ರಲ್ಲಿ ಲಕ್ಷ್ಮೀಬಾಯಿಯೊಂದಿಗೆ ವಿವಾಹ, ಧಾರವಾಡದಲ್ಲಿ 'ಗೆಳೆಯರ ಗುಂಪು' ಎಂಬ ಸಾಹಿತ್ಯ ಸಂಘವನ್ನು ಕಟ್ಟಿ ಕಾವ್ಯವಾಚನ, ಕಾವ್ಯ ವಿಮರ್ಶೆ ಮುಂತಾದ ಸಾಹಿತ್ಯಕ ಚಟುವಟಿಕೆಗಳಿಗೆ ಚಾಲನೆ, ಜಯಕರ್ನಾಟಕ ಮುಂತಾದ ಪತ್ರಿಕೆಗಳಿಗೆ ಲೇಖನ, ಅನಂತರ ಬೇರೆ ಬೇರೆ ಕಾಲ ಹಾಗೂ ಸ್ಥಳಗಳಲ್ಲಿ ಉಪಾಧ್ಯಾಯ ವೃತ್ತಿ. ೧೯೩೫ ರಲ್ಲಿ ಎಂ.ಎ., ಪದವಿ, ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ವೃತ್ತಿ. ೧೯೫೬ ರಲ್ಲಿ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಸಾಹಿತ್ಯ ಸಲಹೆಗಾರ–ಹೀಗೆ ಅವರ ತುಂಬು ಜೀವನ ಸಾಗಿತು.

ಶ್ರೇಷ್ಠ ಕವಿಯಾಗಿ, ಶಿಕ್ಷಕರಾಗಿ, ಸರಸ ಸಹೃದಯ ಸನ್ಮಿತ್ರರಾಗಿ, ವಿದ್ಯಾರ್ಥಿಗಳ ಮೆಚ್ಚಿನ ಗುರುಗಳಾಗಿ, ಲಕ್ಷ್ಮೀಬಾಯಿಯವರ ಪ್ರೇಮದ ಪತಿಯಾಗಿ ಬೇಂದ್ರೆ ಬೆಳೆದರು. ಅವರ ಪತ್ನಿ ಸಂಸಾರದ ಯಾವ ಭಾರವನ್ನೂ ಪತಿಯ ಮೇಲೆ ಹೇರದೆ ಗಂಡ ದುಡಿದು ತಂದಷ್ಟರಲ್ಲೇ ಸರಳ ಸಂಸಾರ ಸಾಗಿಸಿದರು. "ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು" ಎಂಬ

ಭಾವ ಮಿಡಿದದ್ದು ಆಗಲೇ! ಅವರು ಯಾವುದೇ ಬಗೆಯ ಆಡಂಬರವಿಲ್ಲದೆ ಸಾದಾ ಸೀದ ಜೀವನ ನಡೆಸಿದವರು. ಅವರ ಕೌಟುಂಬಿಕ ಜೀವನ ನಲಿವಿಗಿಂತ ನೋವನ್ನೇ ಹೆಚ್ಚಾಗಿ ಪಡೆದಂತೆ ತೋರುತ್ತದೆ.

ಬೇಂದ್ರೆಯವರ ಕಾವ್ಯ ರಚನೆ ೧೯೧೬ ರಿಂದಲೇ ಪ್ರಾರಂಭವಾಯಿತು. ಕವಿಯಾಗಿಯೇ ಅವರದು ಪಾರಮ್ಯ. ಅವರ ಕಾವ್ಯ ಆಧುನಿಕ ಕಾಲದ ಮಹಾ ಸಾಧನೆಯಾಗಿದೆ. ಕನ್ನಡ ನಾಡು, ನುಡಿ ಅವರಿಂದ ಶ್ರೀಮಂತವಾಗಿದೆ. ಭುವನದ ಭಾಗ್ಯವಾಗಿ ಕನ್ನಡ ಸಾಹಿತ್ಯಕ್ಕೆ ಅವರ ಕಾವ್ಯಗಳು ಸಿಕ್ಕಿವೆ. ಅವರು ಮಾತನಾಡಿದ ಒಂದೊಂದು ಸಾಲೂ ಕಾವ್ಯ ಆಗುತ್ತಿತ್ತು. 'ಅವರ ಕಾವ್ಯವನ್ನು ಓದುವಾಗ ಕನ್ನಡ ನಾಡಿನ ಮೇರೆಗಳು, ಕರ್ನಾಟಕದ ಮರ್ಮಸ್ಥಳಗಳು. ಮತಧರ್ಮಗಳು, ತೀರ್ಥಂಕರರ ಶರಣರ ದಾಸರ ವಾಗ್ವೈಭವ ಇವು ನಮ್ಮ ಅನುಭವಕ್ಕೆ ಹೊಸಚೈತ್ಯನ್ಯ ಕೊಡುತ್ತವೆ. ಅವರು ಕನ್ನಡ ನವೋದಯ ಕಾವ್ಯಗಳ ಜನಕರು, ಆಚಾರ್ಯ ಪುರುಷ ಎಂಬ ಅಗ್ಗಳಿಕೆ ಗಳಿಸಿದವರು. ಇಂತಹವರಿಂದ ಕನ್ನಡನಾಡು ನುಡಿ ಶ್ರೀಮಂತವಾಗಿದೆ.

'ಬೇಂದ್ರೆಯವರ ಜೀವನದ ಬಹುಪಾಲು ಕವನ ರಚನೆಗೆ ಮೀಸಲಿದೆ. ಉಳಿದ ಅಲ್ಪ ಪಾಲು ನಾಟಕ, ಪ್ರಬಂಧ, ಸಣ್ಣ ಕತೆ, ಅನುವಾದ ಮುಂತಾದುವುಗಳಿಗೆ ಸಂಬಂಧಿಸಿದೆ. ಇವುಗಳೆಲ್ಲವೂ ಹೊಸಗನ್ನಡ ಸಾಹಿತ್ಯದ ಮೈಲಿಗಲ್ಲುಗಳು ; ಇವೆಲ್ಲವುಗಳಲ್ಲೂ ಬೇಂದ್ರೆ ಅವರ ಪ್ರತಿಭೆ ಮಿಂಚಿದೆ. ಜ್ಯೋತಿಷ್ಯ ಶಾಸ್ತ್ರದಲ್ಲೂ ಇವರು ಆಳವಾದ ಅನುಭವವನ್ನು ಹೊಂದಿದ್ದರು. ಇಪ್ಪತ್ತೇಳು ನಕ್ಷತ್ರಗಳಂತೆ ಇಪ್ಪತ್ತೇಳು ಸಂಗ್ರಹಗಳಲ್ಲಿ ಪ್ರಕಟವಾದ ಅವರ ಸುಮಾರು ಎರಡು ಸಾವಿರ ಕವನಗಳು, ಹತ್ತರಷ್ಟು ವಿಮರ್ಶಾ ಗ್ರಂಥಗಳು, ಹದಿನಾಲ್ಕು ನಾಟಕಗಳು ಮೂರು ಭಾಷಣ ಸಂಗ್ರಹಗಳು, ಏಳು ಅನುವಾದಿತ ಗ್ರಂಥಗಳು, ಮೂರು-ನಾಲ್ಕು ಮರಾಠಿಯಲ್ಲಿ ಬರೆದ ಗ್ರಂಥಗಳು–ಹೀಗೆ ಹಲವಾರು ೬೭ ಗ್ರಂಥಗಳು ಬೇಂದ್ರೆಯವರ ಹೆಸರಿಗಿವೆ.

ಬೇಂದ್ರೆಯವರ ಕವಿತಾವಾಚನ ಕೇಳಿದ ರಸಿಕ ಕನ್ನಡಿಗರಿಗೆ ಹಬ್ಬವೆನ್ನಿಸುತ್ತಿತ್ತು. ಅವರ ಜಾನಪದ ಧಾಟಿ ಅನೇಕ ಸಮಕಾಲೀನ ಕವಿಗಳಿಗೆ ಮಾರ್ಗದರ್ಶನ ಮಾಡಿದೆ. ಕನ್ನಡ ನಾಡಿನಲ್ಲಿ ಬೇಂದ್ರೆಯವರ ನೇರ ಪ್ರಭಾವಕ್ಕೆ ಅನೇಕ ಕವಿಗಳು ಒಳಗಾಗಿದ್ದಾರೆ. ಅವರ ಕೃತಿಗಳ ಅಭ್ಯಾಸದಿಂದ ಸ್ಫೂರ್ತಿ ಪಡೆದ ಕವಿಗಳು, ಲೇಖಕರೂ ಅಪಾರ ಸಂಖ್ಯೆಯಲ್ಲಿದ್ದಾರೆ.

ವರಕವಿ ಎಂಬ ಹೊಗಳಿಕೆಗೆ ಪಾತ್ರರಾದ ಬೇಂದ್ರೆಯವರಿಗೆ ಹಲವು ಬಗೆಯ ಸನ್ಮಾನಗಳು ಲಭಿಸಿವೆ. ೧೯೩೫ ರಲ್ಲಿ ಮುಂಬಯಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರು ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು. ೧೯೪೩ ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಕನ್ನಡ ನಾಡು ಇವರನ್ನು ಆರಿಸಿ ಗೌರವಿಸಿತು. ೧೯೫೮ ರಲ್ಲಿ ಇವರ ಅರಳು-ಮರಳು ಎಂಬ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನಿತ್ತು ಗೌರವಿಸಿತು. ೧೯೬೮ ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು. ೧೯೭೪ ರಲ್ಲಿ ಇವರು ಕೇಂದ್ರ ಸಾಹಿತ್ಯ

ಅಕಾಡೆಮಿಯ ಗೌರವ ಫೆಲೊ ಆದರು. ೧೯೬೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ೧೯೬೮ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದೆ. ಇವೆಲ್ಲಕ್ಕೂ ಮಿಗಿಲಾಗಿ ಭಾರತದ ಅತ್ಯುನ್ನತ ಸಾಹಿತ್ಯಿಕ ಗೌರವವಾದ ಜ್ಞಾನಪೀಠ ಪ್ರಶಸ್ತಿ ಇವರ 'ನಾಕು ತಂತಿ' ಕವನ ಸಂಗ್ರಹಕ್ಕೆ ೧೯೭೩ (೧೯೭೪) ರಲ್ಲಿ ಸಿಕ್ಕಿದೆ. ನಮ್ಮ ರಾಜ್ಯ ಸರ್ಕಾರ ಬೇಂದ್ರೆ ಅವರನ್ನು ಕುರಿತಂತೆ ಸಾಕ್ಷ್ಯ ಚಿತ್ರವೊಂದನ್ನು ಗಿರೀಶ ಕಾರ್ನಾಡ್‌ರವರ ನಿರ್ದೇಶನದಲ್ಲಿ ತಯಾರಿಸಿದೆ (೧೯೭೨). ಹೀಗೆ ಪ್ರಶಸ್ತಿಗಳನ್ನೂ ಗೌರವವನ್ನೂ ಪಡೆದು ಕನ್ನಡನಾಡಿಗೆ ನುಡಿಗೆ ಅವರು ಕೀರ್ತಿ ತಂದರು.

ಬೇಂದ್ರೆಯವರು ಅಪೂರ್ವ ದೇಶಪ್ರೇಮಿಗಳು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿ, ರಾಜಕೀಯ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿ ಸೆರೆಮನೆವಾಸವನ್ನು ಅನುಭವಿಸಿದವರು. ಆ ಸಂದರ್ಭದಲ್ಲಿ ಇವರು ಬರೆದ ಕೆಲವು ಕವನಗಳಲ್ಲಿ ತಮ್ಮ ತಾಯಿನಾಡಿನ ಬಗೆಗೆ ಅವರಿಗಿದ್ದ ಅದಮ್ಯ ಪ್ರೇಮ, ನಾಡುನುಡಿಗಳ ಬಗ್ಗೆ ಅವರಲ್ಲಿದ್ದ ಕಳಕಳಿ ಎದ್ದು ಕಾಣುತ್ತದೆ. ವಿದ್ಯಾರ್ಥಿದೆಸೆಯಲ್ಲಿರುವಾಗಲೇ ಬೇಂದ್ರೆ ಅವರು ಅರವಿಂದರ ಪ್ರಭಾವಕ್ಕೊಳಗಾಗಿದ್ದರು. ಈ ಪ್ರಭಾವದ ಸ್ಪಷ್ಟ ಛಾಯೆಯನ್ನು ಇವರ ಜೀವನದಲ್ಲೂ ಕಾವ್ಯದಲ್ಲೂ ಕಾಣಬಹುದು. ಜೀವನದ ಬಗ್ಗೆ ಬೇಂದ್ರೆಯವರ ಧೋರಣೆ ವಿಶಿಷ್ಟವಾದದ್ದು'— "ರಸವೇ ಜನನ, ವಿರಸ ಮರಣ, ಸಮರಸವೇ ಜೀವನ." ಎಂಬ ಆ ಮಾತುಗಳು ಅವರ ಜೀವನ ದೃಷ್ಟಿಗೆ ಕನ್ನಡಿ ಹಿಡಿದಿವೆ.

ಎಷ್ಟೋ ಸಂದರ್ಭಗಳಲ್ಲಿ ಅವರು ನೋವನ್ನು ಉಂಡು ನಲಿವನ್ನು ನಮಗೆ ಕೊಡುತ್ತಿದ್ದರು. ಜೊತೆಯವರೊಡನೆಯೂ ಇತರರೊಡನೆಯೂ ಅವರು ನಡೆದು ನುಡಿದು ನಾಡಿನ ಸಾವಿರಾರು ಮಂದಿಗೆ ಸ್ಫೂರ್ತಿಯನ್ನೂ ಸಂತೋಷವನ್ನೂ ಕೊಟ್ಟವರು. ಧಾರವಾಡದಲ್ಲಂತೂ ಸಾಹಿತ್ಯ ಸಂಸ್ಕೃತಿ ಜೀವನಗಳಲ್ಲಿ ಅವರು ಭಾಗವಹಿಸದ ಸಮಾರಂಭಗಳು ಬಡವು. ತಮ್ಮ ಮಾತುಗಳಿಂದ ಎಲ್ಲರಿಗೂ ಹುಚ್ಚು ಹಿಡಿಸುವ 'ಮೋಡಿ' ಅವರದು. ಇಂಥವರೇ ತಮ್ಮ ಜೊತೆಯಲ್ಲಿ ಮಾತನಾಡಬೇಕೆಂಬ 'ಮಡಿ' ಭಾವನೆ ಅವರಲ್ಲಿರಲಿಲ್ಲ.

ಧಾರವಾಡ–ಸಾಧನಕೇರಿ ಇವುಗಳ ಮೇಲಂತೂ ಬೇಂದ್ರೆಯವರಿಗೆ ಅಪಾರ ಪ್ರೀತಿ ಹಾಗೂ ಅಭಿಮಾನ. ಬೇಂದ್ರೆಯವರಂತಹ ವರಕವಿಗಳಿಂದ ಸಾಧನಕೇರಿಗೂ ಒಂದು ವಿಶೇಷ ಗೌರವ! 'ಸಾಧನಕೇರಿಗೆ ಬಂದರು ಬೇಂದ್ರೆ ತಿರುಗಿ ಬಂದರು' ಎಂಬ ಕವನವನ್ನು ಅವರು ಮುಂಬಯಿಯಲ್ಲಿ, ದಿನಾಂಕ ೨೬–೧೦–೧೯೮೧ ರಲ್ಲಿ ನಿಧನರಾಗುವ ಮೊದಲೇ, ಬರೆದಿದ್ದರು.

ಅವರ ಪ್ರೀತಿ, ಭಕ್ತಿ, ವಿಶ್ವಾಸ ಇಲ್ಲದ ಊರಾಗಲಿ ಸಾಹಿತಿ ವರ್ಗವಾಗಲಿ ಇಲ್ಲವೆಂದು ಹೇಳಬಹುದು. ಬೇಂದ್ರೆ ಎಂಬ ಹೆಸರು ಕನ್ನಡಿಗರ ಮನೆಮಾತಾಗಿದೆ. "ಒಬ್ಬ ಕವಿ ತನ್ನ ಜೀವಿತ ಕಾಲದಲ್ಲಿಯೇ ಜನಜೀವನದಲ್ಲಿ ಇಷ್ಟು ನಿಕಟವಾಗಿ ಬೆರೆತು ಹೋಗುವುದು ತೀರ ವಿರಳ."

ಬೇಂದ್ರೆಯವರ 'ಮಾತೆಲ್ಲ ಜ್ಯೋತಿ' ಅವರ ಅಭಿವ್ಯಕ್ತಿಯಲ್ಲಿ ಮಿಂಚು, ನುಡಿಯೆಲ್ಲ ಶುಕ್ತಿಯೊಡೆದು ಬಂದ ಮುತ್ತುಗಳು. 'ಕೈಮುಗಿದರೆ ಅರ್ಧ ಕೆಲಸ ಮುಗಿದಾಂಗ,'

'ನಾವೀಗ ಸ್ವತಂತ್ರರು. ಭಾರತ ಹಾಳಾದರೆ ನಮ್ಮಿಂದ ಹಾಳಾಗಬೇಕು.' 'ಛಿದ್ರ ಇದ್ದರೂ ಭದ್ರ ಇರಬೇಕು,' 'ಹುಟ್ಟೋದು ಸುಲಭ, ಸಾಯೋದು ಸುಲಭ, ಬದುಕೋದು ಕಷ್ಟ', '....ಒಂದನ್ನೊಂದು ತಿಂದು ಬದುಕುವುದು ಬದುಕಲ್ಲ, ಸಾವು. ಒಂದನ್ನೊಂದು ತಿಳಿದು ಬದುಕುವುದು ಬಾಳು'—ಇಂತಹ ಮೌಲ್ಯ ಭರಿತ ಅನೇಕ ಮಾತನ್ನು ಅವರು ಆಡಿದ್ದಾರೆ.

ಬೇಂದ್ರೆಯವರು 'ಕನ್ನಡ ಜನಮನದ ಮೇಲೆ ಮೋಡಿಯನ್ನು ಬೀರಿದ ಗಾರುಡಿಗರು,' 'ಕವಿಗಳಲ್ಲಿಯೇ ಹೆಚ್ಚು ಕವಿತಾ ಸಂಪನ್ನರಾದ ಕವಿ,' 'ವರಕವಿ', 'ಜಾನಪದ ಗೀತೆಗಳ ಚಕ್ರವರ್ತಿ,' 'ಶ್ರೇಷ್ಠ ಕವಿ ಮಾತ್ರವಲ್ಲ ಶ್ರೇಷ್ಠ ಜ್ಞಾನಿ', 'ಸಂಸ್ಕೃತಿ ಕರ್ನಾಟಕ ಶಿಲ್ಪಿಗಳಲ್ಲಿ ಒಬ್ಬರು', 'ಅವರು ರಾಷ್ಟ್ರೀಯ ಭಾವೈಕ್ಯದ ಸಂಕೇತ', 'ರತ್ನತ್ರಯರಲೊಬ್ಬರು.' ಹೀಗೆ ಇನ್ನು ಅನೇಕ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಪ್ರಶಂಸೆ, ಪ್ರಶಸ್ತಿ, ಇವೆಲ್ಲಕ್ಕೂ ಮೀರಿ ನಿಂತ ಮಹಾ ಚೇತನ ದ. ರಾ. ಬೇಂದ್ರೆ ಅವರು.

ಇಂದು ನಾಡಿನ ಹಲವೆಡೆಗಳಲ್ಲಿ ಬೇಂದ್ರೆ ಜನ್ಮ ಶತಮಾನೋತ್ಸವ ಕಾರ್ಯಕ್ರಮಗಳು ನಡೆಯುತ್ತಿವೆ. ಬೇಂದ್ರೆಯವರ ಸಾಹಿತ್ಯ ಸಮಸ್ತ ಕನ್ನಡಿಗರಿಗೆ ತಿಳಿಯುವವರೆಗೆ ಅವರ ಸಾಹಿತ್ಯ ಚಿಂತನ ಮಂಥನ ಕ್ರಿಯೆ ನಡೆಯಬೇಕಾಗುತ್ತದೆ.

---

ದೇಹವೊಂದು ದೇವವೀಣೆ,
ನರನರವೂ ತಂತಿ ತಾನೆ,
ಹಗಲಿರುಳೂ ನುಡಿಯುತ್ತಿಹ ಉಸಿರಾಟವೆ ಗೀತ.

ಅದಬಾರಿಸೆ ನೀ ಪ್ರವೀಣೆ
ತಾಯಿ ನಿನ್ನ ಕೈಗೆ ನಾನೆ
ಒಪ್ಪಿಸಿಕೊಂಡಿಹೆನು ಬರಲಿ ಜೀವದ ಸಂಗೀತ.

(ಬಾಹತ್ತರ ಪು, ೮೮)

# ಅಂಬಿಕಾತನಯ ದತ್ತ (ಜೀವನ ಒಂದು ನೋಟ)

ಕೆ. ಸಚ್ಚಿದಾನಂದಯ್ಯ

ಕುಣಿಯೋಣು ಬಾರ, ಕುಣಿಯೋಣು ಬಾ
ಅಕಾಗಿ, ಯಾಕಾಗಿ, ಸಾಕಾಗಿ, ಬೇಕಾಗಿ
ಕುಣಿಯೋಣು ಬಾ

ಸುಖವಿರಲಿ ದುಃಖವಿರಲಿ 'ಕುಣಿಯೋಣು ಬಾ' ಎಂದವರು

ರಸವೇ ಜನನ, ವಿರಸ ಮರಣ
ಸಮರಸವೆ ಜೀವನ

ಎಂಬ ಜೀವನ ತತ್ವವನ್ನು ಸಾರಿದವರು

ಉತ್ತರಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ

ಎಂದು ಜಗದಾದ್ಯಂತ ಚುಂಬಕ ಶಕ್ತಿ ವ್ಯಾಪಿಸಿದೆಯೆಂಬ ಸತ್ಯವನ್ನು ಕಂಡವರು.

ಇಳಿದು ಬಾ ತಾಯಿ ಇಳಿದು ಬಾ
ಹರಿಯ ಅಡಿಯಿಂದ
ಹರನ ಜಡೆಯಿಂದ
ಇಳಿದು ಬಾ ತಾಯಿ

ಎಂದು ಕರೆದವರು ವರಕವಿ ಅಂಬಿಕಾತನಯ ದತ್ತರು.

'ಅಂಬಿಕಾತನಯದತ್ತ' ಎಂದೊಡನೆ ವಾಮನಮೂರ್ತಿಯಂತೆ, ಎತ್ತರವಲ್ಲದ ಕಾಯದ ಕಚ್ಚೆಪಂಚೆ, ಕೋಟು, ಟೊಪ್ಪಿಗಳಿಂದಲಂಕೃತವಾದ ತನ್ನ ಕವಿತೆಗಳನ್ನು ಭಾವಪೂರ್ಣವಾಗಿ, ಸರಾಗವಾಗಿ ಕುಣಿ ಕುಣಿದು ವಾಚಿಸುವ 'ಬೇಂದ್ರೆ' ಮಾಸ್ತರರ ಭವ್ಯಚಿತ್ರ ಅವರನ್ನು ನೋಡಿದ್ದವರಿಗೆ ಕಣ್ಣಮುಂದೆ ಬಂದು ನಿಲ್ಲದಿರಲಾರದು. ಕನ್ನಡ ಸಾಹಿತ್ಯಾಭ್ಯಾಸಿಗಳು ಕನ್ನಡ ಕಾವ್ಯಾರಾಧಕರು ಅವರ ಕಾವ್ಯ ರಸಾಸ್ವಾದನೆಯಿಂದ ಅವರ ವ್ಯಕ್ತಿತ್ವವನ್ನು ಕಾಣದಿರಲಾರರು. ಅವರ ಭೌತಿಕಶರೀರ ಇಂದು ನಮ್ಮ ಮುಂದಿಲ್ಲ. ನಾವಿಂದು ಅವರನ್ನು ಕಾಣಲಾರೆವು—"ಹೋದವರು ತಿರುಗಿ ಬಂದಾರೆ? ಬರಲಿಕ್ಕ ಇಲ್ಲ-ಸಾಕು" ಎಂದು ಅವರೇ ಹಾಡಿದಂತೆ ಅವರೇನೋ ಬರಲಾರರು—ಆದರೆ ಅವರ ಕಾವ್ಯಸುಧೆಯನ್ನು ಸವಿದವರಿಗೆ 'ಅವರಿಲ್ಲ'ವೆಂಬ ಭಾವನೆಯೇ ಬರಲಾರದಲ್ಲವೆ?

'ಅಂಬಿಕಾತನಯದತ್ತ'ನೇ ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ದತ್ತಾತ್ರೇಯ ಎಂಬುದು ತಂದೆ 'ರಾಮಚಂದ್ರ'ರು ಮಾಡಿದ ನಾಮಕರಣ. ಬೇಂದ್ರೆ ಎಂಬುದು ಕುಲನಾಮ. ಮನೆತನದ ಹೆಸರು. ಹಾಗಾಗಿ ಅವರು ವ್ಯವಹಾರದಲ್ಲಿ ದತ್ತಾತ್ರೇಯ ರಾಮಚಂದ್ರಬೇಂದ್ರೆ. ಆದರೆ ಕಾವ್ಯದಲ್ಲವರು 'ಅಂಬಿಕಾತನಯದತ್ತ'. ಈ ನಾಮಕರಣ ಬೇರಾರದೂ ಅಲ್ಲ. ಅವರದೇ.

ಅಂಬಿಕೆಯೆಂಬುದು ಜಗದ ತಾಯಿಯಾದ ಪಾರ್ವತಿಯ ಹೆಸರು. ಅವಳ ಮಗ ದತ್ತಾತ್ರೇಯ, ಹಾಗೆಯೇ ಈ ಬೇಂದ್ರೆಯವರ ತಾಯಿಯ ಹೆಸರು ಅಂಬವ್ವ ಆ ಅಂಬವ್ವನ ತನಯ ದತ್ತ ಈ 'ಅಂಬಿಕಾತನಯದತ್ತ', ತಂದೆಯ ಹೆಸರು ಸೇರುವಂತೆ ತಾಯಿಯ ಹೆಸರೂ ಮಕ್ಕಳಿಗೆ ಸೇರಬೇಕಲ್ಲವೆ? ತಾಯಿಯ ಅಕ್ಕರೆಯ ಕರೆಯ ಹೆಸರು ಮಗನಿಗಾಗಬೇಕಲ್ಲವೆ? ಈ ಕಾರಣಗಳಿಂದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು 'ಅಂಬಿಕಾತನಯದತ್ತ'ನೂ ಆದರು. ಅದೇ ಹೆಸರು ಕನ್ನಡ ಕಾವ್ಯ ಜಗತ್ತಿನಲ್ಲಿ ಅಮರವಾಯಿತು.

'ನಾನು' ಎಂಬ ಅವರೊಂದು ಕವಿತೆ ಅವರ ಹೆಸರಿಗೆ ಅರ್ಥ ನೀಡುತ್ತದೆ. ವಿಶ್ವಮಾತೆ, ಜಗನ್ಮಾತೆ, ರಾಷ್ಟ್ರಮಾತೆ, ರಾಜ್ಯಮಾತೆ ಮತ್ತು ಜನ್ಮದಾತೆ ಈ ಐದು 'ಐದೆ'ಯರೆ ಪಂಚಪ್ರಾಣಗಳಾಗಿ ಈ ಜೀವದೇಹನಿಹನು ಅಂದರೆ ಈ ಐದು ತಾಯಂದಿರ ತನಯ. ಅಂಬಿಕೆಯರ ತನಯ, 'ಹೃದಯಾರವಿಂದದಲ್ಲಿರುವ ನಾರಾಯಣನೆ ದತ್ತ ನರನಾಗಿ' ಪರಿಣಮಿಸಿದ. ಇವನ ಕೆಲಸವೆಂದರೆ 'ವಿಶ್ವದೊಳು ನುಡಿಯನ್ನು ಕನ್ನಡಿಸುತಿಹುದು', ಹೀಗಾಗಿ 'ಅಂಬಿಕಾತನಯದತ್ತ' ನೆನಿಸಿದರಂತೆ ಬೇಂದ್ರೆಯವರು.

ಸಾವಿರ ಸಾವಿರ ಜನ ಅವರನ್ನು ಅಂತೆಯೇ ಕರೆದರು. ಕೊಂಡಾಡಿದರು.

ಇಂಥ ಕವಿ–ಜಗದಕವಿಯೂ ಅಹುದು ಯುಗದ ಕವಿಯೂ ಅಹುದು. ಅವರ ಜೀವನವೇ ಒಂದು ಮಹಾಕಾವ್ಯ. ಸುಖದುಃಖಗಳಿಂದ ಕೂಡಿದ್ದು ನಗೆ ಹೊಗೆಗಳಿಂದ ಆವರಿಸಿದ್ದು. ಕಷ್ಟ ಸಂಕಟಗಳ ಆಗರವಾದದ್ದು. ಅದಕ್ಕಾಗಿಯೇ ಅವರು—

'ಎನ್ನ ಪಾಡೆನಗಿರಲಿ, ನನ್ನ ಹಾಡನ್ನಿಷ್ಟೇ ಕೇಳಿರೊರಸಿಕಾ'—ಎಂದೂ ಹೇಳಿದ್ದಾರೆ. ಅವರ ಎಂಬತ್ತಾರು ವರುಷಗಳ ಜೀವನ ಒಂದು ಬಗೆಯಲ್ಲಿ ಗಂಗಾವತರಣ. ಹರಿಯ ಅಡಿಯಿಂದ ಹರನ ಜಡೆಗೆ ಧುಮ್ಮಿಕ್ಕಿ ನೂರಾರು ಮೈಲಿಗಳ ಪಯಣ ಮಾಡಿ ಗಂಗೆ ಕೊನೆಗೆ ಸಾಗರ ಸೇರಿದಳು. ಆ ಗಂಗೆಯನ್ನು ಅಲ್ಲಿಂದ ಇಲ್ಲಿಯವರೆಗೆ ಕಂಡವರು ಕೆಲವರೇ. ಅಲ್ಲಲ್ಲಿ ನೋಡಿದವರು, ಅಲ್ಲಲ್ಲಿ ಮಿಂದವರು ಹಲವರು. ಅಂತೆಯೇ ಬೇಂದ್ರೆಯವರ ಜೀವನದ—ಕಾವ್ಯಗಳ ಆಳ ವಿಸ್ತಾರಗಳನ್ನು ಕಂಡವರು ಕೆಲವರೇ ಇರಬಹುದೆಂದು ತೋರುತ್ತದೆ.

ಬೇಂದ್ರೆ ಮನೆತನದವರು ಮರಾಠಿಗರು ರತ್ನಗಿರಿ ಜಿಲ್ಲೆಯ 'ಕೇಳಶಿ' (ನಾಸಿಕ) ಎಂಬುದು ಅವರ ಪೂರ್ವಜರ ಆವಾಸವಾಗಿತ್ತಂತೆ. ವೇದಪಾಠಕರಾದ ಅವರ ಆರಾಧ್ಯ ದೇವತೆ ಗಣಪತಿಯು 'ನೀವು ಕರ್ನಾಟಕಕ್ಕೆ ಹೋಗಿ' ಎಂದು ಸ್ವಪ್ನದಲ್ಲಿ ಹೇಳಿದುದರಿಂದ ಇತ್ತ ಬಂದರಂತೆ. ಶಿರಹಟ್ಟಿಯಲ್ಲಿ ನೆಲೆಯೂರಿದರು. ಬೇಂದ್ರೆಯವರ ಹಿರಿಯರು ತಪಸ್ಸಂಪನ್ನರು–ಸಾಹಿತ್ಯ ಪ್ರೇಮಿಗಳು ಆಗಿದ್ದರಂತೆ. ಆ ಮನೆತನದ ಅಪ್ಪಾಭಟರ ಎಂಟನೆಯ ಮಗ ರಾಮಚಂದ್ರರೇ ಬೇಂದ್ರೆಯವರ ತಂದೆ. ಅವರ ಎರಡನೆಯ ಹೆಂಡತಿ ಅಂಬವ್ವ ಬೇಂದ್ರೆಯವರ ತಾಯಿ.

ಅಂಬವ್ವ ತಲವಾಯಿಯ ಕೃಷ್ಣಾಜಿಪಂತ ಮತ್ತು ಗೋದೂಬಾಯಿಯ ಹದಿನೇಳನೆಯ ಮಗಳು. ಗೋದೂಬಾಯಿ ಪಡೆದ ಹದಿನೇಳು ಮಕ್ಕಳೂ ಹೆಣ್ಣು ಮಕ್ಕಳೇ. ಅಂಬವ್ವ ಬಸಿರಿನಲ್ಲಿರುವಾಗಲೇ ಗೋದೂಬಾಯಿ ಗಂಡನನ್ನು ಕಳೆದುಕೊಂಡಿ

ದ್ದರು. ಅಂಬವ್ವ ತನ್ನ ತಂದೆಯನ್ನು ನೋಡಲೇ ಇಲ್ಲ. ಗೋದೂಬಾಯಿ ಪಡೆದ ಮಕ್ಕಳಲ್ಲಿ ಕೊನೆಗೆ ಉಳಿದದ್ದು ಅಂಬವ್ವ ಸೇರಿ ಮೂವರು ಮಾತ್ರ. ಬಡತನದಿಂದ ತತ್ತರಿಸುತ್ತಿದ್ದ ಗೋದೂಬಾಯಿ ಮಕ್ಕಳನ್ನು ಸಾಕುವಲ್ಲಿ ವಿಫಲರಾಗಲಿಲ್ಲ. ತಲವಾಯಿಯಿಂದ ಧಾರವಾಡಕ್ಕೆ ಬಂದು ಅಲ್ಲಿ ಖಾನಾವಳಿಯೊಂದನ್ನು ತೆರೆದು ಜೀವನ ಸಾಗಿಸಿದರು. ಹೆಣ್ಣು ಮಕ್ಕಳಿಗೆ ಸರಿಯಾದ ಸಮಯದಲ್ಲಿ ಮದುವೆ ಮಾಡಿಕೊಟ್ಟರು.

ಆ ಸಾಹಸಿ ತಾಯಿ ಗೋದೂಬಾಯಿಯ ಮಗಳು ಅಂಬವ್ವ. ಆ ತಾಯಿಯಂತೆ ಗೊಂದವಲೇಕರ ಬ್ರಹ್ಮಚೈತನ್ಯ ಮಹಾರಾಜರ ಭಕ್ತೆ, ನಿಷ್ಠಾವಂತೆ. ದೈವ ಕೃಪೆಯಿಂದಲೇ ೩೧-೧-೧೮೯೬ ರಂದು ಆ ತಾಯಿ ದತ್ತಾತ್ರೇಯನಿಗೆ ಜನ್ಮವಿತ್ತರು. ಈ ಮಗುವಿನ ಜನನ ತಾಯಿಗೆ ಮಾತ್ರವಲ್ಲ ಅಜ್ಜಿ ಗೋದೂಬಾಯಿಗೆ ಅತ್ಯಂತ ಸಂತೋಷವನ್ನುಂಟು ಮಾಡಿತಂತೆ ತಾನು ಗಂಡು ಮಕ್ಕಳನ್ನೆ ಕಾಣದೆ ಹೋದರೂ ಮಗಳಿಗಾದರೂ ಮಗನಾದನಲ್ಲ ಎಂಬ ಸಂತೋಷ.

ಗೋದೂಬಾಯಿಯ ಇಬ್ಬರು ಹೆಣ್ಣು ಮಕ್ಕಳೂ ಕಾಲವಶರಾದರು. ಉಳಿದದ್ದು ಅಂಬವ್ವ ಮಾತ್ರ. ಆದ್ದರಿಂದ ಅಂಬವ್ವ ಮತ್ತು ಆಕೆಯ ಮಗು ಎಂದರೆ ಆಕೆಗೆ ಸರ್ವಸ್ವ.

ದತ್ತಾತ್ರೇಯನಿಗೆ ಹನ್ನೆರಡು ವರ್ಷವಾಗುವಾಗಲೇ ತಂದೆ ರಾಮಚಂದ್ರರು ಇಹಲೋಕವನ್ನು ತ್ಯಜಿಸಿದರು. ಆಗ ಅಂಬವ್ವ ನಾಲ್ವರು ಗಂಡುಮಕ್ಕಳಿಗೆ ಜನ್ಮವಿತ್ತಿದ್ದರಾದರೂ ಅದರಲ್ಲಿ ಉಳಿದವರು ಇಬ್ಬರೇ. ದತ್ತಾತ್ರೇಯ ಮತ್ತು ಕೃಷ್ಣ. ಅಂಬವ್ವ ಮಕ್ಕಳೊಂದಿಗೆ ತಾಯಿ ಮನೆಯಲ್ಲೇ ಉಳಿಯಬೇಕಾಯಿತು.

ಬೇಂದ್ರೆಯವರಿಗೆ ತಂದೆ ತಾತಂದಿರಿಂದ ವಂಶಗತವಾಗಿ ವಿದ್ವತ್ತು ಬಂದಿದ್ದರೆ. ತಾಯಿಯಿಂದ ಶ್ರದ್ಧಾ ಭಕ್ತಿಗಳು-ಅಜ್ಜಿಯಿಂದ ಆತ್ಮಾಭಿಮಾನ, ಕೆಚ್ಚೆದೆ ಹಾಗೂ ಹಠವಾದಿತನ ಕೈಗೂಡಿತ್ತು. ತಾಯಿ ಅಂಬಕ್ಕ ಪುರಾಣ ಕತೆ ಹೇಳುತ್ತಿದ್ದರು, ಸಾಧು ಸಂತರ ಮಹಾಪುರುಷರ ಚರಿತ್ರೆಗಳನ್ನು ವಿವರಿಸುತ್ತಿದ್ದರು. ದೈವನಿಷ್ಠೆ, ಆಚಾರ ಸಂಪನ್ನತೆ ತಾಯಿಯಿಂದ ಉಡುಗೊರೆಯಾಗಿ ಬಂತು ಬೇಂದ್ರೆಯವರಿಗೆ. ಅಜ್ಜಿ ಗೋದುಬಾಯಿಯ ಶಿಸ್ತು, ಕಾರ್ಯತತ್ಪರತೆ, ಸಾಹಸ ಬೇಂದ್ರೆಯವರ ವ್ಯಕ್ತಿತ್ವವನ್ನು ರೂಪಿಸಿತು, ಎಳವೆಯಲ್ಲೆ ಬೇಂದ್ರೆ ಭಾವಜೀವಿಯಾಗಿ ಸುತ್ತೆಲ್ಲ ಕಣ್ಣಾಡಿಸಿ, ಒಳಗನ್ನು ತಿಳಿಯುವ ಜಾಣರಾಗಿದ್ದರು.

ಜನಪದಗೀತೆಗಳತ್ತ ಬೇಂದ್ರೆಯವರ ಒಲವು ಬಾಲ್ಯದಲ್ಲೇ ಹರಿದಿತ್ತು. ಹಾಡು ಕೇಳುತ್ತ ಕುಳಿತರೆ ಪ್ರಪಂಚವೇ ಮರೆತು ಹೋಗುತ್ತಿತ್ತಂತೆ ಶಾಲೆಗೆ ಹೋಗುವಾಗಲೇ ಕರಡಿ ಕುಣಿತ, ಮಂಗಾಟ, ಕೌಲೆತ್ತು ಮುಂತಾದುವು ನಡೆಯುತ್ತಿದ್ದರೆ ಬಾಲಕ ದತ್ತನಿಗೆ ಅಲ್ಲಿಂದ ಏಳಲು ಮನಸ್ಸಿಲ್ಲ.

ಕಬ್ಬಿಣ ಕೈಕಡಗ, ಕುಣಿಕೋಲು ಕೂದಲು
ಕಂಬಳಿ ಹೊದ್ದಾಂವ ಬಂದಾನ
ಗುಣುಗುಣು ಗುಟ್ಟುತ ಕಡಗವ ಕುಟ್ಟುತ
ಕರಡಿಯು ನಾಡಿಸುತ ನಿಂದಾನ

ಯಾವ ಕಾಡಡವಿಯುಲಿ ಜೇನುಂಡು ಬೆಳೆದಿದ್ದ
ಜಾಂಬುವಂತನ ಹಿಡಿದು ತಂದಾನ
ಧಣಿಯರ ಮನಿಮುಂದೆ ಕಾವಲು ಮಾಡಣ್ಣ
ಧಣಿದಾನ ಕೊಡುವನು ಅಂದಾನ

ಈ 'ಕರಡಿ ಕುಣಿತ' ಹಾಡು ಅವರ ಪ್ರತ್ಯಕ್ಷ ದರ್ಶನದ ಫಲವೇ—ಹೀಗೆ ಆಟಗಳನ್ನು ನೋಡುತ್ತ ಶಾಲೆ ಬಿಡುವ ಹೊತ್ತಿಗೆ ಶಾಲೆಗಳಿಗೆ ತಲಪುತ್ತಿದ್ದುದು ಇತ್ತಂತೆ.

ತಂದೆಯನ್ನು ಕಳೆದುಕೊಂಡ ಮಗ, ಬೇಗನೆ ಒಳ್ಳೆಯ ವಿದ್ಯಾವಂತನಾಗಿ ಬಾಳಿಗಾಸರೆಯಾಗಿ ಬದುಕಬೇಕೆಂಬುದು ಅಜ್ಜಿ–ತಾಯಿಯರ ಆಸೆ. ಗೋದೂಬಾಯಿಗೆ ಮುಪ್ಪಿನ ವ್ಯಥೆಯಾದರೆ, ಅಂಬಕ್ಕನಿಗೆ ಬಡತನದ ಸಂಕಟ. ಬಾಲಕ ಬೇಂದ್ರೆಗೆ ಶಾಲೆಯ ವಿದ್ಯೆಯಲ್ಲಿ ಉದಾಸೀನ. ಜನಪದ ಗೀತೆಗಳನ್ನು ಹಾಡಿಕೊಳ್ಳುತ್ತ, ಆಟ ನೋಡುತ್ತ ನಿಲ್ಲುವುದು ಹಿತಕರ.

ಬಾಲ್ಯದಲ್ಲಿ ಬೇಂದ್ರೆಯವರಿಗೆ ದೊರೆಯುತ್ತಿದ್ದ ಸಹವಾಸವೆಂದರೆ ಖಾನಾವಳಿಗೆ ಬರುವ ಹತ್ತಾರು ಜನರದ್ದು. ನಿಷ್ಠೆಯುಳ್ಳ ಗೋದೂಬಾಯಿಯ ಖಾನಾವಳಿಗೆ ಬರುತ್ತಿದ್ದವರೆಂದರೆ ಹೆಚ್ಚಿನವರು ಶಿಕ್ಷಕರು; ಬುದ್ಧಿಜೀವಿಗಳು, ಗೊಂದವಲೇಕರರ ಭಕ್ತರು. ಇವರೆಲ್ಲರಿಂದ ಬಾಲಕ ಬೇಂದ್ರೆ ಬಹಳಷ್ಟು ಕಲಿತರು. ಆದರೆ ಅವರ ಮಾರ್ಗವೇ ಬೇರೆ. ಯಾರನ್ನೂ ಅನುಸರಿಸಲಿಲ್ಲ, ಅನುಕರಿಸಲಿಲ್ಲ. ಅಂತರಂಗದ ಜ್ಯೋತಿಯೇ ಅವರಿಗೆ ಮುಖ್ಯವಾಗಿತ್ತಂತೆ. ತನ್ನ ತಮ್ಮ ಚಿದಂಬರ ಸಾಯುವಾಗ ಅವನ ದೇಹದಿಂದ ಜ್ಯೋತಿಯೊಂದು ಹೋದಂತೆ ಕಂಡಿತಂತೆ ಬಾಲಕ ಬೇಂದ್ರೆಗೆ. ಅದೇ ಅವರಿಗಾದ ಮೊದಲ ಅಂತರಂಗ ದರ್ಶನ. ಯಾವ ಶಿಕ್ಷಕರಿರಲಿ, ಯಾವ ಹಿರಿಯರೇ ಇರಲಿ, ಪಂಡಿತೋತ್ತಮರಾಗಿರಲಿ ಬೇಂದ್ರೆಯವರು ಅವರಿಗೆ ಶರಣಾಗರು. ತನ್ನದೇ ಪಂಥ, ತನ್ನದೇ ನೀತಿ. ತಾಯಿಯೊಬ್ಬರು ಮಾತ್ರ ಆರಾಧ್ಯ ದೇವತೆ. ಆಕೆಯ ಮನ ನೋಯಬಾರದು. ಆಕೆಯ ಮಾತು ತಪ್ಪಬಾರದು.

ತಂದೆಯ ಮರಣದ ಬಳಿಕ ತಾಯಿಯ ಮಾತೇ ಅವರಿಗೆ ವೇದವಾಕ್ಯ. ಆಕೆಗಾಗಿ ಗ್ರಂಥಾಲಯದಿಂದ ಪುಸ್ತಕಗಳನ್ನು ತಂದರು, ಓದಿ ಹೇಳಿದರು. ಶಾಲೆಯಲ್ಲಿ ಚುರುಕಿಲ್ಲದ ವಿದ್ಯಾರ್ಥಿ ತಾಯಿಗೆ ಪುರಾಣ ಪುಣ್ಯಕಥೆಗಳ ಪ್ರವಚನದಲ್ಲಿ ಎತ್ತಿದ ಕೈ.

ಬಾಲಕ ಬೇಂದ್ರೆಗೆ ಗೋದೂಬಾಯಿಯಿಂದಲೇ ಹಠಸಾಧನೆ ವರವಾಗಿ ಬಂದಿತ್ತೋ! ಏನೋ ಎಂತಹ ಕಷ್ಟ ಬಂದರೂ ಇದಿರಿಸಿ ನಿಲ್ಲುವ ಕೆಚ್ಚು ಅವರದು. ಹೇಡಿಯಾಗಬಾರದು, ಯಾರಿಗೂ ವ್ಯರ್ಥ ಶರಣಾಗಬಾರದು. ಎಂಬುದೇ ಅವರ ದೃಢನಿರ್ಧಾರ. ಅದೊಂದು ದಿನ, ಬಾಲಕ ಬೇಂದ್ರೆ ರಾಘವನೊಂದಿಗೆ (ತಮ್ಮ) ಎಲ್ಲೋ ಹೋಗಿದ್ದರಂತೆ. ಮಾತುಕತೆಗಳಿಂದಾಗಿ ಹೊತ್ತಾಯಿತು, ವೇಳೆ ಮೀರಿತು. ಅಜ್ಜಿ ಗೋದೂಬಾಯಿಯ ಶಿಸ್ತಿಗೆ ಸವಾಲಾಯಿತು. ಆಕೆ ನಿರ್ದಾಕ್ಷಿಣ್ಯವಾಗಿ ಅವರಿಬ್ಬರನ್ನೂ ಹೊರಗಟ್ಟಿ ಬಿಟ್ಟಳಂತೆ. ಅನ್ನ ಹಾಕುವುದಿಲ್ಲ ಎಂದಳಂತೆ. ತಾಯಿ ಅಂಬಕ್ಕನೂ ಮಾತಾಡಲಿಲ್ಲ. ಬಾಲಕ ಬೇಂದ್ರೆ ಕಣ್ಣೀರು ಹಾಕಲಿಲ್ಲ. ತಲೆಬಾಗಲಿಲ್ಲ. ಗೋಗರೆಯಲಿಲ್ಲ. ಶಿಕ್ಷೆಯಾದರೂ ಸಿದ್ಧ. ತಮ್ಮ ಮಾತ್ರ ಹಸಿದಿದ್ದ. ಆದರೂ ಈ ಅಣ್ಣ ಅವನ ಕೈ ಹಿಡಿದುಕೊಂಡು ಹೊರಟೇ ಹೊರಟ. ಎಲ್ಲಿಗೆ? ತಿನ್ನುವುದೇನನ್ನು? ನೀರೇ ಗತಿ! ಅವರ ಪುಣ್ಯವೋ ಏನೋ ಆಲೂರು ವೆಂಕಟರಾಯರ ರಾಷ್ಟ್ರೀಯ ಶಾಲೆಯ

ಆರಂಭದ ಸಮಾರಂಭ ನಡೆದಿತ್ತಂತೆ. ಈ ಅಣ್ಣ-ತಮ್ಮ ಅಲ್ಲಿಗೆ ಹೋದರು. ಅಲ್ಲಿ ಭಾಷಣಕಾರರೊಬ್ಬರು. ಭಾಷಣ ಮಾಡುತ್ತ ಕಥೆಯೊಂದನ್ನು ಹೇಳಿ ಅದನ್ನು ಯಾರು ಸರಿಯಾಗಿ ಮತ್ತೆ ಹೇಳುವರೋ ಪುನರಾವರ್ತಿಸುವರೋ ಅವರಿಗೆ ಎರಡು ದುಡ್ಡು ಬಹುಮಾನ ಎಂದರು. ಬೇಂದ್ರೆಗೆ ಅವಕಾಶ ದೊರಕಿತು. ಎದ್ದರು ವೇದಿಕೆಯನ್ನೇರಿ ಕಥೆಯನ್ನು ಚಾಚೂ ತಪ್ಪದೆ ಹೇಳಿದರು. ಹಿರಿಯರ ಹೊಗಳಿಕೆಯ ಜತೆಗೆ ಎರಡು ದುಡ್ಡು ಬಹುಮಾನ ಸಿಕ್ಕಿತು. ತಮ್ಮನ ಹಸಿವೆಗೆ ಸಾಕಷ್ಟು ಆಯಿತೆಂದುಕೊಂಡು ಹೊರ ಬಂದರು. ಪುರಿ - ಕೊಬ್ಬರಿ - ಬೆಲ್ಲ ಕೊಂಡುಕೊಂಡು ತಮ್ಮನಿಗೆ ತಿನ್ನಿಸಿದರು. ರಾತ್ರಿ ಹತ್ತು ಗಂಟೆಯವರೆಗೂ ಅಲೆದು ನಿದ್ದೆ ಬಂದಾಗ ವೀರಭದ್ರನ ದೇವಾಲಯದಲ್ಲಿ ಆಶ್ರಯ ಪಡೆದರು. ಕೊನೆಗೂ ಗೋದೂಬಾಯಿಯೇ ಸೋಲಬೇಕಾಯಿತು. ಇಂತಹ ಛಲವನ್ನು ಅವರು ಜೀವನದುದ್ದಕ್ಕೂ ಉಳಿಸಿಕೊಂಡರು. ತುತ್ತಿಲ್ಲದಿದ್ದರೂ ಸುತ್ತಲಿನ ಜನರ ಹತ್ತಿರ ಅಂಗಲಾಚಲಿಲ್ಲ. ಹಲ್ಲು ಕಿರಿಯಲಿಲ್ಲ.

'ಅದರದರ ಕಾಲಕ್ಕೆ ಅದರದರ ಫಲ ವಹುದು.' ಬೇಂದ್ರೆಯವರು ಮೆಟ್ರಿಕ್ ಪಾಸಾದ ಸಂತೋಷವನ್ನನುಭವಿಸುತ್ತಿದ್ದಂತೆ ಗೋದೂಬಾಯಿಯ ಮರಣದ ಕೊರಗೂ ಅವರನ್ನು ಹಿಂಡಿತು. ಧೈರ್ಯ ಉತ್ಸಾಹ, ಸಾಹಸಗಳ ಆಗರವಾಗಿದ್ದ ಗೋದೂಬಾಯಿಯ ಮರಣ-ಬೇಂದ್ರೆಯ ಬಳಗಕ್ಕೆಆಶ್ರಯ ನೀಡಿದ ಆಲದ ಮರ ಉರುಳಿ ಬಿದ್ದಂತಾಯಿತು. ಗಂಡನನ್ನು, ಇಬ್ಬರು ಮಕ್ಕಳನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲಿ ಜೀವನ ಸಾಗಿಸುತ್ತಿದ್ದ ಅಂಬಕ್ಕನಿಗೆ ಗೋದೂಬಾಯಿಯ ಸಾವು ಬರಸಿಡಿಲೆರಗಿದಂತಾಯಿತು. ೧೭ ವರ್ಷ ವಯಸ್ಸಿನ ಬೇಂದ್ರೆ ಸಂಸಾರದ ನೊಗಕ್ಕೆ ಹೆಗಲೊಡ್ಡಲೇಬೇಕಾಯಿತು. ಅವರು ಯೋಚಿಸಿದರು. ಪುಣೆಯಲ್ಲಿದ್ದ ಕಕ್ಕ (ಚಿಕ್ಕಪ್ಪ)ನ ನೆನಪು ಬಂತು–ಅವರಿಗೆ ಪತ್ರ ಬರೆದರು. ವಿಶಾಲ ಹೃದಯದ ಆತ ತನ್ನಣ್ಣನ ಸಂಸಾರವನ್ನು ಬರಮಾಡಿಕೊಂಡರು.

ಹದಿನೇಳು ವರ್ಷಗಳ ಕಾಲ ಬಾಳಿದ ನೆಲ, ಧಾರವಾಡವನ್ನು ಬೇಂದ್ರೆ ಕೆಲ ಕಾಲಕ್ಕೆ ತೊರೆದರು. ಯಾವ ಊರಾದರೇನು?

ಇಕೋ ನೆಲ ಅಕೋ ಜಲ
    ಅದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
    ಬೆಳೆವಗೆ ನೆಲವೆಲ್ಲ ಹೊಲ
ಜಲಧಿವರೆಗು ಹಿಂದೆ ಕುಲ
    ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ
    ಇದೇ ಶೀಲ ಸರ್ವಕಾಲ

ನಾಲ್ಕು ವರ್ಷ (೧೯೧೪–೧೮) ಪುಣೆಯ ಜೀವನ ಕನ್ನಡದ ಚಿಣ್ಣನಿಗೆ ಅಲ್ಲಿ ಮರಾಠಿ ವಾತಾವರಣ. ಆದರೆ ಬೇಂದ್ರೆ ಕಲಿತದ್ದು ಅಲ್ಲಿಯೂ ಕನ್ನಡವನ್ನೇ. ಇತರ ಭಾಷೆಯನ್ನು ಬಿಡಲಿಲ್ಲ. ಮರಾಠಿ ಪುಸ್ತಕಗಳನ್ನು ತಂದು ತಾಯಿಗೆ ಓದಿ ಹೇಳಿದರು. ಸಂಸ್ಕೃತದ ಕಾಳಿದಾಸಾದಿಗಳ ಗ್ರಂಥ ಅಭ್ಯಾಸ ಮಾಡಿದರು. ಇಂಗ್ಲಿಷಿನ ಶೇಕ್ಸ್‌ಪಿಯರ್, ಶೆಲ್ಲಿ, ಕೀಟ್ಸ್ ಮೊದಲಾದವರ ಸಾಹಿತ್ಯ

ಅಧ್ಯಯನ ಮಾಡಿದರು. ಶಂಕರಾಚಾರ್ಯರ ಸೌಂದರ್ಯಲಹರಿ, ಜಗನ್ನಾಥ ಪಂಡಿತನ ಗಂಗಾಲಹರಿ, ಜ್ಞಾನೇಶ್ವರರ ಜ್ಞಾನೇಶ್ವರಿ, ತಿಲಕರ ಗೀತಾ ರಹಸ್ಯ ಅವರ ನೆಚ್ಚಿನ ಗ್ರಂಥಗಳಾದುವು.

ಬೇಂದ್ರೆಯವರ ಮರಾಠಿ ಸಹಪಾಠಿಗಳೂ ಅವರನ್ನು ಕನ್ನಡಿಗನೆಂದು ದೂರವಿರಿಸಲಿಲ್ಲ. ಬೇಂದ್ರೆಯ ಮಾತಿನ ಮೋಡಿಗೆ ಮರುಳಾದರು. ಮರಾಠಿಯಲ್ಲಿ ನಿರರ್ಗಳವಾಗಿ ಸಂಭಾಷಿಸುತ್ತಿದ್ದ ಅವರ ಭಾಷಣ ಸ್ನೇಹಿತರನ್ನು ಹೆಚ್ಚು ಮಾಡಿತು. ಪಂಪ, ಕುಮಾರವ್ಯಾಸ, ಲಕ್ಷ್ಮೀಶರನ್ನು ಮರಾಠಿಗರಿಗೆ ಪರಿಚಯ ಮಾಡಿಸಿ ಅಲ್ಲಿಯೂ ಸ್ನೇಹದ ಕೇಂದ್ರ ಬಿಂದುವಾದರು. 'ಶಾರದಾ ಮಂಡಲಿ' ಎಂಬ ಗೆಳೆಯರ ಕೂಟ ಪ್ರಾರಂಭವಾಯಿತು (೧೯೧೫). ಕಥೆ ಕವನಗಳ ವಾಚನ, ಸಾಹಿತ್ಯ ವಿಮರ್ಶೆ ಅವರ ಕಾರ್ಯಕ್ರಮ. ಬೇಂದ್ರೆಯವರ ಕಕ್ಕ ಬಂದೋಪಂತರ ಮನೆಯೇ ಅದರ ಕಾರ್ಯಾಲಯ.

ವಿದ್ಯಾರ್ಥಿ ಬೇಂದ್ರೆಗೆ ಓದು ಬರಹ, ಭಾಷಣಗಳೇ ಮನೋರಂಜನೆಗಳು. ಕನ್ನಡ, ಸಂಸ್ಕೃತ, ಮರಾಠಿ ಮತ್ತು ಇಂಗ್ಲಿಷ್ ಚೆನ್ನಾಗಿ ಬಲ್ಲ ಬೇಂದ್ರೆ ಅವುಗಳಲ್ಲಿ ಸಲೀಸಾಗಿ ಕವಿತೆ ಬರೆಯತೊಡಗಿದರು. ತಾನು ಬರೆದುದನ್ನು ಸ್ನೇಹಿತರಿಗೆ ಓದಿ ಹೇಳಿದರು, ಹಾಡಿದರು. ಅವರ ಸ್ನೇಹಿತರಿಗೆ ಆಶ್ಚರ್ಯ-ಆನಂದ. ಮರಾಠಿಗಳಿಗೆ ಆಶ್ಚರ್ಯವೆನಿಸಿದರೆ-ಕನ್ನಡಿಗರಿಗೆ ಅಭಿಮಾನ. ಪುಣೆಯ ಕರ್ನಾಟಕ ಸಂಘದಲ್ಲೂ ಬೇಂದ್ರೆಯವರ ಕವಿತಾವಾಚನವಾಯಿತು. ಮೆಚ್ಚುಗೆಯಾಯಿತು. ಪುಣೆಯ ಕಾವ್ಯವಾಚನದ ಲಹರಿ ಧಾರವಾಡದತ್ತಲೂ ಹರಿದು ಬರದಿದ್ದೀತೆ?

ಬಿ.ಎ. ಪರೀಕ್ಷೆ ಮುಗಿಸುತ್ತಿದ್ದಂತೆ ಸ್ವತಂತ್ರ ಮನೋಭಾವದ ತರುಣ ಕವಿ ಬೇಂದ್ರೆಗೆ ಪುಣೆಯಿಂದ ಧಾರವಾಡದತ್ತ ಧಾವಿಸುವುದು ವಿಹಿತವೆನಿಸಿತು. ಕರ್ಕನಿಗೆ ಬೇಂದ್ರೆ ತನ್ನಲ್ಲಿರುವುದೇ ಹಿತ-ಅಭಿಮಾನದ ಸಂಗತಿ. ಎಂದೂ ಹೊರೆಯೆನಿಸಿರಲಿಲ್ಲ. ಆದರೂ ಕನ್ನಡ ಸಾಹಿತ್ಯ ಬೇಂದ್ರೆಯವರನ್ನು ಧಾರವಾಡಕ್ಕೆ ಕೈಬೀಸಿ ಕರೆಯಿತು.

ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ ನಡೆದಿತ್ತು. ಅದರಲ್ಲಿ ಬೇಂದ್ರೆಯವರು ಎಲ್ಲರ ಮನಸೆಳೆಯುವ ಹೊಸ ಕವಿಯಾದರು. ಅವರ ಹೊಸ ಕಾವ್ಯಮಾರ್ಗ ಹಲವರನ್ನು ಆಕರ್ಷಿಸಿತು. ಅವರ ಬಾಲ್ಯ ವಿದ್ಯಾಗುರು ಗುತ್ತಲ ಮಾಸ್ತರರು ಬೇಂದ್ರೆಯವರ ಕಾವ್ಯ ವೈಖರಿಗೆ ಮನಸೋತರು. ಅಭಿಮಾನತಾಳಿದರು. ತನ್ನ ಎಳೆಯ ಶಿಷ್ಯ ಹಿರಿಯ ಕವಿಯಾಗಿದ್ದಾನೆಂಬ ಆನಂದದಿಂದ ಅವರು ಉಬ್ಬಿ ಹೋದರು. ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗುವಂತೆ ಬೇಂದ್ರೆಯವರನ್ನು ಆಹ್ವಾನಿಸಿದರು. ಬೇಂದ್ರೆಯವರಿಗೂ ಉದ್ಯೋಗ ಬೇಕಿತ್ತು. ಅಧ್ಯಾಪಕವೃತ್ತಿ ಅವರ ಕನಸಿನದೆ ಆಗಿತ್ತು. ಹೀಗಾಗಿ ಬೇಂದ್ರೆ ಬಿ.ಎ. ಪರೀಕ್ಷಾ ಫಲಿತಾಂಶ ಬರುವ ಮೊದಲೇ ಮಾಸ್ತರರಾದರು. ಕೊನೆಯವರೆಗೂ 'ಬೇಂದ್ರೆ ಮಾಸ್ತರ' ಎಂಬ ಅಂಕಿತ ಉಳಿದುಕೊಳ್ಳುವಂತಾಯಿತು.

ಮಾಸ್ತರರಾಗುತ್ತಲೆ ಬೇಂದ್ರೆಯವರ ಬಳಗ ಹೆಚ್ಚಿತು. ವಿದ್ಯಾರ್ಥಿಗಳೂ ಅವರ

ಗೆಳೆಯರ ಗುಂಪಿಗೆ ಸೇರಿವವರೇ, ಹಿರಿಯ ನೆಂಟ ಹಮ್ಮು ಬಿಮ್ಮುಗಳಿಲ್ಲ ಅವರಲ್ಲಿ.

೧೯೧೯ ರಲ್ಲಿ ಬೇಂದ್ರೆಯವರು ಸಂಸಾರಿಗಳಾದರು. ನರಗುಂದದ ಲಕ್ಷ್ಮೀಬಾಯಿ ಬೇಂದ್ರೆಯವರ ಮನದೊಡತಿ—ಮನೆಯೊಡತಿಯಾದರು. "ನಾನು ಬಡವಿ, ಆತ ಬಡವ ಒಲವೆ ನಮ್ಮ ಜೀವನ" ಎಂದೇ ಬಂದರೇನೋ.

ನಾನೆಂದರೂ ಒಂದೆ
ನೀನೆಂದರೂ ಒಂದೆ
ಹೊಂದುಗೂಡಿಕೆ ಇರದ ಜನಕೆ ನೊಂದೆ
ನೀನು ನನ್ನವಳೆಂದು ಬಳಿಗೆ ಬಂದೆ
ಹೊಸಹುಟ್ಟು ಬರುವದಿದೆ ಇನ್ನು ಮುಂದೆ
ಆಗೋಣ ಈ ಜಗದ ತಾಯಿ ತಂದೆ

ಎಂದುಕೊಂಡರು ಬೇಂದ್ರೆಯವರು.

ಶಿಕ್ಷಕನ ಸಂಸಾರ – ಬಡತನದಭಾರ – ಬೇಂದ್ರೆಯವರು ಅದರಲ್ಲೇ ತೃಪ್ತರು. ಬಂದ ಹಣವನ್ನು ತಾಯಿ ಅಂಬಕ್ಕ ಇರುವವರೆಗೆ ಅವರ ಕೈಯಲ್ಲಿ, ಆ ಬಳಿಕ ಮಡದಿ ಲಕ್ಷ್ಮೀಬಾಯಿಯ ಕೈಯಲ್ಲಿಟ್ಟು ನಿಶ್ಚಿಂತರಾಗುತ್ತಿದ್ದರು. ಓದು, ಕವನ ರಚನೆ, ವಾಚನವ್ಯಾಖ್ಯಾನ, ವಿದ್ಯಾರ್ಥಿ ಹಾಗೂ ಸ್ನೇಹಿತರೊಡನಾಟ ಇವೇ ಬೇಂದ್ರೆಯವರ ಜೀವನ.

ಬೇಂದ್ರೆಯವರ ಜೀವನ ರಥ ಸುಗಮವಾಗಿಯೇನೂ ಸಾಗಲೇ ಇಲ್ಲ. ಅವರ ಚೊಚ್ಚಲ ಮಗ ಕ್ಷೇಮೇಂದ್ರ ಒಂದು ವರ್ಷದಲ್ಲೇ ತೀರಿಕೊಂಡ. ಸಾವು ಅವರ ಮನೆಯಲ್ಲಿ ಸರಸವಾಡಿತು ೧೯೨೬ ರಲ್ಲಿ ಪ್ರೀತಿಯ ತಾಯಿ ಅಂಬಕ್ಕ ತೀರಿಕೊಂಡರು.

ಯಾರು ಯಾರೊಳಗಿಹರೊ
ಯಾರೊಳಗೆ ಬೆಳಗಿಹರೊ ಜೀವ
ಜೀನೊ
ದೇವ ಜಗದೀ ಹೂವ
ತೆರೆದು ಮುಚ್ಚುವನಾವ
ನಾನೊ ನೀನೋ

ಎಂದುಕೊಂಡ ಬೇಂದ್ರೆಯವರು ಎಲ್ಲವೂ ದೇವರ ಆಟ ಮಾಟ ನಗೆ—ಎಂದು ಸಮಾಧಾನ ಪಟ್ಟುಕೊಂಡರು. ವಿಷಕಂಠನಾದರು. ವಿದ್ಯಾರ್ಥಿಗಳು ಸ್ನೇಹಿತರೇ ಅವರ ಸರ್ವಸ್ವವಾದರು. ೧೯೨೯ ರ ಹೊತ್ತಿಗೆ ಧಾರವಾಡದಲ್ಲಿ 'ಗೆಳೆಯರ ಬಳಗ' ಮೂಡಿತು. ಅದು ಬೆಳೆಯುತ್ತ ಹೋಯಿತು. ರಂ. ಶ್ರೀ. ಮುಗಳಿ, ವಿ. ಕೃ. ಗೋಕಾಕರಂತಹವರು ಆ ಬಳಗದಲ್ಲಿದ್ದವರು.

ಬೇಂದ್ರೆಯವರ ಕವಿತಾ ರಚನೆ ನಿರಂತರ ಸಾಗಿತು. ತಮ್ಮದೇ ಆದ ಧಾಟಿಯಲ್ಲಿ ತಮ್ಮದೇ ಗತ್ತಿನಿಂದ ತಮ್ಮ ಕವಿತೆಗಳನ್ನವರು ಓದಿದರು, ಜನರ ಮೆಚ್ಚುಗೆಗೆ ಪಾತ್ರರಾದರು ಸಾವಿರಾರು ಜನರ ಕಿವಿಗೆ ಬಿತ್ತು ಅವರ ಕವಿತೆ ಅವರದೇ ಕಂಠ ಮಾಧುರ್ಯದೊಡನೆ.

೧೯೨೪ ರಲ್ಲಿ ಬೆಳಗಾವಿಯಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಬೇಂದ್ರೆಯವರು

ಹಕ್ಕಿ ಹಾರುತಿದೆ ನೋಡಿದಿರಾ
..........................
..................................

ಕವನ ಹಾಡಿದರು. ಜನಮನವನ್ನು ಗೆದ್ದರು. ಮಾಸ್ತಿ ವೆಂಕಟೇಶ ಅಯ್ಯಂಗಾರರಂತಹ ಉದ್ದಾಮ ಕನ್ನಡ ಸಾಹಿತಿಗಳೂ ಬೇಂದ್ರೆಯವರಿಗೆ ಮನಸೋತರು ಅದರ ಪರಿಣಾಮವೋ ಏನೋ ಮಾಸ್ತಿಯವರು ಬೇಂದ್ರೆಯವರಿಗೆ ಹತ್ತಿರವಾದರು, ಆಪ್ತರಾದರು, ಅವರ ಪ್ರೇರಣೆಯಿಂದಲೇ ಬೇಂದ್ರೆಯವರ ಮೊದಲ ಕವನ ಸಂಕಲನ 'ಗರಿ'

(೧೯೩೨) ಪ್ರಕಟವಾಯಿತು. ೧೯೧೮ರಿಂದಲೇ ಕವನ ರಚನೆ ಮಾಡಿ. ಜನರೆದುರು ಹಾಡಿ ತಣಿಸುತ್ತಿದ್ದ ಆ ವರಕವಿಯ ಕವನಗಳು ಒಂದು ಹೊತ್ತಿಗೆಯಾಗಿ ಪ್ರಕಟವಾಗಲು ಷೋಡಶ ವರ್ಷಗಳೇ ಸಂದುವು.

'ಗರಿ' ಕರ್ನಾಟಕದ ಮೂಲೆ ಮೂಲೆಯಲ್ಲಿ ಗರಿಗೆದರಿ ನಿಂತಿತು. 'ಹಕ್ಕಿ ಹಾರುತಿದೆ ನೋಡಿದಿರಾ'ಎಂಬ ಬೇಂದ್ರೆಯವರ ಪ್ರಶ್ನೆಗೆ ಕನ್ನಡನಾಡು ಅಹುದಹುದೆಂದಿತು 'ಹಕ್ಕಿ ಹಾಡುತಿದೆ ನೋಡಿದೆವು – ಕೇಳಿದೆವು' ಎಂದಿತು. ಆದರೇನು–ಅದು ಬ್ರಿಟಿಷರ ಆಡಳಿತದಕಾಲ. ಗಾಂಧೀಜಿ ಸ್ವಾತಂತ್ರ್ಯಕ್ಕಾಗಿ ಸಮರ ರಂಗಕ್ಕಿಳಿದ ಕಾಲ. ಎಲ್ಲ ರಕ್ತದಲ್ಲೂ ಸ್ವಾತಂತ್ರ್ಯದ ಹುಮ್ಮಸ್ಸು ಹರಿದಾಡಿದಕಾಲ. ಬೇಂದ್ರೆಯವರ ಲೇಖನಿಯೂ ಸುಮ್ಮನಿರಲಿಲ್ಲ. 'ನರಬಲಿ' ಕವನ ಮೂಡಿಬಂದಿತ್ತು. ಅದು 'ಗರಿ' ಹೊತ್ತಿಗೆಯಲ್ಲಿ ಪ್ರಕಟವಾಗಿತ್ತು. ಬ್ರಿಟಿಷರ ವಕ್ರದೃಷ್ಟಿ ಅದರ ಮೇಲೆ ಬೀಳದಿದ್ದೀತೇ? ಪೋಲೀಸರು ಬೇಂದ್ರೆಯವರ ಮನೆಗೆ ನುಗ್ಗಿದರು. 'ನರಬಲಿ' ಬರೆದ ಕವಿಯನ್ನು ಕರೆದೊಯ್ದರು. ಹಿಂಡಲಗ ಜೈಲಿನಲ್ಲಿ ಕೈದಿಯಾಗಿರಿಸಿದರು. ಬೇಂದ್ರೆಯವರು ಅಲ್ಲಿಯೂ ಅಧ್ಯಯನ ನಡೆಸಿದರು. ಕವನ ಬರೆದರು.

ಜೈಲಿಗೆ ಹೋಗಿ ಬಂದವರಿಗೆ ಕೆಲಸ ಕೊಡಬಹುದೇ? ಬೇಂದ್ರೆಯವರ ಅಧ್ಯಾಪಕಗಿರಿ ಹೋಯಿತು. ಬಡ ಶಿಕ್ಷಕ ನಿರ್ಗತಿಕನಾಗಬೇಕಾಯಿತು. ಬೇಂದ್ರೆ ಆಗಲೂ ಧೃತಿಗೆಡಲಿಲ್ಲ–ಕೆಲಸ ಹೋದ ಆಜ್ಞೆಯನ್ನು ಹಿಡಿದೇ ಹಾಡಿದರು—

> ಕುಣಿಯೋಣು ಬಾರ ಕುಣಿಯೋಣು ಬಾ
> ಹಗಲಿರುಳ ತಾಳಕ್ಕ
> ಮುಗಿಯದ ತಾಳಕ್ಕ
> ಜನು ಮಗಳ ಮ್ಯಾಳಕ್ಕ ಕುಣಿಯೋಣು ಬಾರ

ಆ ದುಃಖದಲ್ಲಿಯೂ ಕುಣಿದರು ಹಾಡಿದರು.

ಉದ್ಯೋಗವಿಲ್ಲದೆ, ಸಂಪಾದನೆಯಿಲ್ಲದೆ ಕುಣಿಯೊಣವೆಂದು ಹಾಡಿದರೆ ಹೊಟ್ಟೆ ತುಂಬುವುದೆ? ಅದೂ ತಾನೊಬ್ಬನೇ? ಹೆಂಡತಿ–ಇಬ್ಬರು ಮಕ್ಕಳು. ಒಟ್ಟು ನಾಲ್ಕು ಜನರ ಸಂಸಾರ 'ಅನ್ನದೇವರಿಗಿಂತ ಇನ್ನು ದೇವರು ಉಂಟೆ?' ಬೇಂದ್ರೆಯವರು ಮತ್ತೆ ತಮ್ಮ ಕಕ್ಕನನ್ನೇ ಆಶ್ರಯಿಸಿದರು ಪುಣೆಗೆ ಹೋದರು. ಅಲ್ಲಿ ಎಂ.ಎ. ಅಭ್ಯಾಸ ಮಾಡಿದರು. ೧೯೩೫ರಲ್ಲಿ ಎಂ.ಎ. ಪದವೀಧರರಾದರು.

ದೈವ ಆಗಲೂ ತನ್ನಾಟ ನಡೆಸಿತು. ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದ ಸಂತೋಷದ ಬೆನ್ನ ಹಿಂದೆಯೇ ಕಕ್ಕನ ಮರಣದ ದುಃಖ ಅವರನ್ನು ಕಾಡಿತು. ಆಶ್ರಯದಾತ ಕಕ್ಕ ಇನ್ನಿಲ್ಲವಾದರು. ಸಂಸಾರದ ಚಿಂತೆ, ಭವಿಷ್ಯದ ಚಿಂತೆ, ವಿಧವೆ ಚಿಕ್ಕಮ್ಮ–ಮಕ್ಕಳಿಲ್ಲದ ತಾಯಿಯಾಕೆ. ಆದರೂ ನಿರುದ್ಯೋಗಿಯಾಗಿ ತಾನಲ್ಲಿ ನಿಲ್ಲಬೇಕೇ? ತಮ್ಮನಾದ ಕೃಷ್ಣನನ್ನು ಚಿಕ್ಕಮ್ಮನ ಮನೆಯಲ್ಲಿರಿಸಿ ಮತ್ತೆ ಧಾರವಾಡದತ್ತ ನಡೆದರು ಬೇಂದ್ರೆ.

ಧಾರವಾಡದಲ್ಲಾದರೂ ಮಾಡುವುದೇನು? ನೌಕರಿಯಿಲ್ಲ. ಕೂಡುವ ಹಾಗಿಲ್ಲ. ಸಂಪಾದನೆಯ ದಾರಿ ಏನಿದೆ? ಬೇಂದ್ರೆಯವರ ಈ ಸಂಕಟವನ್ನು ತಿಳಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರರು. ಬೇಂದ್ರೆಯವರನ್ನು ಬೆಂಗಳೂರಿಗ

ಕರೆಸಿಕೊಂಡರು 'ಜೀವನ' ಪತ್ರಿಕೆಯ ಸಂಪಾದಕ ಹುದ್ದೆ ಕೊಟ್ಟರು. ಹೆಂಡತಿ ಮಕ್ಕಳನ್ನು ತವರು ಮನೆಯಲ್ಲೇ ಬಿಟ್ಟು ತಾವೊಬ್ಬರೇ ಬೆಂಗಳೂರಲ್ಲಿ ಕಾಲ ಹಾಕಿದರು. ಮಾಸ್ತಿಯವರ ಸಹವಾಸ-ಊರೂರು ಅಲೆದರು. ಅನುಭವದ ಬೊಕ್ಕಸ ತುಂಬಿಕೊಂಡರು.

ಬೆಂಗಳೂರಿನಿಂದ ಮರಳಿದ ಬೇಂದ್ರೆಯವರು ಮೂರು ವರ್ಷಗಳ ಕಾಲ ಧಾರವಾಡದಲ್ಲಿ ನೆಲಸಿದರು. ಆಗ ಅವರ ಸಾಹಿತ್ಯಸಾಧನೆ ಮೇರೆವರಿಯಿತು. ನಾದಲೀಲೆ, ಉಯ್ಯಾಲೆ ಮುಂತಾದ ಕವನ ಸಂಕಲನಗಳು ಪ್ರಕಟಗೊಂಡವು. ಸಾಧನಕೆರೆಯ ದಂಡೆಯಲ್ಲಿ ಕುಳಿತು ಹತ್ತಾರು ಕವನಗಳನ್ನು ರಚಿಸಿದರು–ಮಕ್ಕಳಿಗೆ, ಬಂಧುಗಳಿಗೆ, ಸ್ನೇಹಿತರಿಗೆ ಹಾಡಿತೋರಿದರು.

ಆಂಗ್ಲರ ಕೆಂಗಣ್ಣಿನುರಿಗೆ ಸಿಕ್ಕು ಕೆಲಸ ಕಳೆದುಕೊಂಡು ಹತ್ತು ವರುಷಗಳು ಸಂದುಹೋದುವು. ೧೯೪೦ರಲ್ಲಿ ನಿಯಮ ಬದಲಾಯಿತು. ಬೇಂದ್ರೆ ಮಾಸ್ತರರು ಮತ್ತೆ ಮಾಸ್ತರರಾಗುವ ಅರ್ಹತೆ ಪಡೆದರು. ಗದುಗಿನ ಶಾಲಾ ಸಮಿತಿ ತನ್ನ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಹುದ್ದೆಗೆ ಬೇಂದ್ರೆಯವರನ್ನು ಆಹ್ವಾನಿಸಿತು. ಜೀವನಕ್ಕೆ ದಾರಿಯಾಯಿತೆಂದು ಹಿಗ್ಗಿದ ಬೇಂದ್ರೆ ಹೊಸ ಚೈತನ್ಯ ತುಂಬಿಕೊಂಡು ಅಲ್ಲಿಗೆ ಹೊರಟರು, ಉತ್ಸಾಹದಿಂದ ಕೆಲಸಮಾಡಿದರು. ಆದರೆ ಅವರ ಸಾಹಿತ್ಯಸೇವೆ, ಕೀರ್ತಿ ಸಮಿತಿಯ ಕಣ್ಣಿಗೆ ಮುಳ್ಳಾಯಿತು, ಗದುಗಿನ ಜನ ಈ ವರಕವಿಯನ್ನು ಆದ್ದೂರಿಯಿಂದ ಸನ್ಮಾನಿಸಿದರೆ ಶಾಲಾ ಸಮಿತಿಯವರು ಹುದ್ದೆಯಿಂದ ಕಿತ್ತೆಸೆದರು. ಸರಿ—ಬೇಂದ್ರೆಯವರ ಸಂಸಾರ ಮತ್ತೆ ಧಾರವಾಡಕ್ಕೆ ಬಂತು.

ಬಾರೊ ಸಾಧನ ಕೇರಿಗೆ
ಮರಳಿ ನಿನ್ನ ಊರಿಗೆ

ಎನ್ನುತ್ತ ಸಾಧನಕೇರಿಗೆ ಮರಳಿದರು. ಅಲ್ಲಿ ಮತ್ತೆ ಮಾಸ್ತರಿಕೆ—ನ್ಯೂ ಇಂಗ್ಲಿಷ್ ಸ್ಕೂಲಿನಲ್ಲಿ 'ವಾರದಾಗ ಮೂರು ಬಾರಿ ಬಂದು ಹೋಗುವ' ಅಧ್ಯಾಪಕವೃತ್ತಿ. ಕೆಲವು ದಿನ ಹಾಗೆ ನಡೆಯಿತು. ಬೇಂದ್ರೆಯವರನ್ನು ಮರೆಯದ ಪುಣೆ—ಅಲ್ಲಿಯ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗುವ ಅವಕಾಶವನ್ನು ಒದಗಿಸಿತು. ಆದರೆ ಅದೂ ಪೂರ್ಣಾವಧಿಯದಲ್ಲ.

೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರಾಗುವ ಗೌರವ ಬೇಂದ್ರೆಯವರಿಗೆ ದೊರೆಯಿತು.

ಇಳಿದು ಬಾ ತಾಯಿ–ಇಳಿದು ಬಾ
ಹರಿಯ ಅಡಿಯಿಂದ
ಹರನ ಜಡೆಯಿಂದ–ಇಳಿದು ಬಾ ತಾಯಿ

ಈ ಕವನ ಅಲ್ಲಿ ಇಳಿದುಬಂತು. ಬೇಂದ್ರೆಯವರನ್ನು ಜನ ಕೊಂಡಾಡಿತು.

ಕೊನೆಗೆ, ಸೊಲ್ಲಾಪುರದಲ್ಲಿ ಪೂರ್ಣಾವಧಿಯ ಕನ್ನಡ ಪ್ರಾಧ್ಯಾಪಕ ಕೆಲಸ ದೊರೆಯಿತು. ಬೇಂದ್ರೆಯವರಿಗೆ. ಕನ್ನಡದ ಕವಿ ಹೊರನಾಡಿನಲ್ಲಿ ಕನ್ನಡದ ಪ್ರಾಧ್ಯಾಪಕ!

ಸೊಲ್ಲಾಪುರದಲ್ಲಿದ್ದರೂ ಅವರ ಬಾಳು ನೆಮ್ಮದಿಯ ನಿಟ್ಟುಸಿರು ಬಿಟ್ಟೀತೇ? ಇಲ್ಲ. ಸಾವು ಅವರ ಮನೆಯಲ್ಲಿ ಚದುರಂಗವಾಡುತ್ತಲೇ ಇತ್ತು. ಅಲ್ಲಿಯೂ ಅದು ಬಿಡಲಿಲ್ಲ. ಬೇಂದ್ರೆಯವರ ಕಿರಿಯ ಮಗ ಆನಂದ ಸಾವನ್ನಪ್ಪಿದ. ಆ ಸಂಸಾರದ ಆನಂದವನ್ನೇ ಹೊತ್ತು ಹೊರಟು ಹೋದ. ಮತ್ತೆರಡು ದಿನಗಳಲ್ಲಿಯೇ ಮತ್ತೊಬ್ಬ ಮಗ ರಾಮನೂ ಅಸುನೀಗಿದ. ತಂದೆ ಬರೆದ ಕವಿತೆಗಳನ್ನು ಪ್ರತಿಮಾಡುತ್ತಿದ್ದ, ಸ್ವತಃ ತಾನೂ

ಆಶುಕವಿತೆಯನ್ನು ಬರೆಯುತ್ತಿದ್ದ ಆ ರಾಮ ಇಹಲೋಕದಿಂದ ನಿರ್ಗಮಿಸಿದ, ಆಗ ಬೇಂದ್ರೆಯವರ 'ಪಾಡು' ಹೇಳತೀರದು. ಅದು ಸಾಲದೆಂಬಂತೆ ಮಕ್ಕಳಿಬ್ಬರನ್ನು ಕಳೆದುಕೊಂಡ ತಾಯಿಯೂ ಅಸ್ವಸ್ಥರಾದರು. ಎಲ್ಲರನ್ನೂ ಆಸ್ಪತ್ರೆಗೆ ಸಾಗಿಸುವಷ್ಟು ಅನಾರೋಗ್ಯ ಅವರ ಮನೆಯನ್ನು ಬಾಧಿಸಿತು. ಬೇಂದ್ರೆಯವರಿಗೆ ಅದು ಹೊಸ ಊರು ಬೇರೆ, ಅಸಹಾಯಕರಾಗಿದ್ದರು. ಯಾರದೋ ಸಹಾಯ ಹಸ್ತವೊದಗಿ ಬಂದುದರಿಂದ ಸಂಕಟದಿಂದ ಒಮ್ಮೆ ಪಾರಾದರು.

ಈ ಸಂಕಟದಲ್ಲಿಯೂ ಅವರು ವಿಚಲಿತರಾಗಲಿಲ್ಲ. 'ಹಾಡು ಪಾಡು' ಪದ್ಯ ಬರೆದರು.

ಎನ್ನ ಪಾಡೆನಗಿರಲಿ–ನನ್ನ ಹಾಡನಿಷ್ಟು ಕೇಳೊ ರಸಿಕಾ–ಎಂದರು. ಆ 'ಪಾಡಿ' ನಲ್ಲಿಯೂ ಅವರ ಹಾಡು ರಸಿಕರ ಮನದಣಿಸಿತು.

ಸಂಕಷ್ಟಮಯವಾಗಿ ಪ್ರಾರಂಭವಾದರೂ ಸೊಲ್ಲಾಪುರದ ಹನ್ನೆರಡು ವರ್ಷಗಳ ಪ್ರಾಧ್ಯಾಪಕ ವೃತ್ತಿ ಬೇಂದ್ರೆಯವರನ್ನು ನೆಮ್ಮದಿಯತ್ತ ಕೊಂಡೊಯ್ದಿತೆಂದೇ ಹೇಳಬೇಕು. ಸಂಸಾರ ಸುಗಮವಾಗಿ ಸಾಗುವುದು ಸಾಧ್ಯವಾಯಿತು. ಮರಾಠಿ ಸಾಹಿತ್ಯದಲ್ಲಿಯೂ ಬೇಂದ್ರೆ ಕೈಯಾಡಿಸಿದರು. ಗಣನೀಯ ಕೊಡುಗೆ ನೀಡಿದರು. ೧೯೫೬ರಲ್ಲಿ ಅಲ್ಲಿಂದ ನಿವೃತ್ತರಾದರು.

ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ಪಡೆದಾಗ ಅವರು ಮತ್ತೊಮ್ಮೆ ಆರ್ಥಿಕ ಮುಗ್ಗಟ್ಟಿನಿಂದ ಬಳಲಬೇಕಾಯಿತು. ಅವರೇನೂ ಹಣ ಸಂಗ್ರಹಿಸಿಡಲಿಲ್ಲ. ಬಂದ ವೇತನದ ಹಣವನ್ನು ಸಂಸಾರ ನಿರ್ವಹಣೆಗೆ ಪುಸ್ತಕಕೊಳ್ಳುವುದಕ್ಕೆ ವೆಚ್ಚ ಮಾಡಿದ್ದರು. ಗ್ರಂಥಾಲಯವನ್ನೇನೊ ಬೆಳೆಸಿದ್ದರು ಅವರ ಗ್ರಂಥಾಲಯ ಮನೆಯನ್ನೇ ನುಂಗುವಂತಿತ್ತಂತೆ.

ನಿವೃತ್ತ–ಅರುವತ್ತು ತುಂಬಿದ ಬೇಂದ್ರೆಯವರನ್ನು ಸೊಲ್ಲಾಪುರದ ಜನತೆ ಮನಸ್ಸಿಲ್ಲದ ಮನಸ್ಸಿನಿಂದಲೇ ಬಿಟ್ಟುಕೊಟ್ಟಿತು. ಸಮಾರಂಭ ನಡೆಸಿ ಅರುವತ್ತರ ಸನ್ಮಾನನೀಡಿ ಗೌರವಾದರ ತೋರಿ ಕಳುಹಿಸಿಕೊಟ್ಟಿತು. ಬೇಂದ್ರೆ ಮತ್ತೊಮ್ಮೆ ಧಾರವಾಡಕ್ಕೆ ಬಂದರು.

ಈ ಸಲ ಧಾರವಾಡ ಬೇಂದ್ರೆಯವರನ್ನು ಸಂಕಟಕ್ಕೆ ಸಿಲುಕಿಸಲಿಲ್ಲ. ಧಾರವಾಡ ಆಕಾಶವಾಣಿ ಅವರನ್ನು ಸ್ವಾಗತಿಸಿತು. ಸಲಹೆಗಾರರಾಗಿ—ಸರಕಾರಿ ನೌಕರರಾಗಿ ಹತ್ತು ವರುಷ ದುಡಿಯುವುದಕ್ಕೆ ಅವಕಾಶ ಮಾಡಿಕೊಟ್ಟಿತು.

ಈ ಹತ್ತು ವರುಷಗಳ ಅವಧಿಯಲ್ಲಿ ವರಕವಿ ಬೇಂದ್ರೆಗೆ ಸರಸ್ವತಿಯ ಜತೆಗೆ ಲಕ್ಷ್ಮಿಯೂ ವರದೆಯಾದಳು ೧೯೫೮–೫೯ರಲ್ಲಿ ಅವರ 'ಅರಳು–ಮರಳು' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ–ಬಹುಮಾನ ದೊರೆಯಿತು. ೧೯೬೫ರಲ್ಲಿ 'ಸಂವಾದ' ಮರಾಠಿ ಗ್ರಂಥಕ್ಕೆ ಮಹಾರಾಷ್ಟ್ರದ "ಕೇಳಕರ ಪಾರಿತೋಷಕ" ಲಭಿಸಿತು. ಬೇಂದ್ರೆಯವರು ಕನ್ನಡ–ಮರಾಠಿ ಸಾಹಿತ್ಯದ ಸವ್ಯಸಾಚಿಯೆನಿಸಿದರು. ಅವರ ಬರೆವಣಿಗೆ ಕೀರ್ತಿಯನ್ನು–ಧನವನ್ನು ಒದಗಿಸಿತು.

ಈ ಹತ್ತು ವರುಷದಲ್ಲಿ ಬೇಂದ್ರೆಯವರ ಪತ್ನಿಯೂ ಸುಖವನ್ನನ್ನುಭವಿಸಿದರೆಂದೇ ಹೇಳಬೇಕು. ಸದಾ ಆರ್ಥಿಕಸ್ಥಿತಿಯಲ್ಲಿ ಮುಗ್ಗರಿಸುತ್ತಿದ್ದ ಅವರಿಗೆ ಈ ವರುಷಗಳು ನೆಮ್ಮದಿ ತಂದಿರಬೇಕು. ಬೇಂದ್ರೆ ದಂಪತಿಗಳು ತಮ್ಮ ಸಂಸಾರಿಕ ಕರ್ತವ್ಯಗಳನ್ನು ನೆರವೇರಿಸಿದರು. ಮಕ್ಕಳು ಮೊಮ್ಮಕ್ಕಳೊಡನೆ ನಲಿದಾಡಿದರು.

೧೯೬೬ ಬೇಂದ್ರೆಯವರಿಗೆ ೭೦ ವರುಷಗಳು ತುಂಬಿದುವು. ಷಷ್ಟ್ಯಬ್ಧಿ ಪೂರ್ತಿಯನ್ನು ಸೊಲ್ಲಾಪುರದವರು ಆಚರಿಸಿದರೆ ೭೦ನೆಯ ವರ್ಷ ಪೂರ್ತಿಯನ್ನು ಧಾರವಾಡದವರು ಆಚರಿಸಿದರು. ಅಂದು ಬೇಂದ್ರೆ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾದರು, ಇಂದು ಆಕಾಶವಾಣಿಯಿಂದ ನಿವೃತ್ತಿ. ಅದೊಂದು ಘಟ್ಟ, ಇದೊಂದು ಘಟ್ಟ ಬೇಂದ್ರೆಯವರ ಜೀವನದಲ್ಲಿ.

೧೯೬೬ರ ಸಾಲು ಬೇಂದ್ರೆಯವರಿಗೆ ಸುಖವೊಂದನ್ನೆ ಕಾಣಿಸಲಿಲ್ಲ. ಅತ್ಯಂತ ದುಃಖವನ್ನು ಕಾಣಿಸಿತು. ಅವರ ಪತ್ನಿ-ಪತಿಯನ್ನು ಬಿಟ್ಟು ಇಹಲೋಕವನ್ನೆ ತ್ಯಜಿಸಿದರು 'ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೆ' ಎಂದ ಕವಿಗೆ ನಂಟಿನ ಭೌತಿಕದ ಕೊನೆ ಕಂಡಿತು.

ಮುಂದೆ ಸುಮಾರು ಹದಿನಾರು ವರ್ಷ ಬಾಳಿದ ವರಕವಿ ಅಂಬಿಕಾತನಯದತ್ತರಿಗೆ ಹಲವು ಗೌರವ ಪ್ರಶಸ್ತಿಗಳು ಸಂದುವು. ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಕಾಶಿ ವಿದ್ಯಾಪೀಠಗಳು ಗೌರವ ಡಾಕ್ಟರೇಟ್ ಪದವಿಯನ್ನಿತ್ತು ಗೌರವಿಸಿದುವು. ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿತು. ೧೯೭೪ರಲ್ಲಿ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಪ್ರಾಪ್ತವಾಯಿತು. ಅಲ್ಲದೆ ಹಲವು ಸಂಸ್ಥೆಗಳು ಅವರನ್ನು ಗೌರವಿಸಿದುವು. ಅವರ ೭೫ನೇ ಹುಟ್ಟು ಹಬ್ಬವನ್ನು ಸೊಲ್ಲಾಪುರದಲ್ಲಿ— ಹಾಗೂ ಪುಣೆಯಲ್ಲಿ ಆಚರಿಸಲಾಯಿತು.

ಸುಮಾರು ಎಂಬತ್ತಾರು ವರ್ಷಗಳ ಸಾರ್ಥಕ ಜೀವನ ನಡೆಸಿ. ಕಷ್ಟ-ಸಂಕಟದಲ್ಲೂ ಹಾಡಿನಲಿದು, ತಾನು ಪಾಡು ಪಡುತ್ತಿದ್ದರೂ ರಸಿಕರಿಗೆ ಹಾಡಿನ ರಸದೌತಣವಿತ್ತು ಕನ್ನಡನಾಡ ಕೀರ್ತಿಯನ್ನು ಬೆಳಗಿದ ವರಕವಿ ಅಂಬಿಕಾತನಯ ದತ್ತ ೮೧ರ ದೀಪಾವಳಿ (೨೬-೧೦-೮೧) ಯಂದು ಮುಂಬಯಿಯಲ್ಲಿ ಜ್ಯೋತಿಯಲ್ಲಿ ಲೀನವಾದರು. ಕೀರ್ತಿ ಶೇಷರಾದರು, ಅಮರರಾದರು.

ನಾನೇ ನಾನು
ಇದು ಸ್ವ-ರೂಪ
ಇದು ಕತ್ತಲೆಯಲ್ಲೂ ಸ್ವಪ್ನದಲ್ಲೂ
ಇರುವುದು
ಬೆಳಕಿನಲ್ಲಿ ತನ್ನ ವಿಚಿತ್ರ ಭಂಗಿಗಳಲ್ಲಿ
ವಿವಿಧವಾದರೂ ಒಂದೇ
ಇರುವುದು
ಸ್ವಸ್ಮರಣೆ-ಸ್ವಪ್ನದಲ್ಲಿ
ಇದು ಇರುವುದು
ಅದು ಚಿತ್ರ ರೂಪ ಬೆಳಕಿನಲ್ಲಿ
ಕಾಣುವುದು
ಮಾತಾಡಿ ಹೇಳಿದರೆ ವಿವಿಧ ವಿಸ್ತಾರ
ತಾಳುವುದು
ವೈಯಕ್ತಿಕ ಐಕ್ಯ-ರೂಪ ವೈವಿಧ್ಯದಿಂದ
ತ್ರಿಗುಣ ವೈವಿಧ್ಯ ತಾಳಿ,
ತಿಳಿವಳಿಕೆಗೆ ಆತ್ಮ ವಿಮರ್ಶೆ
ತಾಳುವುದು
ರೂಪ ತಾಳುವುದು
ಇದು ಸೃಷ್ಟಿ

(೪೯ ೮೧) ಅಂಬಿಕಾ ತನಯದತ್ತ)

(ಕಾವ್ಯ ವೈಖರಿ ೫೬)

ಅಂಬಿಕಾತನಯದತ್ತರ ಜೀವನ ಗಂಗಾವತರಣದ ದರ್ಶನ ಸುಲಭವಾಗಿ ಲಭ್ಯವಾಗಬಹುದು. ಅವರ ಕಾವ್ಯ ಗಂಗೆಯ ಆಳ-ವಿಸ್ತಾರ ಅದ್ಭುತ-ಅಚಿಂತ್ಯವೇ ಸರಿ.

# ಕಟುಮಧುರ ಆಖ್ಯಾನ-ವರಕವಿಯೊಡನಾಟದಲ್ಲಿ

**ಕು. ಶಿ. ಹರಿದಾಸಭಟ್ಟ**

'ಒಲವೆಂಬ ಹೊತ್ತಿಗೆಯನೋದ ಬಯಸುತ ನೀನು ಬೆಲೆಯೆಷ್ಟು ಎಂದು ಕೇಳುತಿಹೆ ಹುಚ್ಚ ! ಹಗಲಿರುಳು ದುಡಿದರೂ, ಹಲಜನುಮ ಕಳೆದರೂ ನೀ ತೆತ್ತಲಾರೆ ಆಚಿ ವೆಚ್ಚ !' ಎಂಬ ಬೇಂದ್ರೆ ಉವಾಚಕ್ಕೆ ವ್ಯಾಖ್ಯಾನದಂತಿದೆ ಈ ಆತ್ಮೀಯಾನುಭವದ ನುಡಿರೂಪ. ಬೇಂದ್ರೆ ಜನರಿಗೆ—ವಯಸ್ಸು, ಅಂತಸ್ತು, ಉದ್ಯೋಗ ಮುಂತಾದ ತಾರತಮ್ಯವಿರದೆ—ಪ್ರಸ್ತುತರೂ "ನಮ್ಮ ಬೇಂದ್ರೆ"ಯೂ ಆಗುವುದರ ಕಾರಣ ಅವರ ಮುಗ್ಧ ಕುತೂಹಲ, ಸರಳ ವರ್ತನೆ, ಕ್ಷಿಪ್ರಸ್ನೇಹಶೀಲತೆ ಮತ್ತು ಪರಿಶುದ್ಧ ಅಂತಃಕರಣ. ಇವರು ವಿರಳವಾಗಿ ಏಕಾಕಿ ಆದರೆ ಬಹುತೇಕ ಏಕಾಂಗಿ (rarely lonely but mostly alone).

ರಸಋಷಿ, ವರಕವಿ ಬೇಂದ್ರೆಯವರೊಡನೆ ಸುಮಾರು ೩೦ ವರ್ಷಗಳ ಕಾಲಾವಧಿಯಲ್ಲಿ ೧೯೫೦ ರಿಂದ ಲಾಗಾಯಿತು ಎನ್ನಿ ನಾನು ಕಳೆದ ರಸನಿಮಿಷಗಳನ್ನು ಓದುಗರೊಡನೆ ಹಂಚಿಕೊಳ್ಳುವ ಪ್ರಸಂಗವನ್ನು ಸ್ವಾಗತಿಸುತ್ತ ನೆನಪಿನ ಕೋಶದಿಂದ ಮುಖ್ಯವಾದವನ್ನು ಅರಸಿ ಆರಿಸಿ ಇಡುತ್ತಿದ್ದೇನೆ.

೧

ಕವಿ ಅಂಬಿಕಾತನಯದತ್ತರ ಪದಗಾರುಡಿಗೆ ಮನಸೋತ, ಅವರ ಒಬ್ಬ ಅಭ್ಯಾಸಿಯಾಗಿದ್ದ ನಾನು, ಕಾಲಾನುಕ್ರಮದಲ್ಲಿ ಅವರ ನಿಕಟವರ್ತಿಯಾದೆ, ಉಡುಪಿಯ ನನ್ನ ಸಾಹಿತ್ಯ ಕಾರ್ಯಕ್ರಮಗಳಿಗೆ ಅವರನ್ನು ಆಹ್ವಾನಿಸುತ್ತಿದ್ದ ಕಾಲಘಟ್ಟದಲ್ಲಿ ಅವರ ತೀರ ಸಾಮೀಪ್ಯವನ್ನು ಸಾಧಿಸಿದನೆಂತಲೇ ಹೇಳಬೇಕು. ಸಾಧಿಸುವುದು ಎಂದರೆ ಅದರಲ್ಲಿ ನಿಜಕ್ಕೂ ಸಾಧನೆಯ ಅಂಶ ಬೆರೆತಿದೆ. ಈ ಸಾಧನೆ ಅವರ ಮಾತಿನಲ್ಲೇ ಹೇಳಬೇಕೆಂದರೆ ಒಂದು 'ಕಟುಮಧುರ ಆಖ್ಯಾನ'ಗಳ ಸೂಡಿಯಾಗಿ ನನ್ನ ಅಂತರಾಳದಲ್ಲಿ ಅಚ್ಚಳಿಯದೆ ನೆಲಸಿಕೊಂಡಿದೆ. ಒಬ್ಬ ಕವಿಯ ಸಾಹಿತ್ಯ ಭಾಗಮಾತ್ರವಲ್ಲ, ಅದರ ಹಿನ್ನೆಲೆಯ ವ್ಯಕ್ತಿತ್ವವನ್ನೂ ಸಮೀಪದಿಂದ ಅವಲೋಕಿಸುವ ಅನುಭವ ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿ ಸಮನಿಸಬಹುದು. ನನಗೆ ಬೇಂದ್ರೆ ಕೇವಲ ಒಬ್ಬ ಕವಿಯಾಗಿ ದರ್ಶನ ಕೊಟ್ಟದ್ದಲ್ಲ—ಅವರ ಅನುಭಾವ ಪಂಥದ ಈಷತ್ ಸ್ಪರ್ಶವು ನನಗೂ ಆಗಿರುವಂತೆ ಭಾಸವಾಗುವ ಹಲವಾರು ಅನಿರ್ವಚನೀಯ ಪ್ರಸಂಗಗಳನ್ನು ಕವಿಯ ಒಡನಾಟದಲ್ಲಿ ಕಂಡಿದ್ದೇನೆ, ಅವರ ಸವಿ ಕಹಿಗಳನ್ನು 'ಜೀಯ ಹಸಾದ'ವೆಂದು ಉಂಡಿದ್ದೇನೆ.

ಬೇಂದ್ರೆ ಅನುಭಾವಿ ಕವಿ ಎನ್ನುವವರಿದ್ದಾರೆ. ಅಂತೆಯೇ ಅವರು ಮಧುರಚೆನ್ನರಂತೆ ಶೇಕಡಾ ನೂರರ ಅನುಭಾವ ಕವಿ ಅಲ್ಲ ಎನ್ನುವ ವಿಮರ್ಶಕರೂ ಇದ್ದಾರೆ. ನನಗಂತೂ ಅವರು ಭಾರತೀಯ ಸಂಸ್ಕೃತಿಯ ಅಂತರಾತ್ಮವನ್ನು ತನ್ನ ಪ್ರತಿ ಶಬ್ದದಲ್ಲಿಯೂ ಪುಟಸುತ್ತಿದ್ದ, ಸ್ಫುರಿಸುತ್ತಿದ್ದ ಓರ್ವ ಮಹಾ ಕವಿ. ಕೇವಲ ಇಂದ್ರಿಯ ಗೋಚರವಲ್ಲದ, ವಸ್ತುಸ್ಥಿತವಲ್ಲದ ಏನನ್ನೋ ಹೇಳ ಹೊರಡುವ ಕಾವ್ಯ ಮಾರ್ಗಕ್ಕೆ ಹಿಂದಿಯಲ್ಲಿ ರಹಸ್ಯವಾದ, ಛಾಯಾವಾದ ಎನ್ನುತ್ತಾರೆ. ನಮ್ಮಲ್ಲಿ ಅನುಭಾವ ಕಾವ್ಯ ಎನ್ನುತ್ತೇವೆ. ಕವಿಗೂ ಅನುಭಾವಿಗೂ ಇರತಕ್ಕ ಅಂತರ ಕಡಿಮೆ. ಕವಿ ಬರೆವುದೆಲ್ಲ ತತ್ವ ಪದವೇ, ಅಂದರೆ ಪದಗಳ ಹಿಂದೆ ತತ್ವಗಳು ತಲೆಮರೆಸಿಕೊಂಡು ಇರುತ್ತವೆ. 'ಇದು ಬರಿ ಬೆಳಗಲ್ಲೋ ಅಣ್ಣಾ' ಕೋರಿಕೆಗೆ ಸುಲಭ ಗ್ರಾಹ್ಯವೆನ್ನುವ ಈ ಬೆಳಗು—ಕವಿಕಂಡ ಕಾಣ್ಕೆಯ ಬೆಳಗು. ನಿಗೂಢವಾದ, ಗಾಢವಾದ ಕವಿಯ ಹೃದಯಾಂತರಾಳದಲ್ಲಿ ಪ್ರಚೋದಿತವಾದ ಸೂರ್ಯೋದಯದ ಬೆಳಗದು, ಸಕಲ ಜೀವ ಜಾತಿಯನ್ನು ಉಸಿರಾಡಿಸುವ, ಬದುಕಿಸುವ ಬೆಳಗು.

೨

ಬೇಂದ್ರೆಗೆ ಅದೇನೋ ಒಂದು ಪ್ರಚ್ಛನ್ನ ಶಕ್ತಿ ಇರುವುದನ್ನು ಒಂದೆರಡು ಉದಾಹರಣೆಗಳಿಂದ ಉದಾಹರಿಸುತ್ತೇನೆ. ನಾನು ಕಾಲೇಜಿನ ಮುಖ್ಯಸ್ಥನಾಗಿ, ಅಧಿಕಾರ ಸ್ವೀಕರಿಸುವ ದಿನ ನಾನೇ ಕರೆದ ಅಧ್ಯಾಪಕರ ಸಭೆಯಲ್ಲಿ ಬೇಂದ್ರೆ ಒಂದು ಉದ್ಬೋಧಕ ಭಾಷಣ ಮಾಡಿದರು. ಅದರ ವಿಷಯ ಏನು ಗೊತ್ತೇ? ಮೈತ್ರಿಯ ಮಹತ್ವ. ನಾನು ಆಗ ತರುಣ, ನನ್ನ ಅಧ್ಯಾಪಕ ವರ್ಗದವರೂ ತರುಣರೇ. ಕ್ಷಣಾರ್ಧದಲ್ಲಿ ಬೇಂದ್ರೆ ಪರಿಸ್ಥಿತಿಯನ್ನು ಅರ್ಥವಿಸಿಕೊಂಡರು. ಸಮಾನ ವಯಸ್ಕರಲ್ಲಿ, ಸಮಾನ ಗುಣಶೀಲಗಳಿರಬೇಕಾಗಿಲ್ಲ ತಾನೇ. ಹಾಗಾದರೆ ಒಂದು ಸಮುದಾಯವಾಗಿ ಬಾಳಬೇಕಾದರೆ ಅನುಸರಿಸಬೇಕಾದ ತತ್ವವೇ ಮೈತ್ರಿ ಎಂದು ಅವರಿಗೆ ಒಂದು ಪ್ರತಿಭಾನದಂತೆ (Intuition) ಹೊಳೆದದ್ದೇ ಅವರಿಂದ ಮೈತ್ರಿಯ ತಂತಿಯನ್ನು ಮೀಟುವಂತೆ ಮಾಡಿತು.

ಬೇಂದ್ರೆ ಇನ್ನೊಮ್ಮೆ ಮುಂಬಯಿಯಲ್ಲಿ ಭೆಟ್ಟಿಯಾದರು. ಅಲ್ಲಿಯ ಯಾವುದೋ ಕರ್ನಾಟಕ ಸಂಘದಲ್ಲಿ ಭಾಷಣ. ಮುಂಬಯಿಯಲ್ಲಿ ಒಂದೇ ಕರ್ನಾಟಕ ಸಂಘವಲ್ಲ. ಒಂದೊಂದು ಮೂಲೆಗೆ ಒಂದೊಂದು ಇರುತ್ತದೆ. ಅವುಗಳಿಗೆ ತೀವ್ರ ಪೈಪೋಟಿಯೂ ಕಲಹ ಪ್ರಸಂಗಗಳೂ ಇರುತ್ತವೆ. ಪ್ರಸ್ತುತ ಬೇಂದ್ರೆ ಭಾಷಣ ನಡೆದದ್ದು ಆ ಕರ್ನಾಟಕ ಸಂಘದಲ್ಲಿ ಒಡಕು ಹುಟ್ಟಿ ಏನೇನೋ ಕ್ಷುದ್ರ ವಿಚಾರಗಳು ತಲೆ ಎತ್ತಿದ ಒಂದು ಅವಸರ್ಪಿಣಿ ಸಂದರ್ಭವಾಗಿತ್ತು. ಬೇಂದ್ರೆಯವರು ಅಲ್ಲಿ ವಿಸ್ತರಿಸಿದ ವಿಷಯ 'ಸಮರಸವೇ ಜೀವನ.'

ಮೂರನೆಯ ಸಂದರ್ಭ ಇನ್ನಷ್ಟು ಸ್ವಾರಸ್ಯಕರವಾದ್ದು. ಕವಿಗೆ ಕಾಲಜ್ಞಾನವಿರುವಂತೆ ಅನ್ನಿಸಬೇಕಾದ ಒಂದು ಘಟನೆ. ಉಡುಪಿಯಲ್ಲಿ ಭಾಷಣ ಮಾಡುವ ವೇಳೆ ಅವರು ಭರತ ಬಾಹುಬಲಿಯ ಆಖ್ಯಾನದಲ್ಲಿ ಭರತನು ತನ್ನ ಹೆಸರನ್ನು ವೃಷಭಾಚಲದಲ್ಲಿ ಬರೆಯಲು ಆಜ್ಞಾಪಿಸಿದಾಗ ದೂತರು ಆ ಬೆಟ್ಟ ಈಗಾಗಲೇ ಹಿಂದಿನ ಚಕ್ರವರ್ತಿಗಳ

ಹೆಸರುಗಳಿಂದ ಇಡಿಕಿರಿದು ಇನ್ನಲ್ಲಿ ಸ್ಥಳವೇ ಇಲ್ಲವೆಂದರಂತೆ. ಹಾಗಾದರೆ ಅದನ್ನು ಅಳಿಸಿ ನನ್ನದನ್ನು ಬರೆಯಿರಿ ಎಂದನಂತೆ ಮಹಾ ದುರಹಂಕಾರಿ ಸಾಮ್ರಾಟ. ಈ ಕಥೆಯನ್ನು ಬೇಂದ್ರೆ ಉದಾಹರಿಸಿದ್ದು ಒಂದು ಪ್ರಾಥಮಿಕ ಶಾಲೆಯಲ್ಲಿ. ಅದಕ್ಕೊಂದು ಐತಿಹ್ಯವಿತ್ತು. ಅದರ ಹೆಸರು ನಗರ ಸಭೆಯ ಅಧ್ಯಕ್ಷರ ಹೆಸರು ಹೊತ್ತು ಕೆಲಗಾಲ ಕಳೆದ ಮೇಲೆ ಇನ್ನೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಅವರ ಹೆಸರನ್ನಳಿಸಿ ಇನ್ನೊಂದು ಹೆಸರು (ಮಹಾತ್ಮ ಗಾಂಧೀಯವರದ್ದು) ಇಟ್ಟಿದ್ದರಂತೆ. ಕೆಲವು ವರ್ಷ ನಡೆದ ಹೋರಾಟದಲ್ಲಿ ಪುನರಪಿ ಹಳೇ ಹೆಸರನ್ನು ಪ್ರತಿಷ್ಠಾಪಿಸಲು ಮಾಜಿ ಅಧ್ಯಕ್ಷರು ಹೋಗಿದ್ದರಂತೆ. ಹೆಸರಿನ ಅಹಂಕಾರ ಏನೇನು ಮಾಡಿಸದು? ಈ ನಮ್ಮ ಸ್ಥಾನೀಯ ಐತಿಹ್ಯದ ಗಂಧಗಾಳಿ ಇಲ್ಲದ ವರಕವಿಯ ಬಾಯಿಂದ ಅಲ್ಲಿ ಹೊರಟದ್ದು ಭರತನ ಅಹಂಕಾರದ ಕಥೆ. ಇದು ಸ್ಥಳದ ಮಹಾತ್ಮೆಯೋ ಕವಿಗಾದ ಸಾಕ್ಷಾತ್ಕಾರವೋ ಎಂದು ನಾನು ಅಚ್ಚರಿ ಪಟ್ಟಿದ್ದೆ ಆಗ.

೩

ಬೇಂದ್ರೆಯವರೇ ಒಳಗಿನ ಬೇಂದ್ರೆ ಹೊರಗಿನ ಬೇಂದ್ರೆ ಎಂಬುದಾಗಿ ಪಾಲು ಮಾಡಿ ಹೊರಗಿನ ಬೇಂದ್ರೆ ಮಹಾಜಗಳ ಗಂಟ ಎಂದು ತನ್ನನ್ನು ತಾನೇ ಲೇವಡಿ ಮಾಡಿಕೊಳ್ಳುತ್ತಿದ್ದರು. ಅದರ ಅನುಭವವನ್ನು ಅವರು ತನ್ನನ್ನು ಕರೆದವರೆಲ್ಲರಿಗೂ ಉಣಿಸಿಯೇ ಇದ್ದಾರಿ. ಸಿಟ್ಟು ಬಂದಾಗ ಉಗ್ರನರಸಿಂಹನೇ ಆಗಿ ಬಿಡುತ್ತಿದ್ದರು. ನಾನು ಬೇಂದ್ರೆಯವರ ನರಸಿಂಹಾವತಾರ ಕಂಡಿದ್ದೇನೆ. ಒಮ್ಮೆ ಸಾನವರನ್ನು ಊರಿನ ನಾಡಹಬ್ಬಕ್ಕೆ ಕರೆದಾಗ ಹೀಗೂ ಆಯಿತು. ಮನೆಯೊಳಗೆ ಕಾಲಿಡುವಾಗಲೇ ಕನಲಿ ಕೆಂಡವಾಗಿದ್ದರು. ಬಂದವರೇ ಮಂಚದ ಮೇಲೆ ಎರಗಿದರು, ಹಾವು ಬುಸುಗುಟ್ಟುವಂತೆ ಹೊರಳಾಡುತ್ತ 'ಇಲ್ಲಿ ಕೇಳಿ ಇವತ್ತು ನಾನು ಇಪ್ಪತ್ತು ವರ್ಷಕಾಲ ಒಬ್ಬನ ಹತ್ತಿರ ಮಾತು ಬಿಟ್ಟಿದ್ದನಲ್ಲಾ ಆತನ ಜತೆಗೇ ಧಾರವಾಡದಿಂದ ಇಲ್ಲಿಯವರೆಗೆ ನಿಮ್ಮೀ ಕಾರಿನಲ್ಲಿ ಬರಬೇಕಾಯಿತು. ಮಾತಿಲ್ಲದೆಯೆ ಬರುವ ವೇದನೆ ಅನುಭವಿಸಬೇಕಾಯಿತು' ಎಂದು ಕೂಗಾಡಿದರು. ಸದರಿ ಸಹಯಾನಿ ಮಹಾಶಯ ಬೇಂದ್ರೆಗೆ ಅಗದೀ ಹತ್ತಿರದವರಾಗಿದ್ದು ತದನಂತರ ಬೇಂದ್ರೆಯಿಂದ ದೂರೀಕರಿಸಲ್ಪಟ್ಟ ಓರ್ವ ಧಾರವಾಡದ ಪ್ರತಿಷ್ಠಿತ ನಾಗರಿಕರಾಗಿದ್ದರು. ಮುಂದಿನ ನಾಲ್ಕು ದಿನ ಇಬ್ಬರನ್ನು ಸಂಭಾಳಿಸಬೇಕಲ್ಲವೆ, ಅದಕ್ಕಾಗಿ ಅವರಿಗೆ ಬಿಡಾರಮಾಡಿಕೊಟ್ಟೆ. ಬೇಂದ್ರೆಯನ್ನು ಮಾತ್ರ ನಮ್ಮ ಮನೆಯಲ್ಲೇ ಇರಗೊಡಿಸಿದೆ. ಇಂಥ ಜಾಣತನವನ್ನೆಷ್ಟೋ ಬಾರಿ ಮಾಡಿದ್ದೇನೆ.

ಇನ್ನೊಂದು ಸಂದರ್ಭದಲ್ಲಿ ಬೇಂದ್ರೆಯವರ ಸಲುವಾಗಿ ಕಳಿಸಿದ ಕಾರಿನಲ್ಲಿ ಇನ್ನು ಯಾರಾರೋ ಸೇರಿಕೊಂಡರು. ಧಾರವಾಡದಿಂದ ಉಡುಪಿಯ ಕಾರ್ಯಕ್ರಮಕ್ಕೆ ಬರುವವರೇ ಆಗಿದ್ದರೂ ಅವರಿಗಾಗಿ ಕಾರು ಕಳಿಸಿದ್ದಾಗಿರಲಿಲ್ಲ. ಆದರೆ ನಮ್ಮ ಕಾರ್ಯಕರ್ತರ ಅತ್ಯುತ್ಸಾಹದಿಂದ ಒಂದು ಅಚಾತುರ್ಯ ನಡೆಯಿತು. ಊರಿನ ನಡುವೆ ಇದ್ದ ಆ ಇತರರನ್ನು ತುಂಬಿಸಿಕೊಂಡು ಕಾರು ಸಾಧನಕೇರಿಗೆ ಮುಟ್ಟಿದಾಗ ಅದರಲ್ಲಿ ಇದ್ದದ್ದು ಒಂದೇ ಸೀಟು.

ಬೇಂದ್ರೆಗೆ ಮಾತ್ರ. ಅವರ ಶ್ರೀಮತಿಯವರೇನು ಮಾಡಬೇಕು? ಟ್ರಂಕು, ನೀರಿನ ಚೆಂಬುಸಿದ್ಧಗೊಳಿಸಿ ಉಡುಪಿಗೆ ಯಾತ್ರೆ ಹೊರಟಿದ್ದ ಆ ಮಹಾತಾಯಿ ಧಾರವಾಡದಲ್ಲೇ ಉಳಿಯಬೇಕಾಯಿತು. ಬೇಂದ್ರೆ ನಮ್ಮ ಮನೆಯ ಅಂಗಳದಲ್ಲೇ ತಮ್ಮ ಉಪನ್ಯಾಸ ಶುರುಮಾಡಿದರು. 'ಬಿಟ್ಟೀ ಬರಿದೇ ಬರಬೇಕಾಯಿತು. ಬಸ್ಸಾಗಿದ್ದರೆ ವಾಸಿಯಾಗಿತ್ತು. ನಿಮ್ಮ ಕಾರೇ ಕೈ ಕೊಟ್ಟಿತು' ಹೀಗೆ ಏನೇನೋ ಅಂದರು. ನರಸಿಂಹನ ಆವೇಶ ತಗ್ಗಿ ನಾರ್ಮಲ್‌ಗೆ ಬರಲು ಒಂದು ದಿನ ಹಿಡಿಯಿತು.

೪

ಬೇಂದ್ರೆ ನಮ್ಮಲ್ಲಿಗೆ ನಾಲ್ಕಾರು ಸಲ ಬಂದಿದ್ದಾರೆ ಎನ್ನುವ ನೆನಪು. ಬಹಳ ಜಾಗ್ರತೆಯಿಂದ ನನ್ನ ಹೆಂಡತಿ ಮಕ್ಕಳು ಅವರ ಊಟ ಉಪಚಾರಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಆದರೂ ಅಲ್ಲಲ್ಲಿ ಎಡವಿ ಬೀಳುವ ಪ್ರಸಂಗಗಳು. ಒಮ್ಮೆ ಮನೆಯಲ್ಲಿ ಅಡುಗೆ ಮಾಡಲಿಕ್ಕಾಗಿರಲಿಲ್ಲ ಹಾಸ್ಟಲಿಂದ ತರಿಸಿದ್ದೆ. ಒಂದೇ ಒಂದು ಸಲ. ನಾನೇ ಬಡಿಸುತ್ತಿದ್ದೆ—'ಏನೂ ಸ್ವಾಮಿ ಈ ಅಗಳು ತಿಂದು ಮುದುಕ ನುಂಗಲಾಗದೆ ಸಾಯಲಿ ಅಂತ ಮಾಡಿದ್ದೀರಾ?' ನಾನು ಅಪ್ರತಿಭನಾದೆ ಬೇರೇನೋ ಮಾತಿನಿಂದ ವಿಷಯಾಂತರ ಮಾಡಿದೆ. ರಾತ್ರಿಯ ಊಟದ ಸೊಗಸಿಂದ ಮಧ್ಯಾಹ್ನವನ್ನ ಮರೆಮಾಡಿದೆ. ಇನ್ನೊಂದು ಸಲ ಮೇಜಿನಲ್ಲಿ ಗೇರುಬೀಜ ಇಟ್ಟಿದ್ದೆ. 'ಎಲ್ಲಿದ್ದೀರಿ, ಬನ್ನಿ ಈ ಬೀಜ ಇಡೀ ನುಂಗಲಾರೆ, ಪುಡಿ ಮಾಡಿ ತನ್ನಿ' ಎಂದು ಬೊಬ್ಬೆ. ಅಷ್ಟು ಹೊತ್ತಿಗೆ ಬೇಂದ್ರೆಯವರ ಬಾಯಿಯ ದಂತ ಸಂಖ್ಯೆ ಇಳಿದದ್ದನ್ನು ನಾನುಮರೆತಿದ್ದೆ.

ಬೇಂದ್ರೆಯವರು ಇಲ್ಲಿಗೆ ಬಂದಾಗ ಅವರ ಹಿಂದಿನ ಸ್ನೇಹಿತರ, ಅಭಿಮಾನಿಗಳ ಪರಿಚಯ ಮಾಡಿಸುವುದು ನನ್ನ ಕರ್ತವ್ಯವಾಗಿರುತ್ತಿತ್ತು. ಮುಂಜಾನೆ ೩–೪ ಮಂದಿ, ಅಪರಾಹ್ನ ೩–೪ ಹೀಗೆ ಹೋದದ್ದು ಇದೆ. ಪ್ರತಿ ಸ್ಥಳದಲ್ಲೂ ತಿಂಡಿ ತೀರ್ಥ ಕೊಡುತ್ತಾರಲ್ಲವೆ? ಅದನ್ನ ಬೇಂದ್ರೆ ಸ್ವೀಕರಿಸುತ್ತಿದ್ದ ಶೈಲಿ ನನಗೆ ಬಲು ಮೆಚ್ಚಿಗೆಯಾಗುತ್ತಿತ್ತು. ತಂದಿಟ್ಟ ಪೇಯವನ್ನ, ತಿಂಡಿಯನ್ನ ಬೇಂದ್ರೆ ಮುಟ್ಟದ ನಾಟಕ ಮಾಡುತ್ತಿದ್ದರು. ನಿಜಕ್ಕೂ ಅವರ ಮಾತಿನ ನಯಾಗರಕ್ಕೆ ಆಕರ್ಷಿತರಾಗಿದ್ದ ಆತಿಥೇಯರು ಇವರು ಏನನ್ನೂ ತಿನ್ನದೆ ಕುಡಿಯದೆ ಹೋದುದರ ಅರಿವು ಪಡೆದದ್ದು ಬೇಂದ್ರೆ ಮನೆ ಬಿಟ್ಟಮೇಲೆಯೆ.

ಬೇಂದ್ರೆ ಬರುವಾಗ ನಾನು ಕಾಲೇಜಿನಲ್ಲಿ ಲೆಕ್ಚರರ್ ಆಗಿರುವಷ್ಟು ಕಾಲ ಅವರು ಹೋಗುವವರೆಗೂ ರಜೆ ಹಾಕಿ ಅವರ ಸಂಗಡವೇ ಇದ್ದು ಬಿಡುವೆ. ಇದು ನಾನು ಪ್ರಿನ್ಸಿಪಾಲಗಿರಿಗೇರಿದ ಮೇಲೆ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ನಾನು ನನ್ನ ಸಹೋದ್ಯೋಗಿ ಒಬ್ಬಬ್ಬರನ್ನು ನೇಮಿಸಿಕೊಂಡಿದ್ದೆ. ಬೇಂದ್ರೆಜತೆ ಮಾತನಾಡಲು ಅರ್ಥಾತ್ ಅವರು ಹೇಳಿದ್ದಕ್ಕೆ ಹುಂಗುಟ್ಟಲು ಯಾರಾದರೂ ಅವರು ಮುಂದೆ ಇರಲೇಬೇಕು. ಮಾತನಾಡಲು ಯಾರನ್ನಾದರೂ ಕೊಡದಿದ್ದರೆ ಬೇಂದ್ರೆ ಸಿಟ್ಟಿಗೇಳುತ್ತಿದ್ದರೆಂದು ಮೈಸೂರಿನ ಮಿತ್ರರು ಅವರು ವಿಶ್ವವಿದ್ಯಾನಿಲಯದ ಅತಿಥಿಯಾಗಿ ಬಂದಾಗ ಒಂದು ಟೈಮ್ ಟೇಬಲ್ ತಯಾರಿಸಿ ಬಿಡುತ್ತಿದ್ದರಂತೆ. ಯಾವ ಗಂಟೆಗೆ ಯಾರು ಅವರ ಮುಂದೆ ಕೂಡಬೇಕು. ಎಂಬ ವೇಳಾಪಟ್ಟಿ, ವ್ಯಕ್ತಿ ಬೇರೆ

ಬಂದರೂ ಬೇಂದ್ರೆಗೆ ತಮ್ಮ ಮಾತಿನ ಓಘದಲ್ಲಿ ಅರಿವಾಗುತ್ತಿರಲಿಲ್ಲ. ಶ್ರೋತೃವಿನ ಅನುಸ್ಯಾತತೆ ಕಾಯ್ದುಕೊಂಡರೆ ಸಾಕಲ್ಲವೆ?

೫

ಧಾರವಾಡದ ಪರಿಸರದ ನಿಸರ್ಗವನ್ನು ಅಷ್ಟು ಸುಂದರವಾಗಿ ಚಿತ್ರಿಸಿದ ವರಕವಿಗೆ ಧಾರವಾಡದ ಮಾನುಷ ಸನ್ನಿವೇಶ ಅಂಥ ಖುಷಿಕೊಡುವುದಾಗಿರಲಿಲ್ಲ. ವಯಸ್ಸಾದಂತೆ ಹಳೆಯ ಗೆಳೆಯರ ಗುಂಪು ಚದರಿ ಹೋದಂತೆ ಕವಿ ಏಕಾಂಗಿಯೇ ಆದದ್ದು ಮಾತ್ರವಲ್ಲ. ಸಾಕಷ್ಟು ಶತ್ರು ಸಂಗ್ರಹವನ್ನೂ ಮಾಡಿದ್ದಿರಬೇಕು. ಆದ್ದರಿಂದ ಧಾರವಾಡದ ಹೊರಗಿನ ಊರುಗಳಿಗೆ ಹೋದಾಗ ಹೆಚ್ಚು ಪ್ರಸನ್ನರಾಗಿರುತ್ತಿದ್ದರೋ ಏನೋ. ಅಂತೂ ಇದು ನನ್ನ ಅನುಭವ. ಅವರ ಸಿಟ್ಟು, ಸೆಡೆಯನ್ನು ಬಣ್ಣಿಸಿದ ನಾನು ಇವೆಲ್ಲ ಸಂಚಾರಿ ಭಾವಗಳೆಂದೂ ಉಡುಪಿಯ ವಾಸಕಾಲದಲ್ಲಿ ಅವರು ಪ್ರಸನ್ನರಾಗಿ ಇರುತ್ತಿದ್ದರೆಂದೂ ನನ್ನ ಭಾವನೆ, ಇಲ್ಲಿ ನನ್ನನ್ನು ಅರ್ಥ ಮಾಡಿಕೊಳ್ಳುವ ರಸಿಕರಿದ್ದಾರೆ, ಭಕ್ತರಿದ್ದಾರೆ, ಸಾಹಿತ್ಯ ಪ್ರೇಮಿಗಳಿದ್ದಾರೆ ಎನ್ನುವಾಗ ಬೇಂದ್ರೆ ಸುಪ್ರಸನ್ನರಾಗಿ ವೇದಿಕೆಯ ಮೇಲೂ ಅದಕ್ಕಿಂತ ಹೊರಗೂ ಆಡುತ್ತಿದ್ದ ಮಾತುಗಳ 'ಪರ್ವೆ ಇವ್ರ್ಯ ವಡೆಗುಂ' ಎಂದು ಮುದ್ದಣ ಹೇಳಿದಂತೆ ಸೊಗಯಿಸುತ್ತಿತ್ತು. ಆದ್ದರಿಂದ ಪ್ರಸನ್ನತೆಯ ಕೆಲವು ದೃಶ್ಯಗಳನ್ನು ಓದುಗರಿಗೆ ತೋರಿಸಬೇಕು.

ನನ್ನ ತರುಣ ಸಹೋದ್ಯೋಗಿ ಒಬ್ಬರು ಯೌವನದಲ್ಲಿಯೇ ತಮ್ಮ ಮಡದಿಯನ್ನು ಕಳೆದುಕೊಂಡಿದ್ದರು. ಎಳೆ ವಯಸ್ಸಿನ ಅವರಿಗೆ ಬೇಂದ್ರೆ ಉಪದೇಶಿಸಿದ ಸನ್ನಿವೇಶ ಅತ್ಯಂತ ಹೃದಯಸ್ಪರ್ಶಿಯಾಗಿತ್ತು. '........ರೇ ಬನ್ನಿ' ಎಂದು ತಮ್ಮ ಮಂಚದ ಮೇಲೆ ಕೂರಿಸಿಕೊಂಡು 'ನಿಮಗೊಂದು ಹೇಳ್ತೇನೆ, ನೀವು ಕೇಳಬೇಕು. ಏನೆಂದರೆ ನೀವಿನ್ನೂ ತರುಣರು, ಈಗಿನ ದುಃಖ ಮರೆತು ನೀವು ಇನ್ನೊಂದು ಮದುವೆ ಮಾಡಿಕೊಳ್ಳಿ' ಎಂದು ಹೇಳಿ ಅವರ ತಲೆಯ ಮೇಲೆ ಕೈಯಿಟ್ಟರು. ನನ್ನ ಸಹೋದ್ಯೋಗಿ ಬೇಂದ್ರೆ ಮಾತನ್ನು ಕೇಳಿ ಮತ್ತೆ ಸಂಸಾರ ರಥವನ್ನು ಹೂಡಿದರು. ಸುಖವಾಗಿದ್ದಾರೆ.

ಕೋಟಿ ರಾಮನಾಮ ಜಪಯಜ್ಞವನ್ನು ಮಾಡುವ ಒಬ್ಬ ಸಾಧಕರು ಬೇಂದ್ರೆಗೆ ಗಂಟುಬಿದ್ದಿದ್ದರು. ಅದು ಹಾವೇರಿಯಲ್ಲಿ ನಡೆಯುತ್ತಿತ್ತು. ಅಲ್ಲಿಗೆ ನಾನು ಬೇಂದ್ರೆಯವರನ್ನ ಕರೆದೊಯ್ದೆ, ಅರ್ಧ ತಾಸು ಬೇಂದ್ರೆಯವರು ಆ ಸಾಧಕನ ಹತ್ತಿರ ರಾಮನಾಮದ ಬಗ್ಗೆ ಚರ್ಚೆಮಾಡಿದರು. ಅಂದರೆ ಒಂದು ಸಿಟ್ಟಿಂಗ್ ತಮ್ಮದೇ ಉಪನ್ಯಾಸ ನೀಡಿದರು. ಆ ಸಾರಿ ಧಾರವಾಡಕ್ಕೆ ಹೋದೆ.

ನಾನು ಒಪ್ಪಂದದಂತೆ ಮನೆ ಮುಟ್ಟಿದೆ. ಬನ್ನಿ 'ಚಹಾ' ಎಂದರು. 'ಬೇಡಸಾರ್, ಹೊರಟು ಬಿಡುತ್ತೇನೆ' ಎಂದೆ. 'ಹಾಗಾದರೆ ತಗೊಳ್ಳಿ ಸಕ್ರೀ!? ಸಕ್ಕರೆಯನ್ನಾದರೂ ಬಾಯಿಗೆ ಹಾಕದೆ ಬೇಂದ್ರೆ ಮನೆ ಬಿಡುವಂತಿರಲಿಲ್ಲ. ಹಿರಿಯ ಜಿ.ವಿ. ಜೋಶಿ ನನ್ನ ಹತ್ತಿರ ಒಮ್ಮೆ ಹೇಳಿದ್ದರು. 'ನೋಡ್ರಿ, ಬೇಂದ್ರೆ ಮನೇಲಿ ಎಂಥ ಬಡತನವಲ್ಲೂ ಭಕ್ರಿಗೆ ತುಪ್ಪ ತಪ್ಪಿದ್ದಲ್ಲಾ, ಬಂದವರೂ ತಿನಬೇಕು ಉಣಬೇಕು.' ಈ ಮಾತು ನೆನಪು ಮಾಡುತ್ತಿರುವಂತೆ ಬೇಂದ್ರೆ ಹೊರಬಾಗಿ

ಲಿಗೆ ಬಂದು 'ಭಟ್ಟರೇ ನಾನು ನಿಮಗೆ ದಂಪತಿ ಪೂಜೆ ಮಾಡಬೇಕು. ಕರಕೊಂಡು ಬನ್ನಿ ಇನ್ನೊಮ್ಮೆ' ಎಂದು ನನಗೂ ನನ್ನ ಮನೆಯವಳಿಗೂ ಜಂಟಿ ಆಮಂತ್ರಣ ಇತ್ತರು. ಆದರೆ ನನ್ನ ದುರ್ದೈವದಿಂದ ಈ ಜಂಟಿ ಯಾತ್ರೆ ಸಾಧ್ಯವಾಗಲಿಲ್ಲ. ದಂಪತಿ ಪೂಜೆಯೂ ದೂರ ಉಳಿಯಿತು. ಈ ಅಪರಾಧಕ್ಕಾಗಿ ನನ್ನ ಹೆಂಡತಿ ಇಂದಿಗೂ ನನ್ನನ್ನು ಕ್ಷಮಿಸಿಲ್ಲ!

೧೯೭೦ ರ ದಶಕದಲ್ಲಿ ಬೇಂದ್ರೆಯವರ ಉಪನ್ಯಾಸ ಸರಣಿಯನ್ನು ಏರ್ಪಡಿಸಿ ಅವರನ್ನ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ದು ಹತ್ತು ಉಪನ್ಯಾಸ ಮಾಡಿಸಿದ್ದೆ. ಒಂದೊಂದರಲ್ಲಿ ಒಂದೊಂದು ವಿಷಯವನ್ನು ಎತ್ತಿಕೊಂಡು, ಕೊನೆಗೆ ಎರಡು ಮೂರು ಕವನಗಳನ್ನೂ ವಾಚಿಸಿ ಕವಿ ಜನಮನವನ್ನು ತೃಪ್ತಿಗೊಳಿಸಿದರು. ಇವನ್ನು ತರುವಾಯ 'ಮಾತೆಲ್ಲ ಜ್ಯೋತಿ' ಎಂಬ ಹೆಸರಲ್ಲಿ ಮುದ್ರಣವನ್ನು ಮಾಡಿದ್ದಾಯಿತು. ಹಾಗೆಯೇ ಇನ್ನೊಂದು ಸಂದರ್ಭದಲ್ಲಿ ಅವರ ಪ್ರೇಮಗೀತೆಗಳನ್ನು ಸಂಗ್ರಹಿಸಿ 'ಒಲವೆ ನಮ್ಮ ಬದುಕು' ಎಂಬ ಸಂಕಲನವನ್ನು ತಂದದ್ದಾಯಿತು. ಈ ಗ್ರಂಥದಲ್ಲಿ ವಿಶ್ವವಿಖ್ಯಾತ ಕಲಾವಿದ ಕೆ. ಕೆ. ಹೆಬ್ಬಾರರ ಆರು ರೇಖಾ ಚಿತ್ರಗಳಿವೆ.

ಮತ್ತೊಮ್ಮೆ ಎಂದೋ ಮಹಾಕವಿ ಬಂದು ಮೂರು ದಿನ ನಮ್ಮ ಮನೆಯಲ್ಲೇ ಇದ್ದರು. ಉಪನ್ಯಾಸಕ್ಕಾಗಿ ಹೋದಾಗ ಕೆಲವೊಮ್ಮೆ ಅವರ ಮನಸ್ಸಿಗೆ ಹಿತವಲ್ಲದ ಪ್ರಸಂಗಗಳು ನಡೆದವು. ಅದಕ್ಕೆ ಅವರ ಬೇಂದ್ರೆ ಶೈಲಿಯಲ್ಲಿ ತತ್ಕಾಲ ಪ್ರತಿಕ್ರಿಯೆ ತೋರಿಸಿದ್ದರೂ ಬಿಸುಪು ಆರಲಿಲ್ಲ. ಆದರೆ ನಿಜಕ್ಕೂ ಬೇಂದ್ರೆ ಸಿಟ್ಟು ಯಾರ ಮೇಲೂ ಆಗಿರಲಿಲ್ಲ. ತನ್ನ ಮೇಲೆಯೇ ತನಗೆ ಎನ್ನಬಹುದೇನೊ. ನಾನು–ಆನು–ತಾನುಗಳಲ್ಲಿ ಯಾವುದು ಸಿಟ್ಟನ್ನು ತೊಡಗುತ್ತದೋ, ನಡೆಸುತ್ತದೋ ಉಪಶಮನಗೊಳಿಸುತ್ತದೋ ಬಲ್ಲವರಾರು? ಆದರೆ ಕವಿ ಪ್ರಜ್ಞೆಯಲ್ಲಿ ತನ್ನದೇ ಎಂಬ ಎಲ್ಲವೂ ದಾಖಲಾಗುತ್ತಿತ್ತು. ಅದಕ್ಕೆ ನಿದರ್ಶನ ಈ ಪ್ರಸಂಗದಲ್ಲಿ ಅವರು ನುಡಿದ ಮಾತು. ಧಾರವಾಡಕ್ಕೆ ಹೋಗಲು ಅಣಿಯಾದ ಕಾರು ಬಂದು ಬಾಗಿಲಲ್ಲಿ ನಿಂತಿದೆ ಎನ್ನುವಾಗ ನಾನು ಒಳಗೆ ಬಂದು ಉಪ್ಪವಡಿಸಿದ್ದ ಬೇಂದ್ರೆಯವರನ್ನು ಎಬ್ಬಿಸಿದೆ, ರಥ ಸಿದ್ಧವಿದೆ ಎಂದೆ, ಕವಿ ಸಿದ್ಧರಾದರು. ಆ ಮೇಲೆ ನನ್ನನ್ನು ಮಂಚಕ್ಕೆ ಕರೆದು 'ಇಲ್ಲಿ ಕೂಡ್ರಿ ಭಟ್ರೇ ಈ ಸಾರಿ ನಿಮಗೆ ಬಹಳ ತೊಂದರೆ ಕೊಟ್ಟೆನಲ್ಲವೆ? ಕಣ್ಣೀರು ಹನಿಯಿತು ನನ್ನಲ್ಲೂ ಅವರಲ್ಲೂ' ಇಲ್ಲ ಸಾರ್ ಅವರಲ್ಲೇನಾಯಿತು' ಎಂದೆ 'ಮರೆತು ಬಿಡಿ' ಎಂದರವರು.

ಬದುಕಿಗೆ ಒಂದು ಅರ್ಥವಿದೆ ಎಂದು ಧನ್ಯತೆಯನ್ನು ತಂದ ಇಂಥ ರಸನಿಮಿಷಗಳನ್ನು ಮರೆಯುವುದಾದರೂ ಎಂತು? ನಮ್ಮ ಸಂಸ್ಕೃತಿಯ ಕೇಂದ್ರ ಬಿಂದುವಿನಲ್ಲಿ ನಿಂತು ಜಗತ್ತನ್ನೆಲ್ಲ ವ್ಯಾಪಿಸಿದ ಈ ಕವಿ ಚೇತನಕ್ಕೆ ನನ್ನ ನಮನ. ನನ್ನ ಬದುಕಿನ ಸ್ಫೂರ್ತಿಗೆ ಕಾರಣವಾದ ಬೇಂದ್ರೆ ಸಾವಿಲ್ಲಾಪ್ಯ ಅವರಳಿದ ಮೇಲೂ ನೆನಪಾಗಿ ಕಾಡುತ್ತಿದೆ. ತನು ಪಾವನ, ಮನಪಾವನವೆನಿಸುವ ಕವಿಯ ಇಂಥ ಸ್ಮರಣೀಯ ಪ್ರಸಂಗಗಳಿಗೆ ನಾನು ನಮಿಸುತ್ತೇನೆ.

# ಬೇಂದ್ರೆಯವರೊಡನೆ ಕಳೆದ ಕೆಲವು ರಸನಿಮಿಷಗಳು

ಎನ್. ಶ್ರೀಶಬಲ್ಲಾಳ

೧೯೬೫ ನವಂಬರ್ ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಕವಿ ದ.ರಾ. ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಒಂದು ಕವಿಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳು ಸರ್ವಶ್ರೀ ಕಯ್ಯಾರ ಕಿಂಞಣ್ಣ ರೈ, ಜಿ. ಎಸ್. ಶಿವರುದ್ರಪ್ಪ ಮತ್ತು ಬನ್ನಂಜೆ ಗೋವಿಂದಾಚಾರ್ಯ, ಇವರೆಲ್ಲರೂ ಕಾಲೇಜಿನ ಆಗಿನ ಪ್ರಾಂಶುಪಾಲ ಪ್ರೊ|| ಎಚ್. ಸುಂದರರಾಯರೊಡನೆ ವೇದಿಕೆಯಲ್ಲಿ ಕುಳಿತಿದ್ದರು. ಅಧ್ಯಕ್ಷತೆ ವಹಿಸಿದ್ದ ಬೇಂದ್ರೆ ಗೋಷ್ಠಿಯಲ್ಲಿ ಇತರ ಕವಿಗಳು ಓದಿದ ಕವಿತೆಗಳ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಹೇಳಿ, ತನ್ನ ಪಾಲಿನ ಕವಿತೆಗಳನ್ನು ಓದಲು ತೊಡಗಿದರು. ಅವುಗಳಲ್ಲೊಂದು ಕವಿತೆಯ ಶೀರ್ಷಿಕೆ: "ಸಹಸ್ರತಂತ್ರೀ ನಿಃಸ್ವನದಂತೆ".

ಆ ಕವಿತೆಯನ್ನು ಬರೆದ ಸಂದರ್ಭವನ್ನು ವಿವರಿಸುತ್ತಾ, ಬೆಂಗಳೂರಿಗೆ ರೈಲು ಪ್ರವಾಸ ಮಾಡುತ್ತಿದ್ದಾಗ ಆ ಕವಿತೆ ಮೂಡಿ ಬಂತು ಎಂದರು. ಆಗ ರೈಲುಗಾಡಿಯಲ್ಲಿ ಮೇಲುಗಡೆಯ (ಮಲಗುವ) ಆಸನ (Upper Berth) ದಲ್ಲಿ ಅವರು ಕುಳಿತಿದ್ದರಂತೆ. ಮಾತು ಮುಂದುವರಿಸುತ್ತಾ, ರೈಲುಗಾಡಿಯೊಳಗೆ ತನಗೆ ಮೇಲಂತಸ್ತಿನ ಆಸನಗಳೇ ಇಷ್ಟ ಎಂದರು. ಅದಕ್ಕೆ ಅವರು ಕೊಟ್ಟ ಕಾರಣ ಹಾಸ್ಯರಸಭರಿತವಾಗಿತ್ತು :—

"Being a Brahmin, I Prefer an Upper Berth to a Lower Berth."

("ನಾನು ಬ್ರಾಹ್ಮಣ. ಆದ್ದರಿಂದ ಕೆಳಗಡೆಯ Berth ಗಿಂತ ಮೇಲಂತಸ್ತಿನ Berth ನನಗೆ ಇಷ್ಟ.") ಎಂದರು.

(Berth (ಆಸನ)–ಈ ಶಬ್ದ ಉಚ್ಚಾರದಲ್ಲಿ ಜನ್ಮ-ಜಾತಿ ಸೂಚಕವಾದ Birth ಶಬ್ದವನ್ನೇ ಹೋಲುತ್ತದೆ. ಈ ಶಬ್ದಗಳ ಹೋಲಿಕೆಯನ್ನು ಬಳಸಿಕೊಂಡು ಬೇಂದ್ರೆ ಜಾತಿವಾದಿಗಳನ್ನು ಅಣಕಿಸಿದರು. ವೇದಿಕೆಯಲ್ಲಿದ್ದ ಪ್ರೊ|| ಸುಂದರರಾಯರಿಂದ ತೊಡಗಿ ಎಲ್ಲರೂ ಗೊಳ್ಳೆಂದು ನಕ್ಕರು. ಜಾತಿವಾದ ನಗೆಗಡಲಿನಲ್ಲಿ ಮಿಂದು ಮಡಿಯಾದಂತಿತ್ತು.

* * *

೧೯೭೧ ಫೆಬ್ರವರಿ, ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್

ಕಾಲೇಜಿನ ಆಗಿನ ಪ್ರಾಂಶುಪಾಲ ಪ್ರೊ|| ಕು. ಶಿ. ಹರಿದಾಸಭಟ್ಟರು ಕವಿ ದ. ರಾ. ಬೇಂದ್ರೆಯವರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಬರಮಾಡಿಕೊಂಡರು. ಹತ್ತಾರು ಕಡೆ ಅವರ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಕವಿ ಗೆಳೆಯ ಹರಿದಾಸಭಟ್ಟರ ಮನೆಯಲ್ಲಿ ಹತ್ತು ದಿನ ಅತಿಥಿಗಳಾಗಿ ನೆಲೆಸಿದ್ದರು. ಅವರು ಧಾರವಾಡಕ್ಕೆ ಹೊರಡುವ ಮುಂಚಿನ ದಿನ ಹರಿದಾಸಭಟ್ಟರು. ತನ್ನ ಮನೆಯಲ್ಲೀ ಬೇಂದ್ರೆಯವರನ್ನು ಸನ್ಮಾನಿಸಲು ಒಂದು ಸ್ನೇಹಕೂಟವನ್ನು ಏರ್ಪಡಿಸಿದ್ದರು.

ಆ ಸ್ನೇಹ ಕೂಟದಲ್ಲಿ ಕವಿಯ ಭಾಷಣ ಮುಖ್ಯವಾಗಿ ಸ್ನೇಹ ಅಥವಾ ಗೆಳೆತನದ ಕುರಿತಾಗಿತ್ತು. "ನಾನು ಈ ಕನ್ನಡ ಶಬ್ದ 'ಗೆಳೆಯ' ಎಂಬುದನ್ನು ಬಹಳ ವಿಶಿಷ್ಟ ಜನರಿಗೆ ಉಪಯೋಗ ಮಾಡುತ್ತೇನೆ. 'ಗಿಳಿ'–'ಗಿಳಿ' ಹೇಗೆ ಜತೆಗೂಡಿ ಹಾರುತ್ತಾ ಹೋಗುತ್ತವೆ, ಹಾಗೆ ಗೆಳೆಯರಿಗೆ ಪರಸ್ಪರರ ಸಹವಾಸದಲ್ಲಿ ಆನಂದ ಇರುತ್ತದೆ. ಹಾರೋದರಲ್ಲಿ ಕೂಡಾ ಆನಂದ ಇರುತ್ತದೆ. ಹತ್ತು ಕಡೆಹಾರಿ ಮತ್ತೆ ಒಂದು ಕಡೆ ಕೂಡೋದರಲ್ಲಿ ಆನಂದ ಇರುತ್ತದೆ. ಇಂಥ 'ಗಿಳಿ'ಯ ಜೀವನದೊಳಗಿನ 'ಗೆಳೆ' ಎಂಬ ಮಾತನ್ನು ಸುಮಾರು ೬೦ ವರ್ಷಗಳ ಅಂದಿನಿಂದ ಬಳಸಿಕೊಳ್ಳುತ್ತಾ ಬಂದಿದ್ದೇನೆ. ನನಗೆ ಮುಪ್ಪು ಬಂದರೂ ಆ ಶಬ್ದಕ್ಕೆ ಮುಪ್ಪು ಬಂದಿಲ್ಲ.... ಇಲ್ಲಿ ೮–೧೦ ದಿನ ಎಲ್ಲಾ ಸುಖಕರವಾಗಿ ಇತ್ತು. ಯಾಕೆ ಸುಖಕರವಾಗಿ ಇತ್ತು ಎಂದರೆ ಸುಖಕರವಾಗಿ ಇರಬೇಕು ಎಂಬ ನಮ್ಮ ಗೆಳೆಯನ ಅಪೇಕ್ಷೆ." ಮುಂತಾಗಿ ಗೆಳೆತನದ ಸುಖವನ್ನು ವಿವರಿಸಿ.

"ನನಗೆ ಕೆಲವರು ಕೇಳಿದ್ದಾರೆ: 'ನಿಮಗೆ ಕಾರ್–ಗೀರ್ ಬೇಡವೇ?" ಎಂತ. ಅದಕ್ಕೆ ನನ್ನ ಉತ್ತರ: 'ನನ್ನ ಗೆಳೆಯರಿಗೆ ಎರಡು ಕಾರ್ ಕೊಟ್ಬಿಡಿ. ಅವುಗಳಲ್ಲಿ ಒಂದನ್ನು ಅವರು ನನಗೆ ಬೇಕಾದಾಗ ಕೊಡುತ್ತಾರೆ. ಆ ಡ್ರೈವರನ್ನ ನೋಡಿಕೊಳ್ಳೋದು, ಕಾರ್ ಕ್ಲೀನ್ ಮಾಡೋದು ಯಾರಿಗೆ ಬೇಕು?" ಎಂದರು.

ಅವರ ಮಾತುಗಳನ್ನು ಕೇಳುತ್ತಿದ್ದಾಗ, ಹೃದಯಸಂಪನ್ನನಲ್ಲದ ಮನುಷ್ಯ ಕೊನೆತನಕ ಶ್ರೀಮಂತನಾಗಿ ಉಳಿಯಲಾರ ಎಂಬ ಭಾವನೆ ಬಂತು.

* * *

೧೯೭೧ ಫೆಬ್ರವರಿ. ಚುನಾವಣೆಯ ಹಿನ್ನೆಲೆಯಲ್ಲಿ ಹಲವು ಸಾಹಿತಿಗಳು ಸಾಹಿತ್ಯ ಹಾಗೂ ಶಿಕ್ಷಣರಂಗವನ್ನು ತೊರೆದು ಪಕ್ಷ ರಾಜಕಾರಣಕ್ಕೆ ಮುನ್ನುಗ್ಗುತ್ತಿದ್ದರು. ಯಥಾಚಾರ್ಯಃ ತಥಾ ಶಿಷ್ಯಃ ಎಂಬಂತೆ ವಿದ್ಯಾರ್ಥಿಗಳೂ ತಮ್ಮ ಹೆತ್ತವರನ್ನೂ ವಿದ್ಯಾಭ್ಯಾಸವನ್ನೂ ಮರೆತು ರಾಜಕೀಯ ಚಳುವಳಿಗಳಲ್ಲಿ ತೊಡಗಿದ್ದರು. ಅಲ್ಲಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ "ಮಾ ವಿದ್ವಿಷಾವಹೈ" ಎಂಬ ಶಾಂತಿಪಾಠದ ಬದಲು ಕ್ರಾಂತಿಪಾಠದ ಘೋಷಣೆಯೇ ಕೇಳುತ್ತಿತ್ತು. ಆ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದ ಕವಿ ದ. ರಾ. ಬೇಂದ್ರೆಯವರ ಸಮ್ಮುಖದಲ್ಲಿ ನಾವು ಕೆಲವರು ಈ ಸಾಹಿತಿಗಳ–ಶಿಕ್ಷಕರ–ವಿದ್ಯಾರ್ಥಿಗಳ ರಾಜಕಾರಣದ ಬಗೆಗೆ ಚರ್ಚಿಸುತ್ತಿದ್ದೆವು. ಸುಮ್ಮನೆ ಕುಳಿತಿದ್ದು ನಮ್ಮ ಮಾತುಗಳನ್ನು ಕೇಳುತ್ತಿದ್ದ ಕವಿ ಬೇಂದ್ರೆ ಥಟ್ಟನೆ ಹೇಳಿದ ಒಂದು ಮಾತು ನನ್ನ ನೆನಪಿನಲ್ಲಿ ಅಚ್ಚಳಿಯದಂತೆ ಉಳಿದಿದೆ:

"Poetry Itself is Intoxication. Politics is the worst Intoxication."

("ಕಾವ್ಯ ಸಾಹಿತ್ಯಗಳ ಆಸಕ್ತಿಯೇ ಒಂದು ತರದ ಉನ್ಮಾದ. ರಾಜಕಾರಣವಂತೂ ತುಂಬ ಕೆಟ್ಟ ಉನ್ಮಾದ, ಅಮಲು"). ಈ ರೀತಿ ತನ್ನ ಕಾವ್ಯ ಜೀವನದ ಇತಿಮಿತಿಗಳನ್ನು ತಾನೇ ಗುರುತಿಸುವ ಈ ಕವಿ ಬರೇ ಕವಿಯಲ್ಲ ಅನಿಸಿತು. ಬೇಂದ್ರೆ ತನ್ನ ಕಾವ್ಯಸ್ಪೃಷ್ಟ ಮಾತಿನ ಹಿಂದಿರುವ ಒಂದು ಮೌನದ ಗರ್ಭದಿಂದ ಮೂಡುತ್ತದೆ ಎಂದು ಒಂದು ಕಡೆ ಬರೆದಿದ್ದಾರೆ. ಮೇಲೆ ಬರೆದ ಮಾತನ್ನು ಕೇಳಿದಾಗ, ಆ ಮಾತುಗಳಲ್ಲಿ ಬೇಂದ್ರೆಯವರ ಮೌನದ ಧ್ವನಿ ಮೂಡಿದಂತಿತ್ತು.

---

ಮಮತೆಯಲ್ಲಿಯೂ ಸಮತೆ ಬೇಕು, ವಿಶ್ರಾಂತಿಯಲ್ಲಿ ಶಾಂತಿ,
ದುಃಖ ಸುಲಿದು ಸುಖವುಣ್ಣ ಬೇಕು, ನಗೆಯಲ್ಲಿ ಬೇಡ ಭ್ರಾಂತಿ,
ವೈರವಿಲ್ಲದಾ ವೀರ್ಯ ಬೇಕು, ಸೊಕ್ಕಿರದ ಶಕ್ತಿ ಬೇಕು,
ಭಂಡಿತನವಿರದ ಹಠವು ಇರಲಿ, ಆ ಸತ್ತ್ವಶ್ರದ್ಧೆ ಸಾಕು.

ಭವವು ಬೇಕು, ಅನುಭವವು ಬೇಕು, ಅನುಭಾವ ಬೇಕು ಒಳಗೆ,
ಸ್ವಯಂಭುತ್ವದಾ ಜ್ಞಾನ ಬೇಕು, ಆ ಧೀಸಮಾಧಿ ಬೆಳಗೆ,
ಮೂರು ಕಾಲಕೂ ನೂರು ಕಾಲದಾ ಸೃಷ್ಟಿ ದೃಷ್ಟಿ ಇರಲಿ,
ಅಷ್ಟಸಿದ್ಧಿಗಳು ಅಷ್ಟತನುವೊಂದನೆ ಕಟ್ಟಿಕೊಂಡು ಬರಲಿ.

'ಅರಳು ಮರಳು'—ಪು. ೩೪೮

# ಬೇಂದ್ರೆಯವರ ಕಾವ್ಯಭಾಷಾಂತರ

ಡಾ|| ಲಕ್ಷ್ಮೀನಾರಾಯಣ ಅರೋರಾ

ಗಾಳಿ ಬೀಸುವದು ನಿನ್ನ ನೂಕಿಸುತ ಮಂದ ಮಂದವಾಗಿ
ಚೂಚು ಚಾಚಿ ಚಾದಗೆಯು, ಎಡಕೆ ಕೂಗುವುದು ಚೆಂದವಾಗಿ ॥
ಬೆದೆಯ ನೆನೆದು ಬೆಳ್ಳಕ್ಕಿ ಬರುವವೋ ಸಾಲುಸಾಲುಗೊಂಡು
ಬೆನ್ನಗಟ್ಟುವವು ಕಣ್ಗೆ ಸೊಬಗ ನೀ ತಂದೆ ಎಂದುಕೊಂಡು ॥

ಈ ಬಗೆಯ ಸಾಲುಗಳನ್ನು ಓದಿದಾಗ ಇಲ್ಲಿಯ ಪದಪ್ರಯೋಗದ ನಾದ ಮಾಧುರ್ಯ, ಗೇಯತೆ, ಸುಲಲಿತಗಾವಿಯಾದ ನಿರ್ವಹಣ ಮತ್ತು ಸಂವಹನ ಸಾಮರ್ಥ್ಯಗಳು ಓದುಗರನ್ನು ಮೋಡಿಗೆ ಸಿಕ್ಕಿಸಿ ಇಡೀ ಕಾವ್ಯವನ್ನು ಓದಿ ಆಸ್ವಾದಿಸುವ ಪ್ರೇರಣೆ ನೀಡುತ್ತವೆ. ಈ ಮೇಲಿನ ಸಾಲುಗಳನ್ನು ಒಳಗೊಂಡಿರುವ ವರಕವಿ ದ. ರಾ. ಬೇಂದ್ರೆಯವರ 'ಮೇಘದೂತ' ಒಂದು ಅಪ್ರತಿಮ ಕಾವ್ಯಸೃಷ್ಟಿ. ಈ ಕಾವ್ಯದುದ್ದಕ್ಕೂ ಬೇಂದ್ರೆ ಅವರ ಅನುವಾದ ಪ್ರತಿಭೆ ತನ್ನದೇ ವೈಶಿಷ್ಟ್ಯವನ್ನು ಮೆರೆಯುತ್ತಾ ಮುನ್ನಡೆದಿರುವುದನ್ನು ನೋಡಬಹುದು.

ಬೇಂದ್ರೆಯವರು ಮೂಲಭೂತವಾಗಿ ಕವಿ. ಅವರ ಅನನ್ಯ ಕವಿಪ್ರತಿಭೆಗೆ ಪೋಷಕವಾಗಿ ಅವರ ಚೇತನ ನಾಟಕ, ಸಣ್ಣಕತೆ, ಹರಟೆ, ವಿಮರ್ಶೆ ಮುಂತಾದ ಕ್ಷೇತ್ರಗಳಲ್ಲಿ ದುಡಿದಿರುವುದುಂಟು. ಅನುವಾದ ಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ ಒಬ್ಬನು ಹಾರ್ನ್ ಕವಿಯನ್ನು ಇನ್ನೊಬ್ಬ ಮಹಾನ್ ಕವಿಯುಷ್ಟೆ ಯಶಸ್ವಿಯಾಗಿ ಭಾಷಾಂತರಿಸಬಲ್ಲ ಎಂಬ ಮಾತಿಗೆ ಬೇಂದ್ರೆಯವರು ಜ್ವಲಂತ ನಿದರ್ಶನವಾಗುತ್ತಾರೆ. ಅಂತೆಯೆ ಅದ್ಭುತ ಕಾವ್ಯ ಪ್ರತಿಭೆಯುಳ್ಳ ಕವಿಯೊಬ್ಬನು ಇನ್ನೊಬ್ಬ ಮಹಾಕವಿಯ ಕೃತಿಯ ಅನುವಾದಕ್ಕೆ ಕೈ ಹಾಕಿದಾಗ ಮೂಲನಿಷ್ಠತೆಯನ್ನು ಚಾಚೂ ತಪ್ಪದೆ ಕಾಯ್ದುಕೊಂಡು ಹೋಗುವ ನಿಯಮದಿಂದ ಹೇಗೆ ಮಾರ್ಗಸರಣ ಮಾಡುತ್ತಾನೆ, ದೂರ ಸಾಗುತ್ತಾನೆ ಎಂಬುದಕ್ಕೆ ಸಹ ಬೇಂದ್ರೆಯವರ ಕಾವ್ಯಭಾಷಾಂತರ ಉದಾಹರಣೆಗಳನ್ನು ಒದಗಿಸಬಲ್ಲದು.

ಕಾವ್ಯಾನುವಾದ ಪ್ರತಿಭೆ ಕವಿಯ ಕಾವ್ಯ ಸೃಷ್ಟಿ ಪ್ರತಿಭೆಯ ಒಂದು ಉಪೋತ್ಪನ್ನ. ಹಾಗಾಗಿ ಕವಿಯ ವ್ಯಕ್ತಿತ್ವ, ಅಧ್ಯಯನ, ಅಧ್ಯವಸಾಯ, ಆಳ–ವಿಸ್ತಾರ, ಅನುಭವ, ದರ್ಶನ ಇವೆಲ್ಲ ಆತ ಮಾಡುವ ಭಾಷಾಂತರಗಳಿಗೂ ಹಿನ್ನೆಲೆಯಾಗಿ ಪೋಷಣೆ ನೀಡುತ್ತವೆ. ಕಾವ್ಯ ಎಂಬುದು ಉಳಿದೆಲ್ಲ ಸಾಹಿತ್ಯ

ಪ್ರಕಾರಗಳಿಗಿಂತ ತುಂಬ ಸೂಕ್ಷ್ಮವಾಗಿರುವುದರಿಂದ ಕಾವ್ಯದ ಅನುವಾದ ಕೂಡ ಅಷ್ಟೇ ನಾಜೂಕಿನ ಕೆಲಸವಾಗುತ್ತದೆ, ಸಮಸ್ಯೆಗಳನ್ನು ಒಡ್ಡುತ್ತದೆ. ಬೇಂದ್ರೆಯವರಂತಹ ವಿಶಿಷ್ಟ ಪ್ರತಿಭೆ ಕೈಗೆ ಕಾಳಿದಾಸನಂತಹ ಕವಿವರೇಣ್ಯನ ಕೃತಿ ಸಿಕ್ಕಿದಾಗ ಹೊರ ಬೀಳುವ ಕೃತಿ ಒಂದು ಬಗೆಯ ತಟಿತ್ ಸ್ಪರ್ಶದ ಪರಿಣಾಮವೇ ಆಗುವುದರಲ್ಲಿ ಆಶ್ಚರ್ಯವೇನಿದೆ!

ಬೇಂದ್ರೆಯವರು ಮಾಡಿರುವ ಕಾವ್ಯ ಭಾಷಾಂತರಗಳಲ್ಲಿ 'ಮೇಘದೂತ' (೧೯೪೩) ಅತ್ಯಂತ ಮಹತ್ವಪೂರ್ಣವಾದದ್ದು, ಈ ಮೊದಲೇ ಅವರು ಗುರುದೇವರಾನಡೆಯವರ ಗ್ರಂಥವನ್ನು ಇಂಗ್ಲಿಷಿನಿಂದ 'ಉಪನಿಷತ್ ರಹಸ್ಯ' (೧೯೨೮) ಎಂಬ ಹೆಸರಿನಲ್ಲಿ ಅನುವಾದಿಸಿದ್ದರು. ಹಾಗೆಯೆ ಶ್ರೀ ಅರವಿಂದರ ಮೂಲ ಇಂಗ್ಲಿಷ್ ಗ್ರಂಥವೊಂದನ್ನು 'ಭಾರತೀಯ ನವಜನ್ಮ' (೧೯೩೭) ಎಂಬುದಾಗಿ ಕನ್ನಡಕ್ಕೆ ತಂದಿದ್ದರು. ಇವೆರಡೂ ಗದ್ಯ ಗ್ರಂಥಗಳು. ಅವರ ಇತರ ಅನುವಾದಗಳಲ್ಲಿ 'ಶ್ರೀ ಅರವಿಂದರ ಯೋಗ' (೧೯೪೭) 'ಗುರುಗೋವಿಂದ ಸಿಂಗ್' (೧೯೬೬), 'ಭಗ್ನ ಮೂರ್ತಿ' (೧೯೭೨), ಆ.ರಾ. ದೇಶಪಾಂಡೆಯವರ ಮರಾಠಿ ಕೃತಿಯ ಅನುವಾದ) ಇವುಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಕಾವ್ಯಭಾಷಾಂತರಗಳಲ್ಲಿ ಸಾಹಿತ್ಯಅಕಾಡೆಮಿಗಾಗಿ ಅನುವಾದಿಸಿದ ರವೀಂದ್ರನಾಥ ಠಾಕೂರರ 'ನೂರೊಂದು ಕವನ' (೧೯೬೭) ಮತ್ತು ಕಬೀರದಾಸರ ರಚನೆಗಳನ್ನೊಳಗೊಂಡ 'ಕಬೀರವಚನಾವಲಿ' (೧೯೬೮) ಗಮನಾರ್ಹ.

ಪ್ರಸಕ್ತ ಪ್ರಬಂಧವಲ್ಲಿ 'ಮೇಘದೂತ' ವನ್ನು ಪ್ರಮುಖವಾಗಿ ದೃಷ್ಟಿಯಲ್ಲಿಟ್ಟು ಕೊಂಡು ವಿಚಾರ ಮಾಡಲಾಗಿದೆ. ಬೇಂದ್ರೆಯವರು ಮಾಡಿರುವ ರವೀಂದ್ರರ ಮತ್ತು ಕಬೀರದಾಸರ ರಚನೆಗಳ ಅನುವಾದದ ಬಗ್ಗೆ ಸ್ಥೂಲವಾಗಿ ವಿಚಾರಮಾಡಲಾಗಿದೆ.

## 'ಮೇಘದೂತ'

ಕವಿ ಬೇಂದ್ರೆಯವರು ೧೯೪೩ ರಲ್ಲಿ ಹೊರತಂದ ತಮ್ಮ 'ಮೇಘದೂತ'ದ ಪ್ರಸ್ತಾವನೆಯಲ್ಲಿ ಆಡಿರುವ ಮಾತುಗಳಿಂದ ಭಾಷಾಂತರದ ಬಗ್ಗೆ ಅವರು ತಳೆದಿರುವ ಧೋರಣೆ ಸ್ಪಷ್ಟವಾಗುತ್ತದೆ. "ನನ್ನ ಕನ್ನಡ ಮೇಘದೂತ, ಭಾಷಾಂತರ ಎಂದು ನಾನೂ ಹೇಳಿಕೊಳ್ಳಲಾರೆ. ಆ ಗುಣ ಇದಕ್ಕಿಲ್ಲ. ಆದರೆ ಮೇಘದೂತದ ಪ್ರತಿ ಪದ್ಯ ಓದಿ, ನನಗಾದ ಆನಂದವನ್ನು, ನಾನು ಕಂಡ ಚೆಲುವನ್ನು ಈ ಕನ್ನಡ ಪದಗಳಲ್ಲಿ ಕಟ್ಟಿದ್ದೇನೆ, ರಚಿಸಿದ್ದೇನೆ." ಅಂದರೆ ಬೇಂದ್ರೆಯವರು ಮೂಲದ ಹೊರಮೈಗಿಂತ ಒಳಮೈಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾರೆ ಎನ್ನಬಹುದಾಗುತ್ತದೆ. ಭಾಷೆ ಹಾಗೂ ಇತರ ಮೂಲದ ಚೌಕಟ್ಟುಗಳಿಗಿಂತ ಭಾವಕ್ಕೇ ಅವರು ಹೆಚ್ಚು ಪ್ರಾಧಾನ್ಯ ನೀಡುತ್ತಾರೆ. ಅವರೇ ಭಾವಿಸುವಂತೆ "ಕಾಳಿದಾಸನ ಯಕ್ಷನು ಕಾಳಿದಾಸನೇ ಇರಬಹುದು; ಅಥವಾ ಎಲ್ಲ ಶುದ್ಧ ಹೃದಯಗಳ ರಾಗೋನ್ನತ ಅಭೀಪ್ಸೆಯೇ ಇರಬಹುದು. ಯಕ್ಷರದು ದೇವಜಾತಿ. ಇಲ್ಲಿಯ ವಿರಹ ಮಾನವೀಯ. ಇಲ್ಲಿಯ ಕಾವ್ಯ ಮಾನವತೆಯಿಂದ ದಿವ್ಯತೆಗೆ, ರಾಮಗಿರಿಯಿಂದ ಕೈಲಾಸದೆಡೆಯ ಅಲಕಾವತಿಗೆ ಹೋಗುವ ರಾಜಹಂಸಗಳ ಆಕಾಶಮಾರ್ಗ. ನೀರು ಮಿಂಚುಗಳಿಂದ ತುಂಬಿದ ಮೂಕಮೇಘವು,

ಮಾತಿಗಳವಡದ ರಸದ ಪುಂಜವು! ಮೇಘ ದೂತವನ್ನು ಹೇಗೆ ಸವಿದರೂ ರುಚಿ."

ಕಾಳಿದಾಸ ಮಹಾಕವಿಯ 'ಮೇಘ ದೂತಮ್' ಸಂದೇಶಕಾವ್ಯ, ವಿರಹಕಾವ್ಯ, ಕುಬೇರನ ಕೋಪಕ್ಕೆ ತುತ್ತಾಗಿ ಯಕ್ಷ ನೊಬ್ಬನು ರಾಮಗಿರಿ ಆಶ್ರಮದ ಬಳಿ ತಂಪಾದ ನೆರಳಿನ ಗಿಡಮರಗಳ ನಡುವೆ ನೆಲೆಸಿದ್ದಾನೆ. ಭರತ ಭೂಮಿಯ ಅನೇಕಾ ನೇಕ ನದಿಬೆಟ್ಟಗಳನ್ನು ದಾಟಿ, ಹಿಮಾಲ ಯದ ಅದ್ಭುತವಾದ ನಿಸರ್ಗಸಿರಿಯಿಂದಾ ಚೆಗೆ, ಬಿಳಿಯ ಮಂಜಿನ ಶಿಖರಗಳಿಂದಾ ವೃತವಾದ ಅಲಕಾವತಿ ನಗರದಲ್ಲಿ ಅವನಿ ಗಾಗಿ ಸ್ನಿಗ್ಧಸುಕುಮಾರ ಜೀವವೊಂದು ಪರಿತಪಿಸುತ್ತಿದೆ. ಆ ಜೀವವೇ ಆ ಯಕ್ಷನ ಮಡದಿ. ಮುಗ್ಧಳಾದ, ಮಧುರ ಭಾವನೆ ಗಳಿಂದ ಕೂಡಿದ ಆ ಪ್ರೇಮಪುತ್ಥಳಿಯನ್ನು, ತನ್ನ ಪ್ರಿಯೆ ಯಕ್ಷಿಣಿಯನ್ನು, ಅವನು ಅನಿವಾರ್ಯವಾಗಿ ತೊರೆದು ಬಂದಿದ್ದಾನೆ. ತನ್ನ ಮನದಾಳದ ಉತ್ಕಟ ವಿರಹವೇದನೆ ಯನ್ನು ನಿವೇದಿಸಲು ಪಾತ್ರರಾದವರು ಯಾರೂ ಕೂಡಲೇ ದೊರಕದೆ ಹೋದಾಗ ಯಕ್ಷನಿಗೆ ಆಗಸದಲ್ಲಿ ಮುಂದವಾಗಿ ಸಾಗು ತ್ತಿದ್ದ ಬೆಳ್ಮುಗಿಲಿನ ದರ್ಶನವಾಗುತ್ತದೆ. ಆ ಮೇಘನ ಮೂಲಕವೇ ತನ್ನ ಸಂದೇಶ ವನ್ನು ಕಳುಹಿಸಲು ಅವನು ಉದ್ಯುಕ್ತ ನಾಗುತ್ತಾನೆ.

ಮಡದಿಯನ್ನು, ಬಂದು ನಿಂತಿರುವ ಶ್ರಾವಣದಲ್ಲಿ ಆ ಕೋಮಲಾಂಗಿಯ ಸ್ಥಿತಿ ಯನ್ನು ನೆನೆದ ಯಕ್ಷನಿಗೆ, ಮೋಡದ ಮೂಲಕ ಸಂದೇಶವನ್ನು ಕಳುಹಿಸುವಭರ ದಲ್ಲಿ ರಾಮಗಿರಿಯಿಂದ ಅಲಕಾವತಿಯವರೆ ಗಿನ ಮಾರ್ಗ ಸ್ಪಷ್ಟವಾಗಿ, ಸ್ಫುಟವಾಗಿ ಕಣ್ಣ ಮುಂದೆ ತೆರೆಯುತ್ತದೆ. ಅವನು ಮೋಡಕ್ಕೆ ನೀಡುವ ಮಾರ್ಗದರ್ಶನವನ್ನು ನೋಡಿದರೆ ಆ ಹಾದಿಯ ಸಮಸ್ತ ವಿವರಗಳೂ ಅವನಿಗೆ ಚಿರಪರಿಚಿತವಾದವು ಎನಿಸುತ್ತದೆ, ಪ್ರತ್ಯಕ್ಷ ವಾಗಿ ಅವನೇ ಕಾಣುತ್ತಾ ವಿವರಿಸುತ್ತಿದ್ದಾ ನೇನೊ ಎನಿಸುತ್ತದೆ.

ಕವಿಕಲ್ಪನೆಯ ಮೇಘವು ರಾಮಗಿರಿಯ ಆಶ್ರಮದಿಂದ ಉತ್ತರ ದಿಕ್ಕಿನತ್ತ ಸಾಗು ತ್ತದೆ. ದಾರಿಯಲ್ಲಿ ಕಬ್ಬಿನ ಗದ್ದೆಗಳನ್ನು ದಾಟಿ, ಹಳ್ಳಿಗಳ ಮೇಲೆ ಹಾಯ್ದು, ನಿಸರ್ಗದ ಆ ಚೆಲುವನ್ನೆಲ್ಲ ಆಸ್ವಾದಿಸುತ್ತಾ ರೇವಾನದಿಯ ನೀರನ್ನು ಕುಡಿದು ಮೈದುಂಬಿಕೊಂಡು ವಿದಿಶಾನಗರಿಯತ್ತ ಪ್ರಯಾಣ ಬೆಳೆಸುತ್ತದೆ. ಎಲ್ಲೆಲ್ಲಿ ಹೇಗೆ ಎಷ್ಟುಹೊತ್ತು ತಂಗಬೇಕೆಂಬ ನಿರ್ದೇಶನ ವನ್ನು ಯಕ್ಷನೇ (ಕವಿಯೆ) ಮೇಘಕ್ಕೆ ನೀಡಿರುತ್ತಾನೆ. ಅವರಂತೆ ಮೇಘ ಮುಂದು ವರೆದು ಉಜ್ಜಯಿನಿ ನಗರವನ್ನು ತಲಪು ತ್ತದೆ. ಉಜ್ಜಯಿನಿಯ ವೈಭವೋಪೇತ ವಾದ ವರ್ಣನೆ 'ಮೇಘದೂತ'ದಲ್ಲಿ ಅಪೂರ್ವರಿಯಾಗಿಯೆ ದೊರೆಯುತ್ತದೆ. ನಗರದ ಮೇಲುಪ್ಪರಿಗೆಗಳ ಮೇಲೆ ವಿಶ್ರಮಿಸಿ ಲಲನೆಯರ ಲಾವಣ್ಯದಿಂದ ಪುಳಕಿತ ಗೊಂಡು, ಆ ನಗರಿಯ ವೈಭವ ಸಮೃದ್ಧಿ ಗಳಿಂದ ಬೆರಗಾಗಿ ಮೇಘ ಅಲ್ಲಿಂದ ಅವಂತಿಯ ಪುಣ್ಯಭೂಮಿಗೆ ಬಂದು ಅಲ್ಲಿಯ ಮಹಾ ಕಾಲಸ್ವಾಮಿಯ ಪೂಜೆಗೆ ತನ್ನ ನಾದ ಕೈಂಕರ್ಯವನ್ನು ಸಲ್ಲಿಸುತ್ತದೆ. ಅಂತೆಯೆ, ವಿನೋದಾರ್ಥವಾಗಿ ಅನು ಪ್ರಿಯತಮರತ್ತ ಕಳ್ಳಹೆಜ್ಜೆಯಿಟ್ಟು ಸಾಗುತ್ತಿದ್ದ ಪ್ರೇಯಸಿ ಯರನ್ನು ಕಂಡು ಗುಡುಗಿ ಬೆಚ್ಚಿ ಬೀಳಿಸು ತ್ತದೆ.

ಅಲ್ಲಿಂದ ಮುಂದೆ ಸಾಗಿ ಗಂಭೀರಾ ನದಿಯ ತಿಳಿನೀರಿನಲ್ಲಿ ಜಲಕ್ರೀಡೆಯಾಡಿ ಕುಮಾರ

ಸ್ವಾಮಿಯು ದೇವಗಿರಿಯತ್ತ ಹೊರಡುತ್ತದೆ. ಸ್ವಾಮಿಗೆ ಅಭಿಷೇಕಮಾಡಿ ಅಲ್ಲಿಂದ ಮುಂದೆ ಸಾಗಿ ಚರ್ಮಣ್ವತೀ ನದಿಯಲ್ಲಿ ನೀರು ಕುಡಿದು ದಣಿವಾರಿಸಿಕೊಂಡು ಬ್ರಹ್ಮಾವರ್ತಕ್ಕೆ ಬಂದು ಸೇರುತ್ತದೆ. ಹಾಗೆಯೆ ಮುಂದೆ ಪ್ರಯಾಣ ಬೆಳೆಸಿ ಕುರುಕ್ಷೇತ್ರದಲ್ಲಿ ಮಳೆಸುರಿಸಿ, ರೇವತಿನದಿಯ ನೀರುಕುಡಿದು ಗಂಗಾ, ಯಮುನಾ, ಬ್ರಹ್ಮಪುತ್ರಾ ನದಿಗಳ ಹಾಗೂ ವಿಶಾಲವಾದ ನದಿ ಬಯಲುಗಳ ಮೂಲಕ ಸಾಗಿ, ಆ ಪವಿತ್ರ ತೀರ್ಥಗಳಲ್ಲಿ ಮಿಂದು, ಜಲಸ್ನಾನಮಾಡಿ ಹಿಮಾಲಯದ ತಪ್ಪಲಿಗೆ ಬರುತ್ತದೆ. ಹಿಮಾಲಯದ ದಟ್ಟ ದರಿಕಂದರಗಳ ನಡುವೆ ಹಾಯುತ್ತಾ ಎದುರಾದ ಶರಭಾದಿಗಳನ್ನು ಹಿಮ್ಮೆಟ್ಟಿಸಿ ಶಿವನ ಪಾದಕ್ಕೆ ಬಾಗಿ ನಮಸ್ಕಾರ ಸಲ್ಲಿಸಿ ಅಲ್ಲಿಂದ ಕೈಲಾಸಗಿರಿಯನ್ನು ತಲಪುತ್ತದೆ. ಹಿಮಗಿರಿಯ ಬಿಳಿಯ ಎತ್ತರದ ಶಿಖರಗಳ ಮೇಲೆ ಕಂಗೊಳಿಸುತ್ತಾ ಅಲ್ಲಿಯ ನಿವಾಸಿಗಳಾದ ಯಕ್ಷಸಿದ್ಧಗಂಧರ್ವ ಕನ್ನಿಕೆಯರ ಮೇಲೆ ಲಘುವಾಗಿ ಮಳೆಸುರಿಸಿ ಸ್ನಾನ ಮಾಡಿಸುತ್ತದೆ. ಮುಂದೆ ಸಾಗಿ ಮಾನಸ ಸರೋವರವನ್ನು ತಲಪಿ ಅದರ ಶುಭ್ರವಾದ ನೀರಿನಲ್ಲಿ ಮನದಣಿಯುವಂತೆ ಆಟವಾಡಿ ಹಾಗೆಯೆ ಸ್ವಲ್ಪ ಮುಂದುವರೆದಾಗ ಅದೇ ಕಾಣಿಸುತ್ತದೆ ಶೃಂಗಾರ ವೈಭವಗಳ ನೆಲೆವೀಡು ಅಲಕಾವತಿ.

ಅಲಕಾನಗರಿಯ ವರ್ಣನೆಯನ್ನು ಕಾಳಿದಾಸ ಅದ್ದೂರಿಯಾಗಿಯೆ ಮಾಡಿದ್ದಾನೆ, ಚೆಲುವಿನ ತಾಣವಾದ, ಶೃಂಗಾರದ ನೆಲೆವೀಡೆನಿಸಿದ ಆ ನಗರಿಯಲ್ಲಿ ಎಲ್ಲೆಲ್ಲೂ ಮಂದಾರ ವೃಕ್ಷಗಳ ನೆರಳಿನಿಂದ ಆವೃತವಾದ ನಂದನವನಗಳು, ಗಂಗೆಯ ಶುಭ್ರ ಸ್ನಿಗ್ಧವಾದ ನೀರಿನಲ್ಲಿ ಜಳಕವಾಡಿ ಬಂದ ತಂಗಾಳಿಯಲ್ಲಿ ಮುದಗೊಂಡು ನಲಿದಾಡುವ ಮಿಂಚುಗಣ್ಣಿನ ಜವ್ವನಿಯರು ಉದ್ದಕ್ಕೂ ಕಾಣಸಿಗುತ್ತಾರೆ. ಆ ನಗರಿಯ ನಡುವೆ ಯಕ್ಷರಾಜನ ಭವ್ಯಭವನ, ಅದಕ್ಕೆ ಉತ್ತರದಲ್ಲಿ ವಿರಹವ್ಯಾಕುಲವಾದ ನಮ್ಮ ಯಕ್ಷನ ಮನೆ. ಬಾಗಿಲಲ್ಲಿ ಇಂದ್ರಚಾಪದ ತೋರಣ, ಪಕ್ಕದಲ್ಲಿ ಯಕ್ಷಪತ್ನಿ ಪ್ರೀತಿಯಿಂದ ನೀರುಣಿಸಿ ಬೆಳೆಸಿದ ಮಂದಾರವೃಕ್ಷ ಗೊಂಚಲಿನ ಭಾರಕ್ಕೆ ಬಾಗಿ ನಿಂತಿದೆ. ಅಲ್ಲಿ ಬದಿಯಲ್ಲಿ ಪಚ್ಚೆ ರತ್ನಗಳ ಸೋಪಾನಗಳುಳ್ಳ ಒಂದು ಕೊಳ, ಅದರಲ್ಲಿ ಕಮಲಪುಷ್ಪಗಳು, ಈಜಾಡುತ್ತಿರುವ ರಾಜಹಂಸಗಳು ಮನಸ್ಸನ್ನು ಸೆಳೆಯುತ್ತವೆ. ಅಲ್ಲೇ ಹತ್ತಿರದಲ್ಲಿ ಒಂದು ಬಿಳಿಯ ದಿಣ್ಣೆ ಮನೆಯ ಸುತ್ತಲೂ ಬಗೆಬಗೆಯ ಗಿಡಬಳ್ಳಿಗಳು. ಅವುಗಳ ನಡುವೆ ಎದ್ದು ಕಾಣುವಂತೆ ಇರುವ ಒಂದು ಅಶೋಕವೃಕ್ಷ. ಅದರ ಬುಡದಲ್ಲಿ ಒಂದು ಅಮೃತ ಶಿಲೆಯ ಹಾಸುಗಲ್ಲು.

ನಮ್ಮ ಯಕ್ಷನ ಕಲ್ಪನೆಯಲ್ಲಿ ಮೇಘ ಅಲಕಾಪುರಿಯಲ್ಲಿ ತನ್ನ ಮನೆಯನ್ನು ತಲಪುವ ವೇಳೆಗೆ ಮಡದಿ ನವಿಲಿನ ಜೊತೆಯಲ್ಲಿ ಆಟವಾಡುತ್ತಿರುತ್ತಾಳೆ. ಆದರೆ ಅವಳ ಸ್ಥಿತಿ ಹೇಗಿದೆಯೋ? ಯಕ್ಷನಿಗೆ ಮಡದಿಯ ಸ್ಥಿತಿಯ ಬಗೆಗೆ ತುಂಬಾ ಕಳಕಳಿ. ಮೇಘ ಅವಳನ್ನು ತಲಪುವ ವೇಳೆಗೆ ಪತಿವಿರಹವ್ಯಾಕುಲಳಾಗಿ ಬಳಲಿದ ಅವಳನ್ನು ನಿದ್ದೆ ಆವರಿಸಿರಬಹುದೆ? ಅವಳು ನಿದ್ದೆಹೋಗಿ ಕನಸು ಕಾಣುತ್ತಿದ್ದರೆ ದಯವಿಟ್ಟು ಎಬ್ಬಿಸಬೇಡ ನಿನ್ನ ಹುಸಿಗುಡುಗಿನಿಂದ ಅವಳು ಬೆಚ್ಚಿಬೀಳುವಂತೆ ಮಾಡಬೇಡ ಎಂದು ಯಕ್ಷ ಮೇಘವನ್ನು ಕೇಳಿಕೊಳ್ಳುತ್ತಾನೆ. ಏಕೆಂದರೆ

ನೊಂದ ಜೀವಕ್ಕೆ ಯಾವಾಗಲೂ ಪತಿಯು ಈ ಧ್ಯಾನವೇ ಆಸರೆ, ಹೊಸಿಲಿಗೆ ಹೂವಿಟ್ಟು ಅವನ ಬರವಿಗಾಗಿ ಕಾಯುತ್ತಾಳೆ, ಬಲಿ ಪೂಜೆ ಮಾಡಿ ಪತಿ ಬೇಗ ಹಿಂದಿರುಗಲೆಂದು ಪ್ರಾರ್ಥನೆ ಸಲ್ಲಿಸುತ್ತಾಳೆ. ಹಾಗೂ ಅವನು ಬಾರದೆ ಹೋದಾಗ ದುಃಖ ಒತ್ತಿಕೊಂಡು ಬಂದಾಗ ಗಂಡನ ಮೇಲೊಂದು ಪದ್ಯವನ್ನಾದರೂ ಕಟ್ಟಿ ಹಾಡಬೇಕೆಂದುಕೊಳ್ಳುತ್ತಾಳೆ. ಆದರೆ ವಿರಹದ ತೀವ್ರತೆಯಲ್ಲಿ ಹಾಡು ಮರೆತಾಗ ಕಣ್ಣೀರು ಸುರಿಸುತ್ತಾ ಮೂಕಳಾಗಿ ಕುಳಿತುಬಿಡುತ್ತಾಳೆ. ಅವಳ ತೊಡೆಯ ಮೇಲೆ ವೀಣೆ ಇರುವ ಪರಿವೆಯೂ ಅವಳಿಗೆ ಇಲ್ಲದಿರಬಹುದು. ಅಂತಹ ವಿರಹಿಣಿಯ ಬಳಿಗೆ ಹೋಗಬೇಕಾದರೆ ಸೀತೆಯ ಬಳಿಗೆ ಹೋದ ಆಂಜನೇಯನಂತೆ ಹೋಗತಕ್ಕದ್ದೆಂದು ಮೇಘಕ್ಕೆ ಯಕ್ಷ ಬಿನ್ನವಿಸಿಕೊಳ್ಳುತ್ತಾನೆ. ಪತಿಯು ಸಂದೇಶವನ್ನು ಹೊತ್ತು ತಂದ ಮೇಘವನ್ನು ತನ್ನ ಮಡದಿ ತುಂಬ ಪ್ರೀತಿಯಿಂದ ಇದಿರುಗೊಂಡು ಆದರಿಸುವಳೆಂಬ ಆಶ್ವಾಸನೆ ನೀಡುತ್ತಾನೆ.

ಇಷ್ಟು ವಿವರವಾಗಿ ಮೇಘಸಾಗಬೇಕಾದ ವರ್ಣನೆಯನ್ನು ಮಾಡಿದ ಯಕ್ಷ ಕೊನೆಯಲ್ಲಿ ತನ್ನ ಮಡದಿಗೆ ಕಳುಹಿಸುವ ಸಂದೇಶ ಮನಸ್ಸು ಮಿಡಿಯುವಂತಿದೆ. ಕಡ್ಡಿಯಂತೆ ಸೊರಗಿ ದಿನನಿತ್ಯ ನಿಟ್ಟುಸಿರುಡಿತ್ತಿರವ ತಾನು ತನ್ನ ಮಡದಿಯನ್ನು ಮತ್ತೆ ಎಂದು ಕೂಡುವೆನೊ ಎಂದು ಪರಿತಪಿಸುತ್ತಿರುವುದಾಗಿ ತಿಳಿಸುವಂತೆ ಹೇಳುತ್ತಾನೆ. ತಾನು ಬಳ್ಳಿಯಲ್ಲಿ ಅವಳ ಬಳುಕುವ ಮೈಯನ್ನು ಹುಲ್ಲೆಯಲ್ಲಿ ನಲ್ಲೆಯ ಬೆದರುಗಣ್ಣುಗಳನ್ನೂ ಚಂದ್ರನಲ್ಲಿ ತನ್ನ ಚೆಲುವೆಯ ಬಿಂಬವನ್ನೂ ಗರಿಗಳಲ್ಲಿ ಅವಳ ಹೆರಳಿನ ಭಾರವನ್ನೂ ನದಿಯ ಹರಿವಿನಲ್ಲಿ ಅವಳ ಭ್ರೂಭಂಗಿಮೆಯನ್ನು ಕಾಣಲು ಕಾತರಿಸಿ ಹಂಬಲಿಸಿ ಎಲ್ಲಿಯೂ ಆ ಹೋಲಿಕೆಯನ್ನು ಕಾಣದೆ ವಿಫಲನಾಗಿದ್ದೇನೆಂದು ತಿಳಿಸಲು ಕೋರುತ್ತಾನೆ. ಅಂದು ಅವಳ ಸನಿಹದಲ್ಲಿದ್ದಾಗ ನೂರೆಂಟು ನೆಪಹೂಡಿ ತುಟಿಯನ್ನು ಅವಳ ಕಿವಿಯ ಬಳಿ ಒಯ್ಯುತ್ತಿದ್ದುದನ್ನು ನೆನಪಿಸಿಕೊಂಡು, ಇಂದು ಚಿತ್ರಬರೆದು ಅದರಲ್ಲಿ ಪ್ರಿಯೆಯನ್ನು ಕಾಣಲು ಹೋದರೂ ಕಣ್ಣಲ್ಲಿ ನೀರುತುಂಬಿ ಅವಳ ಮುಖ ಕಾಣದಂತಾಗುತ್ತಿದೆಯೆಂದು ಕಳವಳಪಡುತ್ತಿರುವುದನ್ನು ಬಿನ್ನವಿಸಲು ಕೋರುತ್ತಾನೆ. ಇಷ್ಟಾದರೂ ಆಶಾವಾದಿಯಾದ ಆ ಯಕ್ಷ ತನ್ನ ನಲ್ಲೆಯೊಡಗೂಡಿ ಪುನಃ ಬೆಳುದಿಂಗಳ ವಿಹಾರ ಮಾಡುವ ಬಯಕೆಯನ್ನು ಹೊರಗೆಡವುತ್ತಾನೆ. ನೊಂದ ಹೃದಯಕ್ಕೆ ಭವಿತವ್ಯದ ಸುಖದ ಆಶ್ವಾಸನೆ ಕೊಟ್ಟು ಸಂತೈಸುತ್ತಾನೆ. ಪ್ರಪಂಚದಲ್ಲಿ ಯಾರಿಗೂ ವ್ಯಥೆ, ವಿರಹ ಉಂಟಾಗದಿರಲೆಂದು ಹಾರೈಸುತ್ತಾನೆ. ತನ್ನ ಗೆಳೆಯನಾದ ಆ ಮೇಘಕ್ಕೆ ಅದರ ಪ್ರಿಯೆಯಾದ ವಿದ್ಯುದ್ದೇವಿಯೊಡನೆ ಎಂದಿಗೂ ವಿರಹ ಉಂಟಾಗದಿರಲೆಂದು ಶಿವನಲ್ಲಿ ತಾನು ಬೇಡವುದಾಗಿ ಹೇಳುತ್ತಾನೆ.

ಕವಿ ಬೇಂದ್ರೆಯವರು ಕಾಳಿದಾಸ ಮಹಾಕವಿಯ ಇಂಥ ಮಹಾ ರಮ್ಯಕಲ್ಪನಾ ಸೃಷ್ಟಿಯನ್ನು ತಲಸ್ಪರ್ಶಿಯಾಗಿ ಆಸ್ವಾದಿಸಿ ಆನಂದಿಸಿ, ಆ ಯಕ್ಷಮಹಾಶಯನ ಮನದಾಳವನ್ನು ಹೊಕ್ಕು ತಾವು ಸಹ ಸಹೃದಯ ಸ್ಪಂದಿಯಾಗಿ ಮಿಡಿದು ಅಮೋಘವಾದ ಅನುವಾದವನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ.

**ಇತರ ಕಾವ್ಯ ಭಾಷಾಂತರಗಳು :**

ಬೇಂದ್ರೆಯವರ ಇತರ ಕಾವ್ಯ ಭಾಷಾಂತರಗಳ ಪೈಕಿ ಇಲ್ಲಿ ಉಲ್ಲೇಖಿಸಬಹುದಾದವೆಂದರೆ — ರವೀಂದ್ರನಾಥ ಠಾಕೂರರ ನೂರೊಂದು ಕವನ (ಇವನ್ನು ಅವರು ಶ್ರೀನಾರಾಯಣ ಸಂಗವು ಅವರನ್ನು ಜೊತೆಗೂಡಿಸಿಕೊಂಡು ಭಾಷಾಂತರಿಸಿದ್ದಾರೆ). ಹಾಗೂ ಕಬೀರವಚನಾವಲೀ. 'ನೂರೊಂದು ಕವನ' ಕೃತಿಯು ಹೆಸರೇ ಸೂಚಿಸುವಂತೆ ಕವಿವರೇಣ್ಯರಾದ ಠಾಕೂರರ ನೂರೊಂದು ಕವನಗಳ ಕನ್ನಡ ಭಾಷಾಂತರ (ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಾಶನ, ೧೯೬೭), ಅನುವಾದಕರ ಪರವಾಗಿ ಬೇಂದ್ರೆಯವರು ಇದರ ಮುನ್ನುಡಿಯಲ್ಲಿ ಆಡಿರುವ ಮಾತುಗಳು ಭಾಷಾಂತರವನ್ನು ಕುರಿತ ಅವರ ನಿಲುವಿಗೆ ಸ್ಪಷ್ಟವಾಗಿ ಕನ್ನಡಿ ಹಿಡಿಯುತ್ತದೆ—" ಕಥಾನುವಾದದಲ್ಲಿ ಬರುವ ಶೈಲಿಗೂ, ಕಾವ್ಯಾನುವಾದದ ಶೈಲಿಗೂ ಮಹದಂತರ ಇದೆ. ಶ್ರೀ ರವೀಂದ್ರರು ಬಂಗಾಲಿಯಲ್ಲಿ ಬಳಸಿದ ಸ್ವಾತಂತ್ರ್ಯವನ್ನೇ ಕನ್ನಡದಲ್ಲಿಯೂ ಬಳಸಿದ್ದಾಗಿದೆ—ಈ ಅನುವಾದಗಳಲ್ಲಿ ಇದು 'ಮಖ್ಖೀ ಕಾ ಮಖ್ಖೀ' ಪ್ರಾಮಾಣಿಕತೆ ಅಲ್ಲವೇ ಅಲ್ಲ. ಭಾವದಲ್ಲಿ ಜೀವಕಳೆ ಬರಬೇಕಾದರೆ ಸಂಗೀತದ ಸ್ವಚ್ಛಂದಂತೆ ಬೇಕು; ಪ್ರಾಣಾಯಾಮದ ಆಸನಬದ್ಧತೆ ಸರಿಹೋಗಲಾರದು." ಕವಿಗಳ ಪ್ರವೃತ್ತಿಗೆ, ಮನೋಧರ್ಮಕ್ಕೆ ಅನುಗುಣವಾಗಿ ಭಾಷಾಂತರದ ರೀತಿ ನೀತಿಗಳನ್ನು ಸಹ ಬದಲಾಯಿಸಬೇಕಾಗುತ್ತದೆ. ಎಂದು ಭಾವಿಸುವ ಬೇಂದ್ರೆ ಮುಂದುವರಿದು ಹೀಗೆ ಹೇಳುತ್ತಾರೆ. "ಕಾಲಿದಾಸ, ಶೇಕ್ಸ್‌ಪಿಯರ್, ವಾಲ್ಮೀಕಿ ಇವರ ಕೃತಿಗಳ ಅನುವಾದದಲ್ಲಿ ವೈವಿಧ್ಯ ಇದ್ದೇ ಇರುತ್ತದೆ. ರವೀಂದ್ರರ ಕೃತಿಗಳಿಗೂ ಅದು ತಪ್ಪಿದ್ದಲ್ಲ. ರವೀಂದ್ರರು ಅರ್ಧಶತಮಾನಕ್ಕೆ ಹೆಚ್ಚಿನ ಕಾಲದಲ್ಲಿ ಮಾಡಿದ ಪ್ರಯೋಗ ಪರಿಣತಿಯನ್ನು ಸರಾಸರಿಮಾನದ ಪಾಕಕ್ಕಿಳಿಸುವುದಕ್ಕಿಂತ, ಸಹೃದಯ ವಿದ್ಯಾರ್ಥಿಯು ಕೃತಿಗಳಿಗೆ ಪುನರ್ಜನ್ಮ ನೀಡುವುದು ಯಾವ ಗುರುವಿಗೂ ಸಮ್ಮತವೇ ಆದೀತು. ರವೀಂದ್ರರ ಕಾವ್ಯರೀತಿಯ ಔಚಿತ್ಯವು ಚರ್ಚೆ ವಿಮರ್ಶೆಗೆ ಎಡೆಗೊಡುವಂತೆ ಕನ್ನಡ ಅನುವಾದ ಶೈಲಿಯೂ ಆದೀತು. ಆದರೆ ಎಲ್ಲಿಯೂ ಸಹೃದಯತೆ, ರಸಿಕತೆ, ತಾರತಮ್ಯದೃಷ್ಟಿ—ಬೇಕೇಬೇಕು. ಆ ವಿಶ್ವಾಸದಿಂದಲೇ ನಾವು ದನಿಗೂಡಿಸಿದ್ದೇವೆ."

ಕಬೀರದಾಸರ ದೋಹಾಗಳು (ಎರಡು ಸಾಲಿನ ಪದ್ಯಗಳು) ರವೀಂದ್ರರ ಪದ್ಯಗಳಷ್ಟು ಸುಲಭವಾಗಿ ಕಾವ್ಯಾನುವಾದಕ್ಕೆ ನಿಲುಕುವಂತಹವಲ್ಲ. ಏಕೆಂದರೆ ಕಬೀರ್ ಕವಿಗಿಂತಲೂ ಮಿಗಿಲಾಗಿ ಒಬ್ಬ ದಾರ್ಶನಿಕ, ಧರ್ಮಸಾಧಕ. ತಾವು ನಂಬಿದ ನಿರ್ಗುಣ ಭಕ್ತಿಮಾರ್ಗವನ್ನು ಕುರಿತಂತೆ ಜನಕ್ಕೆ ಮುಟ್ಟುವಂತೆ ಸುಲಭವಾದ, ಸರಳವಾದ ಭಾಷೆಯಲ್ಲಿ ದೋಹಾಗಳ ಮೂಲಕ, ಪದಗಳ ಮೂಲಕ ತಮ್ಮ ಮನದಾಳದ ಅನಿಸಿಕೆಗಳನ್ನು ಹೊರಗೆಡವಿದವರು. ಹಾಗಾಗಿ ಬೇಂದ್ರೆಯವರಂತಹ ಕವಿಗೆ ಕಬೀರರ ರಚನೆಯನ್ನು ಸರಳವಾದ ಗದ್ಯದಲ್ಲಿ ಅನುವಾದಿಸುವುದು ಉಚಿತವಾಗಿ ಕಂಡು ಬಂದಿದ್ದು ಸಹಜವೇ. ಹಾಗಾಗಿ 'ಕಬೀರ ವಚನಾವಲಿ' (ಕೇಂದ್ರ ಸಾಹಿತ್ಯ

ಅಕಾಡೆಮಿ ಪ್ರಕಾಶನ, ೧೯೬೮ಲ ಸರಳ ಗದ್ಯದಲ್ಲಿದೆ.

**ಕಾವ್ಯ ಭಾಷಾಂತರ ನಮೂನೆಗಳು :**

ವರಕವಿ ಬೇಂದ್ರೆಯವರ ಕಾವ್ಯ ಭಾಷಾಂತರವನ್ನು ಸಾಧಾರಣ ಅರ್ಥದಲ್ಲಿ ಭಾಷಾಂತರವೆನ್ನುವುದಕ್ಕಿಂತ ಒಂದು ಹೊಸ ಸೃಷ್ಟಿಯೆಂದೇ ಹೇಳಬಹುದು. ಅದೊಂದು ಅಪೂರ್ವವಾದ ಕಲಾವಂತಿಕೆ, ಸೊಗಸಾದ ಪುನಸ್ಸೃಷ್ಟಿ. ಹಾಗಾಗಿ ನಾವು ಅದಕ್ಕೆ ಕಟ್ಟಬೇಕಾದ ಬೆಲೆಯೆ ಬೇರೆ. ಬೇಂದ್ರೆಯವರ ಅನುವಾದವನ್ನು ಕುರಿತಂತೆ ಹಿರಿಯ ವಿದ್ವಾಂಸರಾದ ಪಂಢರಿನಾಥಾಚಾರ್ಯ ಗಲಗಲಿಯವರ ಮಾತನ್ನು ಇಲ್ಲಿ ಉಲ್ಲೇಖಿಸಬಹುದೆನಿಸುತ್ತದೆ — "ಸಂಸ್ಕೃತ ಮೇಘದೂತ ಕಾಲಿದಾಸನ ಒಂದು ರಸೋತ್ಕಟ ಕೃತಿ. ಸಂಸ್ಕೃತ ಕಾವ್ಯಭಂಡಾರದ ಒಂದು ಅನರ್ಘ್ಯ ರತ್ನ. ಶೈಲಿಯ ಲಾಲಿತ್ಯ, ಬಿಚ್ಚು ಮಾತಿನ ಸರಳತೆ, ಛಂದಸ್ಸಿನ ಲೀಲಾಲಯ, ಪ್ರಾಸದ ಪ್ರಾಸಾದಿಕತೆ, ಅನುವಾದದ ಸ್ವಾಚ್ಛಂದ್ಯ, ನಾದಮಾಧುರಿ, ಭಾವಾವಿಷ್ಕಾರ, ಸಹಜವಿಧಾನ ಮುಂತಾದ ಅನೇಕ ದೃಷ್ಟಿಯಿಂದ ದ.ರಾ. ಬೇಂದ್ರೆ ಅವರ ಕನ್ನಡ ಅನುವಾದವು ಹೆಚ್ಚು ಜನ ಪ್ರಿಯವೂ ರಸಿಕರಿಗೆ ಆಸ್ವಾದ್ಯವೂ ಸಹೃದಯರಿಗೆ ಸ್ವಸಂತೋಷವಿಂಪ ಪರಿಪಾತ್ಯವೂ ಆಗಿದೆ. ಒಬ್ಬ ಕವಿ ಈ ರಸಪರಿಪಾಕವನ್ನು ತನ್ನ ಮಧುಪಾಕದ ವಾಕೋವಾಕುಗಳಲ್ಲಿ ಕಾವು ಕೊಟ್ಟು ತೆಗೆದಿದ್ದರಿಂದ ಅದರ ರಸ ಇನ್ನೂ ಘನೀಭೂತವಾಗಿದೆ. ಭಾವ ಮತ್ತಷ್ಟು ಸಾಂದ್ರಸುಂದರವಾಗಿದೆ." ಮೂಲದೊಡನೆ ಬೇಂದ್ರೆಯವರ ಅನುವಾದವನ್ನು ಹೋಲಿಸಿ ನೋಡಲು ಬಯಸುವ ವಿಮರ್ಶಕರಿಗೆ ಉಂಟಾಗಬಹುದಾದ ಅನುಭವವನ್ನು ಕುರಿತು ಗಲಗಲಿಯವರು ಹೀಗನ್ನುತ್ತಾರೆ : "ಒಟ್ಟೊಟ್ಟಿಗೆ ಇಟ್ಟು ಮೂಲ ಹಾಗೂ ಅನುವಾದಗಳನ್ನು ತೂಗಿತೂಗಿ ತಾಳ ಲಯ ಮತ್ತು ರಾಗ ರಸಗಳ ತಾಳೆಹಾಕಿ ನೋಡಿದಾಗ ಮೌಲಿಕತೆಯ ಮೌಲ್ಯ ಉಭಯ ನಿಷ್ಠವಾಗಿ ಅನುವಾದದ ನೆನಪೇ ನಶಿಸಿ ಹೋಗುತ್ತದೆ. ವಿಮರ್ಶಾತ್ಮಕ ಬುದ್ಧಿಗೂ ರಸಾವೇಶದಿಂದ ತನ್ಮಯತೆ ಬಂದು ತ್ರಯಸ್ಥ ದೃಷ್ಟಿ ಮಂಕಾಗಿಬಿಡುವುದು. ಅದಕ್ಕಾಗಿ ವಿವೇಚನೆಗೆಂದು ಹೊರಟ ಜಿಜ್ಞಾಸು ಒಂದು ಕ್ಷಣ ಅನುವಾದದ ನಾವ ಮಾಧುರಿಯ ಕಿಂಕಿಣಿರವದಿಂದ ದೂರ ನಿಂತು ಮೂಲಾನುವಾದ ಪದ್ಯಗಳನ್ನು ರುಕ್ಷವಿಮರ್ಶಕನ ದೃಷ್ಟಿಯಿಂದ ಪರಿಕಿಸಿ ನೋಡಬೇಕು. ಅಂದರೆ ಮಾತ್ರ ಮೌಲ್ಯ ಮಾಪನ ಸಾಧ್ಯವಾಗಬಹುದು."

ಇನ್ನು ಮುಂದೆ 'ಮೇಘ'ದೂತದ ಪ್ರಸಿದ್ಧವಾದ ಮೂಲಪದ್ಯವೊಂದನ್ನು ಕೊಟ್ಟು ವಿವಿಧ ವಿದ್ವಾಂಸಕವಿಗಳು ಅದನ್ನು ಹೇಗೆ ಭಾಷಾಂತರಿಸಿರುವರು ಎಂಬುದನ್ನು ತೋರಿಸಲಾಗಿದೆ, ಸ್ಥಳಾಭಾವದಿಂದಾಗಿ ಈ ಬೇರೆ ಬೇರೆ ವಿಮರ್ಶೆಗಳನ್ನು ಮೌಲ್ಯ ಮಾಪನ ಮಾಡುವ ಪ್ರಯತ್ನ ಮಾಡಲಾಗಿಲ್ಲ.

ರಾಮಗಿರಿಯಲ್ಲಿ ಯಕ್ಷ ತನ್ನ ಪ್ರಿಯತಮೆಯಿಂದ ದೂರವಾಗಿ ಎಂಟು ತಿಂಗಳುಗಳು ಕಳೆದಿವೆ, ಸೊರಗಿದ ಕಾರಣ ಅವನ ಚಿನ್ನದ ಕಡಗ ತೋಳಿನಿಂದ ಮುಂಗೈಗೆ ಸರಿದು ಬಂತು. ಆ ವೇಳೆಗೆ ಆಷಾಢ ಮೊದಲ ದಿನ ಕರಿನೋಡ ಬೆಟ್ಟಕ್ಕೆ ಡಿಕ್ಕಿ ಹೊಡೆದು

ಆಟವಾಡುತ್ತಿರುವ ಆನೆಯಂತೆ ಕಂಡು ಬರುತ್ತದೆ.

ಮೂಲ: ತಸ್ಮಿನ್ನದ್ರೌ ಕತಿಚಿದಬಲಾವಿ
ಪ್ರಯುಕ್ತಃ ಸ ಕಾಮೀ
ನೀತ್ವಾ ಮಾಸಾನ್ಕನಕ ವಲಯ
ಭ್ರಂಶರಿಕ್ತ ಪ್ರಕೋಷ್ಠಃ
ಆಷಾಢಸ್ಯ ಪ್ರಥಮದಿವಸೇ
ಮೇಘಮಾಶ್ಲಿಷ್ಟಸಾನುಂ
ವಪ್ರಕ್ರೀಡಾಪರಿಣತಗಜ
ಪ್ರೇಕ್ಷಣೀಯಂ ದದರ್ಶ ॥

ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳ ಅನುವಾದ (೧೯೩೧)

ಲಲಿನೆಯಳಲದು ಮೀರೆ
ಬಲಗುಂದಿ ಮೈಸೊರಗಿ
ಬಲದೋಳ ಬಳೆಕಳಚಿ ಬೀಳೆ
ಕೈಯಿಂ
ಕೆಲವು ತಿಂಗಳ ಕಳೆದು
ಮಳೆಗಾಲದಾ ಮೊದಲು
ಜಳದವನು ನೋಡಿದನು
ಗಿರಿಶಿಖರದೊಳ್

ಮಾಸ್ತಿಯವರ ಅನುವಾದ (ವಿಮರ್ಶೆ-೪ರಲ್ಲಿ ಮಾಡಿರುವ ಕೆಲವು ಪದ್ಯಗಳ ಅನುವಾದದಿಂದ):

ಮುಂಗೈಯ ಬರಿಗೈದು ಕನಕವಲಯವ
ನಳೆದು
ತೋಳದೆಸೆಗಿಡುವಂತೆ ಮೈಸೊರಗಿದೆ,
ಅಂಗನೆಯ ಹಂಬಲಲಿ ಕಾಮಿ ಹಲ ಮಾಸಗಳ
ಕಾಲವನು ನೀಸಿ ಆ ಗಿರಿಯೆಡೆಯಲಿ
ಆಷಾಢ ಉದಯಿಸಿದ ದಿನ ಕಂಡನಾ ಗಿರಿಯ
ಸಾನುದೇಶವನಪ್ಪಿ ಚೆಲುವನಾಂತು
ತೋಷದಲಿ ಮಣ್ಣ ಬಗೆವಾಟದಲಿ ತೊಡಗಿರುವ
ಆನೆವೊಲು ಕಣ್ಗೆಸೆದ ಮುಗಿಲೊಂದನು

ಅಂಬಿಕಾತನಯದತ್ತರ ಅನುವಾದ (೧೯೪೩):

ಆಗಲಿ ಇದ್ದರೂ ಅಸೆಗೊಂಡಿರಲು
ಗಿರಿಯೊಳಂತು ಇಂತು
ಕೆಲವೆ ತಿಂಗಳಲಿ ಚಿನ್ನಕಡಗ ಮೊಳಕೈಗೆ
ಸರಿದು ಬಂತು
ಕಾರಹುಣ್ಣಿಮೆಯ ಮಾರನೆಯ ದಿನವೆ
ಮೋಡಕೋಡನಪ್ಪಿ
ಕಂಡಿತೊಡ್ಡಿನೊಡ ಡಿಕ್ಕಿಯಾಡುವಾ ಆನೆ
ಬೆಡಗನೊಪ್ಪಿ

ಎಸ್. ವಿ. ಪರಮೇಶ್ವರಭಟ್ಟರ ಅನುವಾದ (೧೯೬೨):

ಅಬಲೆಯನು ತಾನಗಲಿ ಕನಕವಲಯವು ಕಳಚಿ
ಬರಿದಾದ ಮುಂಗೈಯೊಳಾ ಕಾಮಿಯು
ಅದುವೆ ಗಿರಿಯೊಳು ನೆಲಸಿ ಕೆಲವು ತಿಂಗಳು
ಕಳೆದು
ಆಷಾಢಮಾಸದಲಿ ಮೊದಲ ದಿವಸ
ದಂತದಲಿ ದರೆಯನಗೆದೆರಚುತಿರುವಾಟದಲಿ
ತೊಡಗಿರುವ ಆನೆವೊಲು ಕಣ್ಗೆಸೆಯುವ
ಸಾನುದೇಶವನಪ್ಪಿ ಸೊಬಗನಾಂತಿರುವೊಂದು
ಹಿರಿದಾದ ಮೋಡವನು ಕಂಡನಂದು

ಪಿ. ಬಸವಣ್ಣನವರ ಅನುವಾದ (೧೯೭೩):

ಆ ಮಲೆಯ ತಪ್ಪಲೊಳ್ಬ ಮಾನಿಯೋಗದಿಂ
ಹೇಮಕಂಕಣ ಕಳಚಿ ಬೋಳು
ಮುಂಗೈಯೊಂತ
ಕಾಮಿಯಾದಾ ಯಕ್ಷ ಕೆಲವಾರು ಮಾಸಗಳ
ಕಷ್ಟದಿಂ ಕಳೆಯುತಿರಲು।
ಆಮೋದದಾಷಾಢದೊಂದನೆಯ ದಿವಸದೊಳು
ಭೂಮಿಯುತ್ಪಾತ ಕೇಲಿಯಲಿ ನಿಪುಣತೆವಡೆದ
ಸಾಮಜದವೋಲೆಸೆವ ಸಾನುವನಪ್ಪಿರುವ
ಕಣ್ಸೆಳೆವ ಮುಗಿಲ ಕಂಡಂ ॥

# ಬೇಂದ್ರೆಯವರ ಕಾವ್ಯದಲ್ಲಿ 'ಒಲುಮೆಯ ಕಿಚ್ಚು'

ಜಿ. ಕೃಷ್ಣಪ್ಪ

ಒಲುಮೆಯ ಕಿಚ್ಚು ನೈತಿಕತೆಯ ಮಿತಿಯೊಳಗಿರುವಾಗ ಬೆಳಕು ಹಚ್ಚುವ ಹಿತಕರ ಅನುಭವ, ಮಿತಿಯೊಳಗಿರದಾಗ ಬೆಂಕಿಕಾರುವ ದ್ವೇಷಭಾವ—ಈ ಸೂಕ್ಷ್ಮವನ್ನು ಬೇಂದ್ರೆ ಗ್ರಹಿಸಿ ಕಾವ್ಯ ಸತ್ಯವಾಗಿಸಿರುವ ಪರಿ ಪ್ರಸಕ್ತ ಲೇಖನದ ವಸ್ತು.

ಬೇಂದ್ರೆಯವರ ಕಾವ್ಯದಲ್ಲಿ ದೇವಕಾಮವು ಕಾಮದೇವನಾಗಿ 'ಮಗು'ವಾಗಿ ಅವತರಿಸಿದೆ. ಮಗು ಎಂದರೆ ಕಾಮದೇವ. ಆ ದೇವ ಕಾಮನನ್ನು 'ಅನಂಗ' ಎಂದು ಕರೆದಿರುವುದ ರಿಂದ ಅದು ಒಂದು ಭಾವವಾಗಿ ತತ್ತ್ವವಾಗಿ ಮಾನವರ ಬದುಕಿನಲ್ಲಿದೆ. ಭರತನ ರಸ ಪ್ರಭೇದಗಳ ವಿವರ ನೀಡುತ್ತ, ಶೃಂಗಾರ ರಸದ ಬಗ್ಗೆ ತೀನಂಶ್ರೀಯವರು 'ಈ ರಸ ಗಳಲ್ಲಿ ಮೊದಲನೆಯದು ಶೃಂಗಾರ; ಪಟ್ಟಿ ಯಲ್ಲಿ ಮಾತ್ರವಲ್ಲ, ಜನಪ್ರಿಯತೆಯಲ್ಲಿ ಕೂಡ, ಸ್ತ್ರೀಪುರುಷರಿಗಿರುವ ಪರಸ್ಪರ ಪ್ರೇಮವೇ ರತಿ. ಇದನ್ನು ಅರಿಯದ ಮಾನವರಿಲ್ಲ; ಪಶುಪಕ್ಷಿಗಳಲ್ಲೂ ಈ ಆಕರ್ಷಣೆ ಯುಂಟು. ರತಿಭಾವ ಹೀಗೆ ಸಕಲ ಹೃದಯ ಸಂವಾದಿಯಾಗಿರುವುದರಿಂದ ರಸಗಳಲ್ಲಿ ಶೃಂಗಾರಕ್ಕೆ ಪ್ರಮುಖಸ್ಥಾನ ದೊರೆತಿದೆ. ಸಂಭೋಗ ಶೃಂಗಾರ, ವಿಪ್ರಲಂಭ ಶೃಂಗಾರ ಎಂದು ಇದರಲ್ಲಿ ಎರಡು ಬಗೆ. 'ಒಂದರವಸ್ತು ಪ್ರಿಯರ ಸೇರಿಕೆ, ಇನ್ನೊಂದರದು ಅಗಲಿಕೆ' ಎಂದು ತಿಳಿಸಿದ್ದಾರೆ.

ಈ ಎರಡು ಬಗೆಯ ಶೃಂಗಾರದಲ್ಲಿ ವಿಪ್ರ ಲಂಭ ಶೃಂಗಾರದಲ್ಲಿಯ ಕಿಚ್ಚು ಬೇಂದ್ರೆ ಯವರ ಕಾವ್ಯದಲ್ಲಿ ಯಾವ ಯಾವ ರೂಪ ತಾಳಿ ಬಂದಿದೆ ಎಂಬುದನ್ನು ಅವಲೋಕಿ ಸೋಣ. ಬೇಂದ್ರೆ ಈ ಭೂಮಿಯ ಮಣ್ಣ ಕಣಕಣದಲ್ಲಿ ಸುಪ್ರೇಮಕಾಣಲು ಕಾತರಿಸಿದ ಮಂಗಲಭಾವದ ಶ್ರೇಷ್ಠ ಕವಿ. ಈ ಪೃಥ್ವಿ–ಹೆಣ್ಣು, ಬಾನು–ಒಡೆಯನಿಂದ ಅಗಲಿ ವಿರಹ ಬವಣೆಯಲ್ಲಿ ಸುತ್ತುತ್ತಿದ್ದಾಳೆ. ಅವಳು ಸುರಿಸಿದ ಕಣ್ಣ ನೀರು ಕಡಲಾಗಿ ಕಾದು ಮೋಡವಾಗಿ ಬಾನಿನ ಒಡೆಯನನ್ನು ಕೂಡಿ ದಾಗ, ಸಂತಸಗೊಂಡ ಸುಖದ ಕಣ್ಣೀರೆ ಮತ್ತೆ ಮಳೆಯಾಗಿ ಉದುರಲು ಮೈಯೆಲ್ಲ ಪುಳಕಗೊಂಡಂತೆ ಹೃದಯ ಹಚ್ಚನಾದಂತೆ ಹಸಿರು ಬೆಳೆ ಪಡೆಯುತ್ತಾಳೆ ಎಂದು ಕಲ್ಪಿಸಿ ದ್ದಾರೆ. ಇಂತಹ ಮಣ್ಣು ಹೆಣ್ಣಾದ ಭೂಮಿ ಮತ್ತು ಬಾನಿನಲ್ಲಿನ ಪ್ರೀತಿ; ಅವರ ವಿರಹ, ಸ್ನೇಹದಾಸೆ, ಅದರ ಫಲರೂಪಿಯಾದ ಹಚ್ಚ ಹಸಿರು ಬೇಂದ್ರೆಯವರ 'ಒಲುಮೆಯ ಕಿಚ್ಚಿನ' ಸುಂದರ ರೂಪಕವಾಗಿದೆ. ಅದನ್ನು ಅವರು 'ಭೂಮಿಯ ಕಾಮ' ಎಂದು ಕರೆ ದಿದ್ದಾರೆ.

> ಮಣ್ಣುಹೆಣ್ಣು ಬಾನೊಡೆಯನಿಂದ ಅಗಲಿ
> ಹಳನಾದಿಯಿಂದ
> ವಿರಹ ಬವಣೆಯಲಿ ತಿರುಗೆ ತಿರುಗುವಳು
> ಹೊತ್ತು ಸುತ್ತಿನೀದ ॥

ಕಣ್ಣನೀರು ಕಡಲಾಗಿ ಕಾಡು ಉಗಿಯಾಗಿ
ಮೋಡವಾಗಿ
ಎದೆಗೆ ಉದುರೆ ಬಾನಿಂದ, ನವಿರುವಳು
ಹೃದಯ ಹಚ್ಚನಾಗಿ ॥

ಮೇಘದೂತ—' ಪೀಠಿಕೆ '

ಈ ಮಣ್ಣು ಹೆಣ್ಣಿನ ಮಕ್ಕಳಾದ ಹೆಣ್ಣು ಗಂಡಿನ ಮೃಣ್ಮಯ ದೇಹದ ಹೃನ್ಮಯ ಮನದ ಪ್ರೇಮದ ಹಾಡನ್ನು ಬೇಂದ್ರೆಯವರು ನೀಡುತ್ತ, ಅವರ ಒಲ್ಮೆಯು ದೇವ ಕಾಮನನ್ನು ಕಾಮದೇವ(ಮಗು)ನಾಗಿ ಪಡೆವುದನ್ನು ಕಾವ್ಯವಾಗಿಸಿದ್ದಾರೆ. ಅವರು ಪುರಾಣದ ದೇವದೇವತೆಗಳ, ಐತಿಹಾಸಿಕ ರಾಜ ರಾಣಿಯರ ಶೃಂಗಾರ, ವಿಪ್ರಲಂಭ ಶೃಂಗಾರದ ಕಾವ್ಯರಚಿಸದೆ ಜನಸಾಮಾನ್ಯರ ಒಲುಮೆ ಹೂವಾಗಿ ಅರಳಿದ, ಶ್ರೀ ಸಾಮಾನ್ಯನ ಮಂಗಲಭಾವದ ದ್ಯೋತಕವಾದ ಜನಪದರ ಹಾಡನ್ನು ಜನಪರವಾಗಿ ನೀಡಿರುವುದು ನಮ್ಮ ಶಿಷ್ಟಕಾವ್ಯ ಪರಂಪರೆಯಲ್ಲಿ ಮಹತ್ವದ ಸಂಗತಿಯಾಗಿದೆ.

ಕಾಮ ಅನಾದಿ, ಅನಾದಿಯ ಸೃಷ್ಟಿಕರ್ತ ಬ್ರಹ್ಮ. ಆದಕಾರಣ ಬ್ರಹ್ಮ ಹೃದಯದಲ್ಲಿ ಜನಿಸಿದ ಇಚ್ಛೆ ಅದು, ಅದುವೆ ದೇವಕಾಮ. ಅದು ಕಾಮದೇವನಾಗಿ ಜಗದ ತಂದೆತಾಯಿಯರ ಕಂದನಾಗಿ ಅವತರಿಸಿದೆ ಎಂದು ಅರ್ಥ ವಿಸ್ತಾರವನ್ನು ನೀಡಿದ್ದಾರೆ. ಅದನ್ನು 'ಅನಾದಿ ಕಾಮಕ್ರಮ' ಎಂದು ಕರೆದಿದ್ದಾರೆ.

ಬ್ರಹ್ಮ-ಹೃದಯದಲಿ ಜನಿಸಿದಿಚ್ಛೆ ಕೊನೆ
ಗಾಣಲೆಂದು ಬಾಳಿ
ಕಂಡ ಕಡೆಗು ಶತರೂಪೆಯಲ್ಲಿ ಮಧು-
ರೂಪ-ರೂಪಶಾಲಿ ॥
ಜಗದ ತಂದೆ-ತಾಯಿಯರ ಕಂದ ಅವತಂಸೆ
ಜೀವನಾಗಿ
ಬಂತು ಪೂರ್ವದಲಿ, ದೇವ-ಕಾಮವೇ ;
ಕಾಮ ದೇವನಾಗಿ ॥

ಮೇಘದೂತ—' ಪೀಠಿಕೆ '

ಬೇಂದ್ರೆಯವರು ಕಾಳಿದಾಸನ ಶಾಪ ವಿಪ್ರಲಂಭ ಶೃಂಗಾರಕ್ಕೆ ಉದಾಹರಣೆಯಾದ ರಾಜರಾಣಿಯರ ಕಥೆಯಾದ 'ಶಾಕುಂತಲ'ವನ್ನು ಅನುವಾದ ಮಾಡಲು ಆಯ್ಕೆಮಾಡಿಕೊಳ್ಳದೆ 'ಮೇಘದೂತ'ವನ್ನು ಆಯ್ಕೆ ಮಾಡಿಕೊಂಡಿದ್ದರಲ್ಲಿ ಅವರ ಪ್ರಜಾತಂತ್ರಪರ, ಜನಸಾಮಾನ್ಯಪರವಾದ ಒಲವನ್ನು ಸ್ಪಷ್ಟವಾಗಿ ಕಾಣಬಹುದು. ಅವರು 'ಮೇಘದೂತದಲ್ಲಿ ಒಬ್ಬ ಯಕ್ಷ-ಯಕ್ಷಿಯರ ವಿರಹಾವಸ್ಥೆಯ ವರ್ಣನೆ ಇದೆ. ವಿರಹಾವಸ್ಥೆಯಲ್ಲಿ ತಾಳಿ ಬಾಳುವ ಕಾಮವೇ-ಧರ್ಮ ಅವಿರುದ್ಧ ಕಾಮವೆನಿಸಿ ಜೀವೋನ್ನತಿಯ ಹಾದಿಯಾಗುವದು.' ಎಂದು ತಿಳಿಸಿದ್ದಾರೆ. ಅಂತಹ ವಿರಹವನ್ನು:

ತನ್ನ ಕಿಚ್ಚಿನೊಳಗೆ ಜಿಂಕಿ ಸುಟ್ಟು ಬೆಳಕಾಗಿ
ಮಿಂಚಬಹುದು
ಮೂಲಕಾಮದಲ್ಲಿ ವಿರಹ ಬೆಳೆದು
ಸುಪ್ರೇಮವರಳಲಹುದು ॥
ಜನ್ಮಜಾತ ಕುತುಕಕ್ಕೆ ರಮ್ಯ ತಮನಿಧಿಯು
ಹಾಗೆ ಭವ್ಯ
ಸತ್ಯಕಾಗಿ ನೀರಡಿಸಿ ನಿಂತ ಸೌಂದರ್ಯ
ದಂತೆ ದಿವ್ಯ ॥

ಎಂದು ವಿರಹದಲ್ಲಿ ಸುಪ್ರೇಮವರಳುವುದನ್ನು ; ಸತ್ಯಕ್ಕಾಗಿ ಬಾಯಾರಿನಿಂತ ಸೌಂದರ್ಯದಂತೆ ದಿವ್ಯವಾದುದನ್ನು ಚಿತ್ರಿಸಿದ್ದಾರೆ.

ಪ್ರೇಮಿಗಳು ಹತ್ತಿರವಿದ್ದಾಗ ವ್ಯಾಮರಿವು ಉಂಟುಮಾಡುವ ಶೃಂಗಾರ.ಅವರು ಅಗಲಿದಾಗ ಅನಂಗ ರೂಪತಾಳಿ ಅವರ ಮನಸ್ಸು ಪರಿಪಾಕಗೊಳ್ಳುವಂತೆ ಮಾಡುತ್ತದೆ. ಆ ಅಗಲಿಕೆಯ ವಿಪ್ರಲಂಭ ಶೃಂಗಾರವು

ಬೇಂದ್ರೆ ಕಾವ್ಯದ ಮೂಸೆಯಲ್ಲಿ 'ಒಲವಿನ ಕಿಚ್ಚಾಗಿ' ಹಲವು ಭಾವಲಹರಿಯನ್ನು ತನ್ನ ಸಹೃದಯರಿಗೆ ನೀಡಿದೆ. ಒಂದಾಗಿದ್ದಾಗಿನ ರಸ ಭೋಗಕ್ಕಿಂತ, ಬೇರೆಯಾಗಿರುವಾಗಿನ ರಸೈಕ್ಯದಾಸೆ ರಸರೂಪಿಸ್ಥಿತಿಯಾಗಿರುತ್ತದೆ. ಅಂತಹ ಸ್ಥಿತಿಯಲ್ಲಿಯ ವಿರಹಿಗಳ ದಗ್ಧ ಹೃದಯದ ರಸಿಕ ಮನದ ಹಾಡು ಅವರ ಅನುಭವದ ಪಾಡಾಗಿ, ರಸಿಕರುನುರಿಸಿ ಆನಂದ ಪಡುವ ಹಾಡಾಗಿದೆ.

ಬೇಂದ್ರೆಯವರು ಪ್ರೇಮಿಗಳ ವಿರಹದಲ್ಲಿ—ಪ್ರೇಮದ ಅನುಭವ ಸತ್ಯವಾಗಿ, ಅಸತ್ಯ ಜೀವದ ಶಕ್ತಿಯಾಗಿ, ಆ ಪ್ರೇಮದ ನಿಷ್ಠೆ ಮಂಗಲಕರವಾಗಿ ಲೋಕ ಕಲ್ಯಾಣವಾಗುವಂತೆ—ವಿರಹ ಕಾವ್ಯಗಳನ್ನು ರಚಿಸಿದ್ದಾರೆ. ವಿರಹದಲ್ಲಿ ವಿಕೃತಭಾವೋದ್ರೇಕ ಸಾಧ್ಯವಿದೆ. ಆದರೆ ಆ ವಿಕೃತ ಭಾವೋದ್ರೇಕ ವ್ಯಕ್ತಿಯ ಜೀವನವನ್ನೇ ಹಾಳು ಮಾಡುವುದಲ್ಲದೆ, ಸಮಾಜ ಹಾಗೂ ರಾಷ್ಟ್ರವನ್ನು ವ್ಯಾಪಿಸಿ ರಾಷ್ಟ್ರದ ಬೌದ್ಧಿಕ ಜೀವನವನ್ನೇ ಹಾಳು ಮಾಡುತ್ತದೆ. ಅಂತಹ ವಿಕೃತತ್ವಕ್ಕೆ ಒಳಗಾಗದ ವಿರಹಿಣಿ ಬೌದ್ಧಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವಂತೆ ಬೇಂದ್ರೆಯವರು ತಮ್ಮ ಕಾವ್ಯದಲ್ಲಿಯ ವಿರಹಿಣಿಯನ್ನು ಸುಸಂಸ್ಕೃತ ಸಂಪನ್ನಳನ್ನಾಗಿ, ಸಾಮಾಜಿಕ ಮೌಲ್ಯಗಳನ್ನು ಕಾಪಾಡುವ ಜವಾಬ್ದಾರಿ ವ್ಯಕ್ತಿಯನ್ನಾಗಿ, ತನ್ನ ಮನಸ್ಸು ವಿರಹದಲ್ಲಿ ಕಾದು—ಬೆಳಕಾಗುವ 'ಒಲುಮೆಯ ಕಿಚ್ಚಿ'ನ ಕಾವ್ಯಕಲಾರಸಿಕಳನ್ನಾಗಿಸಿದ್ದಾರೆ.

ಅನಾದಿಕಾಮುದಕ್ರಮ ಜೀವಲೋಕದಲ್ಲಿ ಮಾನವರಲ್ಲಿ ಪ್ರವಹಿಸುತ್ತಿರುವುದು ಒಂದು ಸಹಜ ಆಕರ್ಷಣೆಯಾಗಿದೆ. ಅದಕ್ಕೆ ಈಡಾದ ಗಂಡು, ಹೆಣ್ಣಿಗಾಗಿ ಬಯಸಿ ಕೂಗುವ ಕೂಗು :

> 'ಎಂದಿನಿಂದಲೋ ಏನೋ ಒಳಗೊಂದು
> ಸಖ-ಜೀವ
> ಸಖಿ ! ಬ್ಯಾರೆಬಾ !' ಎಂದು ಕೂಗುತಿದೆ,
> 'ಮುಂದಿನ ಪಥದಲಿ ಸಖಿಯಾಗು ಬಾ !'
> ಎಂದು
> ನನ್ನ ಮನೋರಥ ಕೂಗುತಿದೆ.
>
> ಸಖೀಗೀತ

ಅಂತಹ ಅನಾದಿಕರೆಯನ್ನು ಹೊಸಹರೆಯಲ್ಲಿ ಬಿಂಬಿಸಿ, ಆ ಅಗಲಿಕೆ ಒಂದುಗೂಡುವಿಕೆಯಲ್ಲಿ ಮನ ತೊಡಗಿಸಿರುವದನ್ನು 'ವಾರಿನೋಟ' ಕವನದಲ್ಲಿ ರೂಪಕವಾಗಿ ನೀಡಿದ್ದಾರೆ.

> ಸೂಜಿಗಲ್ಲು ತಿರುಗತಿತ್ತೋ ಹೊಳಿಮ್ಯಾಗ
> ಸೂಜಿಯೊಂದು ತೇಲತಿತ್ತೋ ಹೊಳಿ
> ಯಾಗ,
> ಸೆರಗು ಒಂದು ಅಳಿದಾಡತಿತ್ತೋ
> ಹೊಳಿಮ್ಯಾಗ
> ಬೆರಳು ಒಂದು ನಲಿದಾಡತಿತ್ತೋ
> ಹೊಳಿಯಾಗ.

ಹೀಗೆ ಪೂರ್ವದ ಅಗಲಿಕೆಯ ಗಂಡು ಹೆಣ್ಣು ಸೇರಿ ಸಂಸಾರಮಾಡುವಾಗ ಹಲವಾರು ಕಾರಣದಿಂದ ಅಗಲಿಕೆಯಾಗುತ್ತದೆ. ಆ ಯೌವ್ವನದ ಅಗಲಿಕೆ ಮಾಗಿಕಾಲದ ಬನದ ರೀತಿಯಿದೆ ಎಂದು ರೂಪಕವನ್ನು ಕೊಡುತ್ತ ಬೇಂದ್ರೆಯವರು, ಆ ವಿರಹಿಣಿ ತನ್ನ ಮನದ ಕೋಗಿಲೆಗೆ ಸುಗ್ಗಿಯನ್ನು ಕರೆದುತಾ ಎಂದು ಕೋರುತ್ತಿರುವುದನ್ನು ಚಿತ್ರಿಸಿದ್ದಾರೆ.

> ಮಾಗಿಮುಂಜಾಲ ಗಾಳಿ ತಾಗಿದ ಬನಧಾಂಗ
> ಸಾಗ್ಯದ ನನ್ನ ಹರೆಯವು ಕೋಗಿಲಾ
> ಕೂಗಿ ಕರೆತಾರ ಸುಗ್ಗಿಯಾ
>
> 'ಒಲುಮೆಯ ಕಿಚ್ಚು' ಕಾಮುಕಸ್ತ್ರೀ

ಆ ಅಗಲಿಕೆಯಲ್ಲಿ ಕಾವು ತನ್ನ ಚಿರಂತನ ತೆಗೆ ಕಾವು ಕೊಟ್ಟು, ಒಲವನ್ನು ಕಿಚ್ಚಾಗಿಸಿ ಸುಪ್ರೇಮದ ಉದಾತ್ತತೆಯ ಆನಂದದ ಫಲ ನೀಡುತ್ತದೆ. ಆ ಸಂಕ್ರಮಣ ಸ್ಥಿತಿಯ ಪ್ರಿಯೆ ತನ್ನ ನಲ್ಲನಿಗಾಗಿಯೇ ಜೀವ ಹಿಡಿದು ಕೊಂಡು ಅವನ ಜೊತೆ ಮಿಾಸಲಳಿಯದ ಮಳೆಯಲ್ಲಿ ಸವಿ ಉಣ್ಣುವುದು ಆ ಅಗಲಿಕೆ ತಡೆದುಕೊಂಡ ಪ್ರೇಮಸಾಮರ್ಥ್ಯದ ದ್ಯೋತಕವಾಗುತ್ತದೆ. ಅದು ಬಾತು ಕೋಳಿಯ ಹಾಗೆ ನಿಂತ ನೀರಲ್ಲಿ ಆಡು ವುದಿಲ್ಲ; ನಿಜ ಪ್ರೇಮದ ಮಿಾಸಲಳಿಯದ ಮಳೆಗಾಗಿ ಕಾಯುವ ವ್ರತರೂಪವಾದುದು.

ಬಾತುಗೋಳಿಹಾಂಗ ಜಾತಕದ ಜಾತ್ಯಲ್ಲ
ನಾತ ನೀರಾಗ ಅದರಾಟ, ಇದರೂಟ
ಮಿಾಸಲಳಿಯದ ಮಳಿಯಾಗ
'ಒಲುಮೆಯ ಕಿಚ್ಚು'–ಕಾಮುಕಸ್ತೂರಿ

ಪ್ರೀತಿ, ಒಲುಮೆ ಎಂಬುದು ಕುಲು ಮೆಯ ಕಿಚ್ಚಿನಂತೆ. ಅದರಲ್ಲಿ ಪ್ರಿಯೆಯ ಹುಲು ಜೀವ ಕಾದು ಕಮರಿದರೂ ಅವಳ ಒಳ ಜೀವ ನಿಜ ಪ್ರೀತಿಗಾಗಿ ಕಾದು ಬಾಳುತ್ತಿರುತ್ತದೆ.

ಒಲುಮೆಯ ನಚ್ಚೊಂದು ಕುಲುಮೆಯ
ಕಿಚ್ಚವ್ವ
ಹುಲು ಜೀವ ಕಾದು ಕಮರೀತು
ಒಳುಜೀವ
ಒಲುಮಿಗೆ ಹ್ಯಾಂಗೊ ಬಾಳೀತು.
'ಒಲುಮೆಯ ಕಿಚ್ಚು'–ಕಾಮುಕಸ್ತೂರಿ

ಬೇಂದ್ರೆಯವರ ಕಾವ್ಯದ ಪ್ರಿಯೆಯು ಶೃಂಗಾರ ಸಂಕೇತವಾದ ಗಿಣಿಯ ಜೊತೆ ಮಾತನಾಡುವದು, ತನ್ನ ಮನದ ಗಿಣಿ ಯೊಳಗಿನ ಸಂಭಾಷಣೆಯಾಗಿ 'ಗಿಣಿಹೇಳ!' ಕವನವಿದೆ. ವಿರಹಿಣಿಯ ಕವಳವೆದ್ದ, ಅಂದರೆ ಎಲೆ ಅಡಿಕೆ ಸವಿದ ತುಟಿ ಗಿಣಿಯ ತುಟಿಯಂತೆ ಕಡು ಕೆಂಪಾಗಿದೆ. ತನ್ನ ನಲ್ಲ ಚುಂಬಿಸದೆ ಉಳಿದ ತುಟಿಯನ್ನು ಹಿಂಡುತ್ತ, ತನ್ನ ಮನದ ಗಿಣಿಗೆ ಕೇಳು ತ್ತಾಳೆ! 'ಗಿಣಿಹೇಳ ಇವಳ ಮನವೆಲ್ಲಿ ಇರ ಬಹುದು.'

ತನ್ನನ್ನು ಒಂಟಿಯಾಗಿ ಬಿಟ್ಟು ಕಾಡಿಗೆ ಹೋದ ಕಾಂತನನ್ನು ಕುರಿತು 'ಕಾಂತ ನಿನ್ನವನೇನ' ಎಂದುಕೊಳ್ಳುತ್ತಾ; ಏಕಾಂತ ಬಯಸಿರುವ ವಿರಹಿಣಿ ತನ್ನ ಮನದ ಗಿಣಿಗೆ ತನ್ನ ಕಾದ ಬಗೆಯನ್ನು ಪ್ರಶ್ನಿಸುವಂತೆ ಕೇಳುತ್ತಾ! 'ಗಿಣಿ ಹೇಳ ನಿಂತಾಳ ಕಾದು ನಿನಗಾಗಿ' ಎಂದು ಕಾಯುವ, ಕಾದ ಮನ ವನ್ನು ಕಾವ್ಯ ಮಾಡುತ್ತಾಳೆ.

ಪುರುಷನ ಧ್ಯಾನ ಸರಸಿಗಾದುದು ಪರುಷ ಕಬ್ಬಿಣಕ್ಕೆ ಸ್ಪರ್ಶ ಮಾಡಿದ ಅನುಭವವಾಗು ತ್ತದೆ. ಆ ನೆನೆದ ಹರುಷ ದೇಹದ ರೋಮಾಂಚನವನ್ನು ಮನದ ಗಿಣಿಗೆ ಹೇಳುತ್ತಾ: 'ಗಿಣಿ ಹೇಳ ಹರುಷ ರೋಮಾಂಚ ತಳೆದಾಳ' ಎಂದು ಆ ಪ್ರಿಯನ ಧ್ಯಾನ ರೋಮಾಂಚನವನ್ನು ಕಾವ್ಯ ವಾಗಿಸುತ್ತಾಳೆ.

ವಿರಹಿಣಿಯ ಮನದ ನುಡಿಯನ್ನು ಕಾವ್ಯವಾಗಿಸುವುದಕ್ಕಿಂತ; ಅವಳ ಕೈಗಲ್ಲ, ಹುಬ್ಬುಗೈ, ಗದ್ದ ಬೆರಳು, ತೆರೆವ ತೋಳು, ನಗುವು ಬಿಕ್ಕುಗಳು ಸೂಚಿಸುವ ನಲ್ಲನೊಡ ನೆಯ ಶೃಂಗಾರದ ಸ್ಮರಣೆಯ ಸಂಕೇತಗಳು ಸಂಕೇತವಾಗಿಯೇ 'ಚಿತ್ರ' ಎಂಬ ಕವನ ದಲ್ಲಿ ನಿಂತು; ಚಿತ್ರದೊಡಲ ವಿರಹಿಣಿಯ ಚಿತ್ರ ಕೆ. ಕೆ. ಹೆಬ್ಬಾರರ ರೇಖಾ ಚಿತ್ರದಂತೆ ಮುದ ನೀಡುತ್ತದೆ. ವಿರಹ ಕಾವ್ಯದ ಬೆಡಗು ಇಲ್ಲಿ ಮಡುಗಟ್ಟಿದೆ.

ಕೈಗಲ್ಲ......................
(ಬಳಿಯಲ್ಲಿ ನಲ್ಲನಿಲ್ಲ!)
ಹುಬ್ಬುಗೈಯ್ಯು............
(ಕಾಣುವುದೆ ದೂರ ಮೈಯ್ಯು!)
ಗದ್ದ ಬೆರಳು............
(ಕೆಂಡಳೇ ನಲುಮೆದಿರುಳು!)
ತೆರೆದ ತೋಳು................
(ಒಂದಾದವೆರಡು ಹೋಳು?)
ನಗುವುಬಿಕ್ಕು...............
(ಒಲುಮೆಯಲಿ ಹಾಸು ಹೊಕ್ಕು!)

'ಚಿತ್ರ'—ಕಾಮುಕಸ್ತೂರಿ

'ಹೂ' ಹೂವಿನಂತಹ ಒಪ್ಪಿಗೆಯ ಮಾತು. 'ಊಂಹೂ' ಒಪ್ಪದ ನುಡಿ. ಒಂದರಲ್ಲಿ ಸಂಭೋಗ ಶೃಂಗಾರದ ಒಲವಿದ್ದರೆ, ಇನ್ನೊಂದರಲ್ಲಿ ವಿಪ್ರಲಂಭ ಶೃಂಗಾರದ ವಿರಹ ಛಾಯೆ ಇದೆ. ಒಂದರಲ್ಲಿ ತುಂಬುಭಾವ, ಇನ್ನೊಂದರಲ್ಲಿ ಶೂನ್ಯಭಾವ. 'ಹೂ' ಎಂದಾಗ ಕೋಗಿಲೆಯ ಉಲಿತದಂತೆ ಇಬ್ಬರ ದನಿ ಒಂದಾಗಿ ಇಬ್ಬರ ಮೈಯು ಹೂ ತುಂಬಿದ ಮಾವಾಗಿ, ಒಳಹೊರಗು ಹೂ ತುಂಬಿದ ಭಾವೈಕ್ಯಸಾಧಿತವಾಗುತ್ತದೆ. ಆಗ ತುಟಿಗೆ ತುಟಿ ಮುತ್ತನ್ನು ಒತ್ತಿ, ಜೇನ್ನುಡಿಯ ಬೀಜವನ್ನು ಬಿತ್ತಿ, ಮಧುಚಂದ್ರನ ಸ್ವಪ್ನ ಮೆತ್ತಿ ಸುತ್ತಲೂ ರತಿಯ ಆಹ್ಲಾದ ಸುಳಿದಾಡುತ್ತಿರುತ್ತದೆ. ಆಗ 'ತುತ್ತೂ ತುತ್ತೂ ತುತ್ತೂ। ಬರಿ ಮುತ್ತೇ ಮುತ್ತೇ ಮುತ್ತೂ.' ಆಗಿರುತ್ತದೆ.

'ಊಂಹೂ' ಎಂದಾಗ ವಿರಸದ ನುಡಿಯಾಗಿ ಮನವೆಲ್ಲ ಬಾತುಕೊಳ್ಳುತ್ತದೆ. ಮೈತುಂಬ ದ್ವೇಷದ ಕಾವಿನ ಉರಿ ಎದ್ದು ಮಾವಿದ್ದದ್ದು ಬೇವಾಗುತ್ತದೆ. ಅದೇ ಹೆಣ್ಣು ಗಂಡಾಗಿದ್ದರೂ 'ಬಾಳಾಗಿದೆ ಬದುಕಿನ ಸಾವು.' ಥೂ ಥೂ ಥೂ ಎಂಬ ಅಸಹ್ಯಭಾವದಿಂದ, ಆಡುವ ಮಾತು 'ಹುಳುಹುಳುಕು ತೂತು ಮಾತೂ' ಎಂಬ ಧ್ವನಿಯಲ್ಲಿ ಇಡೀ ವಿರಹದ ಹಲವು ಹರವು ಗೋಚರವಾಗುತ್ತದೆ. ಓಹ್ ಏನೋ ನೋವಾಗಿ ಮೊದಲಿದ್ದ ಹಾಡು ಕುಹೂಽ ಎಂಬ ಕೊಂಕು ಕಾಕಾಗುತ್ತದೆ.

ಆಗ ವಿರಹದಿಂದ ಕಂಪಿನ 'ಹೂ' ಅಣಗಿಸುವ ಒಣಗಿದ ಹೂವಾಗಿ; 'ಹೂಹೂ' ಇಲ್ಲವಾಗಿ ಬರಿ 'ಊಂಹೂ ಊಂಹೂ ಊಂಹೂ' ಎಂಬ ಸುತ್ತು ಮುತ್ತು ಬುಸುಗುಡುವ ಹಾವಾಗಿ ಪೂತ್ಕಾರಗೊಳ್ಳುತ್ತದೆ.

ಬುಸುಗುಡುತಿವೆ ಸುತ್ತೂ ಮುತ್ತೂ।
ಹಾವೂ
ಅಣಗಿಸುತಿವೆ ಒಣಗಿದ ಹೂವೂ
ಎಲ್ಲಿರುವುದು ಆಗಿನ ಹೂಹೂ
ಊಂಹೂಽ ಊಂಹೂಽ ಊಂಹೂಽ

'ಹೂ-ಊಂಹೂ'—ಸಂಚಯ

ವಿರಹ ಕೆಲವು ಕಾಲ ಉಳಿದು ಮತ್ತೆ ಪ್ರೇಮ ಪಲ್ಲವಿಸಿದಾಗ ಆ ವಿರಹಕ್ಕೆ ಅರ್ಥವಿದೆ. ಆದರೆ ವಿರಹ ಜೀವಂತ ವಿರಹವಾದಾಗ ಅಂತಹ ವಿರಹವನ್ನು ಜನಪ್ರಿಯ ಪ್ರೇಮಗೀತೆಯಾಗುವಂತೆ ರಚಿಸುವುದು ಸಮರ್ಥ ಕವಿಗೆ ಮಾತ್ರ ಸಾಧ್ಯ. ಅಂತಹ ಅಪರೂಪದ 'ನಗಿನವಿಲು' ಕವನದಲ್ಲಿ ವಿರಹಿಯಾದವಳ ದೇಹವನ್ನು ಉಲ್ಲಾಸದ ಕುಣಿತದ ನಗೆಯ ಸಂಕೇತ ನವಿಲಾಗಿಯೂ, ಅವಳ ವಿರಹದ ಮನಸ್ಸು ಕೋಕಿಲವಾಗಿ ಹಾಡಬಿಟ್ಟು ಬರಿ ಅವಳನ್ನು ನೋಡುವುದನ್ನು ಚಿತ್ರಿಸಿದ್ದಾರೆ. ಅವಳ ತುಂಬು ಶರೀರ ಮತ್ತು ಮುದುಡಿದ

ಮನಸ್ಸನ್ನು ನವಿಲು ಮತ್ತು ಕೋಕಿಲವಾಗಿಸಿ, ಇಡೀ ಕವನವನ್ನು ಒಂದು ರೂಪಕ ಕಾವ್ಯವಾಗಿಸಿದ್ದಾರೆ.

ಅವಳ ಮುಖದ ನಗೆಯು ನವಿಲಿನಲ್ಲಿ ಆಟವಿದೆ, ಕುಣಿತವಿದೆ. ಮುಗಿಲ ಕಡೆಗೆ ದೃಷ್ಟಿಯಿದ್ದು, ಮಳೆಯ ಬರವನ್ನು ಆಗಿಸುವ, ಅಂದರೆ ಪ್ರಿಯನ ಬರವನ್ನು ಕಾಣುವ ಭರವಸೆಯ ನೋಟವಿದೆ. ಆ ನೋಟದಲ್ಲಿ ಆಶೆಯು ಮಿನಮಿನ ಮಿಂಚಿ ಇಡೀ ನೆಲ ಜಲವನ್ನು ಬೆಳಗುವ ನಗೆಯಿದೆ. ಆ ನಗೆಯು ಕಣ್ಣಿನಲ್ಲಿ ಕುಣಿತ ಒನೆದಾಟವಿದೆ.

ಕಣ್ಣಿನ್ಯಾಗ ಬಣ್ಣದನೋಟ
ತಕ ತಕ ಕುಣಿದಾಡತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ಒನದಾಡತಿತ್ತ,

'ನಗೀನವಿಲು'—ಗರ

ಆದರೆ ದೇಹ ಉಲ್ಲಾಸಮಯ ರೂಹು ಹೊಂದಿದ್ದರೂ, ಆ ಉಲ್ಲಾಸದಲ್ಲಿ ಯಾತನೆಯಿದೆ. ಅದು ಪ್ರಿಯನಿಲ್ಲದ ಯಾತನೆ. ಆ ಪ್ರಿಯ ಅವಳಲ್ಲಿ ರತಿಭಾವ ಉಂಟುಮಾಡಿ ಶೃಂಗಾರ ಪ್ರಭೆ ನೀಡಿ ಹೋದವನು. ಅವನಿಲ್ಲದ್ದು ; ಅವನು ದೊರಕದ್ದು ಅವಳಿಗೆ ಯಾತನೆಯಾಗಿ ಅವಳ ಮನ ಹಾಡದ ಕೋಕಿಲವಾಗಿದೆ. ಆದರೆ ಅವಳ ಯೌವನದ ಶರೀರ ನಗೆಯು ನವಿಲಾಗಿದೆ. ಆ ಕೋಗಿಲೆ ಅವಳ ಶರೀರವೆಂಬ ಮಾಮರದ ಕೊನೆಗೆ ಕೂತು ಹಾಡಲಾಗದ ಯಾತನೆಯಿಂದ; ಅವಳ ಮುಗಿಲ ಕಡೆ ನೋಡುವ ಭರವಸೆಯಿ ವ್ಯೆಯಾದ ಅವಳನ್ನೇ ನೋಡುತ್ತಿದೆ. ಕೋಗಿಲೆ ಎಂಬ ಮನಸ್ಸು ನೊಂದುಕೊಂಡು ಹಗಲಿರುಳು ಮಿಡುಕಿ ತೊಡಕಿ 'ಏನೋ ಒಂದನ್ನು' ಹುಡುಕುತ್ತಿದೆ. ಆ ಹುಡುಕಾಟದಲ್ಲಿ ತನ್ನ ಕೂಡ ರಮಿಸಿ ಸುಖತಂದ ಪ್ರೇಮಿ ತನ್ನನ್ನು ವಿರಹಿಯನ್ನಾಗಿ ಮಾಡಿ ಹೊರಟು ಹೋದುದರಿಂದ, ಅವನಿಂದ ನಿರಂತರವಾಗಿ ದೂರವಿರಬೇಕಾದ ಅವಸ್ಥೆಯನ್ನು – ಅವನನ್ನು ಹುಡುಕಿ ಪಡೆಯುವ ಆಸೆಯನ್ನು 'ಏನೋ ಒಂದ ಹುಡಕತಿತ್ತ' ಎಂಬ ನುಡಿ ಧ್ವನಿಸುತ್ತದೆ.

ಹುಡುಕುವ ಮನಸ್ಸು (ಕೋಗಿಲೆ) ಆ ಪ್ರಿಯ ದೊರಕದಿರುವುದಕ್ಕೆ ನಗೆಯ ನವಿಲನ್ನು ಬಾಡಿಸುತ್ತಿದೆ.

ಕಣ್ಣೀರಿನ ಮಳೆಯ್ಯ ಕೂಡ
ತನ್ನ ದುಃಖ ತೋಡತಿತ್ತ
ತೋಡತಿತ್ತ ಬೇಡತಿತ್ತs
ದೊರಕದಕ್ಕ ಬಾಡತಿತ್ತ,

'ನಗೀನವಿಲು'-ಗರ

ಹೀಗೆ ಸುಂದರ ಉಲ್ಲಾಸ ಭರಿತ ದೇಹ ಹಾಗೂ ಪ್ರಿಯನಿಗಾಗಿ ಹುಡುಕುವ ಮಿಡುಕುವ ಮನದ ಚಿತ್ರಣ—ವಿರಹದ ಪ್ರಾರಂಭಾವಸ್ಥೆಯನ್ನು ಚಿತ್ರಿಸುವ ಉತ್ತಮ ಕಾವ್ಯವಾಗಿದೆ.

ಪತಿ ತನ್ನ ಪತ್ನಿಯ ನಿಜನಗೆ ಮತ್ತು ಸುಳ್ಳುನಗೆಯನ್ನು ಅರಿತು ನುಡಿದ ವಿರಹಗೀತೆ 'ಹುದುಗಲಾರದ ದುಃಖ'ವಾಗಿದೆ. ಪತಿಗೆ ನೋವಾಗಬಾರದೆಂದು ಬದುಕಿನ ಎಲ್ಲ ನೋವನ್ನು ನುಂಗಿ, ಹುದುಗಲಾರದ ದುಃಖವನ್ನು ತನ್ನ ನಗೆಯಲ್ಲಿ ಹುಗಿದಿರಿಸಿ ನಕ್ಕಾಗ ಅವಳ ಜೀವದ ಗೆಳೆಯನಾದ ಪತಿ: 'ಇನಿಸು ತಿಳಿಯದ ಮೂಢನೆಂದು ಬಗೆದೆಯೆ ನನ್ನ! ಇದು ಯಾವ ಊರಚದುರು?' ಎಂದು

ಪ್ರಶ್ನಿಸುತ್ತ ಅವಳ ನಿಜವಾದ ನಗೆಗೆ ಆಶಿಸುವ ಜೀವದ ಗೆಳೆಯನಾಗುತ್ತಾನೆ.

ಬೇಂದ್ರೆಯವರು ಬಡ ಶಿಕ್ಷಕರ ಬಾಳಿನಲ್ಲಿ; ಕೆಲಸಕ್ಕಾಗಿ ವಿದ್ಯೆಗಾಗಿ ಧಾರವಾಡ, ಪೂನಾ ಅಲೆದಾಡುತ್ತ ವಿರಹಯಾತನೆ ಅನುಭವಿಸುತ್ತ ಕವಿಹೃದಯದ ಸೊಬಗಿನಿಂದ ತನ್ನ ಪತ್ನಿಯನ್ನು ನೆನೆದ ಹಾಡೇ ಉತ್ತಮ ವಿರಹಗೀತೆಗಳಾಗಿ ಕನ್ನಡ ಸಾಹಿತ್ಯಕ್ಕೆ ದೊರಕಿವೆ. Our sweetest songs are those that tell of saddest thoughts ಎಂದು ಶೆಲ್ಲಿ ಹೇಳಿರುವ ಮಾತಿನಂತೆ ಅವರ ದುಃಖದ, ವಿರಹದ ಗೀತಗಳು ಉತ್ತಮ ಪ್ರೇಮಗೀತೆಗಳಾಗಿವೆ.

ತನ್ನ ಪತ್ನಿಯ–ಸುಳ್ಳುಸುಖ ಮೆರೆಸುವ ಮುಗುಳುನಗೆ–ಹುಸಿನಗೆಯೆಂದು ಸುಖದ ಹೂನಗೆಯಲ್ಲವೆಂದು ತಿಳಿದ ಕವಿ ಪತ್ನಿಗೆ ಪ್ರಶ್ನಿಸುವ ನುಡಿಯಲ್ಲಿ, ತನ್ನ ಮನದ ಪ್ರಶ್ನೆಯನ್ನು ಒಡ್ಡಿ ವಿರಹಿಗಳೆಲ್ಲರೂ ಪ್ರಶ್ನಿಸುವ ಪ್ರಶ್ನೆಯಾಗಿ :

ಮುಗುಳುನಗೆಯುರಳಿಸುತ ಕರಿಯಾಲಿ ಹೊರಳಿಸುತ
  ಸುಳ್ಳುಸುಖ ಮೆರೆಸಬಹುದೆ ?
ಮಮತಾಜಳನು ಹುಗಿದು ತಾಜಮಹಲನು ಕಟ್ಟಿ
  ನಿಜದುಃಖ ಮರೆಸಬಹುದೆ ?

'ಹುದುಗಲಾರದ ದುಃಖ'–ಗರಿ

ಎಂದು ನಿಜದುಃಖ ಮರೆಸಲಾಗದ ಒಂದು ಅಪರೂಪ ಪ್ರತಿಮೆಯನ್ನು ದರ್ಶಿಸಿದ್ದಾರೆ.

'ಪ್ರಣಯಭಂಗದಿಂದ ಹುಚ್ಚು ಹಿಡಿದ ಸೂಳೆಯೊಬ್ಬಳು ತನ್ನ ಉನ್ಮಾದದಲ್ಲಿ ಈ ಹಾಡನ್ನು ಹೇಳುತ್ತಾಳೆ' ಎಂಬ ಭಾವ ಸಂದರ್ಭ ಹೊಂದಿದ 'ಹುಬ್ಬಳ್ಳಿಯಾಂವಾ' ಕವನವು :

ಇನ್ನೂ । ಯಾಕ ಬರಲಿಲ್ಲವ್ವಾ । ಹುಬ್ಬಳ್ಳಿಯಾಂವಾ
ವಾರದಾಗ । ಮೂರ ಸರತಿ । ಬಂದು ಹೋದಾಂವಾ ॥

ಎಂಬ ಪಲ್ಲವಿಯನ್ನು ಹೊಂದಿ ಎಲ್ಲರೂ ಹಾಡುವ ವಿರಹಗೀತೆಯಾಗಿದೆ. 'ಜೋಗತೇರಿಗೆ। ಮೂಗುತಿ ಅಂತ। ನನ್ನಗ ಅಂದಾಂವಾ' ಎಂದು ಹೆಮ್ಮೆ ಪಟ್ಟು ನುಡಿಯುವ, ರಸಿಕ ಹುಬ್ಬಳ್ಳಿಯವನನ್ನು ನಂಬಿದ ಮನೋವಿಕಾರ ಹೊಂದಿದ ಸೂಳೆಯ ವಿರಹದ ನುಡಿಯ ಎಳೆಎಳೆಯಲ್ಲಿ —ಅಶ್ಲೀಲದ ನುಡಿಯಿಲ್ಲದೆ, ಆಹ್ಲಾದಮಯ ಉನ್ನತನೆಲೆಯ ಪ್ರೇಮರಸಾಯನವನ್ನು ಅನುಭವಿಸಿದ ಪ್ರಾಮಾಣಿಕ ಅಭಿವ್ಯಕ್ತಿಯಿರುವುದು—ಈ ಕವನದ ವೈಶಿಷ್ಟ್ಯವಾಗಿದೆ.

ಇರುಳುಅಂದರ । ಬರತೇನಂತ । ಎದ್ದು ಹೊರಡಾಂವಾ
ಮಾರೀತೆಳಗ ಹಾಕಿತೆಂದರ । ಇದ್ದು ಬಿಡಾಂವಾ
ಹಿಡೀ ಹಿಡೀಲೆ । ರೊಕ್ಕಾ ತಗದು । ಹಿಡಿ ಹಿಡಿ ಅನ್ನಾಂವಾ
ಖರೇ ಅಂತ । ಕೈ ಮಾಡಿದರ । ಹಿಡ್ವದ ಬಿಡಾಂವಾ

'ಹುಬ್ಬಳ್ಳಿಯಾಂವಾ'–ಸಖೀಗೀತ

ಎಂಬ ಅಂತ್ಯಪ್ರಾಸದಗತಿಯಲ್ಲಿ ಆವನನ್ನು ನೆನೆಯುತ್ತ ಅಂವ ಅವಳಿಗೆ ಏನೆಲ್ಲ ಆನಂದ ನೀಡಿದ್ದ ಎಂದು ನುಡಿಯುವ ನಾಟಕೀಯ

ಜೀವಂತಿಕೆ ಆ ಕವನದಲ್ಲಿದ್ದು ಒಂದು ಅಪರೂಪದ ವಿರಹಗೀತವಾಗಿದೆ. ಜಗದ ಒಂದು ಬಗೆಯ ಜೀವನದಲ್ಲಿಯ ಆ ಜೀವನ ಶ್ರದ್ಧೆಯ, ಸಾಮಾಜಿಕ ವ್ಯವಸ್ಥೆಯ ಸಾಕ್ಷಾದರ್ಶನವನ್ನು ಆ ಕವನ ನೀಡುತ್ತ, ಸಾರ್ವಕಾಲಿಕ ಸತ್ಯವನ್ನು ಧ್ವನಿಸುತ್ತ, ಎಲ್ಲ ಕಾಲದ ಎಲ್ಲ ಬಗೆಯ ಜನ ಕೇಳಿ ಉಲ್ಲಸಿತರಾಗುವ ಸಹಜ ಸತ್ಯಭಾವವನ್ನು ಹೊಂದಿದೆ. ಅವನು ಆ ವಿರಹಿಣಿಯನ್ನು 'ಎದಿವ್ಯಾಗಿನ। ಗೆಣತಿನ ಮಾಡಿ। ಇಟ್ಟುಕೊಂಡಾವಾ.' ಆದುದರಿಂದ ಆ ಜೀವ ಅವನನ್ನು ಹುಡುಕುತ್ತ 'ಹಾದೀ ಬೀದೀ। ಹುಡುಕತೈತ್ರೀ। ಬಿಟ್ಟ ಎಲ್ಲಾ ಹ್ಯಾಂವಾ.'

ವಿಧಿಯದುರ್ದೆಸೆಯಿಂದ ಪರಿಸ್ಥಿತಿಯ ಒತ್ತಡದಿಂದ ವ್ಯವಸ್ಥೆಯ ಶಿಶುಗಳಾಗಿ ಪಾಟಲೀಪುತ್ರದ ರಾಜನ ಮದುವೆಯಾದ ಹೆಣ್ಣುಗಳಾಗಿ, ಅವನ ಹೃದಯ ಪಂಜರದ ಗಿಳಿಯಾಗಲು ಬಂದು—ಈಗ ನವರತ್ನ ಸಾರದ ಭವದ ಕಾಡಿನ ಅರಮನೆಯ ಬಂಧಿಯಾದ ಭೋಗ ಶೃಂಗಾರದ ಒಡಲಾಸೆಯಿದ್ದೂ ಇಲ್ಲದಂತಿರುವ—ಮುನ್ನೂರು ಸುಂದರ ಹೆಣ್ಣುಗಳ ರಾತ್ರಿಗೀತ, ಉದಯಗೀತವಾಗಿ 'ಮರೆಯುವೆಯೋ, ಅರಿಯುವೆಯೋ!' ಮತ್ತು 'ಎಲ್ಲಿರುವೆ ರಾಜಗಂಭೀರಾ!' ಎಂಬ ವಿಪ್ರಲಂಭ ಶೃಂಗಾರದ ಕವನಗಳಿವೆ.

ರಾತ್ರಿಗೀತವಾದ 'ಮರೆಯುವೆಯೋ, ಅರಿಯುವೆಯೋ!' ಕವನದ ಪಲ್ಲವಿಯಲ್ಲಿ:

ಎಲ್ಲಿ ಮರೆಯುವಿಯೋ।
ಎಲ್ಲ ಅರಿಯುವಿಯೋ। ನಮ್ಮನ್ನs ॥

ಎಂದು ರಾಜನನ್ನು ನೆನೆಯುತ್ತ ಅವನಿಗೆ ತಮ್ಮ ಅರಿವಾಗಲೆಂದು, ತಮ್ಮನ್ನು ಮರೆಯಬೇಡವೆಂದು ಹಾಡುತ್ತಾರೆ, ಅವನ 'ಮೊದಲ ಸೋಂಕಿಗೆ ಇನ್ನೂ ನೆನವು ನವಿರಾಗುತಿದೆ.' ಎಂಬ ನೆನಹಿನಲ್ಲಿ ಅವರ ಮನದ ಕಾವು ಇನ್ನೂ ಬಿಸಿಯಾಗಿರುವುದರ ಸೂಚನೆಯಿದೆ.

ಇರುಳು ಮುಸುಕಲುಬಂದು, ನೆರಳು
ನೆರೆದಿಹೆವಿಲ್ಲಿ
ಕರುಣೆ ಬಾರ್ಕೆ ಮಾರಾ। ನೀರಾ।
ಚೆಲುವ ಗೊಂಬೆಗಳಲ್ಲಿ
ಒಲುಮೆಯುಸಿರನು ತುಂಬಿ
ಪೊರೆಯುವಿಯೋ ನಮ್ಮನ್ನಾ
'ಮರೆಯುವೆಯೋ, ಅರಿಯುವೆಯೋ!'
–ನಾದಲೀಲೆ

ಎಂದು ತಮ್ಮ ಬದುಕಿನ ಸುಂದರಶೃಂಗಾರ ರಾತ್ರಿಯು: 'ಇರುಳು ಮುಸುಕಲು ಬಂದು, ನೆರಳು ನೆರೆದಿಹೆವಿಲ್ಲ.' ಎಂಬಂತೆ ಬದುಕಿನ ಇರುಳಿನಲ್ಲಿಯ ನೆರಳಿನಂತಾದ; ರೂಪ, ಆಕಾರ ಹಾಗೂ ಅರ್ಥರಹಿತ ಬದುಕಿನಂತಾದ ತಮ್ಮ ಹೀನಾವಸ್ಥೆಯನ್ನು ಧ್ವನಿಯಾಗಿಸುತ್ತನೊಂದ ಜೀವಿಗಳು ದುರಂತದಲ್ಲಿದ್ದಾರೆ. ಅವರು ಚೆಲುವ ಗೊಂಬಿಗಳಂತಾಗಿರುವದು ಅವರ ವಿರಹಾವಸ್ಥೆಯ, ಏಕಾಕಿತ್ವದ ಬಂಧಿಯಾಗಿ ಕಾಮಭಿಕ್ಷೆ ಆಶಿಸುವ ಜೀವಚ್ಛವವಾದ ದೀನಸ್ಥಿತಿಯನ್ನು 'ಒಲುಮೆಯ ಕಿಚ್ಚ'ನ್ನು ಸಮರ್ಥವಾಗಿ ಧ್ವನಿಸುತ್ತ; ವ್ಯವಸ್ಥೆಯ ಕ್ರೂರ ಚಿತ್ರದರ್ಶಿಸುತ್ತಾ ಕರುಣರಸವನ್ನು ಹುಟ್ಟಿಸುತ್ತದೆ.

ನೆರಳೀತಾವಾಗಿ ರಾತ್ರಿಗೀತ ಹಾಡಿದ ಆ ಹೆಣ್ಣುಗಳು ಹಾಡುವ ಉದಯಗೀತ 'ಎಲ್ಲಿರುವೆ ರಾಜಗಂಭೀರಾ!' ಬೆಳಕಿದ್ದು ಬೆಳಕು ಸುಳಿಯದ ವ್ಯವಸ್ಥೆಯಲ್ಲಿರುವ ಅವರ ಹೀನಸ್ಥಿತಿಯನ್ನು 'ಹಾಳುದೇಗುಲ

ದಲ್ಲಿ, ಗಾಳಿಗೋಳಿಡುವೊಲು ಉಸಿರಾಡುತಿದೆ ಜೀವಾ' ಎಂದು ಚಿತ್ರಿಸುತ್ತದೆ.

ಬೆಳಕಬೇಡುತಲಿದೆ, ಗಾಳಿಕಾಣದೆಬಾಡಿ
    ಬಳ್ಳಿಯಾಗಿಹ ಜೀವಾ ;
ಮಲ್ಲಿಗೆಯಾಗದೆ, ಮೊಗ್ಗೆಯಾಗಿಯೆ ಇದೆ,
    ಎಲ್ಲಿರುವೆ ರಾಜಗಂಭೀರಾ–ನೀರಾ
    'ಎಲ್ಲಿರುವೆ ರಾಜಗಂಭೀರಾ !' ನಾದಲೀಲೆ

ಎಂಬುದು ಪ್ರೇಮದ ಬೆಳಕನ್ನು ಅರಸುತ್ತಿರುವ ಮನವನ್ನು, ಅದು ಸಿಗದೆ ನಿರರ್ಥಕವಾದ ಸ್ಥಿತಿಯನ್ನು ಬಿಂಬಿಸುತ್ತದೆ. ಅವರು ಮದುವೆಯಾದ ಒಂದೇ ಕಾರಣದಿಂದ 'ನಲ್ಲಿ, ನೀರಡಿಸಿದೆ, ಕಾವೇರಿ ಆರಿದೆ.' ಎಂದು ತಮ್ಮ 'ಒಲುಮೆಯ ಕಿಚ್ಚ'ನ್ನೆಲ್ಲ ಧ್ವನಿಯಾಗಿಸಿ ತಮ್ಮ ಅಸಹಾಯಕತೆಯನ್ನು, ತಾವು ರತಿಭಾವ ಕಳೆದುಕೊಳ್ಳುತ್ತಿರುವ ಅವಸ್ಥೆಯನ್ನು ತಿಳಿಸುತ್ತದೆ.

ತನ್ನ ಒಡವೆಯೆ ತನಗೆ, ಎರವಾಗಿ ಹೊರತಾಗೆ,
    ನಿರ್ಜೀವವೀ ಜೀವಾ ;
ಇಲ್ಲಿ ರಂಭೆಯರಿಲ್ಲಾ, ನಂಬಿಕಳಿತಿಹರಲ್ಲೋ,
    ಎಲ್ಲಿರುವೆ ರಾಜಗಂಭೀರಾ–ನೀರಾ,

ಎಂದು ಮುನ್ನೂರು ನೀರೆಯರು ನಿರ್ಜೀವ ಸ್ಥಿತಿಯಲ್ಲಿ ನಂಬಿಕಳಿತ ನಂಬಿಕೆ ಕಂಡು ಅಯ್ಯೋ ಎನಿಸುತ್ತದೆ. ಬೇಂದ್ರೆಯವರು ಈ ಎರಡು ಕವನಗಳಲ್ಲಿ ನಿಸ್ಸಹಾಯಕರಾದ ಮುನ್ನೂರು ರಂಭೆಯರು ವ್ಯವಸ್ಥೆಯಲ್ಲಿ ಬಂಧಿಯಾಗಿ ಕಾಮಭಿಕ್ಷೆ ಬೇಡುವ ಅಂದಿನ ಕ್ರೂರ ಸಾಮಾಜಿಕ ವ್ಯವಸ್ಥೆಯನ್ನು ಬಿಂಬಿಸುತ್ತ ವಿರಹದ ಕ್ರೂರ ಮುಖವನ್ನು ಅದರ ಭಯಾನಕತೆಯನ್ನು ದರ್ಶಿಸುತ್ತಾರೆ.

'ಒಲುಮೆಯಕಿಚ್ಚಿ'ನ ಕವನಗಳಲ್ಲಿ ಬೇಂದ್ರೆಯವರ ಭಾಷೆಯು ವಿರಹಾವಸ್ಥೆಯನ್ನು ಚಿತ್ರಿಸುತ್ತಾ ಅದನ್ನು ಮೀರಿ ಕರುಣರಸ ಹರಿಸುವ ತಂತ್ರವನ್ನು ಸಾಧಿಸಿದೆ. ವೈಯಕ್ತಿಕ ನೆಲೆಯಲ್ಲಿ ಹುಟ್ಟಿದ 'ಒಲುಮೆಯಕಿಚ್ಚಿ'ನ ಕವನಗಳು ದೇಶಕಾಲಮೀರಿದ ಸಾರ್ವತ್ರಿಕ, ಸಾರ್ವಕಾಲಿಕ ಸತ್ವಹೊಂದಿದ ಒಲವಿನ ಹಾಡುಗಳಾಗಿವೆ. ಬೇಂದ್ರೆಯವರು ಆ ಕವನಗಳಲ್ಲಿ ಸಖಸಖಿಯರ ಪ್ರೇಮ ಪರಿಪಾಕಗೊಳ್ಳುತ್ತ ಸುಪ್ರೇಮವಾಗಿ ಅರಳಿ ಮಂಗಲಕರವಾಗಬೇಕೆಂದು ಆಶಿಸಿದ್ದಾರೆ.

---

ಇದ್ದು ಇಲ್ಲದೊಲು ಇದ್ದಿತು ಒಲವು
    ಇದ್ದಿಲ್ಲ ಕಲ್ಲಿನಲು.
ಅಂತಃಸ್ಪರ್ಶ ಎಂತಹ ಹರ್ಷ
ಮೌನದ ಸೊಲ್ಲಿನಲು.

'ಅರಳು ಮರಳು' ಪು. ೩೭೧

# ಬೇಂದ್ರೆಯವರ ಕೆಲವು ಕವನಗಳು

ಡಾ|| ಸಿ. ಪಿ. ಕೃಷ್ಣಕುಮಾರ್

೧

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರು ಮಹಾ ಕಾವ್ಯ ಪ್ರತಿಭೆಗೆ ಹೇಗೊ ಹಾಗೆ ಬೇಂದ್ರೆಯವರು ಭಾವಗೀತ ಪ್ರತಿಭೆಗೆ ಶೃಂಗ ನಿದರ್ಶನವಾಗಿದ್ದಾರೆ. ಅವರ ಕಲ್ಪನಾವಿಲಾಸ ಅಸಾಧಾರಣ ಮೋಹಕವಾದುದು. "ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ" ಎಂದು ಅವರು ಹೇಳುವಲ್ಲಿ—ಅದು ಭಾವಗೀತೆಯನ್ನೆ ಕುರಿತ ಉಕ್ತಿ—ಆ ವಿಲಾಸದ ಲಕ್ಷಣ, ಲಕ್ಷ್ಯಗಳೆರಡೂ ಸೊಗಸಾಗಿ ಮೂಡಿ ಬಂದಿವೆ. ಭಾವಗೀತೆಗೆ ಬೇಕಾದ ಸಂಕ್ಷಿಪ್ತತೆ, ಭಾವತೀವ್ರತೆ, ಧ್ವನಿಪೂರ್ಣತೆ, ಗೇಯತೆಗಳಿಗೆ ಬೇಂದ್ರೆಯವರ ಕವಿತೆ ಅತ್ಯುತ್ತಮ ಉದಾಹರಣೆಯಾಗುತ್ತದೆ.

ಬೇಂದ್ರೆಯವರನ್ನು ಜನತೆಯ ಕವಿ ಎಂದು ನಿರ್ದೇಶಿಸಬಹುದು. ಸಾಮಾನ್ಯ ಜನಜೀವನವನ್ನು, ಅದರ ನೋವು ನಲಿವುಗಳನ್ನು, ಚೆಲುವು ಒಲವುಗಳನ್ನು, ಏಡಿತ ತುಡಿತಗಳನ್ನು ಅವರಂತೆ ನೋಡಿ, ಹಾಡಿನಲ್ಲಿ ಮೂಡಿಸಿದ ಕವಿಗಳು ನಮ್ಮಲ್ಲಿ ಬಹಳ ಮಂದಿಯಿಲ್ಲ. ಅವರ ಕಾವ್ಯದ ಭಾಷೆ, ಲಯಗಳಲ್ಲಿ ಜಾನಪದ ಸತ್ತ್ವ ತುಂಬಿ ತುಳುಕುತ್ತಿದೆ. ಈ ದೇಸಿ ಗುಣವೆ ಅವರನ್ನು ಇತರ ಕವಿಗಳಿಂದ ಬೇರ್ಪಡಿಸಿ, ಒಂದು ವಿಶಿಷ್ಟವಾದ ನಿಲುವಿನಲ್ಲಿರಿಸಿರತಕ್ಕದ್ದು. ಜನಪದ ಕವಿಗಳನ್ನು ಬಿಟ್ಟರೆ, ದೇಸಿಯನ್ನು ವೀರ್ಯವತ್ತಾಗಿ ವೈವಿಧ್ಯಪೂರ್ಣವಾಗಿ ಬಳಸಿಕೊಂಡವರು ಬೇಂದ್ರೆಯವರೇ.

ಕನ್ನಡದ ಎಲ್ಲ ನವೋದಯ ಕವಿಗಳಂತೆ ಬೇಂದ್ರೆಯವರು ಜೀವನದ ಸಕಲ ಮುಖಗಳನ್ನೂ ತಮ್ಮ ಕೃತಿಯಲ್ಲಿ ಕನ್ನಡಿಸಿದವರು; ಕಂಡರಿಸಿದವರು. ವ್ಯಷ್ಟಿ ಪ್ರಜ್ಞೆಯೊಂದೆ ಅಲ್ಲ, ಸಾಮಾಜಿಕ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ, ವಿಶ್ವಪ್ರಜ್ಞೆಗಳೂ[1] ಅವರ ಕಾವ್ಯದಲ್ಲಿ ಆವಿಷ್ಕೃತವಾಗಿವೆ; ಐಹಿಕ ಪ್ರಜ್ಞೆಯೊಂದೆ ಅಲ್ಲ ಪಾರಲೌಕಿಕ ಪ್ರಜ್ಞೆಯೂ ಕಣ್ತೆರೆದಿದೆ; ಅಂತಃ ಪ್ರಕೃತಿಯೊಂದೆ ಅಲ್ಲ, ಬಾಹ್ಯ ಪ್ರಕೃತಿಯೂ

[1] ಕುವೆಂಪು ಅವರ ಪ್ರಜ್ಞೆ ಹೆಚ್ಚು ವ್ಯಾಪಕವಾದುದು ; ಅವರ ಕಾವ್ಯದಲ್ಲಿರುವಷ್ಟು ವೈಚಾರಿಕತೆಯನ್ನು ಬೇಂದ್ರೆಯವರ ಕವಿತೆಯಲ್ಲಿ ಕಾಣಲಾರೆವು.

ಶೋಧಗೊಂಡಿದೆ; ವರ್ತಮಾನವಷ್ಟೆ ಅಲ್ಲ, ತ್ರಿಕಾಲಗಳೂ ಪ್ರತಿಫಲಿಸಿವೆ. ಬದುಕಿನ ಎಲ್ಲ ಪರಿಗಳೂ ಸ್ತರಗಳೂ ಅಲ್ಲಿ ದನಿಗೊಂಡಿವೆ. ಇಡೀ ಭಾರತೀಯ ಪರಂಪರೆಯನ್ನು ಜಾನಪದ ಪ್ರಣಾಳಿಕೆಯಲ್ಲಿ ಹೊನಲುವರಿಸಿರುವ ಸೋಜಿಗವನ್ನು ಬೇಂದ್ರೆಯವರ ಕವಿತೆ ತೋರಿ ಕೊಡುತ್ತದೆ.

ಈ ಕವಿಯ ಮಾತೆಲ್ಲ ಮಂತ್ರ. ಅವರು ಕೊಡುವ ಒಂದೊಂದು ಅನುಭವವೂ ಸುಮೂರ್ತವಾದುದು, ಉತ್ಕಟವಾದುದು. ಅನುಭವವನ್ನು ಕುರಿತ ವ್ಯಾಖ್ಯಾನದಲ್ಲಿ ಬೇಂದ್ರೆಯವರು ಸಾಮಾನ್ಯವಾಗಿ ತೊಡಗುವುದಿಲ್ಲ. ಅನುಭವವನ್ನಷ್ಟೆ ಹರಳುಮಾಡಿ ಕೊಟ್ಟು, ವಿರಮಿಸುವುದು ಅವರ ಸ್ವಭಾವ. ಆದ್ದರಿಂದಲೆ, ಅವರ ಕವಿತೆಯ ಶಿಲ್ಪ ದುರ್ಬಲವಾಗದೆ, ಬಿರುಕುಗೊಳ್ಳದೆ, ಸುಪುಷ್ಟವಾಗಿ ಉಳಿಯುತ್ತದೆ; ತೀವ್ರ ಪರಿಣಾಮಕಾರಿಯಾಗುತ್ತದೆ.

ಬೇಂದ್ರೆಯವರ ಕೆಲವು ಪ್ರಾತಿನಿಧಿಕವೆನ್ನಬಹುದಾದ ಕವನಗಳನ್ನು ಪ್ರಕೃತ ಅನುಶೀಲನ ಮಾಡಬಹುದು.

೨

ಬೆಳಗನ್ನು ಹೊಸ ದೃಷ್ಟಿಯಿಂದ ಚಿತ್ರಿಸಿದ ಒಂದು ಅಪೂರ್ವ ಕವನ, 'ಬೆಳಗು'. ಪ್ರಭಾತದ ಪ್ರಶಾಂತಿ ಪ್ರಸನ್ನತೆಗಳನ್ನೂ ಕವಿಯ ತನ್ಮಯತೆಯನ್ನೂ ಕವನದ ಅನುದ್ವಿಗ್ನ ಪಂದ ಲಯವಿನ್ಯಾಸವೆ ವ್ಯಂಜಿಸುತ್ತದೆ. ಭಾಷೆ ಬಹಳ ಸರಳವಾಗಿ ತಿಳಿಯಾಗಿದೆ; ಮಹಾಪ್ರಾಣಾಕ್ಷರಗಳೇ ವಿರಳ. ವಾಗರ್ಥಗಳ ಸಾಮರಸ್ಯಕ್ಕೆ ಈ ಕವನವೊಂದು ಸಮೀಚೀನ ದೃಷ್ಟಾಂತ.

ಕವಿಗೆ ಬೆಳಗು ಶಾಂತರಸದ ಅವತಾರವಾಗಿ ಅನುಭೂತವಾಗುತ್ತದೆ. ಆ ಅನುಭವ ಕೇವಲ ಇಂದ್ರಿಯ ಪರಿಮಿತವಾಗಿ ಉಳಿಯದೆ, ಸುಲಭವಾಗಿ ಸಹಜವಾಗಿ ಅತೀಂದ್ರಿಯತೆಯತ್ತ ಹೊರಳುತ್ತದೆ; ಬೆಳಗು ಬರಿಯ ಬೆಳಗಾಗದೆ, ಕೇವಲ ಒಂದು ಇಂದ್ರಿಯಗಮ್ಯವಾದ ನಿಸರ್ಗ ವ್ಯಾಪಾರ ವಿಶೇಷವಾಗದೆ, 'something divine' (ಏನೋ ದಿವ್ಯ) ಆಗಿ ಪರಿಣಮಿಸುತ್ತದೆ. ಈ ಪರಿಣಮನ ಸಂವೇದನೆಯ ಹಂತದಲ್ಲಿ ಜರುಗುತ್ತದೆಯೆ ವಿನಾ ಬೌದ್ಧಿಕ ಕ್ರಿಯೆಯಾಗಿ ಅಲ್ಲ.

ಬೆಳಕು ಹರಿದು ಜಗವೆಲ್ಲ ತೊಯ್ದುದನ್ನು ಕವಿ ಪ್ರಾರಂಭದಲ್ಲಿ ಒಂದು ಗೃಹರೂಪಕದಿಂದ ವರ್ಣಿಸುತ್ತಾರೆ. ಮೂಡಲ ಮನೆಯ ಬಾಗಿಲನ್ನು ಯಾರೋ ತೆರೆದು ಮುತ್ತಿನ ನೀರೆರಚಿದ್ದಾರೆ; ಅದೇ ಬೆಳಕಾಗಿ ಲೋಕವನ್ನು ತೊಯ್ಯಿಸಿದೆ. ಬೆಳಗಾಗ ಎದ್ದು ಬಾಗಿಲು ತೆರೆದು ನೀರು ಹಾಕುವ ಗರತಿಯ ಚಿತ್ರವೊಂದು ಇಲ್ಲಿ ಸೂಚಿತವಾಗುತ್ತದೆ. ಬೆಳಕು ಹರಿಯುವ ಕ್ರಿಯೆ, ಅದರಿಂದ ಚೋದಿತವಾಗುವ ಗೃಹಕೃತ್ಯ ಎರಡೂ ಇಲ್ಲಿ ಅಭಿನ್ನವಾಗಿರುವುದನ್ನು ಗಮನಿಸಬಹುದು. ಬೆಳಗಿನ ಬಾಗಿಲನ್ನು ತೆರೆಯುತ್ತಲೆ ಕವಿ ಜನಜೀವನದ ಒಂದು ಪುಟವನ್ನೂ ತೆರೆದಿದ್ದಾರೆ. ಇಲ್ಲಿ ವಿವರಣೆಯಿಲ್ಲ, ಧ್ವನಿಯಿದೆ. ಇದು ಬೇಂದ್ರೆಯವರ ಕಲೆಯ ಜಾಯಮಾನ.

ಮುಂದೆ ಕವಿ ಬೆಳಗಿನ ವರ್ಣಮಯ, ಗಂಧಮಯ ಸ್ವರೂಪವನ್ನು ಚಿತ್ರವತ್ತಾಗಿ ಅನುಕರಣ ಶಬ್ದಗಳ ಮೂಲಕ ನಿವೇದಿಸುತ್ತಾರೆ:

ರತ್ನದ ರಸದ ಕಾರಂಜೀಯೂ
ಪುಟಪುಟನೇ ಪುಟಿದು
ತಾನೇ–ಪುಟಪುಟನೇ ಪುಟಿದು
ಮಘಮಘಿಸುತಾ ಮುಗಿದ ಮೊಗ್ಗೀ
ಪಟಪಟನೇ ಒಡೆದು
ತಾನೇ–ಪಟಪಟನೇ ಒಡೆದು

ಎಲೆಗಳ ಮೇಲೆ, ಹೂಗಳೊಳಗೆ ನೆಲಸಿದ ತುಷಾರ ಕಣಗಳು ಕವಿಗೆ 'ಅಮೃತ್ವದ ಬಿಂದು'ಗಳಾಗಿ ತೋರುತ್ತವೆ. "ಯಾರಿರಿಸಿರುವರು ಮುಗಿಲ್ಯಮೇಲಿಂದಿಲ್ಲಿಗೇ ತಂದು" ಎಂದು ಅವರು ವಿಸ್ಮಯ ಪಡುತ್ತಾರೆ. ಈ ಪ್ರಶ್ನಾತ್ಮಕ ವಿಸ್ಮಯ ಕವಿಗೆ ಬೇಕಾದದ್ದು; ಉತ್ತರಿಸುವುದು ಅವನ ಜವಾಬ್ದಾರಿಯಲ್ಲ.

ತಂಗಾಳಿಗೆ ಹೂಗಳು ಒಲೆಯುವುದು, ಪುಷ್ಪಸೌರಭವನ್ನು ಹೊತ್ತ ದುಂಬಿಗಳು ಹಾರಾಡುವುದು–ಈ ಚಿತ್ರಗಳನ್ನು ಕವಿ ಕೊಡುವ ಮೋಡಿಯಿದು:

ತಂಗಾಳೀಯಾ ಕೈಯೊಳಗಿರಿಸೀ
ಎಸಳೀನಾ ಚವರಿ
ಹೂವಿನ–ಎಸಳೀನಾ ಚವರಿ
ಹಾರಿಸಿಬಿಟ್ಟರು ತುಂಬಿಯ ದಂಡು
ಮೈಯೆಲ್ಲಾ ಸವರಿ
ಗಂಧಾ–ಮೈಯೆಲ್ಲಾ ಸವರಿ

ಒಂದೊಂದು ಮಾತೂ ಒಂದೊಂದು ದೃಶ್ಯವನ್ನು ಸ್ಫುಟವಾಗಿ ಕೊರೆದು ಮೂಡಿಸುತ್ತದೆ. ತಂಗಾಳಿಯ ಕೈಯಲ್ಲಿ ಚವರಿಯಿತ್ತವರು, ದುಂಬಿಯ ದಂಡನ್ನು ಹಾರಿಸಿದವರು ಯಾರೆಂಬುದನ್ನು ಕವಿ ಹೇಳುವುದಿಲ್ಲ; ಅದೇ ಇಲ್ಲಿನ ಸ್ವಾರಸ್ಯ. ಈ ಸೊಬಗು ಪೂರ್ತಿ ಈ ಲೋಕದ್ದಲ್ಲ, ಅನ್ಯಲೋಕದ ಕೈವಾಡ ಅದರಲ್ಲಿದೆ ಎನ್ನುವುದು ಕವಿಯ ಇಂಗಿತ.

ಎಲ್ಲೆಲ್ಲೂ ಹಕ್ಕಿಗಳ ಹಾಡು ತುಂಬಿರುವುದನ್ನು ಕವಿ ಒಂದು ಸೊಗಸಾದ ರೂಪಕದಿಂದ ತಿಳಿಸುತ್ತಾರೆ:

ಗಿಡಗಂಟಿಯಾ ಕೊರಳೊಳಗಿಂದ
ಹಕ್ಕಿಗಳ ಹಾಡು
ಹೊರಟಿತು—ಹಕ್ಕಿಗಳ ಹಾಡು

ಗಿಡಗಂಟಿಗಳು ಬೇರೆಯಲ್ಲ, ಹಕ್ಕಿಗಳು ಬೇರೆಯಲ್ಲ ಎಂಬ ಅದ್ವೈತಾನುಭವ ಇಲ್ಲಿದೆ. ಗಿಡಮರಗಳಲ್ಲಿ ಹುದಗಿರುವ ಹಕ್ಕಿಗಳು ಕಾಣುವುದೆ ಇಲ್ಲ; ಅವುಗಳ ಉಲಿ ಮಾತ್ರ ಕೇಳಿಸುತ್ತದೆ. ಎಂತಲೇ ಅವುಗಳ ಹಾಡು ಗಿಡಗಂಟಿಗಳ ಹಾಡೆ ಆಗುತ್ತದೆ, ಕವಿಯ ಪಾಲಿಗೆ–ಇಲ್ಲಿ ಯಾವ ಚಮತ್ಕಾರವೂ ಇಲ್ಲ, ಸಹಜ ಸುಂದರವಾದ ಅನುಭೂತಿಯಿದೆ.

ಬೆಳಗಿನ ಈ ಎಲ್ಲ ವೈಭವದಲ್ಲಿ ಪಂಚೇಂದ್ರಿಯಗಳೂ ಪಾಲ್ಗೊಂಡು ತಲ್ಲೀನವಾಗುತ್ತವೆ; ಶರೀರ ಅವರಲ್ಲಿ ಒಂದಾಗುತ್ತದೆ:

ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶ–ಪಡೆದೀತೀ ದೇಹ
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ–ದೀ ಮನಸಿನ ಗೇಹಾ

ಆದರೆ ಬೆಳಗಿನ ಅನುಭವವೆಲ್ಲ ಇಷ್ಟಕ್ಕೇ ಮುಗಿದು ಹೋಯಿತೆ? "ಅರಿಯದು ಅಳವು, ತಿಳಿಯದು ಮನವು, ಕಾಣ್ಬದೋ ಬಣ್ಣಾ" ಎಂದು ಉದ್ಗರಿಸುತ್ತಾರೆ, ಕವಿ. ಅದು ಇಂದ್ರಿಯಗಳಿಗೆ, ಮನಸ್ಸಿಗೆ ಸಂಪೂರ್ಣ ನಿಲುಕದು; ಅದರಾಚೆಗೆ ವ್ಯಾಪಿಸುತ್ತದೆ, ಅತೀತದ ಒಂದು ನಿಲುವಿ

ನಲ್ಲಿ ಸಮ್ಮೋದ ಬೀರುತ್ತದೆ. "ಶಾಂತೀ ರಸವೇ ಪ್ರೀತಿಯಿಂದಾ ಮೈದೋರಿತಣ್ಣಾ" ಎನ್ನುತ್ತಾರೆ, ಕವಿ; ಈ ನಿರ್ಣಯ ಅನವಶ್ಯಕವೆನಿಸುತ್ತದೆ. ಇಡೀ ಕವನವೇ ಶಾಂತದ ಸಮರ್ಥ ಅಭಿನಯವಾಗಿರುವಾಗ, ವಾಚ್ಯವಾಗಿ ಅದನ್ನು ಹೇಳಬೇಕಾಗಿತ್ತೆ? ಕಡೆಗೆ ಕವಿ ಅಂದುಕೊಳ್ಳುತ್ತಾರೆ: "ಇದು ಬರಿ ಬೆಳಗಲ್ಲೋ ಅಣ್ಣಾ." ಇದು ಬರಿಯ ಬೆಳಗಲ್ಲ, ಅದನ್ನು ಮೀರಿದ್ದು. ಆದರೆ ಅದು ಯಾವುದು ಎಂಬುದನ್ನು ಕವಿ ಹೇಳಿಲ್ಲ; ಹೇಳುವುದು ಬಹುಶಃ ಸಾಧ್ಯವಿಲ್ಲ. ಈ ಅನುಕ್ತಿಯಲ್ಲೆ ಕವನದ ಔಚಿತ್ಯ, ಅರ್ಥವಂತಿಕೆ ಇರತಕ್ಕದ್ದು.

ಬೆಳಗಿನ ಲೌಕಿಕ ಆಧ್ಯಾತ್ಮಿಕ ಸ್ತರಗಳೆರಡನ್ನೂ ಪರಸ್ಪರ ಅವಿರುದ್ಧವಾದ ರೀತಿಯಲ್ಲಿ ಈ ಕವನ ಆದಿಯಿಂದ ಅಂತ್ಯದವರೆಗೆ ಮೈಗೂಡಿಸಿಕೊಂಡಿರುವ ಮಾಟ ಬೆರಗುಗೊಳಿಸುವಂಥದು.

ಪೌರಾಣಿಕ ಪ್ರತಿಮೆಯೊಂದರ ಮೂಲಕ ದೈವೀಶಕ್ತಿಯನ್ನು ಆಹ್ವಾನಿಸುವ ಯಾಚನೆಯ ಭಂಗಿಯಿದೆ, 'ಗಂಗಾವತರಣ' ಕವನದಲ್ಲಿ ಮಗು ತಾಯಿಯನ್ನು ಆರ್ತತೆಯಿಂದ, ಆವೇಶದಿಂದ ಕರೆಯುವ ಪರಿಯಿದು. ಬೇಂದ್ರೆಯವರಲ್ಲಿ ಮಾತೃಭಾವ ವಾತ್ಸಲ್ಯ ಭಾವಗಳನ್ನು ವಿಶೇಷವಾಗಿ ನೋಡುತ್ತೇವೆ; ಇದನ್ನು ಅವರ ಕಾವ್ಯನಾಮವೇ ಸಂಕೇತಿಸುತ್ತದೆ. 'ಗಂಗಾವತರಣ'ವೂ ಈ ಮಾತೃಭಾವಕ್ಕೆ ಸಾಕ್ಷಿ. ಕವಿ ಗಂಗೆಯನ್ನು ಆಮಂತ್ರಿಸುವುದು ವೈಯಕ್ತಿಕ ಉದ್ಧಾರಕ್ಕಾಗಿ ಅಲ್ಲ. ಸಮಷ್ಟಿಯ ಉದ್ಧಾರಕ್ಕಾಗಿ. ಜನತೆಯ ಒಳಿತಿನ ಬಗ್ಗೆ ಅವರಿಗಿರುವ ಕಳಕಳಿ ಇದರಿಂದ ವಿದಿತವಾಗುತ್ತದೆ.

ನಾದಲೀಲೆ ಬೇಂದ್ರೆಯವರ ಕಾವ್ಯದ ಒಂದು ವೈಶಿಷ್ಟ್ಯ. ಇದು ಎಷ್ಟೋ ವೇಳೆ ಅತಿರೇಕಿಸಿ, ಅರ್ಥವನ್ನು ಹಿಂದೆ ಹಾಕುವುದುಂಟು, ಅಸ್ಪಷ್ಟತೆಗೆ ಎಡೆಗೊಡುವುದುಂಟು. 'ಗಂಗಾವತರಣ'ದಲ್ಲಿ ಕೆಲವು ಕಡೆ ಹಾಗಾಗಿರುವುದನ್ನು ನೋಡಬಹುದು.

ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ

ಎನ್ನುವಲ್ಲಿ ಕಿವಿಗೆ ತುಷ್ಟಿಕೊಡುವ ಗುಣವಿದ್ದರೂ 'ಋಷಿಯ ತೊಡೆಯಿಂದ' ಎನ್ನುವ ಮಾತು ಕೇವಲ ಪ್ರಾಸಾರ್ಥವಾಗಿ ಬಂದುದೆಂಬುದು ಸ್ಪಷ್ಟ.

ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ
ಕರೆಕರೆವ ಬಾ

ಎನ್ನುವಲ್ಲಿ 'ಹರೆಯಳಿದ ಹೀನ' ಎಂಬುದೂ ಅಷ್ಟೆ. ('ನೀರಿರದ ಮೀನ' ಒಳ್ಳೆಯ ರೂಪಕ). ಆದರೆ ಈ ಭಾಗವನ್ನು ನೋಡಿದರೆ, ನಾದವೈಭವ ಹೇಗೆ ಸಾರ್ಥಕವಾಗಿದೆಯೆಂಬುದು ಗೊತ್ತಾಗುತ್ತದೆ:

ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ
ಉದ್ಬುದ್ಧ ಶುದ್ಧ ನೀರೇ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೇ
ಸಿರಿಪಾರಿಜಾತ ವರ ಪಾರಿಜಾತ
ತಾರಾ-ಕುಸುಮದಿಂದೆ
ವೃಂಧಾರವಂದ್ಯೆ ಮಂದಾರಗಂಧೆ
ನೀನೇ ತಾಯಿ ತಂದೆ

ರಸಪೂರ ಜನ್ಮೆ ನೀನಲ್ಲ ಅನ್ಯೆ
ಸಚ್ಚಿದಾನಂದ ಕನ್ಯೆ
ಬಂದಾರೆ ಬಾರೆ ಒಂದಾರೆ ಸಾರೆ
ಕಣ್‌ಧಾರೆ ತಡೆವರೇನೇ ?

ಕವಿಯ ಭಾವಾವೇಗ, ತನ್ಮಯತೆಗಳು ಇಲ್ಲಿ ಚೆನ್ನಾಗಿ ವ್ಯಕ್ತವಾಗುತ್ತವೆ. ಹೀಗೆಯೆ,

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿಸುಳಿದು ಬಾ

ಎಂಬಲ್ಲಿಯೂ ವಾಗರ್ಥ ನಾದಗಳ ಸಮನ್ವಯವಿದೆ. "ಕರು ಕಂಡ ಕರುಳೆ" ಎನ್ನುವಲ್ಲಿ ವಾತ್ಸಲ್ಯ, "ಮನ ಉಂಡ ಮರುಳೆ" ಎನ್ನುವಲ್ಲಿ ಆ ಶಕ್ತಿಯ ಮಾದಕ ಗುಣ ಸೊಗಸಾಗಿ, ಸಂಕ್ಷಿಪ್ತವಾಗಿ ಸೂಚಿತವಾಗಿವೆ.

ನಿನಗೆ ಪೊಡಮಡುವೆ
ನಿನ್ನ ನುಡುತೊಡುವೆ
ಏಕೆ ತಡೆತಡೆವೆ

ಎಂಬ ಸಾಲುಗಳಲ್ಲಿಯೂ ಪ್ರಾಸಗಳು ಭಾವೋತ್ಕಟತೆಗೆ ಪೋಷಕವಾಗಿವೆ. "ನಿನ್ನ ನುಡುತೊಡುವೆ" ಎನ್ನುವಲ್ಲಿ ಭಕ್ತಿಯ, ಅನನ್ಯ ಶರಣಾಗತಿಯ ಭಾವದ ಸಾಂದ್ರತೆಯಿದೆ. "ಕಣ್ಣು ತಣ ತೊಳಿಸಿ ಉಸಿರ ಎಳೆ–ಎಳಸಿ ನುಡಿಯ ಸಸಿ ಮೊಳೆಸಿ ಹಿಗ್ಗಿ ಬಾ" ಎಂಬ ಉಕ್ತಿಗಳೂ ಸುಂದರವಾಗಿವೆ.

"ಸತ್ತ ಜನರನ್ನು ಎತ್ತ ಬಾ" ಎಂದು ಮೊರೆಯಿಟ್ಟಿದ್ದಾರೆ, ಕವಿ. ಹಿಂದೆ ಗಂಗೆ ಸಗರಪುತ್ರರನ್ನು ಉದ್ಧರಿಸುವುದಕ್ಕಾಗಿ ಅವತರಿಸಿದಳು; ಇಂದು, ಬದುಕಿಯೂ ಸತ್ತಂತಿರುವ ಜನತೆಯನ್ನು ಉದ್ಧರಿಸಲು ಆಕೆ ಬರಬೇಕಿದೆ. ಆದರೆ "ಅವತಾರವೆಂದೆ ಎಂದಾರೆ ತಾಯಿ ಈ ಅಧಃಪಾತವನ್ನೆ ?" ಎಂಬ ಮಾತು ಕವನದ ಒಟ್ಟು ಧೋರಣೆಗೆ ಹೊರಚ್ಚಾಗಿ ನಿಲ್ಲುತ್ತದೆ. ಒಟ್ಟನಲ್ಲಿ, ಭಗವತ್ ಕಾರುಣ್ಯದ ಆವಾಹನೆಗೊಂಡು ಶಕ್ತವಾದ ಪ್ರತಿಮೆ, 'ಗಂಗಾವತರಣ'; ಆದರೆ ನಾದಪರಿಣಾಮಕ್ಕಾಗಿ ಅದನ್ನು ಲಂಬಿಸಿದ್ದರಿಂದ ತುಸು ಜಾಳಾಗಿದೆಯೆನಿಸುತ್ತದೆ.

"ಹಕ್ಕಿ ಹಾರುತಿದೆ ನೋಡಿದಿರಾ ?" ಒಂದು ಅದ್ಭುತವಾದ ಕವನ. ಬೇಂದ್ರೆಯವರ ಕಾವ್ಯದಲ್ಲಿ ಕಂಡುಬರುವ ನಾಟಕೀಯತೆ ಇಲ್ಲಿ ಪ್ರಭಾವಶಾಲಿಯಾಗಿ ಸಹೃದಯರನ್ನು ವಶೀಕರಿಸುತ್ತದೆ. ಅಮೂರ್ತವಾದ ಕಾಲವನ್ನು ಕವಿ ಹಕ್ಕಿಯ ರೂಪದಲ್ಲಿ ಸುಮೂರ್ತಗೊಳಿಸಿ ಅದಕ್ಕೆ ದೃಗ್ಗೋಚರತ್ವವಿತ್ತಿದ್ದಾರೆ. ಆದರೆ ಅದು ಸಾಮಾನ್ಯ ಪಕ್ಷಿಯಲ್ಲ; ವಿರಾಟ್‌ಪಕ್ಷಿ. ಅದರ ಮಹತ್ತು ಬೃಹತ್ತುಗಳನ್ನೂ ಕ್ರಿಯಾ ಪರಂಪರೆಯನ್ನು ರೋಮಾಂಚಕಾರಿಯಾಗಿ ನಿರೂಪಿಸಲಾಗಿದೆ.

ಇರುಳಿರುಳಳಿದು ದಿನದಿನ ಬೆಳಗೆ
ಸುತ್ತಮುತ್ತಲೂ ಮೇಲಕೆ ಕೆಳಗೆ
ಗಾವುದ ಗಾವುದ ಗಾವುದ ಮುಂದೆ
ಎವೆ ತೆರೆದಿಕ್ಕುವ ಹೊತ್ತಿನ ಒಳಗೆ
ಹಕ್ಕಿ ಹಾರುತಿದೆ ನೋಡಿದಿರಾ ?

ಕಣ್ಣು ಮುಚ್ಚಿ, ತೆರೆಯುವುದರೊಳಗೆ ವ್ಯಕ್ತಿಜೀವನದಲ್ಲಿ, ಲೋಕಜೀವನದಲ್ಲಿ ಮಹದ್ಘಟನೆಗಳು—ಇತಿಹಾಸದ ದಿಕ್ಕನ್ನೆ ಬದಲಿಸುವಂಥವು—ನಡೆದು ಹೋಗಬಹುದು; ಅವನ್ನು ಕವಿ ಈ ಸಾಲುಗಳಲ್ಲಿ ಸೂಚಿಸಿರು

ವಂತಿದೆ. ಈ ಕಾಲಪಕ್ಷಿಗೆ ಕರಿ–ನರೆ ಬಣ್ಣದ ಪುಚ್ಛಗಳೂ ಬಣ್ಣಬಣ್ಣದ ಗರಿಗಳೂ ಉಂಟಂತೆ. ಕರಿ–ನರೆ ಬಣ್ಣದ ಪುಚ್ಛಗಳು ಹಗಲು ರಾತ್ರಿಗಳನ್ನೂ ಬಣ್ಣಬಣ್ಣದ ಗರಿಗಳು ಕಾಲ ತರುವ ವೈವಿಧ್ಯಮಯ ಅನುಭವಗಳನ್ನು ಸಂಕೇತಿಸಬಹುದು.

ಅದು ನೀಲಮೇಘ ವರ್ಣದ ಪಕ್ಷಿ; ಅದರ ರೆಕ್ಕೆಗಳು ಮುಗಿಲಿಗೆ ತಾಗುತ್ತವೆ; ನಕ್ಷತ್ರ ಮಾಲಿಕೆಯನ್ನೆ ಅದು ಧರಿಸಿದೆ; ಸೂರ್ಯ ಚಂದ್ರರೇ ಅದರ ಕಣ್ಣುಗಳು—ಈ ಭವ್ಯ ಚಿತ್ರವನ್ನು ಕೊಡುತ್ತಾರೆ, ಕವಿ. ಅನಂತತೆಯನ್ನು ಸಂಕೇತಿಸುತ್ತದೆ ಅದರ ನೀಲವರ್ಣ. ಕಾಲಪಕ್ಷಿಯ ವ್ಯಾಪಾರಗಳನ್ನು ಮುಂದೆ ವರ್ಣಿಸುತ್ತಾರೆ, ಕವಿ:

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಾಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

"ತೆನೆ ಒಕ್ಕಿ" ಎಂಬ ಮಾತಿನ ಕಸುವನ್ನು ಪರಿಭಾವಿಸಬೇಕು. ಒಂದೊಂದು ಸಾಮ್ರಾಜ್ಯವೂ ಕಾಲಪಕ್ಷಿಗೆ ಒಂದು ತೆನೆಯಷ್ಟೆ; ಅಂಥ ತೆನೆಗಳ ಮೆದೆಮೆದೆಗಳನ್ನೆ ಅದು ಒಕ್ಕಿದೆ. "ನೆತ್ತಿಯ ಕುಕ್ಕಿ" ಎಂಬ ಮಾತೂ ಎಷ್ಟು ಶಕ್ತಿವತ್ತಾಗಿದೆ! ಸಾರ್ವಭೌಮರು ಮೂರ್ಧಾಭಿಷಿಕ್ತರಾದ್ದರಿಂದ ಅವರ ನೆತ್ತಿಯನ್ನೆ ಕುಕ್ಕಿ, ಕಿರೀಟಗಳನ್ನುರುಳಿಸಿದೆ, ಕಾಲಪಕ್ಷಿ "ತೇಲಿಸಿ ಮುಳುಗಿಸಿ ಖಂಡ–ಖಂಡಗಳ" ಎಂಬುವಲ್ಲಿ ಕವಿದೃಷ್ಟಿಗೆ ವಿಜ್ಞಾನದ ಬೆಂಬಲವಿದೆ. ಭೂಮಿಯ ಇತಿಹಾಸವನ್ನು ನೋಡಿದರೆ, ಒಂದು ಕಾಲದಲ್ಲಿ ಸಾಗರಗಳಿದ್ದ ಕಡೆ ಪರ್ವತಗಳು, ದ್ವೀಪಗಳು ತಲೆಯೆತ್ತಿವೆ; ನೆಲವಿದ್ದ ಕಡೆ ಸಾಗರಗಳು ಉಕ್ಕಿವೆ. ಇದೆಲ್ಲ ಕಾಲಪಕ್ಷಿಯ ಕೆಲಸ. ಮುಂದಿನ ಪಂಕ್ತಿಗಳು ಸಾಂಪ್ರತ ಯುಗಧರ್ಮವನ್ನು ಪ್ರಸ್ತಾಪಿಸುತ್ತವೆ:

ಯುಗ-ಯುಗಗಳ ಹಣೆಬರಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ!

ಮನನಯೋಗ್ಯವಾದ ಮಾತುಗಳಿವು. ಕಾಲಪಕ್ಷಿ ಅನೂಚಾನವಾಗಿ ಬಂದ ಹಿಂದಿನ ಯುಗಗಳ ಹಣೆಬರಹವನ್ನು ತೊಡೆದಿದೆ; ಇಂದಿನ ಯುಗದವರಿಗೆ ಅದು ಅನುಕೂಲವಾಗಿದೆ. ನಿರಂಕುಶರಾದ ಆಳರಸರ ಕಾಲ ಆಗಿಹೋಯಿತು; ಇದು ಸ್ವಾತಂತ್ರ್ಯ, ಪ್ರಜಾಪ್ರಭುತ್ವಗಳ ಕಾಲ, ಸರ್ವೋದಯ ಯುಗ. ಈ ಮನ್ವಂತರದ ಭಾಗ್ಯ ನಿಜವಾಗಿಯೂ ತೆರೆದಿದೆ, ಶಾಪಮುಕ್ತವಾಗಿದೆ. ಇದೂ ಕಾಲಪಕ್ಷಿಯ ಸಾಧನೆ.

ಕವಿ ಪ್ರವಾದಿಯಂತೆ ಮತ್ತೂ ಹೇಳುತ್ತಾರೆ, ಕಾಲಪಕ್ಷಿ ಶುಕ್ರ ಚಂದ್ರ ಮಂಗಳ ಮುಂತಾದ ಅನ್ಯ ಗ್ರಹಗಳಲ್ಲೆಲ್ಲ ವಿಹರಿಸಲಿದೆಯೆಂದು. ಈ ಕಾಲಜ್ಞಾನ ಇಂದು ದಿಟವಾಗುತ್ತಿದೆ. ಚಂದ್ರ ಮಂಡಲವನ್ನು ಮಾನವ ಗೆದ್ದಾಯಿತು; ಇತರ ಗ್ರಹಗಳನ್ನು ಮುಟ್ಟಲು ಅವನ ಸಿದ್ಧತೆ ನಡೆದಿದೆ; ಆ ದಿನ ದೂರವಿಲ್ಲ.

ಏನಿರಬಹುದು ಈ ಕಾಲಪಕ್ಷಿಯ ಯೋಜನೆ? ಕವಿ ಊಹಿಸುತ್ತಾರೆ:

ಮುಟ್ಟದೆ ದಿಗ್ಮಂಡಲಗಳ ಅಂಚ
ಅಟಿಗೆ ಚಾಚಿದೆ ತನ್ನಯ ಚುಂಚ

ಬ್ರಹ್ಮಾಂಡಗಳನು ಒಡೆಯಲು ಎಂದೊ
ಬಲ್ಲರು ಯಾರಾ ಹಾಕಿದ ಹೊಂಚ?
ಹಕ್ಕಿ ಹಾರುತಿದೆ ನೋಡಿದಿರಾ?

ಇದು ವಿಜ್ಞಾನಕ್ಕೆ ಸಮ್ಮತವಾದ ಭಾವವೇ. ಮುಂದೆ ಎಂದೋ ಒಂದು ದಿನ ಈ ಜಗತ್ತು ನಾಶವಾಗುವ ಸಂಭವವಿದೆ ಎನ್ನುತ್ತದಲ್ಲವೆ, ವಿಜ್ಞಾನ?

"ಸರ್ವಂ ಯಸ್ಯ ವಶಾದಗಾತ್ ಸ್ಮೃತಿಪಥಂ ಕಾಲಾಯತಸ್ಮೈ ನಮಃ" (ಯಾರಿಂದಾಗಿ ಎಲ್ಲವೂ ನೆನಪಿನ ಹಾದಿ ಹಿಡಿಯಿತೋ ಆ ಕಾಲನಿಗೆ ನಮಸ್ಕಾರ) ಎಂದಿದ್ದಾನೆ, ಭರ್ತೃಹರಿ. ಅದು ಸುಂದರವಾದ ಒಂದು ಹೇಳಿಕೆಯಷ್ಟೆ. ಬೇಂದ್ರೆಯವರ ಕವನ ಅದಕ್ಕೆ ಬರೆದ ಜ್ಯೋತಿರ್ಮಯ ಕಾವ್ಯಭಾಷ್ಯದಂತಿದೆ. ಭರ್ತೃಹರಿ ಭೂತವನ್ನಷ್ಟೆ ಕುರಿತು ಹೇಳಿದರೆ, ಬೇಂದ್ರೆಯವರ ದರ್ಶನ ವರ್ತಮಾನವನ್ನು ಸ್ಪರ್ಶಿಸಿ, ಭವಿಷ್ಯಗ್ರಾಸಿಯಾಗಿದೆ. ಒಟ್ಟಿನಲ್ಲಿ, ವಿಜ್ಞಾನ ವಿರುದ್ಧವಾಗದ ಕಲ್ಪನೆಯ ಭೂಮತೆ 'ಹಕ್ಕಿ ಹಾರುತಿದೆ ನೋಡಿದಿರಾ' ಕವನದಲ್ಲಿ ನಿದರ್ಶಿತವಾಗಿದೆ.

'ಬುದ್ಧ' ಆ ಮಹಾತ್ಮನನ್ನು ಕುರಿತ ಒಂದು ಶ್ರೇಷ್ಠ ಕವನ. ಅದರ ಮೊದಲ ಎರಡು ಸಾಲುಗಳು ಮೇಲುನೋಟಕ್ಕೆ ಕೇವಲ ಪ್ರಾಸಬದ್ಧವಾಗಿ ಹಗುರವಾಗಿ ಕಾಣಬಹುದು; ಆದರೆ ವಾಸ್ತವವಾಗಿ ಧ್ವನಿ ಪರಂಪರೆಯನ್ನು ತಾಳಿಕೊಂಡಿವೆ:

ಬುದ್ಧ, ಬುದ್ಧ—
ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ.

ರಾತ್ರಿಹೊತ್ತು ಎಲ್ಲರೂ ನಿದ್ರಿಸುತ್ತಿದ್ದಾಗ ಬುದ್ಧ ರಾಜ್ಯತ್ಯಾಗಮಾಡಿ ಹೊರಟ ಚಾರಿತ್ರಿಕಾಂಶವನ್ನು ಈ ಮಾತುಗಳು ವಾಚ್ಯಸ್ತರದಲ್ಲಿ ತಿಳಿಸುತ್ತವೆ. ಲೋಕವೆಲ್ಲ ಅಜ್ಞಾನ ನಿದ್ರೆಯಲ್ಲಿ ಕೆಡೆದಿದ್ದಾಗ ಇವನೊಬ್ಬ ಜಾಗೃತನಾಗಿ ಜ್ಞಾನಾನ್ವೇಷಕನಾಗಿ ಹೊರಟನೆಂಬುದು ಇದರ ಧ್ವನಿ. ಅಷ್ಟೇ ಅಲ್ಲ. 'ಮಲಗು' ಎಂಬ ಮಾತು ಲೈಂಗಿಕ ಭೋಗವನ್ನು ಸೂಚಿಸುವಂಥದು. ಲೋಕದ ಗಂಡು ಹೆಣ್ಣುಗಳೆಲ್ಲ ಪರಸ್ಪರ ಅಪ್ಪುಗೆಯಲ್ಲಿ ಸುಖಮಗ್ನರಾಗಿದ್ದಾಗ ಇವನೊಬ್ಬ ಅದನ್ನು ಧಿಕ್ಕರಿಸಿ ನಡೆದ ಎಂದೂ ಅರ್ಥವಾಗುತ್ತದೆ. ಬುದ್ಧನ ಅಧ್ಯಾತ್ಮ ದಾಹಕ್ಕೆ ಉಳಿದುವೆಲ್ಲ ಇಂಧನವಾದುದನ್ನು ಈ ಸಾಲುಗಳು ಬಣ್ಣಿಸುತ್ತವೆ:

ಮಡದಿ ಮಗು ಮನೆ-ಮಾರು ರಾಜ್ಯ-ಗೀಜ್ಯ
ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ
ಹಿಂದೆ ಬಿದ್ದುವೊ ಎಲ್ಲೊ ಕುದುರೆ ಕಾಲಾಳು
ಬಿಚ್ಚಿ ಉದಿರಿತು ಎಲ್ಲೊ ಮನದ ಬಾಳು
ಹೊರಟ ಹೊರಟೇ ಹೊರಟ ಹೊರಟನೆತ್ತೋ
ಸಾಹಸಿಯು ಗೊತ್ತುಗುರಿ ಅವಗು ಗೊತ್ತೋ!

ಮನೆ-ಮಾರು, ರಾಜ್ಯ-ಗೀಜ್ಯ ಎಂಬ ಮಾತುಗಳಲ್ಲಿ ತಿರಸ್ಕಾರ ವ್ಯಂಗ್ಯವಾಗಿದೆ. ಕುದುರೆ ಕಾಲಾಳುಗಳು ರಾಜ್ಯ ವೈಭವವನ್ನು ಸಂಕೇತಿಸುತ್ತವೆ. ಸಂಸಾರ, ಸಾಮ್ರಾಜ್ಯ ಎರಡನ್ನೂ ತ್ಯಜಿಸಿ ನಡೆದ ಬುದ್ಧ. "ಬಿಚ್ಚಿ ಉದುರಿತು ಎಲ್ಲೊ ಮನದ ಬಾಳು" ಎಂಬುದು ತುಂಬ ಸೊಗಸಾದ ಅಭಿವ್ಯಕ್ತಿ. ಅವನ ಮನದ ಬಾಳಿನಲ್ಲಿ—ನಿಕೇತನ ಪ್ರಜ್ಞೆಯಲ್ಲಿ—ಮೊದಲು ಗಂಟು (complex)ಗಳಿದ್ದುವು ಎಂಬುದನ್ನು 'ಬಿಚ್ಚಿ' ಎಂಬುದು ಧ್ವನಿಸುತ್ತದೆ. ಅವನ ಚಿತ್ತ ಅಹಂಕಾರ ಮಮಕಾರಗಳ ಬೀಡಾ

ಗಿತ್ತು. ಈಗ ಅವೆಲ್ಲ ಜಗುಳಿದುವು; ಘರ್ಷಣೆ ನಿಂತು ಮನಸ್ಸಿಗೆ ಏಕಮುಖತೆ, ಏಕನಿಷ್ಠೆ ಬಂತು. ಆದ್ದರಿಂದಲೇ ಅವನು ತಿರುಗಿ ನೋಡದೆ, "ಹೊರಟ ಹೊರಟೇ ಹೊರಟ."

ಮುಂದೆ ಬುದ್ಧ ಅರಿಷಡ್ವರ್ಗವನ್ನು ಗೆದ್ದು ಏರಿದ ಎತ್ತರ ಈ ಭಾಗದಲ್ಲಿ ಚಿತ್ರಣ ಗೊಂಡಿದೆ:

ಕಾಮಕ್ರೋಧವ ದಾಟಿ, ಮದಮತ್ಸರವ ತುಳಿದು,
ಮೋಹ ಲೋಭವ ಮೆಟ್ಟಿ ಅಡಿ ಕಿತ್ತಿ ಇಟ್ಟ,
ಇದೊ ತಗ್ಗು, ಅದೊ ಗುಡ್ಡ, ಅಗೊ ಮಳೆಯ ಬೆಟ್ಟ
ನೆಲ ಕೆಳಗೆ ಬಿಟ್ಟ.

ಕಾಮಕ್ರೋಧಾದಿಗಳನ್ನು ಪಟ್ಟಿಮಾಡಿದ್ದು ವಾಚ್ಯವಾಯಿತೆನಿಸುತ್ತದೆ. ಕಡೆಗೆ ಬುದ್ಧ ಪಡೆದುಕೊಂಡ ಅನಿರ್ವಚನೀಯವಾದ ಸಿದ್ಧಿಯನ್ನು ಕವಿ ಮಾತಿನ ಹಿಡಿತಕ್ಕೊಳಪಡಿಸಲು ಯತ್ನಿಸುತ್ತಾರೆ:

ಏರಿದೇರಿದನೇರಿ ಗಾಳಿಗುದುರೆ ಸವಾರಿ
ಚಂದ್ರಕಿರಣವ ಮೀರಿ ಸೂರ್ಯ ಸೇರಿ
ಬೆಳಕನ್ನೆ ಹಿಂದೊಗೆದು ತಮದ ಬಸಿರನೆ ಬಗೆದು
ಅಸ್ಪರ್ಶ ಅವಕಾಶದಲ್ಲಿ ಇದ್ದ....
ಶಬ್ದ-ನಾದಧ್ವನಿಯು ಸದ್ದ ಮೀರಿದ್ದ.

ಆದರೆ ಬುದ್ಧನಿಗೆ ತಾನೊಬ್ಬ ಉದ್ಧಾರಗೊಳ್ಳುವುದು ಬೇಕಿರಲಿಲ್ಲ; ಎಲ್ಲರನ್ನೂ ಭವಚಕ್ರದಿಂದ ಪಾರುಮಾಡುವುದು ಅವನ ಧ್ಯೇಯವಾಗಿತ್ತು. ಆದ್ದರಿಂದ ಅವನು ತಾನೇರಿದ ಎತ್ತರದಿಂದ ಕೆಳಗಿಳಿದು ಬಂದು, ಜೀವಕೋಟಿಯ ಎಡೆಯಲ್ಲಿ ನಿವಾಸಿಯಾದುದನ್ನು ಈ ಭಾಗ ಹೇಳುತ್ತದೆ:

ಅಲ್ಲಿಂದ ಇಲ್ಲಿವರೆ ಹೊರಳಿ ನೋಡಿ
ಇದ್ದುದಿದ್ದಂತಿತ್ತು ಜನನ ಮರಣದ ಜೋಡಿ
ಗೆದ್ದುದೇನೆಂದೆನುತ ಮರಳಿ ಜಿಗಿದ
ಭೂತಜಾತದ ಎದೆಯು ಸೀಳಿ ಸಿಗಿದ
ಅದೆ ತನ್ನ ಮನೆಯೆಂದು ಸಿದ್ಧ ಬಗೆದ.

ಇದು ಕವನದ ಶಿಖರ. ('ಸೀಳಿ ಸಿಗಿದ' ಎಂಬ ಮಾತು ಉಚಿತವೆನಿಸದು) ಮುಂದೆ ಕವಿ "ಬುದ್ಧನೆಂಬುವ ಒಬ್ಬ ಎಂದೊ ಇದ್ದ" ಇತ್ಯಾದಿಯಾಗಿ ಬೆಳೆಸಿರುವುದು ಅನಗತ್ಯ ಅವರೋಹಣವಾಗಿದೆ. "ಬುದ್ಧನ ಸಮಾಧಿಯದು ಮಾನವನ ಹೃದಯ" ಎಂದಿದ್ದಾರೆ ಕವಿ; ಈ ಆಲೋಚನೆ ಹಿಂದೆಯೆ ಉಕ್ತವಾಗಿದೆ.

'ಗಮಗಮಾ ಗಮಾಡಸತಾವ ಮಲ್ಲಿಗಿ' ಒಂದು ಅತ್ಯಂತ ವಿಶಿಷ್ಟ ಕವನ. ಹೆಣ್ಣೊಬ್ಬಳು ಗಂಡನ್ನು ಉದ್ದೇಶಿಸಿದಂತೆ ಇಲ್ಲಿನ ಸಂದರ್ಭ—"ನೀವು ಹೊರಟದ್ದೀಗ ಎಲ್ಲಿಗೆ?" ಎಂಬ ಅವಳ ಕರುಳಿರಿಯುವ ಪ್ರಶ್ನೆ ಪದ್ಯದ ಪಲ್ಲವಿಯಾಗಿದೆ. ಇದುವರೆಗೆ ಭೋಗದಲ್ಲಿ ಮುಳುಗಿದ್ದ ಆ ವ್ಯಕ್ತಿ ಈಗ ತದ್ವಿಮುಖನಾಗಿ ಇದ್ದಕ್ಕಿದ್ದಂತೆ ಎತ್ತಲೋ ಹೊರಟಿದ್ದಾನೆ; ಬಹುಶಃ ವೈರಾಗ್ಯದ ಹಾದಿ ಹಿಡಿದಿದ್ದಾನೆ. (ಅದನ್ನು ಕವಿ ಬಾಯಿಬಿಟ್ಟು ಹೇಳುವುದಿಲ್ಲ) ಅವನೊಡನೆ ಒಲಿದು ಒಂದಾಗಿದ್ದ ರಾಗೋನ್ಮತ್ತ ಹೆಣ್ಣಿನ ಆರ್ತನಾದ, ಆಕ್ರಂದನಗಳು ಕವನದುದ್ದಕ್ಕೂ ಹೃದಯಸ್ಪರ್ಶಿಯಾಗಿ ಹೊರಹೊಮ್ಮಿವೆ. ತನ್ನ ಬಯಕೆಯ ಉತ್ಕಟತೆಯನ್ನು ಇದುವರೆಗೆ ತಾವು ಪಟ್ಟ ಸುಖದ ಅಮಲನ್ನೂ ಅವಳು ನಿವೇದಿಸುವ ಪರಿ ಕವಿ ಪ್ರತಿಭೆಗೆ ಉಜ್ವಲ ಸಾಕ್ಷಿಯಾಗಿದೆ.

ಅವಳನ್ನು ಅನೈಚ್ಛಿಕವಾಗಿ ಕವಿಯುವ ಸುಖನಿದ್ರೆಯ ಮನೋಜ್ಞ ಚಿತ್ರವಿದು:

ತುಳುಕ್ಯಾಡತಾವ ತೂಕಡಿಕಿ
ಎವಿ ಅಪ್ಪತಾವ ಕಣ್ಣು ದುಡುಕಿ
ಕನಸು ತೇಲಿ ಬರತಾವ ಹುಡುಕಿ
ನೀವು ಹೊರಟದ್ದೀಗ ಎಲ್ಲಿಗೆ?

ಅವಳ ಭೋಗಾಕಾಂಕ್ಷೆಗೆ ಪ್ರಕೃತಿಯೆಲ್ಲ ಉದ್ದೀಪನ ವಿಭಾವವಾಗಿದೆ:

ಚಿಕ್ಕಿ ತೋರಸ್ತಾವ ಚಾಚಿ ಬೆರಳ
ಚಂದ್ರಾಮ ಕನ್ನಡೀ ಹರಳ
ಮನ ಸೋತು ಆಯಿತು ಮರುಳ
ನೀವು ಹೊರಟದ್ದೀಗ ಎಲ್ಲಿಗೆ?

ಗಾಳಿ ತಬ್ಬತಾವ ಹೂಗಂಪು
ಚಂದ್ರನ ತೆಕ್ಕಿ ಗಿಡೆ ತಂಪು
ನಿಮ್ಮ ಕಂಡರ ಕವದಾವ ಜೊಂಪು
ನೀವು ಹೊರಟದ್ದೀಗ ಎಲ್ಲಿಗೆ?

ಅವಳ ಮೋಹಾವಿಷ್ಟತೆಯನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಹೇಳುವುದು ಶಕ್ಯವಿಲ್ಲ. ಚಿಕ್ಕಿ ಚಂದ್ರಮ ಹೂಗಂಪುಗಳೆಲ್ಲ ಇಲ್ಲಿ ಶೃಂಗಾರಕ್ಕೆ ಪೋಷಕವಾಗಿ ಬಂದಿವೆ. ಆದರೆ ಅವಳ ನಲ್ಲ ಅವಳನ್ನು ನಡುನೀರಿನಲ್ಲಿ ಬಿಟ್ಟು ("ಹೀಂಗ ಬಿಟ್ಟು ಇಲ್ಲಿ ನನ್ನ ನಡುವ್ಕ") ಹೊರಟಿದ್ದಾನೆ.

ಇದುವರೆಗೆ ತಾವು ಹೇಗೆ ಒಂದಾಗಿದ್ದು ಸುಖಿಸಿದೆವೆಂಬುದನ್ನು ಅವಳು ಹೇಳಿಕೊಳ್ಳುತ್ತಾಳೆ:

ನಮ್ಮ ನಿಮ್ಮ ಒಂದತನದಾಗ
ಹಾಡು ಹುಟ್ಟಿ ಒಂದು ಮನದಾಗ
ಬೆಳದಿಂಗಳಾತು ಬನದಾಗ
ನೀವು ಹೊರಟದ್ದೀಗ ಎಲ್ಲಿಗೆ?

ನಾವು ಬಂದೆವಲ್ಲಿಂದಿಲ್ಲಿಗೆ
ಬಾಯಿ ಬಿಟ್ಟವಲ್ಲ ಮಲ್ಲಿಗೆ
ನೀರೊಡೆದಿತಲ್ಲ ಕಲ್ಲಿಗೆ
ನೀವು ಹೊರಟದ್ದೀಗ ಎಲ್ಲಿಗೆ?

"ನೀರೊಡೆದಿತಲ್ಲ ಕಲ್ಲಿಗೆ" ಎಂಬ ಮಾತಿನಲ್ಲಿ ಏನು ಸೊಗಸಿದೆ? ಸಂಸಾರದ ಕ್ಲೇಶ ಕಾಠಿಣ್ಯಗಳನ್ನು ಅವರು ಅನುಭವಿಸಲೇ ಇಲ್ಲ; ಎಲ್ಲವೂ ಅವರ ಪಾಲಿಗೆ ರಸವತ್ತಾಗಿಯೆ, ಇತ್ತು. ಯಾರು ನಿರೀಕ್ಷಿಸಿದ್ದರು ಈ ಆಘಾತವನ್ನು?—

ಬಾತ್ಯಾಕ ನಿಮಗ ಇಂದ ಮುನಿಸು
ಬೀಳಲಿಲ್ಲ ನಮಗ ಇದರ ಕನಸು
ರಾಯಾ ತಿಳಿಯಲಿಲ್ಲ ನಿಮ್ಮ ಮನಸು
ನೀವು ಹೊರಟದ್ದೀಗ ಎಲ್ಲಿಗೆ?

"ತಿಳಿಯಲಿಲ್ಲ ನಿಮ್ಮ ಮನಸು." ಹೌದು, ಇನ್ನೂ ಬಯಕೆಯ ಕೆಂಬೆಳಕಿನಲ್ಲಿ ಮಿಡುಕುತ್ತಿರುವ ಈ ಹೆಣ್ಣಿಗೆ ಅವನ ಗೊತ್ತು ಗುರಿಗಳು ಹೇಗೆ ಅರ್ಥವಾಗಬೇಕು? ತನಗಾದ ನಷ್ಟವನ್ನು ಮಾತ್ರ ಅವಳು ಅರಿಯಬಲ್ಲಳು, ಅರುಹಬಲ್ಲಳು. ಅಂತೂ ಈ ಕವಿತೆಯ ಧ್ವನಿಪೂರ್ಣತೆ, ನಾಟಕೀಯತೆಲಯದಲ್ಲಿ ಮಿಡಿಯುವ ವಿಷಾದದ ಭಂಗಿ ಅದನ್ನು ಸಹೃದಯರ ಪಾಲಿಗೊಂದು ಅವಿಸ್ಮರಣೀಯವಾದ ಅನುಭವವನ್ನಾಗಿಸಿವೆ.

# ‘ಶಾಂತಕವಿಗಳ ವಿಶ್ರಾಂತಿ’

ಡಾ|| ಕೆ. ಸುಬ್ರಹ್ಮಣ್ಯಭಟ್ಟ

‘ಅಂಬಿಕಾತನಯದತ್ತ’ರ “ಸಖೀಗೀತ”ವು ೧೯೩೭ರಷ್ಟು ಹಿಂದೆಯೇ ಬೆಳಕು ಕಂಡು ಬಹು ಜನಪ್ರಿಯತೆಯನ್ನು ಪಡೆದ ಕವನ ಸಂಕಲನ, ಇದರಲ್ಲಿ ‘೩೦’ ‘ಗೀತ’ಗಳಿವೆ. ಈ ಮೂವತ್ತು ಕವನಗಳನ್ನೂ ಕಟು ವಾಗಿಯೋ, ಮಧುರವಾಗಿಯೋ ವ್ಯಾಖ್ಯಾ ನಿಸುವುದು ನನ್ನ ಉದ್ದೇಶವಲ್ಲ. ‘ವ್ಯಾಖ್ಯಾನ ದೊಡಗೂಡಿ ವಿವರಿಸಲೇ’ ಬೇಕಾದವೂ ಇಲ್ಲಿಲ್ಲ ಎನ್ನಬಹುದು. ಕೆಲವಕ್ಕೆ ಕಿಂಚಿತ್ ಇದ್ದರೂ ಸಲ್ಲುವುದು ಎಂದರೂ ಸಂದೀತು. ಈ ಪುಟ್ಟ ಲೇಖನದಲ್ಲಿ ಹಿರಿಯ ಚೇತನಕ್ಕೆ ಸ್ಮೃತಿ ಕುಸುಮ ಸಲ್ಲಿಸುವ ನಿಟ್ಟಿನಲ್ಲಿ ಈ ಕವನ ಸಂಕಲನದಿಂದಾಯ್ದ ಒಂದೇ ಕವನಕ್ಕೆ ಅಥವಾ ‘ಗೀತ’ಕ್ಕೆ ಇದು ಯಥಾ ಮತಿ ‘ಕಟು–(ಮಧುರ?)’ ವ್ಯಾಖ್ಯಾನ ಅಷ್ಟೆ.

ಬೇಂದ್ರೆಯವರನ್ನು ಸಾಮಾನ್ಯವಾಗಿ ಜಾನಪದ ಶೈಲಿಯ ಕವಿ, ಧಾರವಾಡ ಕನ್ನಡದ ಸೊಗಸನ್ನು ಅಥವಾ ಛಾಪನ್ನು ಸುಭದ್ರವಾಗಿ ತನ್ನೆಲ್ಲ ಹಾಡುಗಳಲ್ಲಿ ಮೈ ಗೂಡಿಸಿದ ಕವಿ ಎಂದು ಎಲ್ಲರೂ ಗುರುತಿಸಿ ದ್ದಾರೆ. ಹಾಡಿನ ಧಾಟಿಯಿಂದ, ಓದಿನ ಮೋಡಿಯಿಂದ ನಾಡಿನಾದ್ಯಂತ ಕನ್ನಡದ ಕಸುವನ್ನು ಜನತೆಗೆ ಮನದಟ್ಟು ಮಾಡಿದ ವರೂ ಹೌದು, ಅದ್ಭುತ ರಮ್ಯವಾದ ಅವರ ಪದಗುಂಫನ ಕ್ರಮ, ಅದು ಭಾವಸಂವಹನ ದಲ್ಲಿ ವಹಿಸುವ ಪಾತ್ರ, ನಾದಲೀಲೆಯಲ್ಲಿ ಮೋದಗೊಳಿಸುವ ಮೋಹಕತೆ ಅದೆಷ್ಟು ವರ್ಣಿಸಿದರೂ ಅಲ್ಪವೇ. ಈ ವರ್ಗದ ಕವನ, ಗೀತಗಳ ಗುಂಪು ಒಂದೆಡೆಯಾದರೆ, ವಿಶಿಷ್ಟ ರೀತಿಯ ‘ಶೋಕ’ ಗೀತಗಳ ಸಾಲುಗಳು ಮತ್ತೊಂದೆಡೆ ನಮ್ಮ ಗಮನ ಸೆಳೆಯುವ ಅಂಶಗಳು. ಈ ‘ಶೋಕ’ ಗೀತ ಪ್ರಕಾರದ– ಕೇವಲ ‘ಸಖೀಗೀತ’ದಲ್ಲಿ ಸೇರ್ಪಡೆಯಾದವು ಗಳ—ಕಡೆಗೆ ಓದುಗರ ಗಮನ ಸೆಳೆಯು ವುದಷ್ಟಕ್ಕೆ ಮಾತ್ರ ಸನ್ನ ಈ ಬರೆಹ ಸೀಮಿತ ಎಂಬ ನಮ್ರ ವಿಜ್ಞಾಪನೆಯೊಂದಿಗೆ ಈ ಲೇಖನದ ಸಾಲುಗಳನ್ನು ಪ್ರಾರಂಭಿಸು ತ್ತಿದ್ದೇನೆ.

“ಶಾಂತ ಕವಿಗಳ ವಿಶ್ರಾಂತಿ” ಎಂಬುದು ‘ಸಖೀಗೀತದಲ್ಲಿ ಸಂಕಲಿತವಾದ ೧೫ನೆಯ ‘ಗೀತ’ ; ಅಥವಾ ಕೇವಲ ಎರಡು ಮಾರ್ಥಕ ಷಟ್ಪದಿಗಳು. ‘ಭಾವ–ಸಂದರ್ಭ–ಸೂಚನೆ’ ಯಲ್ಲಿ–‘ದಿವಂಗತ ಸಕ್ಕರಿ ಬಾಳಾಚಾರ್ಯರು ಕವಿಗಳಿರುವಂತೆ ಕೀರ್ತನಕಾರರೂ ಆಗಿ ದ್ದರು. ‘ರಕ್ಷಿಸು ಕರ್ನಾಟಕ ದೇವಿ’ ಎಂಬ ಅವರ ಪದ್ಯ ಕೇಳಿದವರಿಗೆ ಅವರ ಕನ್ನಡ ಭಕ್ತಿ ತಿಳಿದಿದೆ. ಅವರು ದಿವಂಗತರಾದಾಗ್ಗ

ಬರೆದ ಪದ್ಯಗಳಿವು ಎಂಬ ಉಲ್ಲೇಖವಿದೆ. ಕೇವಲ ಎರಡೇ ಪದ್ಯಗಳಾದ ಕಾರಣ ವಾಚಕರ ಸೌಕರ್ಯಕ್ಕಾಗಿ ಅವುಗಳನ್ನಿಲ್ಲಿ ಉದ್ಧರಿಸಿ ಕೊಡುತ್ತಿದ್ದೇನೆ:—

ನಟ ತೆರೆಯ ಮರೆಯಾದ ಆಟ ತೀರಿಸಿ
ಕೊಂಡು,
ಭಟ ಸಮರದಿಂದ ತೆರಳಿದ ಅರಸನರಮನೆಗೆ ;
ಪಟು ಪಾಠಾಗಾರ ತುಟಿ ಮುಚ್ಚಿದನು
ನಾಡು ನುಡಿಗಳ ಹಾಡುಗಳನು ಹಾಡಿ ।
ಅಟಮಟದ ಮಾತಲ್ಲ; ನಾಡೆ ನಾರಾಯಣನು,
ದಿಟವಾಗಿ 'ನುಡಿಯೆ ಸಿರಿ' ಎಂದು
ಕೀರ್ತನೆಗೈದು
ಹಟದಿ ಕೀರ್ತನಗಾರ ಬೆವರನೊರಸಲು ಹಿಂದೆ
ಸರಿದ ವಿಶ್ರಾಂತಿಗಾಗಿ ॥

* * *

ಮುಪ್ಪಾಗಿ ಜರಿಯಾದ ಬಟ್ಟೆಯನು ಬೀಸಾಡಿ
ದಪ್ಪನ್ನ ಹೊಸದೊಡಿಗೆಯನು ಬೇಡಲಂಬರಕೆ
ಸಪ್ಪಗಿನ ನುಡಿಗಾಗಿ ಉಪ್ಪು ತರಹೋಗಿಹರು
ರಸವಂತಿಯಿರುವ ಕಡೆಗೆ ।
ಸಿಪ್ಪೆಯನೆ ಬಹು ದಿವಸ ಚೀಪಿ ಬೇಸರಪಟ್ಟು
ಅಪ್ಪನಲಿ ಹೊಸಹಣ್ಣು ಪಡೆಯಹೋಗಿಹರಿಂತು
ತಪ್ಪದೇ ತಿರುಗುತಿಹರೆಂದು ತಿಳಿಯಲಿ ಜನರು
ಬೆಳವೊಲದ ನಾಡಿಗಾಗಿ ॥

ಈಗ ಈ ಎರಡು ಪದ್ಯಗಳನ್ನು ಸ್ವಲ್ಪ ವಿವರಿಸಲು ಯತ್ನಿಸೋಣ. ಸಾಮಾನ್ಯವಾಗಿ ಯಾರಾದರೂ ಮಡಿದಾಗ, ಸತ್ತು ಹೋದ ಎಂಬ ಸಾಮಾನ್ಯ ಪದವನ್ನು ಬಳಸದೆ ಅಮಂಗಳವೆಂದು ನಾವು ಭಾವಿಸುವ ಪ್ರಕೃತಿಯ ಸಹಜ ಕ್ರಿಯೆಯನ್ನು ವೈಭವೀಕರಿಸಿಯೋ, ಆಲಂಕಾರಿಕ ನುಡಿಗಳನ್ನು ಬಳಸಿಯೋ ಸಾವಿನ ದುರಂತತೆಯನ್ನು ಕಡಮೆ ಮಾಡಲು ಯತ್ನಿಸುತ್ತೇವೆ. ಹಾಗಾಗಿ, ಸತ್ತ ಎಂಬುದನ್ನು ತಿಳಿಸದೆ ಸ್ವರ್ಗಸ್ಥನಾದ, ಲಿಂಗೈಕ್ಯನಾದ, ವಿಧಿವಶನಾದ, ಕೈಲಾಸವಾಸಿಯಾದ, ವೈಕುಂಠವಾಸಿಯಾದ, ರುದ್ರಲೋಕಕ್ಕೆ ಗಮಿಸಿದ, ದೈವಾಧೀನನಾದ — ಹೀಗೆಲ್ಲ ಒಂದು ಗುಂಪಾಗಿ; ಅಥವಾ ಚಿರನಿದ್ರೆ ಮಾಡಿದ, ಕೊನೆಯುಸಿರೆಳೆದ, ಇಹವನ್ನು ತ್ಯಜಿಸಿದ, ಪಂಚತ್ವವನ್ನೈದಿದ – ಹೀಗೋ ಅಥವಾ ಸ್ವಲ್ಪ ಅಸಹನೆ ತಳವೂರಿದ್ದರೆ, ಟಿಕೆಟ್ ತೆಗೆದ, ಲೆಕ್ಕದಿಂದ ಹೊರಗೆ, ಗೊಟಕ್ ಎಂದ, ನೆಗೆದು ಬಿದ್ದ–ಇಂತೋ ಹೇಳುತ್ತೇವಲ್ಲವೇ? ಸಾವು 'ಜಾತಸ್ಯ ಮರಣಂ ಧ್ರುವಂ' ಎಂದು ನಿಷ್ಕರ್ಷಿಸಲ್ಪಟ್ಟ ವಿಚಾರ, ಮನುಷ್ಯ ಜೀವನದ ಆದಿ 'ಹುಟ್ಟು'; ಅಂತ್ಯ 'ಸಾವು.' ಹುಟ್ಟಿನಿಂದ ಸಾವಿನ ತನಕದ ಈ ಯಾತ್ರೆಯನ್ನು, ಹೋರಾಟವನ್ನು, ನಟನೆಯನ್ನು, ವರ್ತನೆಯನ್ನು ಅಥವಾ ವಿವಿಧ ಅವಸ್ಥಾಂತರಗಳನ್ನು ಮೀಮಾಂಸಕರು ಬಹುವಿಧವಿಂದ ತಿಳಿಸಿದ್ದಾರೆ. ಸಂಸಾರವನ್ನು ಸಾಗರಕ್ಕೆ ಹೋಲಿಸಿದರು. ಬದುಕನ್ನು ಜಟಕಾ ಬಂಡಿಗೆ ಉಪಮಿಸಿದರು. ಸಂಸಾರ ನಾಟಕವೆಂದು ಹಲವರು ಹೇಳಿದರು. ಚಕ್ರಭ್ರಮಣದಂತೆ ಉಚ್ಚಾವಚಗತಿಯುಳ್ಳದ್ದೆಂದು ವ್ಯಾಖ್ಯಾನಿಸಿದರು. ಲೋಕವೇ ನಾಟಕವಾಡುವ ವೇದಿಕೆ, ಜನರೇ ಅದರ ನಟವರ್ಗ ಎಂದೂ ತಿಳಿಸಿದರು. ಇಲ್ಲಿ ಸಂಸಾರ ಶರಧಿಯನ್ನು ದಾಟುವ ಪ್ರಯತ್ನ ಸಾಗಬೇಕು. 'ಈಸಬೇಕು, ಇದ್ದು ಜೈಸಬೇಕೆಂದು ದಾಸರು ಹಾಡಿದರು. ಮಾಯಾಪಾಶ ಈ ಸಂಸಾರ, ಇದರಲ್ಲಿ ಜೀವಿಗಳೆಲ್ಲ ಬಂಧಿಸಲ್ಪಟ್ಟು

ತೊಳಲಾಡುತ್ತಿದ್ದಾರೆ ಎಂದೂ ಹಲವರು ಘೋಷಿಸಿದರು. 'ಭವ ಮರುಭೂಮಿ' ಎಂದವರೂ ಇಲ್ಲದಿಲ್ಲ. ಅದೇನೇ ಇರಲಿ, ಹುಟ್ಟು ಸಾವು ನಮ್ಮ ಅಧೀನದಲ್ಲಿಲ್ಲ. ಹಾಗಾಗಿ ಅದು ಭಗವನ್ನಿಯಾಮಿತ ವಿಚಾರ, ಸಂಸಾರ ಶರಧಿಯ 'ಕೈವರ್ತಕಃ ಕೇಶವಃ ; 'ತೇನ ವಿನಾ ನ ತೃಣಮಪಿ ಚಲತಿ' ಎಂದಿರುವಾಗ ಮನುಷ್ಯ ಯತ್ನ ಎಲ್ಲಿಯದು, ಎಷ್ಟರದು. ಆದರೂ 'ದೈವಂ ಪುರುಷ ಕಾರಶ್ಚ' ಎಂದಂತೆ ಇವೆರಡೂ ಅಪೇಕ್ಷಣೀಯವೇ. 'ಲೀಲಾನಾಟಕ ಸೂತ್ರಧಾರ' ನೆಂದು ಪರಮಾತ್ಮನನ್ನು ನಾವು ವರ್ಣಿಸುತ್ತೇವೆ. ಆತನು ನಿರ್ದೇಶಿಸಿದಂತೆ ಪಾತ್ರಗಳನ್ನು ಅಭಿನಯಿಸಲೇಬೇಕು. ಅಲ್ಲಿ ಬಲ್ಲೆನೆಂಬ ಅಹಂಕಾರವೂ ಸಲ್ಲದು, ಒಲ್ಲೆನೆಂಬ ತಿರಸ್ಕಾರವೂ ನಿಲ್ಲದು. ಶಿರಸಾವಹಿಸುವುದಷ್ಟೇ ಮನುಷ್ಯ ಮಾತ್ರನಿಗೆ ವಿಹಿತ ಕರ್ಮ.

ಶಾಂತ ಕವಿಗಳ ವಿಶ್ರಾಂತಿಯನ್ನು ವರ್ಣಿಸಲು ಬೇಂದ್ರೆಯವರು ಬಳಸಿದ ವಿಧಾನ ವಿನೂತನ ಹಾಗೂ ಅರ್ಥಗರ್ಭಿತ, ಮಾಲೋಪಮಾರೀತಿಯ ಒಂದರ ಮೇಲೊಂದು–ಹಾಗೆ,–ಹಾಗೆ–ಹಾಗೆ ಎಂದು ಬರುವ ಸನ್ನಿವೇಶ ಅತ್ಯಂತ ಸಮುಚಿತವಾಗಿದ್ದು, ಶಾಂತ ಕವಿಗಳ ಬಹುಮುಖ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತಿದೆ. ಹೇಳಬೇಕಾದ ಅಂಶ ಕೆಂಚಿತ್ತು ಉಳಿಯದಂತೆ ತಿಳಿಸುವ ಕ್ರಮ ವಿನೂತನ, ವಿಶಿಷ್ಟ. ಸಾಮಾನ್ಯವಾಗಿ ನಾವು ಕಾಣುವ ವ್ಯಕ್ತಿಯ ಸ್ವರೂಪ ಕೀರ್ತನಪ್ರೋ, ಅವನ ಇಲ್ಲ–ಸಲ್ಲದ ಗುಣಗಳ ಸರಮಾಲೆಯೋ ಇಲ್ಲಿಲ್ಲ. ಬದಲಾಗಿ ಪ್ರಾಪಂಚಿಕ ವಿಚಾರಗಳನ್ನು ಆಧ್ಯಾತ್ಮಿಕದತ್ತ ಸವಿಾಕರಿಸಿ ಶಾಂತ ಕವಿಗಳ ವಿಶ್ರಾಂತಿಯನ್ನು ಇದೇನು ಸಾವೇ ಅಲ್ಲ ತಾತ್ಕಾಲಿಕ ವಿಶ್ರಾಂತಿ ಎನ್ನುವ ಸೃಷ್ಟಿಯ ಅದ್ಭುತ ರಹಸ್ಯ 'ಪುನರಪಿ ಜನನಂ ಪುನರಪಿ ಮರಣಂ' ಎನ್ನುವುದನ್ನು ವ್ಯಾಖ್ಯಾನಿಸಿದಂತಿದೆ. ಅಲ್ಲದೆ ಎಂದೂ ಕೊನೆ ಇರದ ಈ ಪಯಣಕ್ಕೆ ಒಂದು ಸಾವು ಎಂದರೆ ಒಂದು ವಿಶ್ರಾಂತಿ ಸ್ಥಳ ಅಷ್ಟೆ. ಹಾಗಾಗಿ ಪದ್ಯದ ಮೊದಲನೆಯ ಸಾಲು—'ನಟ ತೆರೆಯ ಮರೆಯಾದ ಆಟ ತೀರಿಸಿಕೊಂಡು,' ಒಂದು ಆಟದ ಮೇಳ ಎಂದರೆ ಬಹುಮಂದಿ ನಟರ ಮೇಳ. ಅಲ್ಲಿ ಒಬ್ಬೊಬ್ಬನಿಗೂ ಇಂತಿಷ್ಟು ಕಾಲಾವಧಿ, ಇಂತಹ ಅಭಿನಯ, ಇಂತಹ ಪ್ರವೇಶ–ನಿರ್ಗಮನ ವ್ಯವಸ್ಥೆ ಎಂದು ನಿಯಮಗಳಿರುತ್ತವೆ. ಸೂತ್ರಧಾರನೊಬ್ಬ ಅದರ ನಿಯಂತ್ರಣವನ್ನು ನಡೆಸುತ್ತಿರುತ್ತಾನೆ. ಹಾಗಾಗಿ ಒಬ್ಬನೇ ನಟ ಅಲ್ಲಿರುವುದಲ್ಲ. ಅಂತಿರುವುದೂ ಸಲ್ಲ. ತನ್ನ ಅಭಿನಯ ಮುಗಿದೊಡನೆಯೇ ತೆರೆಯಮರೆಗೆ ಸಾಗಲೇಬೇಕು. ಅಭಿನಯದ ವೇಳೆ ಮುಗಿದಾಗ ಮತ್ತೆ ರಂಗಮಂದಿರದಲ್ಲಿರಲೇ ಬಾರದು, ತೆರೆಯ ಮರೆಗೆ ಸರಿದು ವಿಶ್ರಮಿಸಬೇಕು. ಅಥವಾ ಮರುಹುಟ್ಟಿನಂತೆ ಮತ್ತೊಂದು ಭೂಮಿಕೆಯಲ್ಲಿ ಅಗತ್ಯವೆನಿಸಿದರೆ ಕಾಣಿಸಿಕೊಳ್ಳಬೇಕು. ಅಂತೂ ಒಂದು ವೇಷ ತೊಟ್ಟು ನಿರ್ದಿಷ್ಟ ಭೂಮಿಕೆಯಲ್ಲಿ ನಿರ್ದಿಷ್ಟ ವೇಳೆಯಲ್ಲಿ ಅಂತರಿಸಲೇಬೇಕು. ಈ ನಿರ್ಗಮನವನ್ನು ಜಗತ್ತಿನ ನಾಟಕಶಾಲೆಯ ನಟರಾದ ನಾವೆಲ್ಲ ಪಾಲಿಸುತ್ತಿದ್ದೇವಲ್ಲ. ಹಾಗಾಗಿ ಈ ನಟ 'ಶಾಂತಕವಿ' ಎನ್ನುವ ಪಾತ್ರಧಾರಿ ಇದಿಗೋ ತೆರೆಯಮರೆಗೆ ಸರಿದ. ಅರ್ಥಾತ್ ನಿಧನರಾದರು. ಹೇಗೆಂದರೆ ಎಂದು ಮತ್ತೊಂದು ಉದಾಹರಣೆಯನ್ನು

ಇದಕ್ಕೆ ಎಣೆ-ತೊಣೆ, ಸರಿ-ಸಾಟಿಯಾಗಿ ನೋಡಬೇಕೆಂದಾದರೆ—'ಭಟಸಮರದಿಂದ ತೆರಳಿದ ಅರಸರ ಮನೆಗೆ' ಎನ್ನುತ್ತಾರೆ, ಕವಿಬೇಂದ್ರೆ. ಸಮರಾಜಿರಪಟುಭಟ ತನ್ನ ಪರಾಕ್ರಮದ ಹೋರಾಟದಿಂದ ಮೆರೆದು ಒಂದೋ ಜಯಿಸಿ ಅಥವಾ ಸಮರ ಕೊನೆಗೊಂಡು (ಸೋತಲ್ಲ) ತನ್ನ ಒಡೆಯನ ಎಡೆಗೆ ನಡೆದಂತೆ; ಅಥವಾ ಯುದ್ಧ ಭೂಮಿ ಯಲ್ಲಿ ಕೊನೆಯವರೆಗೂ ಹೋರಾಡಿ ವೀರ ಮರಣವನ್ನೈದಿ ತನ್ನೊಡೆಯನಾದ ಸೃಷ್ಟಿ ಕರ್ತನಲ್ಲಿಗೇ ನಡೆದಂತೆ—ಶಾಂತ ಕವಿಗಳು ಅಸ್ತಂಗತರಾದರು. ಯುದ್ಧ ಸಿದ್ಧಾಂತದಂತೆ ಗೆದ್ದರೂ ಲಾಭ ಸೋತರೂ ಲಾಭ, ಈ ಪ್ರಸಿದ್ಧ ಶ್ಲೋಕ, ಶಾಸನೋಟ್ಟಂಕಿತವಾದು ದನ್ನು ಗಮನಿಸಿ:

"ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾಃ।
ಕ್ಷಣವಿಧ್ವಂಸಿನಃ ಕಾಯಾಃ ಕಾ ಚಿನ್ತಾ ಮರಣೇ ರಣೇ ॥"

ಅಂತೂ ಈಗ ಭಟ ತನ್ನ ಕಾರ್ಯಕ್ಷೇತ್ರವಾದ ಸಮರಾಂಗಣದಿಂದ ತೆರಳಿದ ಅರಸನ ಅರಮನೆಗೆ. ಅಂತೆಯೆ ನುರಿತ ಗಾಯಕ ತನ್ನ ಕರ್ಣಪೀಯೂಷವಾದ ಗಾನಸುಧೆ ಯನ್ನು ಶ್ರೋತೃಗಳಿಗೆ ನೀಡಿ ತೃಪ್ತಿಪಡಿಸಿ ಇದೀಗ ವಿಶ್ರಾಂತಿಗಾಗಿ ತುಟಿ ಮುಚ್ಚಿದನು. ಅದೂ ಎಂತಹ ಹಾಡು? ಸುಮಧುರ ಶಾರೀರ ಅಲ್ಲಿತ್ತು. ನಾಡು, ನುಡಿಗಳಿಗೆ ಸಂಬಂಧಿಸಿದ ಸಾಹಿತ್ಯವನ್ನೊಳಗೊಂಡ ಹಾಡುಗಳನ್ನೇ ಆತಹಾಡಿದ್ದ. ದೇಶಪ್ರೇಮ, ಭಾಷಾ ಪ್ರೇಮಗಳನ್ನು ಹೃನ್ಮನಗಳಲ್ಲಿ ಅಚ್ಚೊತ್ತಿದ್ದ. ಒಳ್ಳೆಯ ಹಾಡುಗಾರರ ಹಾಡು ಕಚೇರಿ ಕೊನೆಗೊಳ್ಳುವಷ್ಟಕ್ಕೇ ಕೊನೆಗೊಳ್ಳುವುದಿಲ್ಲ, ಅದು ಅಲ್ಲಿಂದ ತೆರಳು ವಾಗಲೂ "ಗಚ್ಛಾಮಿ ಶೃಣ್ವನ್ನಿವ" ಎಂದಂತೆ ಪ್ರಭಾವ ಮುದ್ರೆಯನ್ನೊತ್ತುತ್ತದೆ. ಇಲ್ಲಿ ಶಾಂತ ಕವಿಗಳ ನಾಡು ನುಡಿಗಳ ಪ್ರೇಮ, ಅವರ ಕಂಠದ ಹಾಡಿನ ಸೊಗಸು 'ಪಟು' ಎಂಬ ವಿಶೇಷಣದಿಂದ ಸೂಚ್ಯವಾದ ಅವರ ಗಾಯನ ಶಕ್ತಿಮುಂತಾದುವು ಹೇಗೆ ಅಭಿ ವ್ಯಕ್ತಿಗೊಂಡಿವೆ ಎಂಬುದನ್ನು ಪರಿಭಾವಿಸ ಬೇಕು. ಎಂತಹ ಹಾಡಾದರೂ ಅದ ಕ್ಕೊಂದಿಷ್ಟು ಅವಧಿ ಇದೆ ತಾನೆ. ಆ ಅವಧಿ ಮುಗಿದಾಗ ಹಾಡಲು ಬಿಚ್ಚಿದ ತುಟಿಯನ್ನು ಮುಚ್ಚಬೇಕು, ತುಟಿಮುಚ್ಚಿ ಮೌನದ ಮುಕ್ತಾಯ ಪೂರ್ಣವಿರಾಮವನ್ನು ಹಾಕಲೇಬೇಕು. ಇದೀಗ ಶಾಂತ ಕವಿಗಳು ಜೀವನ ಸಂಗೀತಕ್ಕೆ ಮುಕ್ತಾಯ ಹಾಡಿದ ರೆಂಬುದು ಎಂತಹ ಅದ್ಭುತ ಕಲ್ಪನೆ!

ಇದು ಬರಿಯ ಶ್ಲಾಘನೆಯ ಮಾತಲ್ಲ. 'ನುಡಿಯೆ ಸಿರಿ' ಎಂದು ಅವರು ನಂಬಿದ ವರು, ಹಾಡುಗಳಲ್ಲಿ ಪಡಿಬಿಂಬಿಸಿದವರು, ಹಾಗಾಗಿ ಹಾಡುಗಾರ ಹಾಡು ಮುಗಿಸಿದಂತೆ ಎಂಬ ನುಡಿ ಆಟಮಟದ (ಮೋಸದ, ಠಕ್ಕಿನ) ಮಾತಲ್ಲ, ಹಾಡಿ ನಾಡನ್ನು ನಗಿಸಿ ದವರು, ಒಲಿಸಿದವರು. ಹಾಡಿನಿಂದ ನಾಡಿನ ಪೂಜೆಗೈದವರು. ಏಕೆಂದರೆ 'ನಾಡೆ ನಾರಾಯಣನು' ದಿಟವಾಗಿ ಎಂದು ತಿಳಿದ ವರು. ಏಕೆಂದರೆ 'ಜನತಾಜನಾರ್ದನ' ಎಂಬುದನ್ನವರು ಬಲ್ಲರು. ದೇಶಸೇವೆಯೇ ಈಶಸೇವೆಯಲ್ಲವೇ? ನಾಡು, ನುಡಿಗಳ ಸೇವೆಬಿಟ್ಟು ಬೇರೇನು ಮಾಡತಕ್ಕ ಕಾಯಕ ವಿದೆ? ಹಾಗಾಗಿ ಜನಸೇವೆ ಜನಾರ್ದನಸೇವೆ, ನುಡಿಸೇವೆ ನಾಡಸೇವೆ, ನಾಡುನುಡಿಗಳ ಸೇವೆ

ಭಗವತ್ಸೇವೆ ಎಂಬ ಸಮೀಕರಣ ಅತ್ಯಂತ ಸಮೀಚೀನವಾದುದು. 'ಸರ್ವಂ ಖಲ್ವಿದಂ ಬ್ರಹ್ಮ' ಎನ್ನುವ ದೃಷ್ಟಿ ವೈಶಾಲ್ಯದೆದುರು 'ನಾಲ್ಪೇಸುಖಮಸ್ತಿ'ತಾನೇ? ಎಂದೆಂದಿಗೂ ಕನ್ನಡಿಗನಾಗಿರು, ಕನ್ನಡ ನಿನ್ನುಸಿರು ಎನ್ನುವ ಉದ್ಘೋಷಣೆಯಂತೆ 'ನುಡಿಯೆ ಸಿರಿ'—ಸುಂದರವಾದ ತಾಯ್ನುಡಿ, ಸುಂದರ ತಾಯ್ನಾಡಿಗಿಂತ ಬೇರೇನು ಸುಂದರ ತರ, ಸುಂದರ ತಮವಿದೆ? ಹಾಗಾಗಿ ಜೀವನ ದುದ್ದಕ್ಕೂ ಈ ಕೀರ್ತನಗಳನ್ನೇ ಹಾಡಿ, ಅವಳನ್ನೇ ಪ್ರಪತ್ತಿಭಾವದಿಂದ 'ರಕ್ಷಿಸು ಕರ್ನಾಟಕ ದೇವಿ' ಎಂದು ಹಾಡಿ ತನ್ನ ಕನ್ನಡ ಭಕ್ತಿಯನ್ನು ವ್ಯಕ್ತಪಡಿಸಿದುದು ಎಲ್ಲರಿಗೂ ತಿಳಿದಿದೆ. 'ಹಟದಿ ಕೀರ್ತನಗಾರ ಬೆವರನೊರಸಲು ಹಿಂದೆ ಸರಿದ ವಿಶ್ರಾಂತಿ ಗಾಗಿ.' ಹಾಡುವುದು ಕೇಳುಗನಿಗೆ ಅನಾಯಾಸವಾಗಿ ಎಂಬಂತೆ ಕಾಣಿಸಿದರೂ ತಾಳ-ಲಯಬದ್ಧವಾಗಿ, ಶ್ರುತಿ ರಾಗಯುಕ್ತ ವಾಗಿ, ಗಮಕ ರಂಜಕ ಮೋಹಕವಾಗಿ ಹಾಡುವುದು ಬೆವರಿನ ಸ್ನಾನವನ್ನೇಮಾಡಿ ಸುವ ಕಾಯಕ ಎಂಬುದನ್ನು ಪ್ರತ್ಯಕ್ಷ ದರ್ಶಿಗಳೋ, ಸ್ವಾನುಭವಿಗಳೋ ಚೆನ್ನಾಗಿ ಬಲ್ಲರು. ಆದರೂ ತಾನು ಎತ್ತಿಕೊಂಡ ರಾಗಾಲಾಪನೆಯನ್ನು ಮಂದ್ರ-ಮಧ್ಯಮ-ತಾರ ಸ್ಥಾಯಿಗಳಲ್ಲಿ, ಮಂದ್ರ-ಮಧ್ಯಮ (ಅನುದ್ರುತ)—ದ್ರುತಗತಿಗಳಲ್ಲಿ ತಾಸು ಗಟ್ಟಲೆ ಹಾಡುವುದೆಂದರೆ ಹಟದಿಂದಲೇ ಹಾಡಬೇಕು. ಅಂತಹ ಹಾಡು ಹಾಡಿದವರು ಶಾಂತಕವಿಗಳು. ಕವಿಗಳಾಗಿ ಕೀರ್ತನಕಾರ ರಾಗಿಯೂ ಅವರು ಪ್ರಸಿದ್ಧರು. ನಾಲಗೆ ನಿನ್ನಕೊಂಡಾಡಲಿ ಎನ್ನುವ ಚಲವುಳ್ಳ ಭಕ್ತ ತನ್ನ ಹಟಬಿಡಲಾರ, ಶ್ರಮಲೆಕ್ಕಿಸಲಾರ, ಆದರೂ ಕೀರ್ತನೆಗೆ ಕೊನೆಬಂದಾಗ ವಿಶ್ರಾಂತಿ ಪಡೆಯಲೇಬೇಕು. ಸುರಿದ ಬೆವರ ನ್ನೊರಸಲೇಬೇಕು. ಇದೀಗ ಶಾಂತಕವಿಗಳಿಗೆ ವಿಶ್ರಾಂತಿಯ ವೇಳೆ. ಹಾಡಿನ ಮುಕ್ತಾಯ. ಬೆವರೊರಸಿಕೊಳ್ಳುವ ಸಂದರ್ಭ, ಬಹುಶಃ ಅವರು ಆಕಾಯಕಕ್ಕಾಗಿ ನಮ್ಮೆಲ್ಲರ ಕಣ್ಣೆದುರಿನಿಂದ ಪಕ್ಕಕ್ಕೆ ಸರಿದರೇನೋ ಎಂದೂಹಿಸುತ್ತದೆ ಅಂಬಿಕಾತನಯದತ್ತರ ಕವಿಹೃದಯ. ಕವಿಗಾದ ನೋವು, ಅವರು ಆದರಿಂದ ಪಟ್ಟಪಾಡು ಹೇಗೆ ಹಾಡಾಗಿ ಮೂಡಿಬಂದಿದೆ ಎಂಬುದನ್ನು ನೋಡ ಬಹುದು.

ಸಾವು-ದೇಹ-ದೇಹತ್ಯಾಗ-ಮರುಹುಟ್ಟು ಇವುಗಳ ಬಗೆಗೆ ಸೋಪಪತ್ತಿಕ ಜಿಜ್ಞಾಸೆ ಭಗವದ್ಗೀತೆಯಲ್ಲಿದೆ, ಅದರ ಭಾವವನ್ನೇ ಅಳವಡಿಸಿ ಮುಂದಿನ ಸಾಲು—"ಮುಪ್ಪಾಗಿ ಜಿರಿಯಾದ ಬಟ್ಟೆಯನು ಬಿಸಾಡಿದಪ್ಪನ್ನ ಹೊಸದೊಡಿಗೆಯನು ಬೇಡಲಂಬರಕೆ....ತರ ಹೋಗಿಹರು" ರೂಪುಗೊಂಡಿದೆ. ಭಗವದ್ಗೀತೆಯ—ಎರಡನೆಯ ಅಧ್ಯಾಯದ ಇಪ್ಪತ್ತೆರಡನೆಯ ಶ್ಲೋಕ—

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ-
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

ಇದರೊಡನೆ ಹೋಲಿಸಿ ನೋಡಬೇಕು. ಧರಿಸಿರುವ ಬಟ್ಟೆಬರೆ ಹರಿದು ಜೀರ್ಣವಾಗಿ ಹೋದಾಗ ಅದರ ಜಾಗದಲ್ಲಿ ಮತ್ತೊಂದು ದಪ್ಪವಾದ ತೊಡಿಗೆಯನ್ನು ಧರಿಸುವುದು ಸರಿತಾನೇ. ಅಂತೆಯೆ ನಮ್ಮ ಅಶನವಸನ ದಾತಾರನನ್ನು ಬೇಡಲೆಂದು, ಅಂಬರಾಕಾಂಕ್ಷಿ

ಗಳಾಗಿ ಅಂಬರಡೆಡೆಗೆ ಹೋಗಿಹರು ಎನ್ನು ತ್ತಾರೆ ಕವಿ ಬೇಂದ್ರೆ. 'ಮುಪ್ಪಾಗಿ' ಎಂಬ ವಿಶೇಷಣ ಬಟ್ಟೆಗೆ ಮಾತ್ರವಲ್ಲ ವಸ್ತ್ರಧಾರಿಗೂ ಅನ್ವಯಿಸುವಂತಹಪದ. ಮುದಿತನದಲ್ಲಿ ಹಳೆಯ ಬಟ್ಟೆಗಳನ್ನು ಬಿಸಾಡಿ ದಪ್ಪನ್ನ ಬಟ್ಟೆಗಳನ್ನು ಬಯಸಿದಂತೆ. ದಪ್ಪವಾದ ಬಟ್ಟೆ ಚಳಿಗಾಳಿಗಳಿಂದ ರಕ್ಷಿಸಿಕೊಳ್ಳಲು ಅಗತ್ಯ. ಹೊಂದಿಕೊಂಡ ಈ ಸಹಜ ಪ್ರಾಸ ವನ್ನು ಅದರ ಹಿಂದಿರುವ ಅರ್ಥಗೌರವ ವನ್ನು ಗಮನಿಸಬೇಕು. ಇನ್ನೊಂದು ಮುಖ ದಿಂದ ಪರಿಭಾವನೆ—ನುಡಿಗಳೆಲ್ಲ ಸಪ್ಪ ಗಾಗಿವೆ. ಅವಕ್ಕೆ ಒಂದಿಷ್ಟು ಉಪ್ಪುಕಾರ ಹಚ್ಚಲು, ಎಂದರೆ ರುಚಿಕಟ್ಟಾಗಿಸಲು, ಉಪ್ಪನ್ನು ತರಲು ಉಪ್ಪನ್ನು ಸಂಗ್ರಹಿಸಿ ಡುವ ರಸವಂತಿಯಿರುವ ಕಡೆಗೆ ಹೋಗಿ ಹರು. ರಸವತಿ ಎಂದರೆ ಅಡುಗೆಮನೆ. ರಸವಂತಿ ಎಂಬ ಈ ರೂಪವನ್ನು ಬೇಂದ್ರೆ ಯವರು (ರೂಢಿಯಲ್ಲಿಲ್ಲದಿದ್ದರೂ) ಛಂದಸ್ಸಿ ಗಾಗಿ ಬಳಸಿಕೊಂಡಿದ್ದಾರೆ. 'ಅಪಿ ಮಾಷಂ ಮಷಂ ಕುರ್ಯಾತ್ ಛಂದೋ ಭಂಗಂ ನಕಾರ ಯೇತ್'—ಎಂದು ತಾನೇ ಶಾಸ್ತ್ರಕಾರರ ಎಚ್ಚರದ ನುಡಿ. ಉಪ್ಪಿಗಿಂತ ರುಚಿಇಲ್ಲ, ಹಾಗಾಗಿ ಉಪ್ಪನ್ನು ತಂದು ಸೇರಿಸಲು ರಸವತಿಯ ಕಡೆಗೆ ಸಾಗಿದ್ದಾರೆ. ಈಗ ಕಣ್ಣೆದುರಿಲ್ಲ. ಇಲ್ಲಿ ಬಳಸಿದ ಪದ—'ರಸವಂತಿ ಯಿರುವಕಡೆಗೆ' ಇದನ್ನು 'ಅಡುಗೆಮನೆ ಇರುವ ಎಡೆಗೆ' ಎಂದೋ 'ಅಡುಗೆ ಮನೆ ಇರುವ ಕಡೆಗೆ' ಎಂದೋ ಹೇಳಲಿಲ್ಲ. ರಸವಂತಿ ಎಂಬುದು ಸಾಭಿಪ್ರಾಯಗರ್ಭಿತ ಪದ, ಅಡುಗೆ ಮನೆ ರಸವತ್ತಾದ ಪಾಕ ತಯಾರಿಸುವ ಪಾಕಶಾಲೆ, ಉಪ್ಪು ಅಲ್ಲಿ ಮಾತ್ರ ಲಭ್ಯ, ಉಪ್ಪನ್ನು ತರುವುದು ಸಪ್ಪೆಯಾದ ನುಡಿಯನ್ನು ರಸಭರಿತ ಮಾಡಲು. ಕಾವ್ಯಮೀಮಾಂಸೆಯಲ್ಲಿ 'ರಸ' ಪರಿಭಾಷೆ 'ಪಾಕಶಾಸ್ತ್ರ'ದ ಕೊಡುಗೆ, ಹಾಗಾಗಿ ಈ ಪದ ಕೇವಲ ಔಚಿತ್ಯಪೂರ್ಣ.

ಮುಂದೆ 'ಶಾಂತ ಕವಿಗಳ ವಿಶ್ರಾಂತಿ' ಯೆಂಬುದು ನೀರಸ ಸಿಪ್ಪೆಯನ್ನೇ ಬಹು ದಿವಸ ಚೀಪಿ ಬೇಸರಪಟ್ಟ ಶಿಶುವೊಂದು ಅಪ್ಪನಲ್ಲಿ ಮಧುರವಾದ ಹಣ್ಣನ್ನು ತನಗೆ ಸವಿಯಲು ಒದಗಿಸಿಕೊಡುವಂತೆ 'ಕಾಡಿ' ದಂತೆಯೋ ಬೇಡಿದಂತೆಯೋ ಇದೆಯೆಂದು ಬೇಂದ್ರೆಯವರು ಸಮೀಕರಿಸಿದ್ದಾರೆ. ಸಂಸಾರದಲ್ಲಿ ಅರೆದು ನೋಡುವ, ಕೊರೆದು ನೋಡುವ ಒರೆದು ನೋಡುವ ಸತ್ತ್ವ ಪರೀಕ್ಷೆಯ, ಧರ್ಮಸಂಕಟದ, ಸಹನೆಗೆ, ಸತ್ಯಕ್ಕೆ ಸವಾಲೊಡ್ಡುವ ಸಂದರ್ಭಗಳೇ ಅಧಿಕ. ಸಾಸಿವೆಯಷ್ಟು ಸುಖಕ್ಕೆ ಸಾಗರ ದಷ್ಟು ದುಃಖ ಪಡಬೇಕಾದ ಸಂದರ್ಭಗಳೇ ಅಧಿಕ. ಹಣ್ಣು ಸವಿಯುವುದಕ್ಕಿರುವ ಅವಕಾಶಕ್ಕಿಂತ ಸಿಪ್ಪೆಯನ್ನು ಚಪ್ಪರಿಸಲೇ ಬೇಕಾದ ಅನಿವಾರ್ಯತೆಯೇ ಬಹಳಷ್ಟು. ಆದರೆ, 'ಏತಿ ಜೀವಂತಮಾನಂದೋ ನರಂ ವರ್ಷ ಶತಾದಪಿ' ಎಂದಂತೆ 'ತಾಳಿದವ ಬಾಳಿಯಾನು' ಎನ್ನುವುದಕ್ಕನುಗುಣವಾಗಿ, 'ಎಲ್ಲರನು ಸಲಹುವ' ಪರಮಾತ್ಮನನ್ನೇ 'ಅನ್ಯಥಾ ಶರಣಂನಾಸ್ತಿ' ಎಂದು ಮೊರೆ ಹೋಗದೆ 'ನಾನ್ಯಃ ಪಂಥಾವಿದ್ಯತೇ.' ಮಗು ತನ್ನ ಆಸೆ ನೆರವೇರದಾದಾಗ ತನ್ನನ್ನು ಹುಟ್ಟಿಸಿದಾತನನ್ನೇ ಆಶ್ರಯಿಸುತ್ತದೆ. ಆಶ್ರಯಿಸದೆ ಬೇರೇನೂ ದಾರಿಯೇ ಇಲ್ಲ ತಾನೇ? ಅಂತೆಯೇ ಜಗದ ತಂದೆಯಾದ ಜನಾರ್ದನನನ್ನೇ ಜನರು ಆಶ್ರಯಿಸದೆ ಬೇರೆ ಬಿಂದಿಗ ದೇವರ್ಕಳಿಗೆರಗಿವರೆ ಇಷ್ಟಾರ್ಥಸಿದ್ಧಿ

ಸುವುದೇ? ಭೂಮಿಯಲ್ಲಿ ಎಡವಿದರೆ ಭೂಮಿಗೇ ಬೀಳಬೇಕು. 'ತ್ವಮೇವ ಶರಣಂ ವ್ರಜೇ' ಎನ್ನದೆ ಮತ್ತೇನೆನ್ನಲು ಸಾಧ್ಯ. ಮನುಷ್ಯ ಮಗುವಿನಂತೆ, ಪರಮಾತ್ಮ ಆ ಬುದ್ಧಿ ಬಲಿಯದ ತನ್ನ ಕಾರ್ಯಗಳನ್ನು ಮಾಡಿಕೊಳ್ಳಲಾಗದ ಮಗುವಿಗೆ ಸಹಕಾರಿ ಯಾದ, ಸಹಾನುಭೂತಿಯುಳ್ಳ ತಂದೆ ಯಂತೆ. ಆದುದರಿಂದಲೇ "ಸಿಪ್ಪೆಯನೆ ಬಹು ದಿವಸ ಚೀಪಿ ಬೇಸರಪಟ್ಟು ಅಪ್ಪನಲ್ಲಿ ಹೊಸ ಹಣ್ಣು ಪಡೆಯಹೋಗಿಹರಿಂತು" ಎಂದಿದ್ದಾರೆ ಕವಿಬೇಂದ್ರೆ. ಜೀವನದುದ್ದಕ್ಕೂ ನಿಃಸಾರವಾದ ಸಿಪ್ಪೆಯನ್ನು ಸವಿದಂತೆ ಕಷ್ಟ ಕಾರ್ಪಣ್ಯಗಳ ದಾಂಧಲೆಯಲ್ಲಿ ಬೆಂದು ಬಳಲಿದ ಕವಿ ಜೀವ ಪ್ರಾಯಶಃ ಇದೀಗ ದೈವಾನುಗ್ರಹರೂಪೀ ರಸಭರಿತ ಫಲಾಸ್ವಾದನೆಗೆಂದು ತೆರಳಿರಬಹುದೇನು? ಅರಿಯದ ಶಿಶುನೀರಸ ವಸ್ತುವನ್ನು ಚೀಪಿ ಬೇಸತ್ತರೂ ತಿಳಿಯದೆ ತೊಳಲುತ್ತಿರುತ್ತದೆ. ಕೊನೆಗೊಮ್ಮೆ ಆದರ ಹೆತ್ತವರಿಂದಲ್ಲವೆ ಆದಕ್ಕೆ ವಿಮುಕ್ತಿ?

ಆದರೆ, 'ನೀರು ಮಾರಿದವಾಗಿ, ವಾರಿದವೆ ನೀರಾಗಿ, ನೀರು ವಾರಿದವಾಗಿ' ತಿರುಗಿತಿರುಗಿ ಸಾಗರವ ಹೊಗುತಿಹುದು, ಧಾರುಣಿಗೆ ಬರುತಿಹುದುಯಾರ ವಿಸ್ಮಯ ಕರ್ಮ ಕರ್ಮಯೋಗಿ "ಆರರಿವರೀ ತತ್ತ್ವವನು ಕರ್ಮಯೋಗಿ" ಎಂದಂತೆ, ಇಂದಿನ ಸಾವು ಎಂದರೆ ಅದು ಮುಂದಿನ ಹುಟ್ಟಿನ ನಾಂದಿ. ಒಂದು ಹುಟ್ಟಿನ ಅಂತ್ಯ ಸಾವು ಮಗುದೊಂದು ಹುಟ್ಟಿನ ಆದಿ ಅದು. ಆದುದರಿಂದಲೇ ಕೊನೆಯ ಸಾಲು—"ತಪ್ಪದೇ ತಿರುಗುತಿಹರೆಂದು ತಿಳಿಯಲಿ ಜನರು ಬೆಳುವೊಲದ ನಾಡಿಗಾಗಿ" ಎಂದು ಮುಕ್ತಾಯವಾಗಿದೆ.

ಶಾಂತ ಕವಿಗಳ ವಿಶ್ರಾಂತಿ ಎಂದರೆ ಅದು ಪಾಂಚಭೌತಿಕವಾದ ಈ ರೂಪಕ್ಕೆ ಮಾತ್ರ. ಆದರೆ ಅವರ ಆತ್ಮ ಸದಾ ಕನ್ನಡ, ನುಡಿ ಸದಾ ಕನ್ನಡ. ಅವರಿಗೆ ಚಿರವಿಶ್ರಾಂತಿ ಇಲ್ಲ, ಅವರು ಬೇಡರು; ಏಕೆಂದರೆ ಬೆಳವೊಲದ ನಾಡಿಗಾಗಿ ಅವರು ತಪ್ಪದೇ ತಿರುಗುತಿಹರು. ಇಲ್ಲಿ ಪದ, ಬೆಳುವೊಲದ ನಾಡು' ಎಂದು ಸೂಚಿತವಾಗಿದ್ದರೂ ಅದು ಪ್ರತೀಕವಾಗಿ ಮಾತ್ರ. ಇದರ ಸದಾಶಯ ಇಡಿಯ ಕನ್ನಡ ನಾಡು, ಕನ್ನಡ ಜನತೆ. ಕನ್ನಡನಾಡು, ನುಡಿ ಎಂದರೆ ಉಸಿರು-ಜೀವಗಳಷ್ಟೇ ಪ್ರಮುಖನೆಂದ ಶಾಂತಕವಿಗಳಿಗೆ ಎಂದಾದರೂ 'ಬೆಳುವೊಲದ ನಾಡು ಮಾತ್ರ' ವೆಂಬ ಸೀಮಿತ ವಲಯ ಮನಸ್ಸಿಗೆ ಬರುವುದು ಸಾಧ್ಯವೇ? ಅವರು ನಾಡ ಕವಿ, ನುಡಿಯ ಕವಿ. ಜನತೆಯ ಕವಿ. ಹಾಗಾಗಿ ಅವರ ಸಾವು ಸಾವಲ್ಲ. ಕನ್ನಡದ ಇನ್ನೆಲ್ಲೋ ಇನ್ನಾವುದೋ ಏಳ್ಗೆಯ ಕಾರ್ಯಕ್ಕಾಗಿ ಮುಡುಪಾಗಿ ಮೂಡಿ ಬರಲು ಮಾಡಿದ ಒಂದು ವಿಧಿ ವಿಲಸನದ ವ್ಯವಸ್ಥೆ. ಬೇಂದ್ರೆಯವರಿಗೆ ಅವರ ಅಗಲಿದ ಆತ್ಮಕ್ಕೆ ಚಿರ ಶಾಂತಿಸಿಗಲೆಂಬ ಹಾರೈಕೆಯ ಸೊಲ್ಲೂ ಸಲ್ಲದೆಂಬುದು ಗೊತ್ತು. ಆದುದರಿಂದಲೇ ಆ ಸೊಲ್ಲು ಬರೆದೇ ಇಲ್ಲ. ಬರೆದುದೇ ಆಗಿದ್ದರೆ, ಶಾಂತಕವಿಗಳಿಗೆ ಮಹಾಪರಾಧವೆಸಗಿದಂತಾಗುತ್ತಿತ್ತು. ಅದೂ ಅಲ್ಲದೆ ಅದು ಕೇವಲ ಸಾಂಪ್ರದಾಯಿಕವಾದ ಕ್ಲೀಷೆಯ ಮಾತು. ತಾತ್ತ್ವಿಕ ನೆಲೆಯಲ್ಲಿ ನೋಡಿದರೆ 'ಜಾತಸ್ಯಹಿಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ॥' ಎಂದಿದೆ. ಹಾಗಿರುವಾಗ ಅದನ್ನು ಅಲ್ಲಗಳೆದು ಯತ್ಕಿಂಚನ ಕಥನದ ಮಾತುಗಳಲ್ಲಿ ಕವಿ ಬೇಂದ್ರೆಯವ

ರಿಗೆ ವಿಶ್ವಾಸವಿಲ್ಲ. ಅವರಿಗೆ ನೈಜವಿಚಾರ ವನ್ನು ತಿಳಿಸಬೇಕಾಗಿದೆ. ಆದುದರಿಂದಲೇ ಮುಕ್ತಾಯದ ಮಾತಿನಲ್ಲಿ ತಿರುಗಿ ಬರುವ ಪ್ರಸ್ತಾವವಿದೆ; ಒತ್ತಿದೆ; ಜೊತೆಗೆ ಅವ ಧಾರಣೆ ಇದೆ. 'ತಪ್ಪದೇ' ಎಂದು ಕವಿಗೆ ದೃಢ ವಿಶ್ವಾಸವೂ ಇದೆ. ಜನರು ಶಾಂತ ಕವಿಗಳು ವಿಶ್ರಾಂತರಾದರೆಂದೋ, ಮರಣ ವನ್ನೈದಿದರೆಂದೋ ಚಿಂತಿಸುವುದು ಬೇಡ. ಬೆಳುವೊಲದ ನಾಡಿನ ಏಳಿಗೆಗಾಗಿ ತಪ್ಪದೇ ತಿರುಗುತ್ತಿದ್ದಾರೆಂದು ತಿಳಿಯಲಿ ಎಂದು ಸೂಚಿಸುತ್ತಾರೆ, ಎಚ್ಚರಿಸುತ್ತಾರೆ- ಸಂತೈಸುತ್ತಾರೆ.

ಹೀಗೆ ನಾಡು–ನುಡಿಗಳ ಸೇವೆಗಳಿಗಾಗಿಯೇ ತನ್ನ ಜೀವನವನ್ನು ಮುಡುಪಾಗಿಟ್ಟಿದ್ದ ಒಬ್ಬ ಅನುಪಮ ಭಾಷಾ ಪ್ರೇಮಿ, ದೇಶಪ್ರೇಮಿಯನ್ನು ಕುರಿತು ಕವಿ ಮನ ಸಲ್ಲಿಸಿದ ನುಡಿ ಕುಸುಮಗಳೆರಡು ಇವು. ಕವಿ ಮನ ಹಾಡಿದ ಮೌನಗೀತೆಯ ನುಡಿಗಳೆರಡು ಇವು. ಇವೆರಡಕ್ಕೆ ಇಷ್ಟು ರೀತಿಯ 'ನಿರಸ?' ವ್ಯಾಖ್ಯಾನ ಅಗತ್ಯವಿತ್ತೇ ಎಂದು ಯಾರಾದರೂ ಪ್ರಶ್ನಿಸಬಹುದು, ಪ್ರಶ್ನಿಸಲಿ. ಬೇಂದ್ರೆಯವರ ಶತಮಾನೋತ್ಸವದ ಸಂದರ್ಭದಲ್ಲಿ ಸಲ್ಲಿಸುವ ಈ ಪ್ರಬಂಧ ಕುಸುಮೋಪಹಾರಕ್ಕೆ ನನ್ನ ಬರೆಹ ಬರಿಯ ನೂಲಿನಂತೆ ಎಂದರೂ ಸರಿಯೆ, ಇರಲಿ ಎಂದು ನನಗನ್ನಿಸಿತು; ಬರೆದೆ. ವ್ಯಾಖ್ಯಾನ ಕೂದಲು ಸೀಳುವ ಕಾರ್ಯವಾಗುವುದಿದೆ. ಅಸಗತ್ಯ ವಿವರಣೆ ಆಗುವುದಿದೆ. ವೃಥಾಲಾಪ, ವ್ಯರ್ಥಾಲಾಪ, ಅಸಂಬದ್ಧಾಲಾಪ ಎಲ್ಲ ಆಗುವುದಿದೆ- ಆಗಲಿ. ಒಳ್ಳೆಯ ಗೀತಗಳ ಬಗೆಗೆ ಹಲವರು ಕೈಯಾಡಿಸಿ, ಅದರ ಆಶಯವನ್ನೇ ಕೆಡಿಸುವುದಿಲ್ಲವೇ? ಬಹುಶಃ ಈ ಕವನದ ಬಗೆಗೆ ಪ್ರತ್ಯೇಕ ವಿವರಣೆಯ ವ್ಯಾಖ್ಯಾನವನ್ನು ನಾನು ಕಂಡಿಲ್ಲ. ಈ ನಿಟ್ಟಿನಿಂದ ಇದು ಕವಿಗೆ; ಕವಿಸ್ಫೂರ್ತಿಗೆ ಕಾರಣ ನೀಡಿದ ಶಾಂತ ಕವಿಗಳಿಗೆ ಸಲ್ಲಿಸಿದ ಸ್ಮೃತಿಕಾಣಿಕೆ ಎಂದು ನನ್ನ ಭಾವನೆ. ಬಹುಶಃ ನಾನೇನೂ ಇಲ್ಲದ, ಸಲ್ಲದ ಅಪ್ರಾಸಂಗಿಕ ವಿಚಾರ ಸರಣಿಗಳ ಸರಪಣಿಯನ್ನು ಓದುಗರಿಗೆ ತೊಡಿಸುತ್ತಿಲ್ಲ ಎಂಬ ಭಾವನೆಯೊಂದಿಗೆ ಈ ಬರೆಹಕ್ಕೆ ಮುಕ್ತಾಯ.

---

ಶರಣು ಬಂದವರಿಗೆ ಶರಣೆಂಬುದಿಲ್ಲಿದೆ
ಕರುಣ ಉಳ್ಳವರಿಗೆ ಕಾಯಕದೆಡೆ ಇದೆ
ಹರಣ ಉಳ್ಳನಕ ಆಚರಣ ಮಾರ್ಗವಿದೆ-
ಅಮರರಾದವರಿಗೆ ಮರಣವು ಎಲ್ಲಿದೆ?

'ಅರಳು-ಮರಳು' ಪು. ೩೬೦

# ಬೇಂದ್ರೆಯವರ ಮೇಘದೂತ

ಸೀತಾರಾಮ ಜಾಗೀರ್‌ದಾರ್

ಬಣ್ಣದ ಗಾಜಿನ ಪಾತ್ರೆಯಲ್ಲಿ ನೀರನ್ನು ಹಾಕಿದಾಗ ನೀರು ಆ ಗಾಜಿನ ಪಾತ್ರೆಯ ಬಣ್ಣವನ್ನು ತಳೆಯುವಂತೆ, ಸುಣ್ಣ ಖನಿಜ ಲವಣಗಳ ಮಧ್ಯ ಹರಿದು ಬರುವ ನೆಲದ ಮರೆಯ ಅಂತರ್ಜಲ ಆಯಾ ಭೂಮಿಯ ಗುಣವನ್ನು ಪಡೆಯುವಂತೆ ಒಂದು ಭಾಷೆಯ ಕಾವ್ಯಧಾರೆ ಇನ್ನೊಂದು ಭಾಷೆಯಲ್ಲಿ ಹರಿದು ಬರುವಾಗ ಆಯಾ ಭಾಷೆ—ಅದರ ಆ ಕವಿಯ ಗುಣಸಂಪತ್ತು—ಏನೆಲ್ಲವನ್ನೂ ಪಡೆದುಕೊಂಡು ಹೊಸ ರೂಪವನ್ನು ಧರಿಸಿ ಅವತರಿಸಿ ನಿಲ್ಲುತ್ತದೆ. ಅಂತೆಯೆ ಸಂಸ್ಕೃತ ಭಾಷೆಯಲ್ಲಿ ಕಾಳಿದಾಸನು ಬರೆದ "ಮೇಘದೂತ" ಕಾವ್ಯವೂ ಕನ್ನಡದಲ್ಲಿ ಬರುವಾಗ ಆಯಾ ಕವಿಗಳ ಮನೋಭಾವನೆಯಂತೆ ಹಲವು ರೂಪಗಳನ್ನು ಧರಿಸಿ ಅವತರಿಸಿ ನಿಂತಿದೆ, ಶಾಂತಕವಿ, ವರದಾಚಾರ್ಯರು ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳು, ರೈನಾಪುರ, ಮಾಸ್ತಿ, ಎಸ್. ವ್ಹಿ. ಪರಮೇಶ್ವರಭಟ್ಟ ಮತ್ತು ದೇವುಡು ನರಸಿಂಹಶಾಸ್ತ್ರಿಗಳೂ ಮೇಘದೂತ ಕಾವ್ಯವನ್ನು ಕನ್ನಡಕ್ಕೆ ತಂದಿದ್ದಾರೆ. ಒಬ್ಬೊಬ್ಬರದೂ ಒಂದು ತೆರ. ಸಂಸ್ಕೃತ ಸಾಹಿತ್ಯದಲ್ಲಿ ಸಹ ಮೇಘದೂತ ಬಹು ಪ್ರಸಿದ್ಧ ಹಾಗೂ ಬಹು ಜನರಿಂದ ಓದಲ್ಪಟ್ಟ ಕಾವ್ಯ. ಸುಮಾರು ನಲ್ವತ್ತಕ್ಕೂ ಹೆಚ್ಚು ಜನ[1] ಈ ಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆದಿದ್ದಾರೆ! ಬೇಂದ್ರೆಯವರ 'ಕನ್ನಡ ಮೇಘದೂತ' ಹೊಸ ಅನುವಾದವೂ ಅಹುದು ಮತ್ತು ಒಂದು ಹೊಸ ವ್ಯಾಖ್ಯಾನವೂ ಅಹುದು. ಬೇಂದ್ರೆಯವರು ಮೇಘದೂತವನ್ನು ಓದಿ ಅದರ ಸವಿಯನ್ನು ಸವಿಯುತ್ತ ಆ ಕಬ್ಬಿನ ರಸವನ್ನು ಕನ್ನಡದ ಬಾಣಲೆಗೆ ತಂದಿದ್ದಾರೆ; ತಮ್ಮ ಹೃದಯ ಮೂಸೆಯಲ್ಲಿ ಕರಗಿಸಿ ಹೊಸದಾಗಿ ಅಚ್ಚಿಟ್ಟ ಮೂರ್ತಿಯನ್ನು ನೀಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಬೇಂದ್ರೆಯವರಿಗೆ ಇಡೀ ಪ್ರಪಂಚವೇ ಕಾಮರೂಪವಾಗಿ ಕಂಡಿದೆ; ಅನಾದಿಕಾಮ ಮಧುರೂಪದ ಮದನಿಕೆ. ಮದನ–ಮದನಿಕೆ (ರತಿ-ಮನ್ಮಥ) ಜಗದ ತಾಯಿ ತಂದೆ ಅವರ 'ದೇಹಕಾಮ' ಕಾಮದೇವನಾಗಿ ಅವತರಿಸಿತು. ದೇವ-ಕಾಮ, ಜೀವ-ಕಾಮ, ಭೂಮಿ-ಕಾಮ, ಮತ್ತೆ ಯಕ್ಷ-ಯಕ್ಷಿ ಒಂದೇ:

---

[1] R. D. Karmarkar, 'KALIDASA', P. 52 (1971, 2nd Edition, K. U. Dharwar).

ಮೂರು ಮೈಯ್ಯ ಮುಪ್ಪುರಿಯ ಒಲವು
ಕಿಚ್ಚಾಗಿ ಕುಲುಮೆಯಂತೆ
ಕಾಮ ಕಾದು ಉಕ್ಕಿತ್ತು ಪ್ರೇಮ ತಂತನದ
ನಲುಮೆಯಂತೆ
ಅಕೆಗಾತ ಮೈ ಉಸಿರು, ಉಸಿರ ಮೈಯಾಗೆ
ಅತಗಾಕೆ
ಕನಸುಮನಸಿನಲಿ ಕಾಂತರಾಗೆ ಏಕಾಂತ
ಬೇರೆ ಬೇಕೆ ||
ಮೈಯ ಮಲೆಯ ತಲೆಯಲ್ಲಿ ಎಲ್ಲಿ ಅಸರಂತ
ದೇವಲೀಲೆ
ಚೈತಲಂತೆ ಮಿಂಚಾಡೆ ನಡುವೆ, ಹೆಳಲಾಗೆ
ಮೇಘಮಾಲೆ
ವಿಂಧ್ಯ ಶಿಖರದಲೆ ಯಕ್ಷಚಿತ್ರ ಅಲಕೆಯನು
ಚಿತ್ರಿಸಿಹುದು
ದೇವಜಾತಿ ಕೆಳಗಿಳಿದರೇನು ಅದು ಬಾನ
ಹತ್ತಿರಿಹುದು ||[2]

೨

ಸಂಸ್ಕೃತ ಸಾಹಿತ್ಯ ಹಿಮಗಿರಿಯ ಶೃಂಗಗಳಲ್ಲಿ ಕಾಳಿದಾಸನೆಂಬುದೊಂದು ಉತ್ತುಂಗ ಶಿಖರ–ಕೈಲಾಸ ಶ್ರೇಣಿ. ಅವನಿಗೆ ಕೈಮುಗಿಯದ ಭಾರತೀಯ ಕವಿಯಿಲ್ಲ. ಅವನನ್ನು ಮೆಚ್ಚದ ವಿಮರ್ಶಕನಿಲ್ಲ. ಕಾಳಿದಾಸನ ದೃಷ್ಟಿ ಸೃಷ್ಟಿ ಎರಡೂ ವಿಶ್ವವ್ಯಾಪಿ; ನೆಲದಮೇಲೆ ದೃಢವಾಗಿ ನಿಂತಂತೆ ಆಕಾಶದ ತುಂಬ ಕಲ್ಪನೆಯ ಕಲಾವಿಲಾಸದಲ್ಲಿಯೂ ವ್ಯಾಪಿಸಿನಿಂತಿವೆ. ಕಾಳಿದಾಸನಿಗೆ ಸರಿಸಮನಾದ ಇನ್ನೊಬ್ಬ ಕವಿಯಿಲ್ಲವೆಂದರೂ ನಡೆಯುತ್ತದೆ:

ಸುಕವಿಜನ ಗಣನೆಯೊಳ್ ದ
ತ್ತ ಕನಿಷ್ಠಿಕನಾಗೆ ಕಾಳಿದಾಸಂ ಮೊದಲೆಂ
ದು ಕರಂ ಬಣ್ಣಿಪರದಱಿಂ
ದೆ ಕಾಳಿದಾಸಂಗೆ ದಾಸರೆನಿಪರ್ ಕವಿಗಳ್ ||[3]

ಕನ್ನಡದ ಆದಿಕವಿಗಳು ಪಂಪ ಪೊನ್ನ ರನ್ನ ಆದಿಯಾಗಿ ಅನೇಕರು ಕಾಳಿದಾಸನ ಉಕ್ತಿಗಳಿಗೆ—ಕಾವ್ಯರಸಧಾರೆಗೆ ಮೆಚ್ಚಿ ಮಾರುಹೋಗಿದ್ದಾರೆ. ಕಾಳಿದಾಸನ ಕೃತಿಗಳನ್ನು ಅಭ್ಯಸಿಸಿದ ಅವರು ಇಷ್ಟ ಬಂದಲ್ಲಿ ಕನ್ನಡಿಸಿಕೊಂಡಿದ್ದಾರೆ. ರವಿಕೀರ್ತಿ ಕಾಲಿದಾಸನಿಗೆ ತಾನು ಸಮನೆಂದು ಹೇಳಿದ್ದಾನೆ[4], ಪೊನ್ನ ಕಾಳಿದಾಸನಿಗೆ ನಾಲ್ವಡಿ ಮೇಲು ಎಂದು ಹೇಳಿದ್ದಾನೆ. ಇವರೆಲ್ಲರದೂ ಅಹಂಮಿಕೆಯಿಂದ ಕೂಡಿದ್ದು. ಬೇಂದ್ರೆ ರುದ್ರಭಟ್ಟನನ್ನು ಅನುಸರಿಸಿ ತಮ್ಮನ್ನು ದಾಸನೆಂದೇ ಹೇಳಿದ್ದಾರೆ. ತಮ್ಮ ನುಡಿಗೆ "ಸುಕವಿ ರಸದಾಸಿಯಾಗಿ ದುಡಿ" ಎಂದೇ ಹೇಳಿದರು. ಅವರ ಪ್ರಕಾರ ಕಾಳಿದಾಸನಿಂದ ಅವರಿಗೆ ಆದ ಲಾಭ:

ನನ್ನ ಮನದ ಕಜ್ಜಳವ ಕಳೆದು ಹೊಸ ಬೆಳಕು
ಹೊತ್ತಿ ಕುಡಿಗೆ
ನಾನು ಹಿಗ್ಗಿದೆನು ನಿನ್ನ ಕೃತಿಯನಿಟ್ಟಂತೆ ನನ್ನ
ಮುಡಿಗೆ
"ಹೋಗು ಸುಕವಿ-ರಸ-ದಾಸಿಯಾಗಿ ದುಡಿ"
ಎಂದೆ ನನ್ನ ನುಡಿಗೆ
ಮಾತಿನಲ್ಲೆ ಮೂಲೋಕ ಸೃಜಿಸುವಾ ನಿನ್ನ
ಪ್ರತಿಬೆಯಡಿಗೆ ||

---

[2] ಪ್ರೊ|| ದ. ರಾ. ಬೇಂದ್ರೆ, ಮೇಘದೂತ, ಪು. ೩ (ಪೀಠಿಕೆ), ಸಾಧನ ಮುದ್ರಣಾಲಯ, ಎರಡನೇ ಮುದ್ರಣ, ಜೂನ್ ೧೯೫೩.

[3] ರುದ್ರಭಟ್ಟ 'ಜಗನ್ನಾಥ ವಿಜಯಂ' (ಸಂ. ಎಸ್‌ಜಿಎನ್; ಟಿಎನ್‌ಎಸ್‌ಎನ್ ಇ.) ೧-೯, ಪು. ೨ (೧೯೭೬).

[4] ಇಮ್ಮಡಿ ಪುಲಿಕೇಶಿಯ ಮಂತ್ರಿ ರವಿಕೀರ್ತಿಯ ಐಹೊಳೆ ಶಾಸನ: ರವಿಕೀರ್ತಿಃ ಕವಿತಾಶ್ರಿತ ಕಾಳಿದಾಸ ಭಾರವಿಕೀರ್ತಿಃ || Ep. Ind. VI, p. 6ff.

ಹಿಂದಾಗಲಿಲ್ಲ, ಮುಂದಾಗಲಾರ, ಕವಿ
ಕಾಳಿದಾಸ ನೀನು
ಶೃಂಗಾರದಿಂದೆ ನವಭಕ್ತಿರಸವ ಹೊಮ್ಮಿಸುವ
ದಿವ್ಯ ಭಾನು
ರಸವತಿಯು ನಿನ್ನ ಸರಸತಿಯು, ಸವಿಗೆ ತುಟಿ
ಮುದ್ದು ಹಾಲುಜೇನು
ಕನ್ನಡದೊಳಿಂದು ಕನ್ನಡಿಸಿದಂತೆ ಮೂಡಿರು
ಮಳಿಲ್ಲಿ ತಾನು ॥

ಬೇಂದ್ರೆ ಕಾಳಿದಾಸನ ನುಡಿದಾಸರಾದರೂ ಅನುವಾದಿಸಿದ್ದು ಒಂದೇ ಕೃತಿ. ಕಾಳಿದಾಸನು ಬರೆದದ್ದು ಸದ್ಯ ಎಲ್ಲರೂ ಒಪ್ಪಿರುವಂತೆ ಒಟ್ಟು ಕೃತಿಗಳು ಏಳು :

ಮಹಾ ಕಾವ್ಯಗಳು : ಎರಡು :
೧) ಕುಮಾರ ಸಂಭವ.
೨) ರಘುವಂಶ.

ಖಂಡ ಕಾವ್ಯಗಳು : ಎರಡು :
೧) ಋತುಸಂಹಾರ.
೨) ಮೇಘದೂತ.

ನಾಟಕಗಳು : ಮೂರು :
೧) ಮಾಲವಿಕಾಗ್ನಿ ಮಿತ್ರ.
೨) ವಿಕ್ರಮೋರ್ವಶೀಯ.
೩) ಅಭಿಜ್ಞಾನ ಶಾಕುಂತಲ.

ಋತು ಸಂಹಾರ ಹಾಗೂ ಮಾಲವಿಕಾಗ್ನಿ ಮಿತ್ರ ಪ್ರಾಯಃ ಆರಂಭದ ಕೃತಿಗಳು. ಶೃಂಗಾರದ ಎರಡು ಮುಖಗಳನ್ನೂ ಕಾಳಿದಾಸ ಚಿತ್ರಿಸಿದ್ದಾನೆ:

ಶೃಂಗಾರ
↓ ↓
ಸಂಭೋಗ ಶೃಂಗಾರ ವಿಪ್ರಲಂಭ ಶೃಂಗಾರ

ನಾಯಕ ನಾಯಕಿ ಹತ್ತಿರವಿದ್ದರೆ ಸಂಭೋಗ ಶೃಂಗಾರ; ಅವರು ಅಗಲಿದ್ದರೆ ವಿಪ್ರಲಂಭ ಶೃಂಗಾರ. ಅರ್ಥಾತ್ ನಾಯಕ ನಾಯಕಿಯರ ಅಗಲಿಕೆಗೆ ಸಂಭೋಗ ಶೃಂಗಾರದಲ್ಲಿ ಜಾಗವಿಲ್ಲ; ಮತ್ತೆ ವಿರಹಕ್ಕೆ ಎಡೆಯಿಲ್ಲ. 'ಸಂಭೋಗ' 'ಕಾಮ' ಇವುಗಳಿಗೆ ಸಂಸ್ಕೃತ ಭಾಷೆಯಲ್ಲಿ ವಿಸ್ತಾರವಾದ ಅರ್ಥವಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಸಂಕುಚಿತಾರ್ಥವನ್ನು ಪಡೆದಿರುವುದರಿಂದ ಕನ್ನಡದ ಶ್ರೀಸಾಮಾನ್ಯರು ಸಂಸ್ಕೃತದಲ್ಲಿಯ ವಿಸ್ತಾರವನ್ನು 'ಸಂಭೋಗ ಶೃಂಗಾರ'ಹಾಗು 'ಕಾಮ' ಶಬ್ದಗಳಿಗೆ ತೀವ್ರದಲ್ಲಿಅರ್ಥಗ್ರಹಣೆಯಲ್ಲಿಪಡೆಯರು.ಪ್ರಥಮದಲ್ಲಿ ಸಂಕುಚಿತಾರ್ಥಗಳೇ ಕಾಣುತ್ತವೆ. ಸಂಭೋಗ ಶೃಂಗಾರದಲ್ಲಿ ಪ್ರಿಯರ ಸೇರಿಕೆ, ದರ್ಶನ, ಸಲ್ಲಾಪ, ಸಮಾಗಮ ಮೊದಲಾದುವೆಲ್ಲ ಸೇರುತ್ತವೆ. ಇದರ ನಿರೂಪಣೆಯಲ್ಲಿ ಅಶ್ಲೀಲತೆಯ ದೋಷ ಸಂಘಟಿಸದಂತೆ ಕವಿ ಎಚ್ಚರದಿಂದ ಇರಬೇಕಾದುದು ಅವಶ್ಯ. ವಿಪ್ರಲಂಭ ಶೃಂಗಾರದಲ್ಲಿ ಅಗಲಿಕೆ ಮುಖ್ಯ; ಮತ್ತೆ ಆ ಅಗಲಿಕೆಯಲ್ಲೂ ಮುಂದೆ ಸೇರುವ ಪ್ರತ್ಯಾಶೆಅಧಿಕವಾಗಿಯೋ ಅಲ್ಪವಾಗಿಯೋ ಇದ್ದೇ ಇರುತ್ತದೆ. ಅಗಲಿಕೆ ನಿರಂತರವಾದರೆ ಅದು 'ಕರುಣಾರಸ'ದ ವಿಷಯವಾಗುತ್ತದೆ.[೬] ಕಾಳಿದಾಸ ಶೃಂಗಾರದ ಎರಡು ಮುಖಗಳನ್ನು ಬಹು ಸೊಗಸಾಗಿ ಚಿತ್ರಿಸಿದ್ದಾನೆ. ಸಂಭೋಗ ಶೃಂಗಾರಕ್ಕೆ ಉದಾಹರಣೆ 'ಋತು ಸಂಹಾರ' ಮತ್ತು ವಿಪ್ರಲಂಭ ಶೃಂಗಾರಕ್ಕೆ ಉದಾಹರಣೆ 'ಮೇಘದೂತ' ಇಲ್ಲವೆ 'ಮೇಘಸಂದೇಶ.' 'ಋತುಸಂಹಾರವು ನೂತನ ಪ್ರಣಯಿಗಳ ಪ್ರೇಮ ಪಂಚಾಗ'.

೬ ಪ್ರೊ॥ ತೀ.ನಂ.ಶ್ರೀ. 'ಭಾರತೀಯ ಕಾವ್ಯಮೀಮಾಂಸೆ' ಪು. ೪೦೦-೪೦೨ (೧೯೬೧).

ಮೇಘದೂತವು ಪ್ರೇಮದ ಪ್ರತಿಮುಖವಾದ ವಿಪ್ರಲಂಭದ ಸುಕುಮಾರ ಭಾವಗೀತೆ. ಸಂಭೋಗ ಶೃಂಗಾರ ಏಕಾಂತಿಕ. ಪ್ರಾಯಃ ಆ ಕಾರಣದಿಂದಲೇ ಹೆಚ್ಚು ಜನರ ಪ್ರಶಂಸೆಗೆ 'ಋತುಸಂಹಾರ' ಕಾರಣವಾಗಲಿಲ್ಲ. ವಿಪ್ರಲಂಭ ಶೃಂಗಾರ ಅಂತಲ್ಲ. ಅದು ಕಿಂಚಿತ್ ಕರುಣೆಯಿಂದ ಕೂಡಿದ್ದು. ವಿರಹವೇ ಇದರ ಅಂತಸ್ಸತ್ವ. ಆಗಲಿಕೆ ಮುಗಿದು ಒಂದು ದಿನ ತನ್ನ ನಲ್ಲಳೊಂದಿಗೆ ಕೂಡುತ್ತೇನೆ ಎಂಬ ಆಶಾಕಿರಣ ಆಗಲಿನಿಂತ ಯಕ್ಷನ ಹೃದಯದಲ್ಲಿ ಗಟ್ಟಿಯಾಗಿ ನಿಂತಿದೆ. ಮೇಘದೂತ ಕಾವ್ಯದಲ್ಲಿ ಪದ್ಯಗಳು ಎಷ್ಟು ಎಂಬುದು ಒಂದು ಸಮಸ್ಯೆಯೆ. ಡಾ. ಕೆ. ಕೃಷ್ಣಮೂರ್ತಿಗಳು "ಮೇಘದೂತದಲ್ಲೆಲ್ಲ ಒಟ್ಟು ಇರುವ ಪದ್ಯಗಳು ನೂರಿಪ್ಪತ್ತೇ" ಎಂದಿದ್ದಾರೆ.[6] ಪ್ರೊ॥ ಪರಮೇಶ್ವರಭಟ್ಟರು ತಮ್ಮ "ಕನ್ನಡ ಕಾಳಿದಾಸ ಮಹಾ ಸಂಪುಟ" ಗ್ರಂಥದಲ್ಲಿ ೧೧೧ ಪದ್ಯಗಳನ್ನು ಮಾತ್ರ ಅನುವಾದಿಸಿದ್ದಾರೆ.[7] ಆದರೆ ಅವರೇ ಆ ಗ್ರಂಥದಲ್ಲಿ ಸಂಸ್ಕೃತ ಆಕರಗಳನ್ನು ಅಚ್ಚಿಟ್ಟಲ್ಲಿ ೧೨೪ ಪದ್ಯಗಳನ್ನು ಪ್ರಕಟಿಸಿದ್ದಾರೆ (ಪೂರ್ವ ಮೇಘ-೬೭ ಹಾಗೂ ಉತ್ತರ ಮೇಘ-೫೭.[8] ಪ್ರೊ॥ ದ. ರಾ. ಬೇಂದ್ರೆ ಅವರು ತಮ್ಮ ಕನ್ನಡ ಮೇಘದೂತದಲ್ಲಿ ೧೧೬ ಪದ್ಯಗಳನ್ನು ಅನುವಾದಿಸಿದ್ದಾರೆ. (ಪೂ. ಮೆ. ೬೪ ಹಾಗೂ ಉ. ಮೆ. ೫೨-ಒಟ್ಟು ೧೧೬). ಈ ಇಬ್ಬರು ವಿದ್ವಾಂಸರು ತಾವು ಆಧರಿಸಿದ ಮೂಲ ಕೃತಿಯನ್ನು ಅಚ್ಚಾದ ವಿವರಗಳನ್ನು ಕೊಟ್ಟಿದ್ದರೆ ನನ್ನಂತಹ ವಿದ್ಯಾರ್ಥಿಗಳಿಗೆ ತೌಲನಿಕ ಅಧ್ಯಯನಕ್ಕೆ ಸುವಿಚಾರ ಸೋಪಾನ ಪಂಕ್ತಿ ದೊರೆಯುತ್ತಿತ್ತು. ಆ ಸಂಸ್ಕೃತ ವಿದ್ವಾಂಸರಿಗೆ ಪ್ರೊ॥ ಬೇಂದ್ರೆ ಆಗಲಿ ಪ್ರೊ॥ ಭಟ್ಟರೇ ಆಗಲಿ ಇನಿತು ಉಲ್ಲೇಖಿಸಿ ಗೌರವವನ್ನು ಕೊಟ್ಟಿದ್ದರೆ ಏನೂ ಕೋಳುಹೋಗುತ್ತಿದ್ದಿಲ್ಲ. ಈ ಇಬ್ಬರು ವಿದ್ವಾಂಸರ ವಿದ್ವತ್ತನ್ನು ಗಮನಿಸಿದಾಗ ಅವರು ಬಳಸಿದ ಆಧಾರಗಳ ಬಗ್ಗೆ ಅವರ ಮಾತೇ ಕೊನೆಯದು. ಈ ದೃಷ್ಟಿಯಿಂದ ಬೇಂದ್ರೆಯವರು ಬಳಸಿದ ಮೂಲ ಆಕರಗಳನ್ನು ಕುರಿತು ನಾವು ಏನೂ ಹೇಳುವಂತಿಲ್ಲ. ಯಾರದೇ ತೌಲನಿಕ ಅಧ್ಯಯನದ ಮಾತು ಇದಮಿತ್ಥಂ ನಿರ್ಣಯ ಆಗಲು ಸಾಧ್ಯವಿಲ್ಲ. ಯಾವುದೇ ಗ್ರಂಥವನ್ನು ಅನುವಾದ ಮಾಡುವವರು ತಾವು ಆಧರಿಸಿದ ಮೂಲ ಕೃತಿಯ ವಿವರಗಳನ್ನು ನೀಡಬೇಕು. ಈ ಇತಿಮಿತಿಗಳಲ್ಲಿ ಬೇಂದ್ರೆಯವರ ಮೇಘದೂತವನ್ನು ಇಲ್ಲಿ ಪರಿಚಯಿಸುತ್ತಿರುವೆ.

೩

ಮೇಘದೂತ ಒಂದು ಭಾವಗೀತೆ. ಇಲ್ಲಿ ಕಥೆಗೆ ಅಂತಹ ಮಹತ್ವವಿಲ್ಲ. ಕವಿಯ ಮನೋರಂಗವೇ ಈ ಬಗೆಯ ಕಾವ್ಯಕ್ಕೆ ಮೇರೆ. ಅದು ಏನನ್ನು ಬೇಕಾದರೂ ಉಚಿತ ರೀತಿಯಲ್ಲಿ ಕಾವ್ಯದ ಅಂತರಂಗದಲ್ಲಿ ಹೆಣೆಯಬಹುದು. ಕವಿಯ ಹೃದಯಸಾಗರದ ಭಾವತರಂಗದ ನಿಮ್ನೋನ್ನತ ಅಲೆಗಳ

[6] ಡಾ॥ ಕೆ. ಕೃಷ್ಣಮೂರ್ತಿ, ಸಂಸ್ಕೃತ ಕಾವ್ಯ, ಪು. ೨೩೩ (೧೯೫೦).

[7] ಪ್ರೊ॥ ಎಸ್. ವಿ. ಪರಮೇಶ್ವರಭಟ್ಟ, ಕನ್ನಡ ಕಾಳಿದಾಸ ಮಹಾಸಂಪುಟ, ಪು. ೩೬-೬೯.

[8] ಅದೇ ಪು. ೬೫೩-೬೬೪.

ಪ್ರವಾಹವೇ ಈ ಕಾವ್ಯದ ಜೀವಜೀವಾಳ. ಇಲ್ಲಿ ಕವಿತೆಗೆ

"ರಸವೇ ಜನನ
ವಿರಸ ಮರಣ.'

ಕಥೆಯ ಹಂದರ ತುಂಬ ಚಿಕ್ಕದು. ಯಕ್ಷನೊಬ್ಬ ತನ್ನ ಒಡೆಯನ ಕೋಪಕ್ಕೆ ಪಕ್ಕಾಗಿ ಶಾಪಕ್ಕೆ ಒಳಗಾಗಿ ದೂರದ 'ರಾಮಗಿರಿ' ಆಶ್ರಮದಲ್ಲಿ[9] ಶಾಪದಕಾಲವನ್ನು ಕಳೆಯಲು ನಿಯುಕ್ತನಾಗುತ್ತಾನೆ. ಏಕಾಕಿಯಾಗಿ ಅಲ್ಲಿಗೆ ಹೋಗಿ ನಿಲ್ಲುತ್ತಾನೆ. ಕೆಲಕಾಲದಲ್ಲೇ ಸಹಜವಾಗಿ ಅಗಲಿಕೆಯ ನೋವಿನಿಂದ ಬೆಂದು ನಿಲ್ಲುತ್ತಾನೆ. ಈ ನೋವನ್ನು ಒಂದು ವರ್ಷ ಭೋಗಿಸಬೇಕು. ಅರ್ಧಾಂಗಿಯನ್ನು ಅಗಲಿದ ಚಿತ್ತ ಚೇತನಾಚೇತನ ವಸ್ತುಗಳೊಂದಿಗೆ ಒಂದಾಗಿ ಹೋಗುತ್ತದೆ. ಅವನಿಗೆ ನಿಸರ್ಗವೂ ಮನುಷ್ಯನಾಗಿ ಕಾಣುತ್ತದೆ. ಸಖಿಗೆ ಸಂದೇಶವನ್ನು ಕಳಿಸಬೇಕು ಎಂಬ ಆಶೆ ಆಷಾಢದಲ್ಲಿ, ಆಕಾಶದಲ್ಲಿ, ಅಲೆಯಲು ಆರಂಭಿಸಿದ ಮೋಡಗಳನ್ನು ಕಂಡಕೂಡಲೆ ಚಿತ್ತ ಚಲಿತವಾಗುತ್ತದೆ. ಮೋಡವನ್ನು ಮನುಷ್ಯನೆಂದು ಭಾವಿಸಿ ಅಲಕಾನಗರಿಯಲ್ಲಿ ವಾಸಿಸುವ ತನ್ನ ಸತಿಗೆ ಸಂದೇಶ ಕಳಿಸಲು ಆಶಿಸುತ್ತಾನೆ ಯಕ್ಷ. ನಿರ್ಜನ ಪ್ರದೇಶದಲ್ಲಿ ಅವನಿಗೆ ದೂತರೆಲ್ಲಿಂದ ದೊರೆಯಬೇಕು? ಉತ್ತರಾಭಿಮುಖವಾಗಿ ಹೊರಟಿದ್ದ ಮೋಡವನ್ನೇ ಯಾಚಿಸಿ ಅದನ್ನು ಪೂಜಿಸಿ ಮನುಷ್ಯನಂತೆ ಭಾವಿಸಿ ಹೋಗಬೇಕಾದ ದಾರಿಯನ್ನು ತಿಳಿಸುತ್ತಾನೆ:


ಕಾಳಿದಾಸ ಮೇಘದೂತವನ್ನು ಬರೆಯುವದಕ್ಕಿಂತ ಮುಂಚೆ ಕೈಲಾಸಪರ್ವತದ ಯಾತ್ರೆಯನ್ನು ಮಾಡಿದ್ದನೆಂದು ತೋರುತ್ತದೆ(?) ಏಕೆಂದರೆ ಅಷ್ಟು ಅಚ್ಚುಕಟ್ಟಾಗಿ ಆ ದಾರಿಯನ್ನು ವಿವರಿಸಿದ್ದಾನೆ. ಒಂದೊಂದು ಪದ್ಯವೂ ಒಂದೊಂದು ಮುಕ್ತಕ. ಆ ಬೆಟ್ಟಸಾಲು, ಆ ನದೀಪಂಕ್ತಿ, ಆ ನಾಡ ನಿಲವು ಚೆಲುವು, ಒಂದೊಂದೂ ಕಾವ್ಯದ ರಸಲೇಪದ ಘಟಕಗಳಾಗಿವೆ. ಬೇಂದ್ರೆಯವರೂ ಕಾಳಿದಾಸನಿಗೆ ಸರಿಸಮವಾಗಿ ಅನುವದಿಸಿದ್ದಾರೆ; ಅಲ್ಲಲ್ಲಿ ತಮ್ಮ ಸ್ವಂತಿಕೆ, ತಮ್ಮ ನಾಡ ಪರಿಸರ ಏನೆಲ್ಲವನ್ನೂ ಕಾವ್ಯವಾಗಿಸಿದ್ದಾರೆ. ಒಂದು ನಿದರ್ಶನದಿಂದ ಇದನ್ನು ವಿಶದೀಕರಿಸಬಹುದು:

ತಸ್ಮಿನ್ನದ್ರೌ ಕತಿಚಿದಬಲಾ ವಿಪ್ರಯುಕ್ತ
ಸ್ಸಕಾಮೀ
ನೀತ್ವಾ ಮಾಸಾನ್‌ಕನಕವಲಯ ಭ್ರಂಶರಿಕ್ತ
ಪ್ರಕೋಷ್ಠಃ
ಆಷಾಢಸ್ಯ ಪ್ರಥಮ ದಿವಸೇ ಮೇಘಮಾಶ್ಲಿಷ್ಟ
ಸಾನುಂ
ವಪ್ರಕ್ರೀಡಾ ಪರಿಣತಗಜ ಪ್ರೇಕ್ಷಣೀಯಂ
ದದರ್ಶ

ಅಗಲಿ ಇದ್ದರೂ ಅನಿಗೊಂಡಿರಲು
ಗಿರಿಯೊಳಂತು ಇಂತು
ಕೆಲವೆ ತಿಂಗಳಲಿ ಚಿನ್ನಕಡಗ ಮೊಳಕೈಗೆ ಸರಿದು
ಬಂತು
ಕಾರಹುಣ್ಣಿವೆಯ ಮಾರನೆಯ ದಿನವೆ ಮೋಡ
ಕೋಡನಪ್ಪಿ
ಕಂಡಿಕೊಡ್ಡಿನೊಡ ಡಿಕ್ಕಿಯಾಡುವಾ ಆನೆ
ಬೆಡಗನೊಪ್ಪಿ ॥

---

[9] 'ರಾಮಗಿರಿ' ಆಶ್ರಮದ ಸ್ಥಳದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ನಾಗಪುರದ ಬಳಿಯ 'ರಾಮಟೇಕ' ಎಂದು ಕೆಲವರು ಮತ್ತು 'ಚಿತ್ರಕೂಟ' ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.



ಮೂಲದ "ಆಷಾಢಸ್ಯ ಪ್ರಥಮದಿವಸೇ" ಬೇಂದ್ರೆಯವರಲ್ಲಿ "ಕಾರಹುಣ್ಣಿವೆಯ ಮಾರನೆಯ ದಿನವೆ" ಎಂದು ಅನುವಾದಗೊಂಡಿದೆ. ಬೇಂದ್ರೆಯವರ ಪರಿಸರದಲ್ಲಿ ಎಂದರೆ ಉತ್ತರ ಕರ್ನಾಟಕದಲ್ಲಿ ಕಾರಹುಣ್ಣಿವೆಯ ಹಬ್ಬಕ್ಕೆ ಒಂದು ವಿಶೇಷ ಮಹತ್ವವಿದೆ. ಮಳೆಗಾಲದ ಆರಂಭ ಎಂದೂ ಭಾವಿಸಬಹುದು. ಒಕ್ಕಲು ಮಕ್ಕಳು ಆ ದಿವಸ ಎತ್ತುಗಳನ್ನು ಮೈತೊಳೆದು ಪೂಜಿಸಿ ಇತರ ಸಲಕರಣೆಗಳನ್ನು ಜೋಡಿಸಿಕೊಂಡು ಬಿತ್ತುವ ಕೆಲಸಕ್ಕೆ ಸಿದ್ಧರಾಗುತ್ತಾರೆ. ಮಂಗಾರ ಸಿಂಗಾರ ಕವಿಗೆ "ಆಷಾಢ...." ಪದಪಂಕ್ತಿಯನ್ನು "ಕಾರಹುಣ್ಣಿವೆ...." ಇತ್ಯಾದಿಯಾಗಿ ಮಾರ್ಪಾಟಕ್ಕೆ ಕಾರಣವಾಗಿದೆ. ಹೀಗೆಯೆ ಒಂದೊಂದು ನುಡಿಯನ್ನು ಅವಲೋಕಿಸಬಹುದು. ಒಂದೊಂದು ನುಡಿಯಲ್ಲೂ ಇರುವ ಅಂತರವನ್ನು ವಿವರಿಸುತ್ತ ಹೋದರೆ ಇದೊಂದು ಪುಸ್ತಕವೇ ಆಗುತ್ತದೆ. ಒಂದು ಮಾತು ಸತ್ಯ. ಮೂಲದಂತೆ ಅನುವಾದವೂ ಸಹೃದಯನಿಗೆ ಸವಿಯನ್ನು ನೀಡುತ್ತದೆ. ಹೃದಯದ ಆಳಕ್ಕೆ ಇಳಿಯುತ್ತದೆ. ಬೇಂದ್ರೆಯವರೇ ಹೇಳಿದ ಹಾಗೆ ಕಾಳಿದಾಸನ ನುಡಿ ಹಿಂದಾಗಲಿಲ್ಲ; ಮುಂದಾಗಲಾರದು—

ಹಿಂದಾಗಲಿಲ್ಲ, ಮುಂದಾಗಲಾರ ಕವಿಕಾಳಿದಾಸ ನೀನು
ಶೃಂಗಾರದಿಂದೆ ನವಭಕ್ತಿರಸವ ಹೊಮ್ಮಿಸುವ ದಿವ್ಯಭಾನು
ರಸವತಿಯು ನಿನ್ನ ಸರಸತಿಯು ಸವಿಗೆ ತುಟಿ ಮುದ್ದು ಹಾಲುಜೇನು
ಕನ್ನಡದೊಳಿಂದು ಕನ್ನಡಿಸಿದಂತೆ ಮೂಡಿರು ವಳಿಲ್ಲಿ ತಾನು ॥

ಬೇಂದ್ರೆಯವರ ಬಂಧವೂ ಅಷ್ಟೆ ಅಂದವಾಗಿದೆ, ಚೆಂದವಾಗಿದೆ ಕಾಳಿದಾಸನಿಗೆ ಒಮ್ಮೆ ಹತ್ತಿರವಾಗಿದೆ, ಒಮ್ಮೆ ದೂರ ಸರಿದಿದೆ ಆದರೂ ಕಾವ್ಯ ರಮಣೀಯತೆಯನ್ನು ಕಳೆದುಕೊಂಡಿಲ್ಲ. ಬಾಣನು ಕಾಳಿದಾಸನನ್ನು ಕುರಿತು ಹೇಳಿದ

ನಿರ್ಗತಾಸು ನವಾಕಸ್ಯ ಕಾಲಿದಾಸಸ್ಯ ಸೂಕ್ತಿಷು
ಪ್ರೀತಿಮಧು ರಸಾದ್ರಾಸು ಮಂಜರೀಷ್ವಿವ ಜಾಯತೇ ॥

ಎಂದಹಾಗೆ ಬೇಂದ್ರೆಯವರ ಸರಳ ಸುಂದರ ನುಡಿಮುತ್ತುಗಳನ್ನು ಕಂಡವರೂ ಆ ನುಡಿ ಮುತ್ತಿನ ಹಾರವನ್ನು ಮರೆಯಲಾರರು.

ರಸವತಿಯು ಆ ಶಾರದೆಗೆ ಭಾಷೆ ಯಾವುದಾದರೇನು
ಭಕ್ತಿಯಿದ್ದಲ್ಲಿ ಒಡಮೂಡಿ ಬರುವಳು ದೇವಿ ತಾನು₃

# ಕೊನೆ ಬಲ್ಲವರಾರು ಕಾಮಾಕ್ಷಿಯೇ ?

## (ಬೇಂದ್ರೆ ಕಾವ್ಯದಲ್ಲಿ ದಾಂಪತ್ಯಪ್ರೇಮದ ಚಿತ್ರಣ)

ಡಾ|| ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಬೇಂದ್ರೆಯವರ ಕಾವ್ಯ ಕನ್ನಡ ಕಾವ್ಯ ಸಮುದಾಯದಲ್ಲೇ ಎಣೆಯಿಲ್ಲದ ಕಾಂತಿಯಿಂದ ಥಳಥಳಿಸುವ ನಕ್ಷತ್ರಗುಚ್ಛದಂತಿದೆ. ಅದು ಹಲವು ಅರ್ಥದ ಪದರಗಳಿಂದ ಕೂಡಿದ ಸ್ವರೂಪವುಳ್ಳದ್ದು. ಕವಿಯ ನಿಜಬಾಳಿನ ಸುಖದುಃಖದ ಕಷಾಯ ಅದರಲ್ಲಿ ಸಾರಗೊಂಡು ಇಳಿದಿದೆ. ಖಾಸಗಿ ಅನುಭವದಲ್ಲಿ ದಕ್ಕಿಸಿಕೊಂಡ ಸತ್ಯದ ಒರೆಗಲ್ಲಿನಲ್ಲಿ ಆ ಕಾವ್ಯ ತನ್ನ ಕಾಲದೇಶಗಳ ಸಮಷ್ಟಿ ಅನುಭವವನ್ನೇ ಒಡಿದು ಪರೀಕ್ಷಿಸಿದೆ. ಆ ಪ್ರಯತ್ನದಲ್ಲಿ ಸ್ವಂತದ ಕಾಲದೇಶಗಳನ್ನೂ ಜಿಗಿದು ಒಟ್ಟು ಮನುಷ್ಯ ಜೀವನದ ಸಾರ್ವಿಕ ಸತ್ಯಗಳನ್ನೆಲ್ಲ ದನಿಸಬಲ್ಲ ರೂಪಕವಾಗಿ ಬೆಳಗಿದೆ.

ಒಬ್ಬ ಕವಿ ಎಷ್ಟೇ ಪ್ರತಿಭಾವಂತನಿರಲಿ ಬಾಳನ್ನು ತಳಮುಟ್ಟ ನೋಡಿದಲ್ಲದೆ, ಅದರ ನೋವು ನಿಷ್ಠೂರಗಳ ಗರ್ಭಕ್ಕೆ ಬಿದ್ದು ಎದ್ದಲ್ಲದೆ ಅವನು ಶ್ರೇಷ್ಠ ಕವಿಯಾಗಲಾರ. 'ಬೆಂದರೆ ಮಾತ್ರ ಬೇಂದ್ರೆಯಾದಾರು' ಎಂಬ ಹೇಳಿಕೆಯ ಅರ್ಥ ಇದೇ. ಸ್ವತಃ ಬೇಂದ್ರೆಯವರೇ ತಮ್ಮ ಕಾವ್ಯದಲ್ಲಿ 'ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ ರಸವಾಗಿ ಹೊಸದಾಗಿ ಹರಿಯುತಿವೆ' ಎಂದು ಹೇಳಿಕೊಂಡರು. ಅವರ ವೈಯಕ್ತಿಕ ಪಾಡುಗಳೆಲ್ಲ ಕವಿತೆಯ ಹದ ಸಾಧಿಸಿ ಬೆರಗುಗೊಳಿಸುವ ಹಾಡಾಗಿ ಹರಿಯಿತು ; ಇಡಿಯ ನಾಡೇ ಕೊರಳಲ್ಲಿ ಧರಿಸಿ ಆನಂದಿಸಬಲ್ಲ ಆಭರಣವಾಯಿತು. ರಸಿಕನ ಸುಖಭೋಜನಕ್ಕಾಗಿ ಅಕ್ಕಿ ಕುದಿಜಲದಲ್ಲಿ ಬೆಂದು ಹಣ್ಣಾಗುವಂತೆ ಲೋಕದ ಆನಂದಸಾಧನೆಗಾಗಿ ಏನೆಲ್ಲ ಪಾಡು ಪಡಬೇಕಾಗುವುದು ಯಾವನೇ ಮಹಾಕವಿಯ ಹಣೆ ಬರಹ. ಅದು ಅವನ ಭಾಗ್ಯ, ದೌರ್ಭಾಗ್ಯ ಎರಡೂ ಹೌದು.

ಬೇಂದ್ರೆಕಾವ್ಯ ಮೂರ್ತಿಕರಿಸಿರುವ ಮಾನವಾನುಭವಗಳು ಎಷ್ಟೋ ಇವೆ. ಅವುಗಳಲ್ಲಿ ಒಂದನ್ನಷ್ಟೇ, ನಿದರ್ಶನಕ್ಕೆಂಬಂತೆ ಇಲ್ಲಿ ಪರಿಶೀಲಿಸಬಹುದು. ದಾಂಪತ್ಯದಲ್ಲಿ ಅರಳಿದ ಗಂಡು ಹೆಣ್ಣುಗಳ ಸ್ನೇಹ ಸಂಬಂಧವನ್ನು ಸ್ವವಿಶಿಷ್ಟವೆಂಬಂತೆ ಹಾಡಿದ ಕವಿಗಳು ಅನೇಕರಿದ್ದಾರೆ. ಆದರೆ ಬೇಂದ್ರೆ ಕಾವ್ಯದಲ್ಲಿ ಅದು ಸಾಧಿಸುವ ಎತ್ತರ ವೈವಿಧ್ಯಗಳು ವಿಸ್ಮಯ ಕವಿಸುವಷ್ಟು ಮಹತ್ತ್ವದ್ದಾಗಿವೆ. ಅಲ್ಲಿ ತಾವು ಪ್ರೀತಿಸಿದ ಜೀವದ ಅಪ್ಪುಗೆಯಲ್ಲಿ ಭಾವಪರವಶರಾಗಿ, ಬಡತನದ ಉರಿಬಿಸಿಲನ್ನೂ ಬೆಳುದಿಂಗಳಾಗಿ ಮಾಡಿ

ಕೊಂಡ ಗಂಡು ಹೆಣ್ಣುಗಳಿದ್ದಾರೆ. ಶಂಕೆ ಅಹಂಕಾರಗಳಲ್ಲಿ ಸುಟ್ಟು ಕರಕಾಗುತ್ತ, ಮಾತಿನಲ್ಲೇ ಒಬ್ಬರನ್ನೊಬ್ಬರು ಪರಚುತ್ತ, ಆ ದೆವ್ವಗತ್ತಲಲ್ಲೂ ವಿವೇಕದ ಕಿರಣ ಸುಳಿದಾಗ ನಾಚುತ್ತ ಸ್ವವಿಮರ್ಶೆಯಲ್ಲಿ ನಿಂತವರಿದ್ದಾರೆ. ಕ್ರೂರವಾಸ್ತವದ ಉರಿಗೆ ಸಿಕ್ಕಿ, ಬಿಸಿಬಾಣಲೆಗೆ ಬಿದ್ದ ಹುಳುವಿನಂತೆ ತಳಮಳಿಸುತ್ತಲೇ ಪರಸ್ಪರ ಸಂತೈಸಿಕೊಂಡು ಸೂತ್ರ ಹರಿಯದಂತೆ ಕಾಪಾಡಿಕೊಂಡವರಿದ್ದಾರೆ. 'ಒಡಲ ನೂಲಿನಿಂದ ಜೇಡ ನೇಯುವಂತೆ ಜಾಲ' ಬೇಂದ್ರೆ ಇದನ್ನೆಲ್ಲ ತಮ್ಮ ಅನುಭವ ಕಲ್ಪಕತೆಗಳ ಕೂಡಲಸಂಗಮದಿಂದ ಸಾಧಿಸಿದ್ದಾರೆ.

ವೈವಾಹಿಕ ಜೀವನದ ಸಂತೋಷ ನೆಮ್ಮದಿಗಳು ಸುಖಸಾಧನಗಳ ಸಮೃದ್ಧಿಯಿಂದ ಸೃಷ್ಟಿಯಾಗುವಂಥದಲ್ಲ. ಎಲ್ಲ ಆನಂದದ ಮೂಲ ಒಲವು ಮಾತ್ರವೇ. ಇದು ಬೇಂದ್ರೆ ಕಾವ್ಯ ಕೂಗಿ ಸಾರುವ ಸತ್ಯಗಳಲ್ಲಿ ಒಂದು. ಈ ಸತ್ಯದ ಕಾಣ್ಕೆ ಬಹಳ ಹಳೆಯದಾದರೂ ಬೇಂದ್ರೆ ಕಾವ್ಯ ಅದನ್ನು ಕಾಣುವ ಮತ್ತು ಕಾಣಿಸುವ ರೀತಿ ಮಾತ್ರ ಅಪೂರ್ವವಾದದ್ದು. ಬಡವನ ಕೈಹಿಡಿದರೂ ಒಲವಿನ ಭಾಗ್ಯ ಕಂಡ ಹೆಣ್ಣು ಹೇಳುವ ಮಾತು ಇದು :

> ನಾನು ಬಡವಿ ಆತ ಬಡವ
> ಒಲವೆ ನಮ್ಮ ಬದುಕು,
> ಬಳಸಿಕೊಂಡೆವದನೆ ನಾವು
> ಅದಕು ಇದಕು ಎದಕು.
>
> ಆತ ಕೊಟ್ಟ ವಸ್ತು ಒಡವೆ
> ನನಗೆ ಅವಗೆ ಗೊತ್ತು
> ತೋಳುಗಳಿಗೆ ತೋಳಬಂದಿ
> ಕೆನ್ನೆ ತುಂಬ ಮುತ್ತು.

ಇಂಥ ತಿಳುವಳಿಕೆ ಎಂಥ ಐಶ್ವರ್ಯವನ್ನೂ ನಾಚಿಸೀತು ! ತನ್ನವನ ಪ್ರೇಮದ ಕುರುಹುಗಳೇ ಮುತ್ತು ರತ್ನಗಳೆಂದು ಬೀಗುವ ಪ್ರೀತಿ ಕಾತರೆಯಾದ ಹೆಣ್ಣು ದಾಂಪತ್ಯದಲ್ಲಿ ಸಾಧಿಸುವ ಹದ ಇದು. ಇಂಥ ನಿಲುವಿಗೆ ಮೂರನೆಯವರ ಸಿರಿಸಂಪತ್ತಿನತ್ತ ಗಮನವೇ ಇಲ್ಲ. ಅದರೊಡನೆ ಹೋಲಿಕೆಗೇ ತೊಡಗದ ದಿವ್ಯನಿರ್ಲಕ್ಷ್ಯ ಅದರದ್ದು. ತನ್ನದೇನಿದೆಯೋ ಅದೇ ಬೇಕಾದಷ್ಟಾಯಿತು. ಇಂಥ ದೃಷ್ಟಿಗೆ

> ಎಷ್ಟೆ ಇರಲಿ, ಅಷ್ಟೆ ಮಿಗಿಲು,
> ತಮ್ಮ ಕಿರಣ ತಮಗೆ ಹಗಲು
> ಉಳಿದ ಬೆಳಕು ಕತ್ತಲು.

ಎನಿಸುತ್ತದೆ. ಅಷ್ಟೇ ಅಲ್ಲ

> ಮುತ್ತು ರತುನ ಹೊನ್ನು ಎಲ್ಲ
> ಕಲ್ಲಮಣ್ಣ ವೈಭವ,
> ಬರಿಯ ಸೋಕು, ಒಂದು ಝೋಕು
> ಬದುಕಿಗೊಂದು ಜಂಬವು,
> ಒಲವೆ ಮೂಲ ಬಿಂಬವು.

ಎನ್ನಿಸಿಯೂ ಬಿಡುತ್ತದೆ. 'ಮರದ ಅಡಿಗೆ ಗುಡಿಸಲಿರಲಿ ಅಲ್ಲೆ ಒಲವು ಮೆರೆಯದೇ ?' ಎನ್ನುವ ಈ ಭಾವಪರವಶ ಬಾಳಿಗೆ 'ಸಪ್ತನಾಕ ಸಪ್ತನರಕ'ಗಳೂ ಕೂಡ ಒಲವಿನ ಬೆಳಕು ಕತ್ತಲೆಗಳೇ ಆಗಿವೆ !

ಆದರೆ ಯಾವುದೇ ದಾಂಪತ್ಯ ಇಂಥ ಬೆಳಕಿನಲ್ಲೇ ಇಡೀ ಬಾಳು ಸಾಗಿಸಲಾರದು. ಅಥವಾ ಎಲ್ಲ ದಾಂಪತ್ಯಗಳಿಗೂ ಆ ಭಾಗ್ಯ ಇರಲಾರದು. ಪ್ರತಿ ಹಗಲನ್ನೂ ಬೆನ್ನಟ್ಟುವ ಇರುಳೊಂದು ಇದ್ದೇ ಇದೆ. 'ನಾನೊಂದ ನೆನೆದರ ನೀನೊಂದ ನೆನೆಯುತಿ' ಎಂಬ ಕವಿತೆಯಲ್ಲಿ ದಾಂಪತ್ಯ ಜೀವನದ ಅಂಥ

ಮತ್ತೊಂದು ಮಗ್ಗಲು ಅನಾವರಣವಾಗುತ್ತದೆ. ಹೊರಗಿನ ಸುಖಸಾಧನಗಳೆಲ್ಲ ಇದ್ದರೂ ಪ್ರೀತಿಯಲ್ಲಿ ಬೆಸೆದುಕೊಳ್ಳಲಾಗದ ಗಂಡು ಹೆಣ್ಣುಗಳ ಚಿತ್ರ ಅದು. ತಲೆತುಂಬ ಪ್ರೇಮದ ಕನಸು ತುಂಬಿಕೊಂಡು ತನ್ನ ಹೆಣ್ಣಿನ ಪ್ರೀತಿಗೆ ಕಾತರನಾಗಿದ್ದ ಗಂಡು 'ಅರಸತೂಕದ ಹೆಣ್ಣಿನ ಸಿಟ್ಟು ಸೆಡವುಗಳಿಗೆ ಸಿಕ್ಕಿ ತ್ರಸ್ತನಾಗಿದ್ದಾನೆ. ಅವನ ಮಬ್ಬು ಇಳಿದುಹೋಗಿದೆ, ಕಟ್ಟಿಕೊಂಡಿದ್ದ ಸವಿಗನಸೆಲ್ಲ ಹರಿದುಹೋಗಿದೆ; ಹೆಣ್ಣು ಸಿಡುಕುತ್ತಲೇ ಕೊಟ್ಟ 'ಸವಿಸತ್ತ ತಾಂಬೂಲ' ಬರೀ ಸೊಪ್ಪೆನ್ನಿಸಿ ದವಡೆಯಲ್ಲೇ ನಿಂತು ಬಿಟ್ಟದೆ! ಭ್ರಮನಿರಸನಗೊಂಡ ಗಂಡು ಕೇಳುತ್ತದೆ–

ಎಸ್ತ ಕನ್ನಡಿ ಹರಳು
ಬೆಸುತ್ತ ಕೂಡೀತೇನ?
ಹಸ್ತ ಕರುಳಿನ ಕುಡಿ ಚಿವುಟ
ಕಡೆಗೊಮ್ಮೆ
ಸೊಸ್ತ ಎಂದರು ಫಲವೇನ?

ಕನ್ನಡಿಗಾಜನ್ನು ಒಮ್ಮೆ ಎಸೆದರೆ ತೀರಿತು, ನೂರು ಚೂರಾಗುತ್ತದೆ. ಅದನ್ನು ಮತ್ತೆ ಬೆಸೆದುಕೂಡಿಸಲು ಸಾಧ್ಯವೆ? ಆಗ ಅದರಲ್ಲಿ ಮೂಡುವ ದಾಂಪತ್ಯದ ಬಿಂಬ ತಾನೇ ಎಂಥದು! ಪ್ರತಿ ಸಲ ಹೃದಯ ಚಿವುಟಿ, ರಕ್ತಹನಿಸಿ, ಮತ್ತೆ ಹೊಂದಿಕೊಳ್ಳಲು ಮಾಡುವ ಪ್ರಯತ್ನಕ್ಕೆ ಯಾವ ಅರ್ಥವಿದೆ?

ಭಕ್ತಿಯಲ್ಲಿ ಹೇಗೋ ಪ್ರೇಮದಲ್ಲೂ ಹಾಗೇ ಬುದ್ಧಿ ತರ್ಕಗಳು ಭಾವನೆಗೆ ಎಡೆ ಬಿಟ್ಟು ನಿಲ್ಲಬೇಕು. ಇದು ಬೇಂದ್ರೆಯವರ ಪ್ರೇಮವ್ಯಾಖ್ಯಾನಕ್ಕೂ ಸಲ್ಲುವ ಒಂದು ಮುಖ್ಯ ಮಾತು. ಆಡಿದ ಮಾತನ್ನೆಲ್ಲ ತರ್ಕದ ಕತ್ತಿಯಲ್ಲಿ ಸಿಗಿಯುತ್ತ, ಬುದ್ಧಿಯ ಬಡಿಗೆಯಿಂದ ಜಜ್ಜುತ್ತ ಹೋಗುವ ಗಂಡು ಹೆಣ್ಣುಗಳಿಗೆ ಕಡೆಗೆ ದಕ್ಕುವುದು ಅಜ್ಜಿ ಬಜ್ಜಿಯಾಗಿ ಮುಖ ಕೆಡಿಸಿಕೊಂಡ ಸೊಟ್ಟ ಪ್ರತಿಷ್ಠೆ ಮಾತ್ರವೇ. ಈ ವಿವೇಕವಿರುವ ಗಂಡೊಂದು ಸದಾ ಎದುರುವಾದಿಸುವ ತನ್ನ ಹೆಣ್ಣಿನೆದುರು ಕೋಪ, ದೈನ್ಯ, ಕಾತರತೆ ಎಲ್ಲ ಬೆರೆತ ವಿಹ್ವಲದನಿಯಲ್ಲಿ ಬೇಡುತ್ತದೆ.

ಅಡದಿರು ಮನದನ್ನೆ
ಎನಗೆ ಇದಿರಾಡದಿರು,
ವಾದಕ್ಕೆ ಬೇಸತ್ತು
ಮರ್ಮಘಾತಕ್ಕೆ ಸತ್ತು
ಉಳಿದು ಬಂದೆ;
ಎಲ್ಲಿಹುದು ತಿಳಿವಳಿಕೆ
ಜೀವನದ ಸಲುವಳಿಕೆ
ಎಂದು ತಳಮಳಿಸಿ ನೀರಡಿಸಿ ಬಂದೆ.
ಹೇಳುತಿರೆ ಹೂಂ ಎನ್ನು,
ಒರೆದು ನೋಡೀ ಹೊನ್ನು,
ಹೀಗೆನಲು ಹಾಗೆಂದು
ಬೆಂದ ಹೆಣವನೆ ಕೊಂದು
ಭೂತಲೀಲೆಯುಲೀಗ
ತೊಡಗಬೇಡ;
ಹೃದಯುವನು ರಣರಂಗ
ಮಾಡಬೇಡ.

ದಾಂಪತ್ಯಕ್ಕೆ ಅಗತ್ಯವಾದದ್ದು 'ವಾದವಿವಾದ'ವಲ್ಲ, ಎರಡು ಹೃದಯಗಳ 'ಜೀವಸಂವಾದ' ಅಂಥ ದಾಂಪತ್ಯ 'ಒಂದುಸಿರೆತಾನಾಡಿದಂತೆ ಇಹುದು.' ಅದರ ಸ್ವರೂಪ ಇಡಿಗಾಳಿನಂತೆ ಅಖಂಡವಾದದ್ದು. ಅದು ಒಮ್ಮೆ ಸಿಡಿದು ಬೇಳೆಯಾಯಿತೋ ಮುಗಿಯಿತು. ಬೇಳೆ ಕೂಡಿ ಮತ್ತೆ ಕಾಳಾಗುವುದೆಲ್ಲಿ ಬಂತು? ಅಲ್ಲದೆ ಯಾವುದೇ ದಾಂಪತ್ಯಕ್ಕೆ ಅನುರಾಗ ಹೊರಿಸದ ಒಂದು

ಕರ್ತವ್ಯವೂ ಇದೆ. ಮುಂದೆ ಬರಲಿರುವ ಪೀಳಿಗೆಯ ಹೊಣೆ ಹಿತಸಾಧನೆಗಳು ಅದರದ್ದೇ. ಹಾಗೆಂದೇ ಗಂಡು ಹೇಳುತ್ತದೆ.

ಹೊಸ ಹುಟ್ಟು ಬರುವುದಿದೆ
ಇನ್ನು ಮುಂದೆ,
ಆಗೋಣ ಆ ಜಗದ
ತಾಯಿತಂದೆ.

ಇತರ ಪಾತ್ರಗಳ ಮರೆಗೆ ನಿಂತು ಜೀವನ ಸಖ್ಯದ ಮಾತಾಡಿದ ಬೇಂದ್ರೆ ತಮ್ಮ ಆತ್ಮ ಕಥನವಾದ ಸಖೀಗೀತದಲ್ಲಿ ತಾವೇ ಒಂದು ಪಾತ್ರವಾಗಿ ಮಾತಾಡುತ್ತಾರೆ. ಬಾಳುವು ದೇನೂ ಬರಿ ಅನ್ನಕ್ಕಲ್ಲ; ಹೆಣ್ಣಿನೊಲುಮೆ ಬರಿ ಕಾಮಕ್ಕಲ್ಲ; ಬದುಕೆನ್ನುವುದು ಬರಿ ಪ್ರತಿಷ್ಠೆಗಲ್ಲ; ಒಂದು ಜೀವ ಮತ್ತೊಂದು ಜೀವಕ್ಕೆ ಉದ್ದೀಪನವಾಗಿ ಬೆಳಗದಿದ್ದರೆ ಆ ಬಾಳು ಲೆಕ್ಕಕ್ಕಿಲ್ಲ ಎನ್ನುವುದು ಸಖೀಗೀತ ಕಂಡುಕೊಳ್ಳುವ ತತ್ವ.

ಅನ್ನಕ್ಕೆ ಬಾಳಾಗಿ, ಕಾಮಕ್ಕೆ ಹೋಳಾಗಿ
ಮಾನಕ್ಕೆ ಆಳಾಗಿ ಉಸಿರೆಳೆದುದು
ಬಾಳಲ್ಲ, ಬದುಕಲ್ಲ. ಜೀವಕ್ಕೆ ಜೀವ
ಉದ್ದೀಪನವಾದುದೆ ಜೀವನವು.

ಆ ಉದ್ದೀಪನಶಕ್ತಿ ಯಾವುದು? ಅದರ ಹುಟ್ಟು ನೆಲೆ ಗೊತ್ತುಗುರಿ ಯಾವುವು ಎನ್ನುವುದನ್ನು ಕವಿ ಅನನ್ಯವಾದ ಮಾತಿನ ಹೆಣಿಗೆಯಲ್ಲಿ ಹಿಡಿಯುತ್ತಾರೆ.

ಅದು ಇದೆ ಎದೆಯಲ್ಲಿ, ಬೆಳಕಿನ ಬದಿಯಲ್ಲಿ
ರಸಗಂಗಾ ನದಿಯಲ್ಲಿ ಅದರುಗಮು.
ಹೆಸರದಕೆ ಪ್ರೀತಿಯು, ಹಿಗ್ಗಿನ ರೀತಿಯು
ಆತ್ಮದ ನೀತಿಯು ಮಧುಸಂಗಮು,

ಕವಿ ಈ ಗೌರೀಶಂಕರದ ಎತ್ತರಕ್ಕೆ ಹೇಗೋ ಗಾಳಿಯಲ್ಲಿ ತೇಲಿಬಂದವರಲ್ಲ: ಪ್ರತ್ಯಂಗುಲ ನಡೆದು, ಕಷ್ಟ ಸುಖಗಳಲ್ಲಿ ನುರಿದು, ಕಾಯಿಹಣ್ಣಾಗಿ ಬಿರಿದು ಬಂದವರು. ಅವರ ಜೀವನ ಒಬ್ಬ ಅವಧೂತನ ಜೀವನದಂತೆ. ಅದು ಲೌಕಿಕದ ಗೊತ್ತುಗುರಿಗಳಿಂದ ದೂರ ವಾದದ್ದು. ಆದರ್ಶದ ಕನಸುಗಳಿಂದ ಚಾಲಿತ ವಾದದ್ದು. ಸಾಮಾನ್ಯ ಸುಖಾಪೇಕ್ಷೆಗಳಿಂದ ಮುಕ್ತವಾಗಿ ಆನಂದ ಪರ್ಯವಸಾಯಿಯಾದ ಮೌಲ್ಯಗಳ ಬೆನ್ನು ಹತ್ತಿದ್ದು. ಇಂಥ ಕನಸು ಗಾರನ ಕೈಹಿಡಿದ ಹೆಣ್ಣು ಲೋಕದ ಇತರ ದಂಪತಿಗಳಂತೆ ಬಾಳಬೇಕೆಂಬ ಅಪೇಕ್ಷೆ ಇದ್ದವಳಾದಲ್ಲಿ ಅದು ಮರೀಚಿಕೆಯ ಬೆನ್ನು ಹತ್ತಿದಂತೆಯೇ. ಇದನ್ನೆಲ್ಲ ಕವಿ ಅಸಾ ಧಾರಣವೆನ್ನಿಸುವ ಸ್ವವಿಮರ್ಶೆಯಲ್ಲಿ ಪರಿ ಶೀಲಿಸುತ್ತಾರೆ. ಆ ಪರಿಶೀಲನೆ ಅತ್ಯಂತ ಕಲಾತ್ಮಕವಾಗಿ ಹೊಮ್ಮುತ್ತ 'ನೀ ಹಿಂಗ ನೋಡಬ್ಯಾಡ ನನ್ನ' ಎಂಬ ಮಹೋನ್ನತ ಕವಿತೆಯಲ್ಲಿ ಫಲಿಸಿದೆ. ಕೈಹಿಡಿದಾಗ ತನ್ನ ಹೆಣ್ಣು ಏನೆಲ್ಲ ಸುಖದ ಕನಸು ಕಟ್ಟಿಕೊಂಡಿ ದ್ದಳೋ, ಅವೆಲ್ಲ ಉರಿದುಹೋಗುವಂತೆ ಅವಳನ್ನು ಬಾಳಿಸಿಕೊಂಡು ಬಂದ ತನ್ನ ಬಗ್ಗೆ ಆ ಜೀವಕ್ಕೆ ಈಗ ಏನನ್ನಿಸುವುದೋ ಎಂಬ ಖೇದ ಚಿಂತೆಗಳಲ್ಲಿ ಕವಿ ಮಾತಾಡು ತ್ತಾನೆ.

ಧಾರೀಲೆ ನೆನೆದ ಕೈಹಿಡಿದೆ ನೀನು
ತಣ್ಣಗ ಅಂತನ ತಿಳಿದು,
ಬಿಸವೊಲ್ಲಿ ಇನ್ನೂನೂ ಬೂದಿ ಮುಚ್ಚಿದ
ಕೆಂಡ ಇದಂತ ಹೊಳೆದೂ,
ಮುಂಗಿಲsನ ಕಪ್ಪರಿಸಿ ನೆಲಕ ಬಿದ್ದರ
ನೆಲಕ ನೆರಿ ಎಲ್ಲಿನ್ನ ?
ಆ ಗಾದಿ ಮಾತು ನಂಬಿ ನನ್ನ ದೇವರಂತ
ತಿಳಿದಿಯೇನ ನೀ ನನ್ನ ?

ಮದುವೆಧಾರೆಯಲ್ಲಿ ತನ್ನ ಕೈಹಿಡಿದಾಗ ಆವಳಿಗೆ ತಾನು ಉರಿಬೆಂಕಿಯಂಥ ಗಂಡಸಿನ ಕೈಹಿಡಿಯುತ್ತಿದ್ದೇನೆ. ಎಂದು ತಿಳಿದಿರಲಾರದು. ಆಗ ತನ್ನ ಕೈ ಧಾರೆನೀರಿನಿಂದ ಒದ್ದೆಯಾಗಿ ತಣ್ಣಗೆ ಇತ್ತಷ್ಟೆ! ಈಗ ಎಲ್ಲ ತಿಳಿದರೂ ತನ್ನಿಂದ ದೂರವಾಗಲೊಲ್ಲದ ಹೆಣ್ಣು ಈಕೆ. ಸಹಜವೇ ಮುಗಿಲೇ ಕಳಚಿಕೊಂಡು ನೆಲಕ್ಕೆ ಬಿದ್ದರೆ ಆ ನೆಲಕ್ಕೆ ಆಸರೆಯಾಗುವ ಬೇರೊಂದು ನೆಲೆ ಯಾವುದಿದೆ? ಕಾಯಬೇಕಾದ ಗಂಡೇ ಕಷ್ಟಗಳನ್ನು ತಂದೊಡ್ಡುವಾಗ ತನ್ನನ್ನು ಕಾಪಾಡುವ ಬೇರೊಂದು ಶಕ್ತಿ ಎಲ್ಲಿದೆ? ಹೀಗೆಂದು ಈ ಹುಡುಗಿ ಎಲ್ಲ ಸಂಕಟ ನುಂಗಿಕೊಂಡು ನಿಂತಳೋ ಎನ್ನುತ್ತಾರೆ ಕವಿ. ಕೈಹಿಡಿದ ದಿನ ಹುಣ್ಣಿಮೆಯ ಪೂರ್ಣಚಂದ್ರನಂತೆ ಸೌಂದರ್ಯ ತೇಜಸ್ಸುಗಳಿಂದ ಬೆಳಗುತ್ತಿದ್ದ ಆ ಮುಖ ಎಲ್ಲಿ, ಈಗ ಕೈಹಿಡಿದವನಿಂದಲೇ ಸಾವಿರ ಕಷ್ಟಗಳಿಂದ ನಿಸ್ತೇಜಳಾಗಿ, ಪಾಡ್ಯದ ಹಗಲಲ್ಲಿ ಮುಗಿಲಮಧ್ಯೆ ಮುಖ ಮರೆಸಿ ತೇಲುವ ಚಂದ್ರನ ಹೆಣದಂತೆ, ಮಂಕಾದ ಈ ಮುಖ ಎಲ್ಲಿ? ಅಷ್ಟು ದುಃಖವುಂಡೂ ಆದರ ನೋವು ಹಣಿಕದಂತೆ ಸುಳ್ಳುನಗೆಯಿಂದ ಅದನ್ನು ಮರೆಸುತ್ತನಿಂತ ಜೊತೆಗಾತಿಗೆ ಕವಿ ಹೇಳುತ್ತಾನೆ

ನಿನ್ನ ಕಣ್ಣನ್ಯಾಗ ಕಾಲೂರಿ ಮಳೆಯು,
ನಡನಡಕ ಹುಚ್ಚನಗಿ ಯಾಕೆ?
ಹನಿ ಒಡೆಯಲಿಕ್ಕೆ ಬಂದಂಥ ಮೋಡ
ತಡಾಥಂಗ ಗಾಳಿಯ ನೆನಕ
ಅತ್ತಾರೆ ಅತ್ತು ಬಿಡು ಹೊನಲು ಬರಲಿ
ನಕ್ಕ್ಯಾಕ ಮರಸತೀ ದುಕ್ಕ?
ಎವೆ ಬಡಿಸಿ ಕೆಡವು, ಬಿರಿಗಣ್ಣು ಬ್ಯಾಡ
ತುಟಿ ಕಚ್ಚಿ ಹಿಡಿಯದಿರು ಬಿಕ್ಕ.
ನೀ ಹೀಂಗ ನೋಡಬ್ಯಾಡ ನನ್ನ.

ಒಲಿದ ಜೀವದ ಬೆಳಕಿನಲ್ಲಿ ಅರಳಿನಿಲ್ಲುವ ಆತ್ಮಾನಂದದಿಂದ ಹಿಡಿದು, ಬರಲಿರುವ ಜಗದ ತಂದೆತಾಯಿಗಳಾಗಿ ಫಲಿಸಿ ಅದಕ್ಕಾಗಿ ಬಾಳಬೇಕೆನ್ನುವ ಜಗದಾನಂದದವರೆಗೆ ಬೇಂದ್ರೆಯವರ ಪ್ರೇಮ ಪರಿಕಲ್ಪನೆ ಎಲ್ಲ ಮೆಟ್ಟಿಲು ಹತ್ತಿ ಸಾಗುತ್ತದೆ. 'ಮಾರೀ ಕಣ್ಣಿಗೆ ಮರುಳರಾಗಿ ಹಾರಗುದುರೀ ಬೆನ್ನ ಏರಿದ' ಪೋರ ಪೋರಿಯರು ನಲ್ಲನಲ್ಲೆಯರಾಗಿ, ಮನದನ್ನ ಮನದನ್ನೆಯರಾಗಿ, ಕಡೆಗೆ ಸಖಸಖಿಯರಾಗಿ ಪ್ರೇಮದ ಪೂರ್ಣ ದರ್ಶನ ಪಡೆಯುವ ಎತ್ತರದಲ್ಲಿ ಅದು ಕೊನೆ ಮುಟ್ಟುತ್ತದೆ. ಜೀವ ಸಖ್ಯದ ಇನ್ನೊಂದು ತುದಿಯತ್ತ ನಿಂತಾಗ ಆ ಸ್ನೇಹ ಆದಿ ಅಂತ್ಯಗಳ ಎಲ್ಲೆಗೆ ಮೀರಿದ ಒಂದು ಅನಂತಗಾನವೋ ಎನ್ನಿಸುವ ಅತಿಶಯತೆಯಲ್ಲಿ ಹೊಳೆಯುತ್ತದೆ. ಕಾಣಸಲು ಹೊರಟ ಕವಿಗೇ ಅದರ ಕೊನೆ ತಿಳಿಯದು. ಹಾಗೆಂದೇ ಕವಿ ತಮ್ಮ ಸಖೀಗೀತದ ಉದ್ದಕ್ಕೂ ಅಲ್ಲಲ್ಲಿ ನಿಲ್ಲುತ್ತ, ಸಖೀಜೀವವನ್ನು ಮತ್ತೆ ಮತ್ತೆ ಬೆರಗಿನಿಂದ ಕೇಳುತ್ತಲೇ ಹೋಗುತ್ತಾರೆ, ಅದೊಂದು ಕೊನೆ ಕಾಣದ ಪಲ್ಲವಿಯೋ ಎಂಬಂತೆ—

ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ?

# ಬೇಂದ್ರೆಯವರ ಜೀವನ ದರ್ಶನ

**ಡಾ|| ವಿ. ಮುರಾರಿ ಬಲ್ಲಾಳ**

ಹತ್ತೊಂಭತ್ತನೆಯ ಶತಮಾನದ ಅಂತ್ಯ ಮತ್ತು ೨೦ನೆಯ ಶತಮಾನದ ಆರಂಭದ ಕಾಲಘಟ್ಟವನ್ನು, ಭಾರತವು ತನ್ನನ್ನೇ ತಾನು ನೋಡಿಕೊಳ್ಳಲು ಆರಂಭಿಸಿದ ಸ್ವಯಂಜಾಗೃತಿಯ ಕಾಲಘಟ್ಟವೆಂದು ಗುರುತಿಸಬಹುದು. ಉದ್ಯಮೀಕರಣ ಮತ್ತು ಅದರ ಜತೆ ಆಧುನೀಕರಣದ ಪ್ರಭಾವ ಭಾರತದ ಮೇಲೆ ಬೀಳಲು ಆಗ ಆರಂಭವಾಗಿತ್ತು. ಇದರ ಪರಿಣಾಮವಾಗಿ ಭಾರತವು ಆತ್ಮಾಭಿಮಾನದಿಂದ ಮತ್ತು ಆತ್ಮಾವಹೇಳನದ ಮೂಲಕ ಒಟ್ಟೊಟ್ಟಿಗೇ ತನ್ನ ನೆಲೆಯನ್ನು ಕಂಡುಕೊಳ್ಳಲು ಚಡಪಡಿಸುತ್ತಿತ್ತು. ಭಾರತದ ದೀರ್ಘ ಇತಿಹಾಸ-ಸಂಸ್ಕೃತಿಗಳ ಸ್ಮೃತಿಯ ಬಗ್ಗೆ self-conscious ಆದ ಚಿಂತಕರ, ಸಾಹಿತಿಗಳ ಒಂದು ವರ್ಗ, ಭಾರತವನ್ನು ವಿಸ್ಮಯದಿಂದ, ರೋಮಾಂಚನದಿಂದ, ಆತ್ಮರತಿಯಿಂದ ನೋಡುತ್ತಿದ್ದರೆ, ಜತೆಜತೆಗೇ ಇನ್ನೊಂದು ವರ್ಗ ಭಾರತವನ್ನು ಹಸಿವು, ರೋಗ, ಅಜ್ಞಾನ, ಧಾರ್ಮಿಕ ಅಂಧಶ್ರದ್ಧೆಗಳ ಕೂಪವೆಂದು ಗುರುತಿಸುತ್ತಾ ಅಸಹ್ಯ ಪಟ್ಟುಕೊಂಡು ಆತ್ಮಾವಹೇಳನದ ಮೂಲಕ ನೋಡುತ್ತಿತ್ತು. ಆದ್ದರಿಂದಲೆ ೧೯ನೆಯ ಶತಮಾನದಲ್ಲಿ ರಾಮಕೃಷ್ಣ ಪರಮಹಂಸರೂ, ರಾಜಾರಾಮಮೋಹನರಾಯ್ ಅವರೂ ಒಟ್ಟೊಟ್ಟಿಗೆ ಇರುವುದು ಸಾಧ್ಯವಾಯಿತು. ಪ್ರಾಯಃ ಪರಮಹಂಸರ ಅನುಭಾವದರ್ಶನದಲ್ಲಿ ಈ ಎರಡರ ಸಮ್ಮಿಲನವೂ ಇದೆ. ಆದಕ್ಕೇ ಪರಮಹಂಸರಿಗೆ ರಾಜರಾಮಮೋಹನರಾಯ್ ಅವರ ಬಗ್ಗೆ ಒಂದು ನೆಲೆಯಲ್ಲಿ ಬಹಳಷ್ಟು ಕುತೂಹಲವಿದೆ. ಆದರೆ, ಅದೇ ಸಮಯಕ್ಕೆ, 'ಭಾರತವು ಆಧುನೀಕರಣಗೊಳ್ಳಲೇ ಬೇಕಾಗಿರುವುದು ಅನಿವಾರ್ಯ' ಎಂಬ ರಾಜರಾಮಮೋಹನರಾಯ್ ಅವರ ಕಲ್ಪನೆ, ಅವರಿಗೆ ಅಮೂಲ್ಯವಾಗಿ, ಕುಬ್ಜವಾಗಿ ಕೂಡ ಕಾಣುತ್ತದೆ. ತನ್ನ ಅನುಭಾವದ ಉತ್ಕಲತೆಯ ಗಳಿಗೆಯಲ್ಲಂತೂ, ಪರಮಹಂಸರು 'ರಾಯ್' ಅವರ ಬಗ್ಗೆ ತನಗಿದ್ದ ಕುತೂಹಲವನ್ನು ಮೀರಿ ಬಿಡುತ್ತಾರೆ. ಮಾತ್ರವಲ್ಲದೆ ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ರಾಯ್ ಅಪ್ರಮುಖ್ಯರು ಅಂತ ತಿಳಿಯುತ್ತಾರೆ. ಇಂಥ ಅನ್ಯರಿಬ್ಬರೂ ಒಟ್ಟೊಟ್ಟಿಗೇ ಇರಲು ಸಾಧ್ಯವಾದ್ದು, ಅವರ ನಡುವೆ ಸಂವಾದ ಸಾಧ್ಯವಾದ್ದು ಆ ಕಾಲಧರ್ಮದ ವಿಶೇಷ.

ಪ್ರಾಯಃ ವಿವೇಕಾನಂದ ಮತ್ತು ಗಾಂಧಿ, ಭಾರತದ ಈ ರೀತಿಯ ಎರಡು ವಿಭಿನ್ನ ತುಡಿತಗಳ ಒಂದು 'ಸಿಂಥೆಸಿಸ್' ಎಂದು

ಹೇಳಬಹುದೋ ಏನೊ. ಗಾಂಧೀಜಿ ವರ್ಣಾಶ್ರಮವನ್ನು ಒಂದು ನೆಲೆಯಲ್ಲಿ ತಿರಸ್ಕಾರ ಮಾಡುತ್ತಲೇ, ಇನ್ನೊಂದು ನೆಲೆಯಲ್ಲಿ ವರ್ಣಾಶ್ರಮ ಧರ್ಮ ಅಗತ್ಯ ಎಂಬ ಅರ್ಥದಲ್ಲಿ ಮಾತಾಡುತ್ತಾರೆ. ವಿವೇಕಾನಂದರು ಭಾರತದ ಪ್ರಾಚೀನ ಸ್ಮೃತಿಯ ಬಗ್ಗೆ ರೋಮಾಂಚನ ಗೊಳ್ಳುತ್ತಿರುವಾಗಲೇ ಆ ಸ್ಮೃತಿಯಿಂದ ಉದ್ಭವಿಸಿದ ಅಜ್ಞಾನ, ದಾರಿದ್ರ್ಯ, ಅಂಧಶ್ರದ್ಧೆ, ಜಾಡ್ಯ, ಜಾತಿಪದ್ಧತಿಗಳಿಗೆ ಹೇಸಿ, ಅವನ್ನು ಉಗ್ರವಾಗಿ ಪ್ರತಿಭಟಿಸುತ್ತಾರೆ. ಈ ದ್ವಂದ್ವ ೧೯ ನೆಯ ಶತಮಾನದ ಅಂತ್ಯದಿಂದ ೧೯೫೦ರ ವರೆಗಿನ ನವೋದಯ ಕಾಲದಲ್ಲಿದ್ದ ಟಾಗೋರ್, ಪ್ರೇಮಚಂದ್ರ, ಶರಚ್ಚಂದ್ರ ಗಾಂಧಿ, ನೆಹರೂ, ನಮ್ಮ ಕಾರಂತ, ಪುಟ್ಟಪ್ಪ, ಮಾಸ್ತಿ ಮುಂತಾದ ಭಾರತದ ಎಲ್ಲಾ ಮಹಾನ್ ಚಿಂತನ ಶೀಲರನ್ನು ಕಾಡುತ್ತಿತ್ತು. ಆ ಅವಧಿಯಲ್ಲಿ ನಡೆದ ತೀವ್ರ ಆರ್ಥಿಕ ಬದಲಾವಣೆ, ಸಾಮಾಜಿಕ-ಸಾಂಸ್ಕೃತಿಕ ಚಳವಳಿ, ಸ್ವದೇಶೀ ಚಳವಳಿ, ರಷ್ಯಾದ ಕಮ್ಯೂನಿಸ್ಟ್ ಕ್ರಾಂತಿ, ಬೃಹತ್ ಉದ್ಯಮೀಕರಣ, ತಾಂತ್ರಿಕ ಪ್ರಗತಿಯೆ ಮುಂತಾದ ಎಲ್ಲಾ ರೀತಿಯ ಯುಗ ಪರಿವರ್ತಕ ಬದಲಾವಣೆಗಳಿಗೆ, ಈ ಎಲ್ಲಾ ಅಸಾಮಾನ್ಯರೂ ತೀವ್ರವಾಗಿ ಸ್ಪಂದಿಸುತ್ತ ಬಂದರು. ಆಗುತ್ತಿದ್ದ ಬದಲಾವಣೆಗಳಿಂದ ತಾವು ಪ್ರಭಾವಿತರಾಗುತ್ತಲೇ, ದೇಶದ, ಸಾಹಿತ್ಯ, ರಾಜಕೀಯ, ಆರ್ಥಿಕ ಚಿಂತನೆ, ಅಕಾಡೆಮಿಕ್ ಪರಿಸರದಲ್ಲಿ ಬದಲಾವಣೆಗೂ ಕಾರಣರಾದರು. ಆಧುನಿಕತೆಯ ಸಂಕೀರ್ಣತೆಯಲ್ಲಿರುವ ದ್ವಂದ್ವವನ್ನು ಒಟ್ಟಾಗಿ ಗ್ರಹಿಸುವ ಅನಿವಾರ್ಯತೆ ಆ ಕಾಲಕ್ಕಿದ್ದುದರಿಂದ, ಆತ್ಮರತಿ-ಆತ್ಮಾವಹೇಳನಗಳನ್ನು ಜತೆಜತೆಗೆಯೇ ಗ್ರಹಿಸುವ ರೀತಿಯನ್ನು ಆ ಕಾಲದ ಪ್ರಮುಖ ಸಾಹಿತಿಗಳಲ್ಲಿ, ಚಿಂತಕರಲ್ಲಿ ನಾವು ಗಮನಿಸಬಹುದು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ೧೯ನೆಯ ಮತ್ತು ೨೦ ನೆಯ ಶತಮಾನದ ಆರಂಭದ ಈ ದ್ವಂದ್ವದ ಪ್ರಮುಖ ಪ್ರತಿನಿಧಿಗಳೆಂದರೆ ನವೋದಯ ಕಾಲದ ಐದು ಮಹಾನ್ ಲೇಖಕರಾದ ಬೇಂದ್ರೆ, ಕಾರಂತ, ಮಾಸ್ತಿ ಮತ್ತು ಶ್ರೀರಂಗರು. ಇವರೆಲ್ಲರೂ ಆ ಕಾಲದ ಮನೋಧರ್ಮವನ್ನು ಪ್ರತಿಬಿಂಬಿಸುವ ಸಮಾನ ಗುಣಗಳನ್ನು ಹೊಂದಿದ್ದರು. ಇವರು ಅಸಾಮಾನ್ಯ ಲೇಖಕರಾಗಿದ್ದರಿಂದಲೇ ಅವರ ಬರಹಗಳಲ್ಲಿ ಪ್ರಧಾನ ಸಮಾನ ಅಂಶಗಳಿದ್ದುವು. ಅದೇ ಕಾರಣಕ್ಕೆ ಅವರು ತಾತ್ವಿಕತೆಯಲ್ಲಿ ಪ್ರತ್ಯೇಕರೂ ಆಗಿದ್ದರು. ಆದರೂ ಈ ಐದು ಲೇಖಕರಲ್ಲಿ ಅನನ್ಯತೆಯ ಬಗ್ಗೆ ತೀವ್ರ ತುಡಿತವೂ ವ್ಯಕ್ತವಾಗುತ್ತದೆ. ಅವರು ಅನನ್ಯರಾಗಿದ್ದರಿಂದಲೇ ಕೈಗಾರೀಕರಣ ಮತ್ತು ಪಾಶ್ಚಾತ್ಯ ಪ್ರಭಾವದಿಂದ ಸಮಗ್ರ ಭಾರತವೇ ತನ್ನನ್ನು ತಾನು ನೋಡಿಕೊಳ್ಳುವ ನವೋದಯ ಕಾಲಧರ್ಮದ ಪ್ರಮುಖ ಲಕ್ಷಣವಾದ ಭಾರತದ ಬಗ್ಗೆ ಅಭಿಮಾನ ಮತ್ತು ಜಿಗುಪ್ಸೆ ಇವರೆಲ್ಲರಿಗೆ ಒಟ್ಟೊಟ್ಟಿಗೇ ಇದ್ದುವು.

* * *

ಆದರೆ ಬೇಂದ್ರೆಯವರು ನವೋದಯ ಕಾಲದ ಉಳಿದವರಿಗಿಂತ ವಿಶಿಷ್ಟವಾಗಿ ನಿಲ್ಲುವುದು ಸಮಗ್ರವನ್ನು ಸಾಕ್ಷಾತ್ಕರಿಸಿಕೊಳ್ಳುವ ರೀತಿಯಿಂದ. ರಾಮಕೃಷ್ಣ ಪರಮಹಂಸ, ರಮಣರಂತೆ, ಬೇಂದ್ರೆಯ

ವರು ಕೂಡಾ ೧೯ ನೆಯ ಶತಮಾನದ ಅಂತ್ಯ ಮತ್ತು ೨೦ ನೆಯ ಶತಮಾನದ ಆದಿಯ ನವೋದಯದ ಆರಂಭ ಕಾಲಕ್ಕೇ ವಿಶಿಷ್ಟವಾಗಿ ಸಲ್ಲುವ ಲೇಖಕರೆನ್ನಬಹುದು. ಆ ಅನುಭಾವಿಗಳಂತೆ ಬೇಂದ್ರೆಯವರಲ್ಲೂ ಆಧುನಿಕತೆಯ ಖಚಿತ ಛಾಪು (Unmistakable stamp of modernity) ಇತ್ತು. ಪರಮಹಂಸರಂತೆ ಕೆಲವು ವಿಶೇಷ ಅನುಭಾವಿಕ ವಿಲಕ್ಷಣತೆ (Mystic eccentricity) ಗಳು ಇದ್ದ ಬೇಂದ್ರೆಯವರನ್ನು, ಕನ್ನಡದ ನವೋದಯದ ಆರಂಭದ ಸಂತ ಎಂದು ಕರೆಯಬಹುದೋ ಏನೊ. ಬೇಂದ್ರೆಯವರಿಗಿದ್ದ ಅಸಾಧಾರಣವಾದ ವ್ಯಾಪಕತೆ (range) ಇದನ್ನು ಸ್ಪಷ್ಟಪಡಿಸುತ್ತದೆ. ಶಿಷ್ಟದಿಂದ ಪರಿಶಿಷ್ಟದವರೆಗೂ ಅನೇಕ ಸ್ತರಗಳಲ್ಲಿ ಅವರ ಬರಹವು ವಿಶಾಲವಾಗಿ ಹರವಿಕೊಳ್ಳುತ್ತದೆ. ಬೇಂದ್ರೆಗೆ ದಕ್ಕಿದ ಛಂದಸ್ಸಿನ ವೈಭವ, ಮಾತಿನ ಮೋಡಿ ಅನನ್ಯವಾದ್ದು, ಪ್ರಾಯಃ ಸಾಟಿಯಿಲ್ಲದ್ದು. ಸಂಸ್ಕೃತ ಮಂತ್ರಗಳ ಛಂದಸ್ಸಿನ ಗತಿಯಲ್ಲಿ ಕವಿತೆಗಳನ್ನು ಬರೆಯಬಲ್ಲ ಬೇಂದ್ರೆ, ಜಾನಪದ ಲಾವಣಿಗಳನ್ನೂ ಅಷ್ಟೇ ಸಲೀಸಾಗಿ, 'ಆಥೆಂಟಿಕ್' ಆಗಿ, ನವಿರುನವಿರಾಗಿ ಬರೆಯಬಲ್ಲರು. ಇಂಥ ವಿಶಾಲ ಬೀಸು (wide sweep) ಒಬ್ಬ ಲೇಖಕನಿಗೆ ಸಾಧ್ಯವಾದದ್ದು ೨೦ ನೆಯ ಶತಮಾನದ ಸಂಕೀರ್ಣತೆಯಲ್ಲಿ ಮಾತ್ರ. ಬೇಂದ್ರೆಯ ಸ್ವಂತ ವೈಶಿಷ್ಟ್ಯವು ಆ ಕಾಲದ ಸಂಕೀರ್ಣ ಸಂಸ್ಕೃತಿಯ ಪರಿಣಾಮವೆಂದು ಕೂಡ ಹೇಳಬಹುದು. ಆದರೂ ಬೇಂದ್ರೆಯವರು ಕಾಲವನ್ನು ಮೀರಿ ಬೆಳೆದು ಕಾಲಾತೀತರಾದ ಅಪೂರ್ವ ಕವಿಯೂ ಹೌದು.

ಬೇಂದ್ರೆಯವರು ತನ್ನ ಕಾಲದ ಆಧುನಿಕತೆಯ ಹೊಸಗಾಳಿಗೆ ಸಾಕಷ್ಟು ತೆರೆದುಕೊಂಡವರು. ವಿಜ್ಞಾನದ ಬಗ್ಗೆ ಅವರಿಗೆ ಕುತೂಹಲವಿತ್ತು. ಗಾರುಡಿಗ ವಿದ್ಯೆಯಂತೆ ವಿಜ್ಞಾನದ ಚಮತ್ಕಾರಗಳು ಅವರಿಗೆ ಕಾಣುತ್ತಿದುವು. ಗಣಿತ, ರಸಾಯನಶಾಸ್ತ್ರ, ಭೌತವಿಜ್ಞಾನಗಳಲ್ಲಿ ಅವರಿಗೆ ಅನುಭಾವೀ ಆಕರ್ಷಣೆಯಿತ್ತು. ಆಗತಾನೇ ಭಾರತಕ್ಕೆ ಕಾಲಿಡುತ್ತಿದ್ದ ಪಾಶ್ಚಾತ್ತೀಕರಣದ ಬಗ್ಗೆ ಕುತೂಹಲವಾದುದ್ದರಿಂದಲೇ, ಭಾರತದ ವಿಚಾರವಂತರು ಮತ್ತು ಅಂತರಾತ್ಮಿಕ ಅನುಭಾವಿಗಳಾದ ವಾಲ್ಮೀಕಿ, ವ್ಯಾಸ, ಭವಭೂತಿ, ನಿಜಗುಣ ಶಿವಯೋಗಿ, ವಚನಕಾರರು, ಸರ್ವಜ್ಞ, ಉತ್ತರ ಕರ್ನಾಟಕದ ಜಾನಪದದ ತಳಪಾಯವಾದ ತತ್ವಪದಕಾರರು, ಸೂಫಿ ಸಂತರು ಮೊದಲಾದವರಿಂದ ಬೇಂದ್ರೆ ಪ್ರಭಾವಿತರಾಗಿದ್ದರೂ ಕೂಡ, ಜತೆಜತೆಯೇ ಅವರಿಗೆ ಕೀಟ್ಸ್ ಬೇಕು, ಶೆಲ್ಲಿ ಬೇಕು, ಬ್ಲೇಕ್ ಮುಂತಾದವರು ಬೇಕು. ತಿಲಕ, ಗಾಂಧಿ, ಟಾಗೂರ್, ವಿನೋಬಾ, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರಮಣ, ಜೆ.ಕೆ, ಅರವಿಂದರ ಮೂಲಕ ಸಾಹಿತ್ಯ ಪ್ರವೇಶಿಸಿದ ಬೇಂದ್ರೆ, ಯುರೋಪಿನ ಪ್ರತಿಭಾನ್ವಿತ ತತ್ವಶಾಸ್ತ್ರಜ್ಞರಾದ ಮ್ಯಾಕ್ಸ್‌ವೆಬರ್, ರೂಸ್ಸೊ, ಡೆಕಾರ್ಟೆ, ಸ್ಪಿನೋಜಾ, ಗಾಯಟೆ, ಮಾರ್ಕ್ಸ್, ವಿಟ್‌ಜನ್‌ಸ್ಟೀನ್, ಎರಿಕ್ ಫ್ರಾಮ್, ಬರ್ನಾರ್ಡ್ ಶಾ, ಎ. ಎನ್. ವೈಟ್‌ಹೆಡ್, ಎಲಿಯಾ ಮುಂತಾದವರಿಂದಲೂ ಪ್ರಭಾವಿತರಾಗಿದ್ದರು. ಹಾಗಾಗಿ ವಿಜ್ಞಾನದ ಬಗೆಗಿನ ಅವರ ಕುತೂಹಲದಲ್ಲಿ ಒಂದು

ಜವಾಬ್ದಾರಿ ಇದೆ. ವಿಜ್ಞಾನದ ಹೊಸ ಸಂಗತಿಗಳ ಕುತೂಹಲದ ಜತೆ ಜತೆಯೇ, ತರತರದ ಜಾನಪದ ಆಚರಣೆ ನಂಬಿಕೆಗಳ ಬಗ್ಗೂ ಕೂಡ ಅಷ್ಟೇ ಕುತೂಹಲ ಬೇಂದ್ರೆಗಿತ್ತು. ಈ "ಇವನ್ನೆಲ್ಲಾ ನಂಬಬೇಕೋ ಬಿಡಬೇಕೋ ಎಂಬ ಪ್ರಶ್ನೆಗಿಂತ ಭಾರತದ ಜನಪದರಲ್ಲಿ ಎಂಥೆಂಥ ವಿದ್ಯೆಗಳಿವೆ ಎಂದು ತಿಳಿದುಕೊಳ್ಳುವ ಆಸಕ್ತಿ ಮುಖ್ಯ" ಎಂದು ಹೇಳುತ್ತಿದ್ದರು. ವಿಜ್ಞಾನ–ಆಧುನಿಕತೆ ಸ್ಥಳೀಯತೆಯ ಕಾಲು ತಪ್ಪಿಸಬಾರದು, ವಿಜ್ಞಾನದ ಬಗ್ಗೆ ಭಾರತೀಯ ದೃಷ್ಟಿಕೋನ ಬೆಳೆಯಬೇಕು ಎಂದು ಬೇಂದ್ರೆಯವರ ಅಭಿಪ್ರಾಯವಾಗಿತ್ತು. ಬಿ.ಎಂ.ಶ್ರೀ, ಪಂಜೆ, ಕೈಲಾಸಂ, ಎಸ್.ವಿ. ರಂಗಣ್ಣ ಮೊದಲಾದ ನವೋದಯದ ಆರಂಭದ ಮುಂದಿ ಪಾಶ್ಚಾತ್ಯ ವಿಚಾರಧಾರೆಗೆ ಮುಖ್ಯವಾಗಿ ಗ್ರೀಕ್ ಮತ್ತು ಇತರ ಪಾಶ್ಚಾತ್ಯ ಸಾಹಿತ್ಯಕ್ಕೆ, ಅತೀ ಮಹತ್ವಕೊಡುತ್ತಿದ್ದುದು ಬೇಂದ್ರೆಯವರಿಗೆ ಹಿಡಿಸುತ್ತಿರಲಿಲ್ಲ. ವಿಜ್ಞಾನದ ಬಗ್ಗೆ ಕುವೆಂಪುವಿನ ಆರಾಧನಾ ಮನೋಭಾವವೂ ಬೇಂದ್ರೆಯ ಮಾರ್ಗವಾಗಿರಲಿಲ್ಲ. ವಿಜ್ಞಾನದ ಬೆಳವಣಿಗೆಯು ಸ್ವಯಂ ಆಧಾರಿತವಾಗಿ ಲೋಕಹಿತಕಾರಕವಾಗಬೇಕಾದರೆ, ಎಲ್ಲ ಅಭಿವೃದ್ಧಿಯೂ ಆಧ್ಯಾತ್ಮದ ಸತ್ವದ ತಳಪಾಯದ ಮೇಲೆ ನಿಲ್ಲಬೇಕು. ವಿಜ್ಞಾನ ದಾರಿ ಮಾತ್ರ, ಜೀವನದ ಗುರಿ ಅಲ್ಲ. ಜೀವನದ ಗುರಿಯನ್ನು ಆಧ್ಯಾತ್ಮ ಮಾತ್ರ ಒದಗಿಸಬಲ್ಲದು. ಒಂದು ಸಮಾಜ ರಚನೆಯ ಸೂಕ್ಷ್ಮಗಳ ಮೂಲಭೂತ ದರ್ಶನ ಇಲ್ಲದಿದ್ದರೆ. ಎಲ್ಲ ಬೆಳವಣಿಗೆಯೂ ವಿಫಲವಾಗುತ್ತದೆ. ಹಾಗಾಗಿ ಎಲ್ಲ ಬೆಳವಣಿಗೆಯನ್ನು ಮಾನವೀಯ ದರ್ಶನದ ಮೇಲೆ ಆಹ್ವಾನಿಸಬೇಕು. ಯಾವ ವೈಜ್ಞಾನಿಕ ಪ್ರಗತಿಯೂ ಭಾರತದ ಜನರ ಪರಂಪರಾಗತ ಜ್ಞಾನ ಸಂಪನ್ಮೂಲವನ್ನು ಸಾರಾಸಗಟಾಗಿ ಅಳಿಸಿ ಹಾಕಬಾರದು. ಹಾಗೆ ಅಳಿಸಿಹಾಕಿದರೆ ಅದರ ಹಿಂದಿರುವ ಒಂದು ಸಂಸ್ಕೃತಿಯನ್ನೇ ನಾಶ ಮಾಡಿದಂತಾಗುತ್ತದೆ ಎಂಬುದು ಬೇಂದ್ರೆಯ ಸೂಕ್ಷ್ಮ ಆಶಯವಾಗಿತ್ತು. ಒಟ್ಟಾರೆಯಾದ ಪ್ರಗತಿಯ ಕಲ್ಪನೆಯನ್ನು ಟೀಕಿಸುತ್ತಾ ಬೇಂದ್ರೆ, 'ವಿಜ್ಞಾನ, ವಿಜ್ಞಾನ ಅಂತ ವಿಜ್ಞಾನವನ್ನ ಆಹ್ವಾನವಮಾಡುತ್ತಾ ಅಜ್ಞಾನ ಬೆಳೆಸಬೇಡ' ಎಂದು ಹೇಳುತ್ತಿದ್ದರು. ವಿಜ್ಞಾನದ ಬಗ್ಗೆ ಕುತೂಹಲ ಮತ್ತು ಸಂಶಯ—ಇದು ನಿಜವಾದ ಬೇಂದ್ರೆಯ ಅಖಂಡ ದರ್ಶನ. 'ಆಧ್ಯಾತ್ಮ–ವಿಜ್ಞಾನ,' ಎರಡೂ ಸಮರಸದ ಸಾಮರ್ಥ್ಯ ಪಡೆಯದಿದ್ದರೆ ಅಜ್ಞಾನದ ಅಹಂಕಾರಕ್ಕೆ ಬೇರೆ ಮದ್ದಿಲ್ಲ ಅನ್ನುತ್ತಾರೆ. ಇಂದಿನ ವಿವೇಚನಾರಹಿತ ಆಧುನಿಕತೆಯು ತರುತ್ತಿರುವ ಸೊಕ್ಕು ಮತ್ತು ಹಿಂಸೆಗಳಿಗೆ ನೈತಿಕ ತಳಕಟ್ಟಿನ ಕೊರತೆಯೇ ಕಾರಣ ಎಂಬುದು ನಮಗೂ ಅರಿವಾಗದಿರದು.

* * * *

ಬೇಂದ್ರೆಯವರು ಈ ಮಣ್ಣಿಗೆ ಸಂಪೂರ್ಣವಾಗಿ ಸಲ್ಲುತ್ತಲೇ, ಎಲ್ಲ ಹೊಸ ಆಧುನಿಕ ವಿಚಾರ ಧಾರೆಗಳಿಗೆ ಮುಕ್ತವಾಗಿ ತೆರೆದುಕೊಂಡ ನಾಗರಿಕರು, ಆರಂಭದಿಂದಲೇ ನಗರ ಜೀವನಕ್ಕೂ ತೆರೆದುಕೊಂಡವರು. ಆಗ ತಾನೇ ಬದಲಾವಣೆ ಕಾಣುತ್ತಿದ್ದ ಧಾರವಾಡ ಪೇಟೆಯ ಬದುಕು ಅವರ ಮೇಲೆ ಬೀರಿದ ಪ್ರಭಾವವೂ ಈ ಮುಕ್ತತೆಗೆ ಕಾರಣವೆನ್ನಬಹುದು. ಜೀವನದುದ್ದಕ್ಕೂ ಅವರಿಸಿ

ನಗರಾನುಭವ ದಟ್ಟವಾಗಿತ್ತು. ಭಾರತವು ಹೊಸತರ ಕಡೆಗೆ ಹೊರಳಿಕೊಳ್ಳುತ್ತಿದ್ದ ಆ ಕಾಲದಲ್ಲಿ, ಧಾರವಾಡವು ನಿಜಕ್ಕೂ ಆಧುನೀಕರಣದ ಪ್ರಮುಖ ಪ್ರವಾಹದಲ್ಲಿತ್ತು. ಪ್ರಾಯಃ ಮೈಸೂರು–ಬೆಂಗಳೂರು ನಗರಗಳು ಕೂಡ ಧಾರವಾಡದಷ್ಟು ಆಧುನೀಕರಣದ ಬದಲಾವಣೆಗಳನ್ನು ಅಂದು ಕಂಡಿರಲಿಕ್ಕಿಲ್ಲ.

ಸ್ವಾತಂತ್ರ್ಯ ಚಳವಳಿಯಲ್ಲಿ ಉತ್ತರ ಕರ್ನಾಟಕದ ಪಾತ್ರ, ಮುಖ್ಯವಾಗಿ ಧಾರವಾಡದ ಪಾತ್ರ, ಭಾರತದ ಯಾವ ಮಹಾನಗರಕ್ಕೂ ಕಡಿಮೆಯಿರಲಿಲ್ಲ. ಅವಜ್ಞೆಯಿಂದ ಇಂದು ನಾವು ಕಾಣುವ ಉತ್ತರ ಕರ್ನಾಟಕವು, ೧೯೨೦–೩೦ರ ದಶಕಗಳಲ್ಲೇ ಕರ್ನಾಟಕದ ಎಲ್ಲ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ಚಳವಳಿಗಳ ಮುಂಚೂಣಿಯಲ್ಲಿತ್ತು. ಸಂಗೀತದಲ್ಲಿ ಅದ್ಭುತ ತಪಸ್ಸು ಸಾಧಿಸಿತ್ತು. ಇಂಗ್ಲೀಷ್ ಶಿಕ್ಷಣದ ಗಾಳಿ ಪ್ರಬಲವಾಗಿ ಬೀಸುತ್ತಿತ್ತು. ಜರ್ಮನಿಯ ಬಾಸೆಲ್ ಮಿಶನ್‌ನವರು ಮಂಗಳೂರಿನಂತೆಯೇ ಧಾರವಾಡದಲ್ಲೂ ನೆಲೆಸಿ ಆಧುನಿಕ ಶಿಕ್ಷಣ ಕೊಡುವ ಅನೇಕ ಶಾಲೆ–ಕಾಲೇಜುಗಳನ್ನು ಆರಂಭಿಸಿದ್ದರು. ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಧಾರವಾಡ ೨೦ನೆಯ ಶತಮಾನದ ಆದಿಯಿಂದಲೇ ಮುಂದಿತ್ತು. ಇದರ ಜತೆ, ಧಾರವಾಡದಲ್ಲಿ ಅನೇಕ ಗ್ರಂಥಾಲಯಗಳೂ ಅಲ್ಲಲ್ಲಿ ಸ್ಥಾಪಿಸಲ್ಪಟ್ಟದ್ದುವು. ಬೌದ್ಧಿಕ ಬೆಳವಣಿಗೆಗೆ ಬೇಕಾದ ಎಲ್ಲಾ ಸೌಕರ್ಯಗಳೂ ಅಲ್ಲಿ ಇದ್ದುವು. ಬೇಂದ್ರೆ ತನ್ನ ಬಾಲ್ಯ ಮತ್ತು ತಾರುಣ್ಯವನ್ನು ಈ ಎಲ್ಲ ಬದಲಾವಣೆಗಳ ಒಡನಾಟದಲ್ಲೇ ಕಳೆದವರು ಮತ್ತು ಕೈಗಾರಿಕೀಕರಣದ ಎಲ್ಲ ಪರಿಣಾಮಗಳಿಗೆ ಮತ್ತು ಅದು ತಂದುಕೊಟ್ಟ ಹೊಸ ಜ್ಞಾನಕ್ಕೆ ಸಾಕ್ಷೀಭೂತರು. ಅವರ ಕವಿತೆಗಳನ್ನು ಗಮನಿಸಿದಾಗಲೂ ಅವರು ನಗರಕ್ಕೆ ತೆರೆದುಕೊಂಡ ಕವಿ ಎಂದು ಕಾಣುತ್ತದೆ. ಆದರೆ ನಗರದಲ್ಲಿ ಹುಟ್ಟಿ ಬೆಳೆದ ಗಾಂಧಿಗಿದ್ದಂತೆ, ಬೇಂದ್ರೆಗೂ ಹಳ್ಳಿಯ ಬಗ್ಗೆ 'ಅಥೆಂಟಿಕ್' ಆದ 'ಹಳ್ಳಿ ಪರಿಕಲ್ಪನೆ' (Village imagination) ಇತ್ತು. ಹಾಗೆ ನೋಡಿದರೆ, ೨೦ ನೆಯ ಶತಮಾನದ ಕನ್ನಡ ಸಾಹಿತ್ಯ ಲೋಕದಲ್ಲಿ ಕಾರಂತರನ್ನು ಬಿಟ್ಟರೆ, ಕುವೆಂಪು, ಅಡಿಗ, ಮಾಸ್ತಿ ಮುಂತಾದ ಅನೇಕ ಹಿರಿಯ ಲೇಖಕರು ತಮ್ಮ ತಾರುಣ್ಯದಲ್ಲೇ ತಮ್ಮನ್ನು ತಾವು ಪಟ್ಟಣ ಜೀವನಕ್ಕೆ ಒಡ್ಡಿಕೊಂಡವರು.

ಬೇಂದ್ರೆಯ 'ಸಖೀಗೀತ'ದಲ್ಲಿ ಹೆಣ್ಣನ್ನು ಚಿತ್ರಿಸಿದ ದೃಷ್ಟಿಯಲ್ಲಿ, ಸುಖ–ದುಃಖಗಳನ್ನು ಹಂಚಿಕೊಂಡು ಗಂಡ–ಹೆಂಡತಿ "ಸಖ–ಸಖಿ, ಸಮ–ಸುಖಿ" ಸ್ನೇಹಿತರಾಗಿರಬೇಕೆನ್ನುವ ೨೦ ನೆಯ ಶತಮಾನದ ಆಶಯ ವ್ಯಕ್ತವಾಗುತ್ತದೆ. ಬೇಂದ್ರೆಯವರ ಪ್ರಕೃತಿಪ್ರೇಮ ಎಂಬುದು ಕೇವಲ ಕಾಡು ಪ್ರಕೃತಿಯಲ್ಲ, ಅದು ಮನುಷ್ಯನ ಜತೆ ಸಂಬಂಧವಿರುವ ಬೇಸಾಯದ ಪ್ರಕೃತಿ. ಇದು ೨೦ ನೆಯ ಶತಮಾನದ ಪಟ್ಟಣವಾಸಿಗನ ದೃಷ್ಟಿಕೋನ ಕಾಮದ ವರ್ಣನೆಯಲ್ಲಿ ಮಾತ್ರ ಪ್ರಕೃತಿಯ ವರ್ಣನೆ ಬೇಂದ್ರೆಯ ಕಾವ್ಯದಲ್ಲಿ ಹೊರಹೊಮ್ಮುತ್ತದೆ ಮೇಘದೂತದಲ್ಲಿ ಕಾಮದ ವರ್ಣನೆಯಂತೆ.

ಬೇಂದ್ರೆಯವರ ನಾಟಕಗಳಲ್ಲಿ ಆಧುನಿಕತೆಯ ಅಂಶಗಳು ಕಾಣುತ್ತವೆ. ೨೦ ನೆಯ ಶತಮಾನದ ಪ್ರಬಲ ಚಿಂತನೆಯಾದ ಸಮಾಜವಾದದ ಅಂಶಗಳು ಅಲ್ಲಿ ಕಾಣುತ್ತವೆ. ಕನ್ನಡದಲ್ಲಿ ಅಸಂಗತ ನಾಟಕ ಪ್ರಕಾರ

ಬರುವ ಮೊದಲೇ ಬೇಂದ್ರೆಯವರು ಉತ್ತಮ ಅಸಂಗತ ನಾಟಕಗಳನ್ನು ಬರೆದಿದ್ದರು. ಬೇಂದ್ರೆಯವರನ್ನು ನಾಟಕಕಾರನಾಗಿ ವಿಮರ್ಶಕರು ಅಷ್ಟಾಗಿ-ಗುರುತಿಸಿಲ್ಲ ಅಂತ ಅನ್ನಿಸುತ್ತದೆ.

* * *

ತಾತ್ವಿಕವಾಗಿ ಬೇಂದ್ರೆಯವರ ಮಾರ್ಗ ಮುಖ್ಯವಾಗಿ ಶ್ರೀ ಅರವಿಂದರ ಮಾರ್ಗ. ಅರವಿಂದರು ಬೇಂದ್ರೆಯವರ ಕಲ್ಪನೆಯ ಸಪ್ತಪದಿ ದರ್ಶನದ ಕೊನೆಯ ಕಕ್ಷೆಯಲ್ಲಿರುವವರು. ದೇಹ ಮತ್ತು ಮನಸ್ಸುಗಳು ಸಮಗ್ರವಾಗಿ ಸಮರಸದಲ್ಲಿ ಬೆರೆಯಬೇಕೆನ್ನುವ ಬೇಂದ್ರೆಗೆ, ಭಾರತದ ascetic devial of the body ಯ ಮಾರ್ಗ ಹಿಡಿಸುತ್ತಿರಲಿಲ್ಲ. ಅದಕ್ಕಾಗಿ ಪಾಶ್ಚಾತ್ಯರು ಭೌತಿಕ ಪ್ರಪಂಚಕ್ಕೆ ಕೊಟ್ಟ ಪ್ರಾಮುಖ್ಯತೆಯನ್ನು ಬೇಂದ್ರೆ ತುಂಬ ಕುತೂಹಲದಿಂದ ಕಾಣುತ್ತಾರೆ. ಹಾಗೆಯೇ ಪಾಶ್ಚಾತ್ಯರ ಚಿಂತನೆಯ ಪ್ರಧಾನವಾಹಿನಿ devial of the spirit ಕೂಡ ಬೇಂದ್ರೆಯ ಮಾರ್ಗವಲ್ಲ. ಇವೆರಡರ ಅಂದರೆ ಪಾಶ್ಚಾತ್ಯ-ಪೌರ್ವಾತ್ಯಗಳ ಸಂಗಮ. ದೇಹ ಮನಸ್ಸುಗಳ ಸಂಗಮ. ಒಬ್ಬ ದೇವಮಾನವನ ಸೃಷ್ಟಿಗೆ ಅಗತ್ಯ ಎನ್ನುವ ಬೇಂದ್ರೆಯವರು, ಅರವಿಂದರಂತೆ ಪಾಶ್ಚಾತ್ಯ ವೈಜ್ಞಾನಿಕ ದೃಷ್ಟಿ, ಮತ್ತು ಪೌರ್ವಾತ್ಯ ಅಂತರ್ದೃಷ್ಟಿ ಮತ್ತು ಆಧ್ಯಾತ್ಮ ದರ್ಶನಗಳು ಸಮರಸದ ಅಖಂಡದೃಷ್ಟಿ ಬೇಕು ಎನ್ನುತ್ತಾರೆ.

ಮೂಲಭೂತವಾಗಿ ಬೇಂದ್ರೆ ದರ್ಶನ ಪ್ರೇಮದರ್ಶನ ಎಂಬ ಜನಪ್ರಿಯ ಅಭಿಪ್ರಾಯ ಇದೆ. ಆದರೆ ಅವರ ಆಳವಾದ ದರ್ಶನದ ಗಂತವ್ಯ ಪ್ರೇಮಕ್ಕಿಂತ ಹೆಚ್ಚಾಗಿ ದುರಂತ ಅಂತ ನನ್ನ ಅನ್ನಿಸಿಕೆ. ಸ್ನೇಹ ಭಾವದಲ್ಲಿರುವ ವಿರಹದ ದುಃಖ ದಾರುಣವಾಗಿ, ವಿವರವಿವರವಾಗಿ ಚಿತ್ರಿಸುತ್ತಾರೆ. ಅವರ ವಿವರಗಳ ಸಾಂದ್ರತೆ ಕಂಡಾಗ, ಅವರು ಕಾದಂಬರಿ ಪ್ರಕಾರದಲ್ಲಿ ಕೈಯ್ಯಾಡಿಸಿದ್ದರೆ ಪ್ರಾಯಃ ಒಬ್ಬ ಅತ್ಯಂತ ಶ್ರೇಷ್ಠ ಕಾದಂಬರಿಕಾರರಾಗುತ್ತಿದ್ದರೋ ಏನೋ ಎಂದೆನಿಸುತ್ತದೆ. ತಾನು ತನ್ನ ಬಾಲ್ಯದಲ್ಲಿ ತಾರುಣ್ಯದಲ್ಲಿ ಅನುಭವದ ಬಡತನದ 'ಅಥೆಂಟಿಕ್' ಪ್ರಪಂಚವನ್ನು 'ಸ್ವಯಂ ಕರುಣೆಯ' ಯಾವ ಭಾವವೂ ಇಲ್ಲದೆ ಹಾಗಾಗೇ ಚಿತ್ರಿಸುತ್ತಾರೆ. ಒಬ್ಬ ಉತ್ತಮ ಸಂಗೀತ ಕಲಾವಿದನಂತೆ ದುಃಖದಲ್ಲೂ ಅನುಭವ ಪರವಶರಾಗಿ ಬರೆಯುತ್ತಾರೆ. ಹಸಿವು ಕೂಡ ಕವಿತೆಯಲ್ಲಿ ಆಸ್ವಾದಿಸುವ ಸಂಗತಿಯಾಗಿ ಬಿಡುತ್ತದೆ. "ನಾನು ಬಡವಿ ಆತ ಬಡವ' ಕವನದಲ್ಲಿ ಪ್ರೇಮ ತತ್ವದ ಹಿರಿಮೆಯನ್ನು ಕಂಡಂತೆಯೇ ಆಳದಲ್ಲಿರುವ ಬಡತನದ ನೋವನ್ನೂ ನಾವು ಅನುಭವಿಸಬಹುದು.[1] ವಿಪ್ರಲಂಬ ಶೃಂಗಾರ ಕವನ

[1] 'ನನ್ನ ಕೈಯ ಹಿಡಿದಾಕೆ' ಕವನದ ಈ ಸಾಲುಗಳು ಇದನ್ನು ಪುಷ್ಟೀಕರಿಸುತ್ತದೆ:

"ನನ್ನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ
ನಾನೂನು ನಕ್ಕೇನs
ಇಲದಿದರs ನಿನ ಅಳುವ ಹುಚ್ಚು ಹಳ್ಳದ ಕಳ್ಳ-
ಹುದುಲಾಗ ಸಿಕ್ಕೇನs
ಎದ್ದೇನs ಬಿದ್ದೇನs ಕತ್ತಲು ಬಿಸಿಲೀನ
ನಕ್ಕಾವಾ ಗೆದ್ದಾವಾ !"

ಳಲ್ಲಿರುವ ಮೌನವಾದ ಆರ್ದ್ರಭಾವ ಬೇಂದ್ರೆಯವರು ಮಾತ್ರ ಸಾಧಿಸಬಹುದಾದ ಸಿದ್ಧಿ.

ಬೇಂದ್ರೆಯವರಲ್ಲಿ ಕಾಣುವ ಇನ್ನೊಂದು ವೈಶಿಷ್ಟ್ಯವೆಂದರೆ, ಪೂರ್ವ ನಿಶ್ಚಿತ ಜೀವನದ ಬಗ್ಗೆ ಅವರಿಗಿದ್ದ ಶ್ರದ್ಧೆ. ಮಗನ ಜಾತಕ ಕುಂಡಲಿಯನ್ನು ಜೋಯಿಸರಿಗೆ ತೋರಿಸಿ ಮಗನ ಮರಣದ ಬಗ್ಗೆ ಮೊದಲೇ ತಿಳಿದುಕೊಂಡಿದ್ದರಂತೆ ಮತ್ತು ನಂಬಿದ್ದರಂತೆ ಕೂಡ. ಮಗನ ಮರಣದ ಬಗ್ಗೆ ಮೊದಲೇ ನಿರೀಕ್ಷೆ ಇದ್ದೂ ಕೂಡ, ಮಗ ತೀರಿಕೊಂಡಾಗ ಬೇಂದ್ರೆಯವರು ತೀವ್ರವಾಗಿ ದುಃಖ ಅನುಭವಿಸುತ್ತಾರೆ. ಮುಂದೆ ಆ ಅನುಭವವನ್ನು ಬರೆಯುತ್ತಾರೆ ಕೂಡ. ಪೂರ್ವನಿಶ್ಚಿತ ನಿರೀಕ್ಷೆಯಲ್ಲಿದ್ದ ಸಂಗತಿಯನ್ನು, ಅದು ಘಟಿಸಿದಾಗ 'ಅಥೆಂಟಿಕ್' ಆಗಿ ಅನುಭವಿಸುವುದು ಕಷ್ಟ. ಬೇಂದ್ರೆಯವರಲ್ಲಿ ಮಾತ್ರ ಇವು ಒಟ್ಟೊಟ್ಟಿಗೇ ಸಂಭವಿಸಲು ಸಾಧ್ಯ. ಪೂರ್ವ ನಿಶ್ಚಿತ ಜೀವನದಲ್ಲಿ ನಂಬಿಕೆಯಿಟ್ಟುಕೊಂಡ ಮನುಷ್ಯ, ಜೀವನದಲ್ಲಿ ಆಸಕ್ತಿ ಕಳಕೊಂಡು ನೀರಸ ಆಗಿ ಬಿಡುತ್ತಾನೆ. ಆದರೆ ಬೇಂದ್ರೆ ಇದಕ್ಕೆ ವ್ಯತಿರಿಕ್ತ. ಜೀವನದ ಪ್ರತಿಯೊಂದು ಅನುಭವವನ್ನು ಆಳವಾಗಿ ಅನುಭವಿಸುತ್ತಾರೆ. ಬಾಲಕನಾಗಿದ್ದಾಗ ಮುಸ್ಲಿಮರ ಹೆಣದ ಮೆರವಣಿಗೆಯಲ್ಲಿ ಪಾಲುಗೊಂಡದ್ದನ್ನು ನೆನಪಿಸುತ್ತಾ 'ಮುಸ್ಲಿಮರ ಹೆಣದ ಮೆರವಣಿಗೆ ಚೆಂದ, ಸುಂದರ, ಹಿಂದೂಗಳ ಶವಯಾತ್ರೆಯಂತಲ್ಲ' ಎನ್ನುತ್ತಾರೆ. ಬೇಂದ್ರೆಯವರು ದುರಂತದಲ್ಲೂ ಸೌಂದರ್ಯವನ್ನು ಅನುಭವಿಸುವ ಶಕ್ತಿ ಪಡೆದವರು.

ಬೇಂದ್ರೆಯ ಕಾವ್ಯದಲ್ಲಿ ಛಂಧಸ್ಸಿನ ವೈವಿಧ್ಯತೆಯಿದ್ದಂತೆ, ಧಾರ್ಮಿಕ ಶ್ರದ್ಧೆಯಲ್ಲೂ ವೈವಿಧ್ಯತೆಯಿದೆ. ಬುಡುಬುಡಿಕೆಯವನ ಧಾರ್ಮಿಕ ಶ್ರದ್ಧೆ, ಹೆಂಗಸಿನ ಧಾರ್ಮಿಕ ಶ್ರದ್ಧೆ, ಪುರೋಹಿತನ ಧರ್ಮ, ಪಂಡಿತನ ಧರ್ಮ, ಅನುಭಾವಿಯ ಆಧ್ಯಾತ್ಮ ಹೀಗೆ ಬಗೆಬಗೆಯ ಧಾರ್ಮಿಕತೆಯನ್ನು ಕುತೂಹಲದಿಂದ ಬೇಂದ್ರೆಯವರು ಸ್ವೀಕರಿಸುತ್ತಿದ್ದರು. 'ಸಣ್ಣ ಸೋಮವಾರ' ನೀಳ್ಗವನದಲ್ಲಿ ಜಾತ್ರೆಯ ಮಕ್ಕಳ ಉತ್ಸಾಹ, ಭಕ್ತಿಯ ಅನುಭವ, ದ್ವೈತದ ಅನುಭವ-ಎಲ್ಲವೂ ಒಟ್ಟೊಟ್ಟಿಗೆ ಚಿತ್ರಿತವಾದದ್ದು ನಮಗೆ ವ್ಯಕ್ತವಾಗುತ್ತದೆ.

* * *

ಆಧುನಿಕ ಮನುಷ್ಯ ಒಡೆಯುತ್ತಾ, ಒಂಟಿಯಾಗುತ್ತ, ಅನಾಥನಾಗುತ್ತ, ಪ್ರೇಮ ಭಾವವನ್ನೇ ಕಳಕೊಳ್ಳುತ್ತ ಬಿಡಿ ಬಿಡಿಯಾಗುತ್ತಾನೆ. ಇದು ಆಧುನಿಕ ಜೀವನ ಕ್ರಮದ ಲಕ್ಷಣ. ಮನುಷ್ಯ ಈ ರೀತಿ ಬಿಡಿ ಬಿಡಿಯಾಗಿದೆ. ಇಡಿ ಇಡಿ ಆಗಬೇಕಾದರೆ ಅವನ ಜೀವನದಲ್ಲಿ ಸಂಬಂಧಗಳನ್ನು ಬೆಚ್ಚಗೆ ಬೆಸೆಯುವ ಒಲವು ಪ್ರೀತಿಗಳು ಸ್ಥಾಯಿಯಾಗಬೇಕು. ಸಂಸಾರ ಎಂಬುದು, ವಿಶ್ವಮಾನವ ಸಂಬಂಧಗಳನ್ನು ಬೆಸೆಯುವ ಮೂಲನೆಲೆ ಎಂದು ನಂಬಿದ ಬೇಂದ್ರೆಗೆ, "ಪ್ರೀತಿ ಎಂದರೆ ಭೀತಿ ಬರುತ್ತದೆ" ಎನ್ನುವ ಆಧುನಿಕನ ಅನಿವಾರ್ಯ ಒಂಟಿತನದ ಆಯ್ಕೆ ಸಲ್ಲದು. ಅಂಥವರು ಹುಟ್ಟಿದ್ದೇ ತಪ್ಪೋ ಏನೋ ಹಾಗಾಗಿ ಅವರ ಬಾಳು ಬಾಳು ಗೇಡಾಗುತ್ತದೆ." ಎನ್ನುತ್ತಾರೆ. ಅವರ 'ಗರಿ', 'ಕಾಮಕಸ್ತೂರಿ', 'ಸಖೀಗೀತ' 'ಉಯ್ಯಾಲೆ', 'ನಾದಲೀಲೆ', ಕನ್ನಡದ 'ಮೇಘದೂತ', 'ಹಾಡು-ಪಾಡು' 'ಗಂಗಾವತರಣ', 'ಮತ್ತೆ ಶ್ರಾವಣ ಬಂತು' 'ಅರಳು ಮರಳು', 'ನಮನ', ಮೊದಲಾದ

ಕೃತಿಗಳಲ್ಲಿ ಬೇಂದ್ರೆಯವರ ಕಾವ್ಯದ ಸಂಸಾರ ಚಿತ್ರಗಳನ್ನು ದಟ್ಟವಾಗಿ ಕಾಣಬಹುದು.

ಪಾಂಚಭೌತಿಕ ಶರೀರ ಹೊತ್ತು ಹುಟ್ಟುವುದು, ಬೆಳೆಯುವುದು, ಸಾಯುವುದು, ಮತ್ತೊಮ್ಮೆ ಹುಟ್ಟಿ ಹಿಂಗುವುದು, ಇದು ಸಂಸಾರ ಸಾರ ಈ ರೀತಿ 'ಸತ್ತು ಹುಟ್ಟುವ, ಹುಟ್ಟಿಹಿಂಗುವ' ಸಂಸಾರದಲ್ಲಿ ಪಾಕಗೊಂಡು ಪಾರಾದರೆ ಅದೇ ಮೋಕ್ಷ. ಗಂಡು-ಹೆಣ್ಣಿನ ದಾಂಪತ್ಯ, ಕುಟುಂಬ. ಸಮಾಜ, ರಾಷ್ಟ್ರ, ಮತಧರ್ಮ, ಕಲೆ–ಇವೆಲ್ಲವೂ ಸಂಸಾರದ ಘಟಕಗಳು. ನವರಸಗಳಿಗೂ ಸಂಸಾರವೇ ತವರುಮನೆ. ಆದರೆ ಕೌಟುಂಬಿಕ-ಸಾಮಾಜಿಕ–ರಾಜಕೀಯ ತಿಕ್ಕಾಟ-ಮೇಲಾಟಗಳಿಂದ ಸಂಸಾರವು ರಂಪವಾಗಿ ಬದುಕಿಗಿಂತ ಸಾವೇ ಲೇಸೆಂಬ ಮೋಕ್ಷಗಮನದ–ವಿಕೃತ ವೈರಾಗ್ಯದ ಮೋಹ ಹುಟ್ಟಿಕೊಳ್ಳುತ್ತದೆ. ಸಂಸಾರದ ತೊಡಕು ವೈರಾಗ್ಯದಿಂದ ಬಗೆಹರಿಯಲಾರದೆನ್ನುವ ಬೇಂದ್ರೆ, ಮೋಕ್ಷ ಬಯಸುವ ಮಾನವ ಮೊತ್ತಮೊದಲಾಗಿ ಆರೋಗ್ಯಕರವಾದ ಸಂಸಾರ ನಡೆಸಬೇಕು ; ಪರಸ್ಪರ ಹಾರ್ದಿಕ ಸ್ನೇಹದಿಂದ ಬದುಕಲು ಕಲಿಯಬೇಕು. ಅಂಥ ಶುದ್ಧ ಸಂಸಾರವನ್ನು ಮಾನವರು ಸಾಧಿಸುತ್ತಿಲ್ಲ ಎನ್ನುತ್ತಾರೆ ತನ್ನ 'ಬಿಚ್ಚು ಮಾತು' ಕವನದಲ್ಲಿ :

"ಬಿಚ್ಚು ಮಾತು ಅಡತೇನಂತ ಕಚ್ಚಬೇಡಿ
ಹಲ್ಲು ತುಟಿ,
ಮುಚ್ಚಿ ಇಟ್ಟರ ಏನು ಬಂತು ಹುಚ್ಚಪ್ಪ
ಗಳಿರಾ ?
ಸ್ವಚ್ಛ ಮನಸು ಮಾಡಿಕೊಂಡು ಹೆಚ್ಚಿನ
ನೆಲ ನೋಡಿಕೊಂಡು
ನೆಚ್ಚಿ ಮೆಚ್ಚಿ ಕಟ್ಟಬೇಕು ಅಚ್ಚ
ಸಂಸಾರಾ !"

"ಒಬ್ಬರ ಕಂಡರ ಒಬ್ಬರೆ ಮನಸು
ಅಬ್ಬರ ತುಬ್ಬರ ಅಗತೈತಿ
ಇಬ್ಬರ ಕೂಡಿ ಬದುಕಿನ ಹಬ್ಬ ಮಾಡಿಲ್ಲ
ಭರಪೂರಾ
ಸಭ್ಯರಾಂಗ ಕಾಣತೇವಿ
ಮಬ್ಬಿನಾಗ ಬಾಳತೇವಿ
ಉಬ್ಬಿನಾಗ ಸೋರಿಹೋತು ಒಳಗಿನ
ಮಜಕೂರಾ"

ಅದೇ ಧ್ವನಿಯಲ್ಲಿ ಇನ್ನೊಂದು ಕವನ ಸಾಲುಗಳು :

"ಏನಿಹುದೊ ಎಂತಿಹುದೊ
ಸಂಸಾರ ಸಾರ !
ಕಂಡವರು ಯಾರದರ ಅಂತಪಾರ ?
ಹೃದಯ ಸಂಪುಟದಲ್ಲಿ
ಒಲವ ಲೆಕ್ಕಣಿಕೆ
ಮಾಡಿ ಬರೆಯಲೊ ಹುಡುಗ
ನಿನ್ನ ಒಕ್ಕಣಿಕೆ"

"ಮಾವು ಹೂವಾಗುವ, ಬೇವು ಸಿಹಿಯಾಗುವ" ಸ್ವಚ್ಛ ಮನಸ್ಸಿನ ಶುದ್ಧ ಪ್ರೀತಿಯೇ ಬೇಂದ್ರೆಯವರ ಕಲ್ಪನೆಯ ಸಂಸಾರ ಸಾರ. ಆ ಪ್ರೀತಿ ಕೇವಲ ಹೆಣ್ಣು-ಗಂಡಿನ ಸಂಬಂಧಗಳಿಗೆ ಸೀಮಿತವಾಗಿಲ್ಲ. ಬೇಂದ್ರೆ ಕಾವ್ಯದ ಅನುಕಂಪವಾಗಿ ಪಾಕ ಗೊಂಡು, ಎಲ್ಲ ಸುಖ-ದುಃಖಗಳನ್ನು ದೈವ ಭಕ್ತಿಯ ಪ್ರಸಾದವಾಗಿ ಸ್ವೀಕರಿಸುತ್ತದೆ. ಕಾಮವು ಪ್ರೇಮವಾಗಿ ಪರಿವರ್ತನೆಗೊಂಡು, ಪ್ರೇಮ ನಿರ್ವ್ಯಾಜ್ಯ ಪ್ರೀತಿಯಾಗಿ ಪಾಕ ಗೊಂಡು, ಪ್ರೀತಿಯೂ ಭಕ್ತಿಯಾಗಿ ಪುಟ ಗೊಳ್ಳಬೇಕು. "ಕಾಮ ಉಪಾರ್ಜಿತವಾಗ ಬೇಕು" ಎನ್ನುವ ಬೇಂದ್ರೆಯ ಕಲ್ಪನೆಯ ಜೀವನ ಸಾರ್ಥಕ್ಯವಿರುವುದು ಇಲ್ಲಿ. ಈ ಹಿನ್ನೆಲೆಯಲ್ಲಿ ಅವರ ಸಂಸಾರ ಚಿತ್ರಗಳು

'ಅನುರಾಗ', 'ಪ್ರೀತಿ', 'ವಾತ್ಸಲ್ಯ', 'ವಿರಹ', ಕೌಟುಂಬಿಕ ಭಾವ' 'ಸ್ನೇಹ', 'ಪ್ರೇಮ ತತ್ವದರ್ಶನ', 'ಭಕ್ತಿ' ಮುಂತಾದ ವಿಶಾಲವಾದ ಬೀಸನ್ನು ಪಡೆದುಕೊಳ್ಳುತ್ತದೆ.

ಬೇಂದ್ರೆಯ ಪ್ರೀತಿಯ ದರ್ಶನವು ಉದಾತ್ತವಾದದ್ದು. ಪ್ರೀತಿಯ ಸಹಜಭಾವದಲ್ಲಿ ಲೆಕ್ಕಾಚಾರ, ಶುಷ್ಕತರ್ಕ, ಮೇಲಾಟಗಳಿಲ್ಲ, ಅದು ಒಬ್ಬರಿಗೊಬ್ಬರು ಕೊಟ್ಟು ಕೊಳ್ಳುವಂಥದು, ಪಡೆದುಕೊಳ್ಳಲು ಹಾತೊರೆಯುವಂಥದಲ್ಲ ಎಂಬುದು ಬೇಂದ್ರೆಯ ಅನೇಕ ಒಲವೆ ಹಾಡುಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ:

"ಅಷ್ಟು ಪ್ರೀತಿ ಇಷ್ಟು ಪ್ರೀತಿ-
ಎನಿಸಿ ಕಷ್ಟಪಡದಿರು
ಒಲಿದು ಒಲಿಸಿ ಸುಖವಿರು.
ಎಷ್ಟೆಯಿರಲಿ ಅಷ್ಟೆ ಮಿಗಿಲು-ತಮ್ಮ ಕಿರಣ
ತಮಗೆ ಹಗಲು,
ಉಳಿದ ಬೆಳಕು ಕತ್ತಲು
ಬಿಟ್ಟಲ್ಲಿಯೆ ಬೀಡು ಮತ್ತೆ ಅಡಿದಲ್ಲಿ ಅಂಗಳ
ಉಳಿದುದೆಲ್ಲ ಹಿತ್ತಲು"
—"ಅಷ್ಟು ಪ್ರೀತಿ ಇಷ್ಟು ಪ್ರೀತಿ"

"ತಾಳ್ಯಾಕ ತಂತ್ಯಾಕ ರಾಗದ ಚಿಂತ್ಯಾಕ
ಹೆಜ್ಜ್ಯಾಕ ಗೆಜ್ಜ್ಯಾಕ ಕುಣಿಯೋಣು ಬಾರಾ।
ಕೋಲ್ಯಾಕ ಸಾಲ್ಯಾಕ ಕಲಿಕೆಯು ಕಾಲ್ಯಾಕ
ಹಿಗ್ಗಿಲೆ ನಡಿ ಸಾಕ। ಕುಣಿಯೋಣು ಬಾರಾ"
—"ಕುಣಿಯೋಣು ಬಾರಾ"

ಮುಂದೆ 'ಸಖೀಗೀತ'ದ ಈ ಸಾಲು:

"ಪಾದ ಪದ್ಧತಿಯಲ್ಲಿ ಪದ ಕೂಡಿ ಬರುವಾಗ
ಯಾರಾರೆ ಗುರು-ಲಘು ಎಣಿಸುವರೆ?
ಯಾರಾಗವೆಂದರು ಯಾರಾಗ ಕೇಳುವರು-
ಅನುರಾಗವನುರಣಿಸಿ ತಣಿಸುತಿರೆ?

'ಮನದನ್ನೆ' ಕವನದಲ್ಲಂತೂ, ಹೆಣ್ಣು-ಗಂಡಿನ ಪ್ರೀತಿಯಲ್ಲಿ ಲೆಕ್ಕಾಚಾರದಿಂದೆಲ್ಲ ವಿಚಾರುವಿಕೆಯ ತುಡಿತವನ್ನು ವ್ಯಕ್ತಪಡಿಸುತ್ತದೆ.

ಬೇಂದ್ರೆಯವರ 'ಕಾಮಕಸ್ತೂರಿ', 'ನಾದಲೀಲೆ', 'ಸಖೀಗೀತ' ಕೃತಿಗಳಲ್ಲಿ ಮುಖ್ಯವಾಗಿ ದಂಪತಿಗಳು ಅನುಭವಿಸುವ ಉತ್ಕಟ ಅನುರಾಗದ ಅನುಭಾವವಿದೆ. ಅವರು ಈ ಉತ್ಕಟ ಅನುರಾಗ ಭಾವವನ್ನು ತರತರದ ಜಾನಪದ ಮೋಡಿಯಲ್ಲಿ ಮೂಡಿಸಿದ್ದಾರೆ. "ಜನುಮದ ಜಾತ್ರೆ" ಎಂಬ ಕವನದಲ್ಲಿ ಆಗ ತಾನೇ ಮದುವೆಯಾದ ಹೆಣ್ಣು ತನ್ನ ಗಂಡಿನ ಪ್ರೀತಿಯನ್ನು ಬಣ್ಣಿಸುವ ರೀತಿ:

"ನೇತ್ರ ಪಲ್ಲವಿಯಿಂದ ಸೂತ್ರಗೊಂಬೀ ಹಾಂಗ
ಪಾತ್ರ ಕುಣಿಸ್ಯಾನ ಒಲುಮಿಗೆ,
ಪಾತ್ರ ಕುಣಿಸ್ಯಾನ ಒಲುಮಿಗೆ ದಿನದಿನ
ಜಾತ್ರಿಯೆನಿಸಿತ್ತ ಜನುಮವು"

"ಹುಬ್ಬು ಹಾರಿಸಿದಾಗ ಹಬ್ಬ ಎನಿಸಿತು ನನಗೆ
'ಅಬ್ಬ' ಎನಬೇಡ ನನ್ನ ಗೆಣತಿ,
'ಅಬ್ಬ' ಎನಬೇಡ ನನ ಗೆಣತಿ ಸಾವಿರಕ
ಒಬ್ಬ ನೋಡವ್ವ ನನ ನಲ್ಲ"

"ತಂಬುಲ ತುಟಿ ನಗಿ ಹೊಂಬಿಸಿಲೆಂಬಂತೆ
ಬಿಂಬಿಸಿತವ್ವಾ ಎದಿಯಾಗ
ಬಿಂಬಿಸಿತವ್ವಾ ಎದಿಯಾಗ ನಂಬಿಸಿ
ರಂಬಿಸಿತವ್ವಾ ಜೀವನ"

"ರಸವೆ ಜನನ, ವಿರಸ ಮರಣ, ಸಮರಸವೇ ಜೀವನಾ" ಎಂಬುದು ಬೇಂದ್ರೆಯವರು ಕನ್ನಡಿಗರಿಗೆ ಕೊಟ್ಟಿರುವ ಸಂಸಾರ ಸೂತ್ರ. ಗಂಡು ಹೆಣ್ಣಿನ ಬದುಕು ಸಮಗ್ರವಾಗಿ ಹೊಂದಿಕೊಳ್ಳಬೇಕಾದರೆ, ಅವರು ಎಲ್ಲ ಸುಖ-ದುಃಖಗಳ ಸಮಭಾಗಿ

ಗಳಾಗಿ ಸಮರಸಗೊಳ್ಳಬೇಕೆಂದು ಹೇಳುವ ಬೇಂದ್ರೆ, ಬಡತನದಲ್ಲೂ ಬದುಕು ಒಲವಿನ ಮೂಲಕ ಎಷ್ಟು ಶ್ರೀಮಂತವಾಗಿದೆ ಎಂದು 'ನಾನು ಬಡವಿ' ಕವನದಲ್ಲಿ ಹೇಳುತ್ತಾರೆ. ಆದರೆ ಸಂಸಾರದ ದುಃಖ ನುಂಗಿಕೊಳ್ಳಲು ಕಷ್ಟವಾದಾಗ, ಸರಸದಾಂಪತ್ಯ ವಿರಸದ ಹಾದಿ ಹಿಡಿಯುತ್ತದೆ. 'ನನ್ನ ಕೈಯ ಹಿಡಿದಾಕೆ', 'ಮನದನ್ನೆ', 'ನಗೀ ನವಿಲೆ' 'ನಾನೊಂದು ನೆನೆದರೆ', 'ಬಿಸಿಲು ಕುದುರೆ', 'ಹೆಣದ ಹಿಂದೆ',—ಮುಂತಾದ ಕೃತಿಗಳಲ್ಲಿ ವಿರಸ ದಾಂಪತ್ಯದ ಚಿತ್ರಗಳ ಚಿತ್ರಿಸುತ್ತಾರೆ. 'ಮನದನ್ನೆ' ಕವನದಲ್ಲಿ ಕಷ್ಟಕ್ಕೆ ಸೋತು, ವಾದ-ವಿವಾದದ ಹಾದಿ ಹಿಡಿದ ಸತಿಗೆ ಪತಿ ಹೇಳುತ್ತಾನೆ:

"ವಾದಕ್ಕೆ ಪ್ರತಿವಾದ
ಸಾಕು ವಾದವಿವಾದ
ಜೀವ ಸಂವಾದಕ್ಕೆ ಹಸಿದು ಬಂದೆ,"

"ನನ್ನದಿದು ನಿನ್ನದಿದು
ಎಂದು ಎರಡನು ಬಗೆದು
ಪಾಲುಗಾರಿಕೆಗಾಗಿ ಹೆಣಗಬೇಡ
ನಿನಗೆ ನೀರಿಲ್ಲೆಂದು ಒಣಗಬೇಡ
ನಿನ್ನ ವೈಸಿರಿ ಏನು ನನ್ನ ಐಸಿರಿ ಏನು?
ಒಂದುಸರೆ ತಾನಾಡಿದಂತೆ ಇಹುದು,
ಹೀಗಿರಲು ಬಾಳುದ್ದ ಬದುಕಬಹುದು."

ಅಕಾಲ ಮರಣದಿಂದ ಅನಾಥಳಾದ ಹೆಣ್ಣಿನ ಧ್ವನಿಯನ್ನು 'ಹೆಣದ ಹಿಂದೆ' ಎಂಬ ಕವನದಲ್ಲಿ ಕವಿ ತೀವ್ರವಾಗಿ ಚಿತ್ರಿಸಿದ ರೀತಿ, ಗಂಡ ತನ್ನೊಡನೆ ಸಹ ಜೀವನದಲ್ಲಿ ಸರಿಸಮವಾಗಿ ನಡೆದುಕೊಳ್ಳದಿದ್ದಾಗ ಹೆಂಡತಿ ಗಂಡನನ್ನು 'ಸಖೀ ಗೀತ'ದಲ್ಲಿ ಹಂಗಿಸುವ ರೀತಿ, ವಿರಸವನ್ನು ದುರಂತವೆಂದು ಭಾವಿಸಿದೆ ಅದನ್ನು ವಿರಹದ ಸಂಕೇತವಾಗಿ ಬಳಸಿಕೊಂಡು, ಆ ವಿರಹಾವಸ್ಥೆಯನ್ನು ಸಮರಸ ಜೀವನದ ಸಾಧನವೆಂದು ಚಿತ್ರಿಸುವ ವೈಶಿಷ್ಟ್ಯ, ಇಂದ್ರಿಯ-ಕಾಮವು ವಿರಹಾಗ್ನಿಯಲ್ಲಿ ಪಾಕಗೊಂಡು ಚಿತ್ತದಲ್ಲಿ ಕಾವ್ಯ-ಕಾಮವಾಗಿ, ಭಕ್ತಿ-ಕಾಮವಾಗಿ ಬೇಂದ್ರೆಯ ಕನ್ನಡ ಮೇಘದೂತದ ಪೀಠಿಕೆಯಲ್ಲಿ ಮಿಂಚುವ ಚಿತ್ರ, ತಾಯಿ-ಕೂಸು ಸಂಬಂಧದಲ್ಲಿ ತಾಯಿಯನ್ನು ಮಗುವಿನ ಅಂತರಾತ್ಮವನ್ನು ಕಾಣುವ ಯೋಗಿನಿಯಂತೆ 'ನಾದಲೀಲೆ' ಕೃತಿಯಲ್ಲಿ ಕಾಣುವ ಕವಿಯ ಕಾಣ್ಕೆ, 'ಗೃಹಿಣಿ' ಎಂಬ ಸುನೀತದಲ್ಲಿ ಗೃಹಿಣಿಯ ಹೃದಯದ ಅಂತರಾಳದಲ್ಲಿರುವ ಒಳ್ಳೆಯ ಮಕ್ಕಳನ್ನು ಪಡೆಯುವ ಶಕ್ತಿ ಮತ್ತು ಪ್ರೇಮದ ಸ್ಥಾಯಿಭಾವದ ವರ್ಣನೆ, ವಾತ್ಸಲ್ಯ ಭಾವದ ಸವಿಯನ್ನು ಮಾತೃ ಹೃದಯದ ಭಾಷೆಯಲ್ಲಿ 'ಉಯ್ಯಾಲೆ' ಕೃತಿಯಲ್ಲಿರುವ 'ಕರುಳಿನ ವಚನಗಳಲ್ಲಿ' ಕವಿ ಬಿಂಬಿಸಿದ ವರ್ಣನೆ,—ಹೀಗೆ ಈ ವಿಧವಿಧದ ಸಾಂಸಾರಿಕ ಪ್ರೇಮ ಭಾವದ ಸಹಸ್ರ ಮುಖಗಳ ದರ್ಶನ ಕವಿ ಬೇಂದ್ರೆ ಮಾತ್ರ ಮಾಡಿಸಬಲ್ಲ ಅದ್ಭುತ. ಇಂದ್ರಿಯ ಕಾಮನೆಗಳು, ಭಕ್ತಿ ಕಾಮವಾಗಿ ರೂಪಾಂತರಗೊಂಡಾಗ ಕುಟುಂಬವು ಶುದ್ಧ ಪ್ರೇಮ ಸಂವರ್ಧನೆಯ ಪ್ರಯೋಗಶಾಲೆಯಾಗುತ್ತದೆ. ತಂದೆ-ತಾಯಿ ಮಕ್ಕಳು ಆ ದಿವ್ಯಪ್ರೇಮ ಮಾರ್ಗದ ಸಂಗಾತಿಗಳಾಗುತ್ತಾರೆ. ಆ ರೀತಿ ದಿವ್ಯ ಪ್ರೇಮವನ್ನು ದೈವಿಕ ಭಕ್ತಿಬಾಂಧವ್ಯವನ್ನು ಬೆಸೆಯುವ ಗೃಹಸ್ಥ ಜೀವನದ ಬಗ್ಗೆ ಬೇಂದ್ರೆಯವರಿಗೆ ಅಪಾರ ವಿಶ್ವಾಸ. ಬೇಂದ್ರೆಯ ಕಲ್ಪನೆಯ ಗೃಹಸ್ಥಾಶ್ರಮದಲ್ಲಿ ಸುಖದುಃಖದಲ್ಲಿ ಸಹಭಾವ, ಸ್ನೇಹಭಾವ ಸ್ಥಾಯಿಯಾರುವಂಥದು.

* * *

ಈ ಸಹಸ್ರ ಮುಖದ ಸಾಂಸಾರಿಕ ಚಿತ್ರಗಳಲ್ಲಿ ಕಾಣುವ ಬೇಂದ್ರೆಯವರ ಜೀವನ ದರ್ಶನ ಏನು?

ಜೀವನದಲ್ಲಿ ಸಹಭಾವ-ಸಖಭಾವ-ಸ್ಥಿರಭಾವದ ಪಾಕ ಬರಲು ಮನುಷ್ಯನಿಗೆ ಈ ದೇಹದ ಬಗ್ಗೆ ಪ್ರೀತಿ ಬೇಕು. ಸಂಸಾರದಲ್ಲಿದ್ದು ಈಸಬೇಕು. ಮನುಷ್ಯ ಕೇವಲ ಬೌದ್ಧಿಕತೆಗೆ ಪ್ರಾಮುಖ್ಯತೆ ಕೊಟ್ಟಾಗ ದೇಹವನ್ನೊಳಗೊಂಡ ಜೀವನದಿಂದ ಮತ್ತು ದೇಹಕ್ಕಂಟಿಕೊಂಡ ಸತ್ಯಗಳಿಂದ ವಿಮುಖನಾಗುತ್ತಾನೆ. ಬೇಂದ್ರೆಗೆ ಇದು ಸೇರುವುದಿಲ್ಲ. ದೇಹ ಹೊತ್ತ ಸಂಸಾರ ಕಾಮನೆ ಬಿಟ್ಟು ವಿದೇಹ ಜೀವನ ಅಥವಾ ಮೋಕ್ಷ ಕಾಮನೆ ಹೆಚ್ಚಾದ್ದರಿಂದಲೇ ಭಾರತದಲ್ಲಿ ಮನುಷ್ಯ-ಮನುಷ್ಯ ಸಹಜ ಸಂಬಂಧ ವಿಕೃತಗೊಂಡಿದೆ. ಕಾಮ ಜೀವನದಲ್ಲಿ ಮುಖ್ಯ. ಆದರೆ ಕಾಮ, ಕ್ರೋಧ, ಬಯಕೆಗಳಿಗೆ ಧರ್ಮದ ತಳಪಾಯ ಬೇಕು.

ಗೃಹಸ್ಥಾಶ್ರಮ ಎಲ್ಲಕ್ಕಿಂತಲೂ ದೊಡ್ಡ ಆಶ್ರಮ. ಯಾಕೆಂದರೆ ಇದು ಮನೆ-ಮನೆಗಳನ್ನು ಕಟ್ಟುವ ಪ್ರಯೋಗ ಶಾಲೆ. ಇಲ್ಲಿ ಇಲ್ಲದ್ದು ಜಗತ್ತಿನಲ್ಲಿ ಏನೂ ಸಂಭವಿಸಲು ಸಾಧ್ಯವಿಲ್ಲ. ಕುಟುಂಬದ ಕಲ್ಪನೆ-ವಿಕೃತವಾಗಬಾರದು. ದುಃಖದಲ್ಲಿ ಸಹಭಾಗಿತ್ವ ಇಲ್ಲದಿದ್ದರೆ ಹೆಣ್ಣು-ಗಂಡುಗಳಲ್ಲಿ ದ್ವಂದ್ವ ಉದ್ಭವವಾಗಿ ಕುಟುಂಬದಲ್ಲಿ ವಿಪ್ಲವ ಉಂಟಾಗುತ್ತದೆ.

ಲೈಂಗಿಕತೆ ಕೂಡ ಸಹಭಾವರಲ್ಲಿ ಮಾತ್ರ ಪ್ರಬುದ್ಧತೆ–ಜವಾಬ್ದಾರಿಗಳಿಂದ ತುಂಬಿ ನವಿರು ನವಿರಾದ ಅನುಭವವಾಗುತ್ತದೆ. 'Real sex in life is fellowship between man and woman ಎನ್ನುವ ಪ್ರಸಿದ್ಧ ಸೆಕ್ಸ್ ಮನಃಶಾಸ್ತ್ರಜ್ಞ ಹೆವೆಲಕ್ ಎಲ್ಲಿಸ್‌ನ ತತ್ವವೇ ಬೇಂದ್ರೆಯದ್ದು ಕೂಡ. ಗೃಹಸ್ಥ ಜೀವನದಲ್ಲಿ ಸಮರಸವಿರಬೇಕಾದರೆ ಕುಟುಂಬದ ದೈಹಿಕ ಶ್ರಮದ ದುಡಿಮೆ ಮತ್ತು ಜವಾಬ್ದಾರಿಗಳಲ್ಲಿ ಸಮಾನ ಹಂಚಿಕೆಬೇಕು ಎನ್ನುವ ಬೇಂದ್ರೆಯವರ ಕನಸಿನ ಸಂಸಾರ, ಹೆಣ್ಣು-ಗಂಡಿನ ಅನ್ಯೋನ್ಯತೆ, ಪರಸ್ಪರಾವಲಂಬನ, ಪರಸ್ಪರ ಸಹಭಾಗಿತ್ವ, ಸಮಾನ ಭಾವದ ಮೇಲೆ ನಿಂತಿದೆ. ಇವನ್ನು ಬೇಂದ್ರೆ 'ಸಮ್ಮತ ಭಾವ' ಅಂತ ಕರೆಯುತ್ತಾರೆ. ಕುಟುಂಬದ ಕಲ್ಪನೆ ವಿಕೃತವಾಗಿ ಜೀವನದಲ್ಲಿ ಸಾಂಸಾರಿಕ ಆಯಾಮ ಇಲ್ಲದಿರುವುದೇ ಇಂದಿನ ಎಲ್ಲ ಅಶಾಂತಿಗೆ ಮೂಲ ಕಾರಣ. ಕಪಟ-ಸುಳ್ಳುಗಳ ವೈರಾಗ್ಯ ಮಠದಲ್ಲೂ ಸಂಸಾರ ಎಂಬ ಕಾರಣವಾಯಿತು. ಆದರೆ ಮನೆ ವಿಘಟನೆ ಆಗುವ ಹಂತದಲ್ಲಿದೆ. ಈ ಜಗತ್ತಿನಲ್ಲೇ ಬದುಕಬೇಕಾಗಿರುವ ನಮಗೆ ಕುಟುಂಬವೇ ಬೇಡ ಎನ್ನುವ ಸನ್ಯಾಸ ಜೀವನದ ರತಿ ಒಂದು ರೀತಿಯ ಪಲಾಯನವಾದದ ಅತಿರೇಕತೆ ಎನ್ನುತ್ತಾರೆ ಬೇಂದ್ರೆ. ಕುಟುಂಬ ಬೇಡವೆನ್ನುವ ವಿಕೃತಿ ಕಾಣುವುದು, ಸ್ನೇಹಭಾವದ ಕೊರತೆಯಿಂದಾಗಿ, ಸ್ನೇಹಭಾವ ಪಾಶ್ಚಾತ್ಯ ದಾಂಪತ್ಯದಲ್ಲಿ ಲೈಂಗಿಕ ಸ್ವಚ್ಛಂಧತೆಯಲ್ಲಿ ವಿಕೃತವಾದರೆ, ಭಾರತದಲ್ಲಿ ಅತಿರೇಕ ಮಡಿವಂತಿಕೆ ಮತ್ತು ಸಂಕೋಚಗಳ ನಡುವೆ ಮುರುಟಿಕೊಂಡಿದೆ. ಬೇಂದ್ರೆಯವರ ಪ್ರೇಮಾದ್ವೈತದರ್ಶನದ ಪೂರ್ಣ ಪರಿಚಯ ನಮಗಾಗುವುದು ಅವರ ಸಖೀಗೀತ ಮತ್ತು ಮೇಘದೂತದಲ್ಲಿ. ಬೇಂದ್ರೆಯವರ ಪ್ರೇಮ ದರ್ಶನ ಹೆಣ್ಣು-ಗಂಡನ್ನು, ಕುಟುಂಬವನ್ನು, ಸಮಾಜವನ್ನು, ರಾಷ್ಟ್ರವನ್ನು, ಇಡಿಯ ಜಗತ್ತನ್ನೇ ಹೊಸೆಯುವಂಥದು, ವಿಘಟಿಸುವಂಥದಲ್ಲ.

ಈ ಸ್ನೇಹದಲ್ಲೇ ದಿವ್ಯಾನುಭವವಿದೆ, ಸೌಂದರ್ಯದರ್ಶನವಿದೆ.

ಬೇಂದ್ರೆಯವರು ಭಾರತದ ನೆಲದಲ್ಲಿ ಭದ್ರವಾಗಿ ಬೇರು ಬಿಟ್ಟವರು. ಸ್ಥಳೀಯ ವಾಗಿಯೇ ಯೋಚಿಸುವವರು. ಆದರೆ ಬೇಂದ್ರೆಯ ಸ್ಥಳೀಯ ದರ್ಶನ ಗಾಂಧಿಯ ದರ್ಶನದಂತೆ ಸ್ಥಳೀಯರಾಗಿದ್ದುಕೊಂಡೇ ಜಗತ್ತಿನ ಸಮಸ್ತಕ್ಕೂ ತೆರೆದುಕೊಂಡಂಥದು. ವಿಶಾಲಕ್ಕೆ ಚಾಚಿಕೊಂಡಂಥದು, ತನ್ನ ನೆಲದಲ್ಲಿ ವಿಶ್ವವೇ ಒಂದಾಗುವ ಭವ್ಯ ಮಾನವತೆಯ ಅಖಂಡ ಕಲ್ಪನೆಯಿಟ್ಟುಕೊಂಡಂಥದು. ಇತ್ತೀಚೆಗೆ ಲಂಕೇಶ್ ಅವರು ಬೇಂದ್ರೆ ಬಗ್ಗೆ ಬರೆಯುತ್ತಾ, ಸ್ಥಳೀಯದಲ್ಲಿ ಬೇರುಬಿಟ್ಟು ಸ್ಥಳೀಯನಾಗಿ ಚಿಂತಿಸುವ ಬೇಂದ್ರೆ, ಎಲ್ಲವನ್ನು ಕುರೂಪಗೊಳಿಸುವ ಶಕ್ತಿಯಿರುವ ಆಧುನೀಕತೆ ಮತ್ತು ಜಾಗತಿಕೀಕರಣದ ವಿರುದ್ಧ ಈ ನಮಗೆ ರಕ್ಷಣೆಯ ಉಪಾಯವಾಗಿ ಬಿಡುತ್ತಾರೆ ಎಂದು ಮಾರ್ಮಿಕವಾಗಿ ಹೇಳುತ್ತಾರೆ.

ಆದರೆ ವಿಶ್ವಮಾನವತೆಯ ಅಖಂಡತೆಯಲ್ಲಿ ಕರ್ನಾಟಕ-ಭಾರತ-ಇಡಿಯ ವಿಶ್ವ ಒಂದಾಗಿ ಬೆಸೆಯಬೇಕಾಗಿದ್ದರೆ ಮೂಲದಲ್ಲಿ ಅದು ಆರಂಭವಾಗಬೇಕಾದದ್ದು ಮನೆ-ಮನೆಗಳ ಸಮರಸದಲ್ಲಿ, ಕುಟುಂಬ-ಕುಟುಂಬಗಳ ಸಹಜ ಬಾಂಧವ್ಯದಲ್ಲಿ. ಗೃಹಸ್ಥನಾಗಿದ್ದುಕೊಂಡು ಕುಟುಂಬಕ್ಕೆ ಸಲ್ಲುತ್ತಲೇ ವಿಶ್ವ ಕುಟುಂಬದ ಸತ್ಪ್ರಜೆ ಆಗಬೇಕೆನ್ನುವ ಭವ್ಯ ಆಶಯ ಬೇಂದ್ರೆಯವರದ್ದು. ರಾಷ್ಟ್ರ-ರಾಷ್ಟ್ರಗಳ ಸಮಗ್ರತೆ ಪ್ರಪಂಚವನ್ನು ಒಂದಾಗಿ ಹೆಣೆಯಬೇಕು. ಪ್ರಾದೇಶಿಕ ವೈವಿಧ್ಯತೆಗಳು ಸಮಗ್ರವಾಗಿ ಮೇಳೈಸಿಕೊಂಡು ರಾಷ್ಟ್ರ ಜೀವನವಾಗಬೇಕು. ಕುಟುಂಬ-ಕುಟುಂಬಗಳ ವೈಶಿಷ್ಟ್ಯಗಳು ಒಂದು ಕೂಡಿ ಪ್ರಾದೇಶಿಕ ಅಖಂಡತೆಯಾಗಿ ರೂಪುಗೊಳ್ಳಬೇಕು. ಭಾಷಾಸಂಸ್ಕೃತಿಯು ರಾಷ್ಟ್ರೀಯ ಸಂಸ್ಕೃತಿಗೆ ಪೂರಕವಾಗಿ ಸಹಬಾಳ್ವೆ ನಡೆಸಬೇಕು. "ಕನ್ನಡ ಭಾವವಾದವು ಭಾರತ ರಾಷ್ಟ್ರಭಾವಕ್ಕೆ ಪೋಷಕವಾಗಿ ಬೆಳೆದರೆ, east-westಗಳ ಕೂಡಲ ಸಂಗಮ ಉದ್ಭವಿಸುತ್ತದೆ" ಎನ್ನುತ್ತಾರೆ ಬೇಂದ್ರೆ.

ಸಹಜೀವನವು ಸಮಾನಶೀಲರಲ್ಲಿ ಸಾಧ್ಯ. ಕೌಟುಂಬಿಕ ಸಹಭಾವದ ಅನುಭಾವದಿಂದ ಭಾಷೆ ಬೆಳೆತದೆ, ಭಾಷಿತ ಜನಪದ ಭಾವ ಬೆಳೀತದೆ ಮತ್ತು ಇದು ಭಾಷೀಯ ಪಂಗಡಗಳಿಗೆ 'ಐಡೆಂಟಿಟಿ' ಒದಗಿಸುತ್ತದೆ. ಈ ಭಾಷಿತ ಜನಾಂಗಗಳು, ಸ್ಥಳೀಯತೆಯ ವಿಶಿಷ್ಟ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಈ ವೈಶಿಷ್ಟ್ಯಪೂರ್ಣ ಪ್ರಾದೇಶಿಕತೆಗಳ ಪ್ರೇಮಾದ್ವೈತದಲ್ಲಿ ರಾಷ್ಟ್ರ ನಿರ್ಮಾಣವಾಗುತ್ತದೆ. ಹಾಗಾಗಿ ಭಾಷಾ ಸಂಸ್ಕೃತಿಯು ರಾಷ್ಟ್ರ ಸಂಸ್ಕೃತಿಯ ಅಂಗ, ರಾಷ್ಟ್ರವು ಮಾನವತೆಯ ಅಂಗ, ಮಾನವತೆಯು ದೈವಿಕತೆಯ ಕ್ಷೇತ್ರ—ಈ ಸಂಬಂಧ ಜ್ಞಾನ ಬೆಳೆಯಬೇಕು ಹಾಗಾಗಿ, ರಾಷ್ಟ್ರನೆಂಬುದು ಪ್ರೇಮಾದ್ವೈತ ಕುಟುಂಬಗಳ ಸಂಘವಲ್ಲದೆ ಮತ್ತೇನು ಎಂದು ಬೇಂದ್ರೆಯವರು ಪ್ರಶ್ನಿಸುತ್ತಾರೆ. ಇಂಥ ರಾಷ್ಟ್ರಗಳ ಸಹಭಾವವೇ ಮಾನವತೆ, ಮಾನವತೆಯ ಪರಿಪಾಕವೇ ದೈವಿಕತೆ. ಈ ವಿಶ್ವಭಾವವು ಮೂಲಭೂತವಾಗಿ ಆಧ್ಯಾತ್ಮದರ್ಶನ ಎನ್ನುವ ಬೇಂದ್ರೆ, ಮೂಲತಃ Community is the core of social life ಎನ್ನುತ್ತಾರೆ.

ಕುಟುಂಬ ಸಮುಚ್ಚಯದಿಂದಲೇ ವಿಶ್ವವೆನ್ನುವ ಬೇಂದ್ರೆಯ ಕಲ್ಪನೆ, ಜೀವಕೋಶ

ಗಳ ಸಮುಚ್ಚಯದಿಂದಲೇ ಜೀವಿಎನ್ನುವಂತೆ. ಶಬ್ದಗಳ ಜಾಲದಂತಿರುವ ಬೇಂದ್ರೆಯ ಮಾತುಗಳೆಲ್ಲಾ ಒಂದು ಏಕತ್ರ ಅಖಂಡ ಸೂತ್ರದಲ್ಲಿ ಪೋಣಿಸಿದವುಗಳು. ಬೇಂದ್ರೆಯವರ ವಿಶ್ವದ ಕಲ್ಪನೆ ಒಂದರೊಳಗೊಂದು ಅಂತರ್ಗತವಾಗಿ ಹೆಣೆದುಕೊಂಡಿರುವ ಜೀವಂತ ಜೈವಿಕ ರಚನೆಯಂತೆ ಒಂದು ಸಮಗ್ರ ಕುಟುಂಬ. ಜೀವಕೋಶದಂತೆ (cell) ತನ್ನ ಕೇಂದ್ರಕ್ಕೆ ಪೂರಕವಾಗಿ ಸ್ಪಂದಿಸುತ್ತಾ ಜೀವಂತವಾಗಿದೆ. ಈ ಜೀವಕೋಶಗಳ ಸಮುಚ್ಚಯದಿಂದ ಒಂದು ಅಂಗಾಂಗದ ರಚನೆಯಾದಂತೆ ಕುಟುಂಬಗಳ ಸಮುಚ್ಚಯದಿಂದ ಜೀವಂತ ಸಮಾಜದ ರಚನೆ. ದೇಹದ ವಿಭಿನ್ನ ಅಂಗಾಂಗಗಳ ಪರಸ್ಪರ ಅಂತರ್‌ಪ್ರಭಾವ, ಅಂತರ್ ಪ್ರಕ್ರಿಯೆಗಳ ಮೂಲಕ ಹೆಣೆದುಕೊಂಡು ಒಂದು ಜೀವಂತ ಅವಯವವಾದಂತೆ, ಈ ವಿಭಿನ್ನ ಸಮಾಜಗಳು ಪರಸ್ಪರ ಅಂತರ್ ಪ್ರಕ್ರಿಯೆಯ ಮೂಲಕ ರಾಷ್ಟ್ರವಾಗುತ್ತವೆ. ದೇಹದ ವಿವಿಧಭಾಗಗಳು ಸೇರಿ ಸಮಷ್ಟಿ ಜೀವಿಯ ರಚನೆಗೆ ಕಾರಣವಾದಂತೆ ಈ ರಾಷ್ಟ್ರಗಳೆಲ್ಲ ಸೇರಿ ವಿಶ್ವವಾಗುತ್ತದೆ. 'ಸಹಸ್ರ ಶೀರ್ಷಾ ಪುರುಷಃ' ಎನ್ನುವ ಇಂಥ ಅಖಂಡ ಪುರುಷನ ಕಲ್ಪನೆ ಬೇಂದ್ರೆಯವರದ್ದು.

ಕೌಟುಂಬಿಕ ಅನ್ಯೋನ್ಯತೆಯ (mutuality) ಮೂಲಕವೇ ಬೇಂದ್ರೆ ಸಾಕ್ಷಾತ್ಕರಿಸಿಕೊಳ್ಳುವ ವಿಶ್ವರೂಪದರ್ಶನ (global vision) ನವೋದಯ ಕಾಲದ ಬೇರೆಲ್ಲ ಲೇಖಕರಿಗಿಂತಲೂ ಪ್ರಖರವಾಗಿದೆ ಮತ್ತು ವಿಶಿಷ್ಟವಾಗಿದೆ. ಪಿಂಡಾಂಡದಲ್ಲಿ ಸಲ್ಲುವುದು ಬ್ರಹ್ಮಾಂಡಕ್ಕೂ ಸಲ್ಲುತ್ತದೆ. ಪಿಂಡಾಂಡದಲ್ಲಿ ಕಾಣದ್ದು ಬ್ರಹ್ಮಾಂಡದಲ್ಲೂ ಕಾಣಲು ಸಾಧ್ಯವಿಲ್ಲ ಎಂಬ micro-macro ಸಮ್ಮಿಲನದ ಸಮಗ್ರದರ್ಶನ ಬೇಂದ್ರೆಯವರ ಚಿಂತನದ ಪ್ರಧಾನ ವಾಹಿನಿಯಾಗಿದೆ. ಎಲ್ಲವನ್ನು ಒಳಗೊಳ್ಳುವ ಸಮಗ್ರ ತತ್ವವು ನಮ್ಮ ದೇಹ, ನಮ್ಮ ಕುಟುಂಬ ಮತ್ತು ನಮ್ಮ ಸುತ್ತಮುತ್ತಲಿರುವ ಪರಿಸರಗಳಿಂದಲೇ ಆರಂಭವಾಗಬೇಕು ಎನ್ನುವ ಬೇಂದ್ರೆಗೆ, ಸ್ಥಳೀಯ ವಿಶಿಷ್ಟತೆಯನ್ನು ಕಡೆಗಣಿಸುವ ಅಮೂರ್ತವಾದ, ಹುಸಿ ವಿಶ್ವಭ್ರಾತೃತ್ವದ ಉದ್ದುದ್ದ ಆದರ್ಶ ಮಾತುಗಳು ಹಿಡಿಸುತ್ತಿರಲಿಲ್ಲ. ಅವರನ್ನೊಮ್ಮೆ ಯುರೋಪಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿದ ಸಂದರ್ಭದಲ್ಲಿ, 'ಈ ಶುಕ್ರವಾರ ಪೇಟೆಯೊಳಗೆ ಹುಟ್ಟಿದ ಜಗಳಾನೇ ಇನ್ನೂ ತೀರ್ಮಾನ ಆಗಲಿಲ್ಲ, ಅಲ್ಲಿಗೆ ಹೋಗಿ ಏನು ಮಾಡೋದು" ಎಂದು ಬಂದ ಆಹ್ವಾನವನ್ನು ನಿರಾಕರಿಸಿದ್ದರಂತೆ.

ಬೇಂದ್ರೆ ಕನ್ನಡ ಸಾಹಿತ್ಯದಲ್ಲಿ ಮಿಂಚಿದ ಒಬ್ಬ ವಿಲಕ್ಷಣ 'ಜೀನಿಯಸ್' ಮೆದುಳಿನ ಅತಿಹರಿತವಾದ ವಿಶ್ಲೇಷಣಾತ್ಮಕ ಬುದ್ಧಿವಂತಿಕೆಯನ್ನೇ ನಿಜ ಜ್ಞಾನವೆಂದು ಭ್ರಮಿಸುವ ಈ ಕಾಲದಲ್ಲಿ ಸೂಕ್ಷ್ಮ ಒಳನೋಟಗಳುಳ್ಳ. ಅಪೂರ್ವ ಕಲ್ಪನಾವಿಲಾಸ ಮೈಗೂಡಿಕೊಂಡ ಸಮಗ್ರದರ್ಶಿ ಪ್ರಕಟವಾಗುವುದೇ ಅಪರೂಪ. ಬೇಂದ್ರೆ ಎಂಥ ಒಬ್ಬ ಅಪರೂಪದ ಅಪೂರ್ವ ಕವಿ. ಆಧುನಿಕ ತಾಂತ್ರಿಕ ಪ್ರಗತಿಯ ಸಂಕೀರ್ಣತೆಯ ಮಧ್ಯೆ ಎಚ್ಚರ ತಪ್ಪದಂತೆ, ಬೇಂದ್ರೆ ನಮ್ಮೊಳಗೆ ಅಂತಃಪ್ರಜ್ಞೆಯಾಗಿ ನಮ್ಮ ಅಂತರಂಗದ ಆರೋಗ್ಯವನ್ನು ಕಾಪಾಡುವ ಶಕ್ತಿ ಪಡೆದವರು.

# ದ. ರಾ. ಬೇಂದ್ರೆಯವರ ಜೀವನ ಸೂಚಿ....

| | |
|---|---|
| ೩೧- ೧-೧೮೯೬ | ಧಾರವಾಡದಲ್ಲಿ ಜನನ. ಮಾಘವದ್ಯ (ಪ್ರತಿಪದೆ, ಗುರು ಪ್ರತಿಪದೆ, ಮನ್ಮಥನಾಮ ಸಂವತ್ಸರ). |
| ೧೯೦೭ | ತಂದೆ ರಾಮಚಂದ್ರ ಬೇಂದ್ರೆ ಅವರ ಮರಣ. |
| " ೧೩ | ಮ್ಯಾಟ್ರಿಕ್ ಮುಗಿಸಿ ಪುಣೆ ಫರ್ಗ್ಯೂಸನ್ ಕಾಲೇಜಿಗೆ ಸೇರಿದ್ದು. |
| " ೧೬ | ಪುಣೆ ಕರ್ನಾಟಕ ಸಂಘದಲ್ಲಿ ಪ್ರಥಮವಾಗಿ ಕವಿತಾವಾಚನ. |
| " ೧೮ | ಬಿ. ಎ. ಪಾಸು, ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ ವೃತ್ತಿ. |
| " ೧೯ | ಲಕ್ಷ್ಮೀಬಾಯಿಯವರೊಡನೆ ವಿವಾಹ ; ಹುಬ್ಬಳ್ಳಿಯಲ್ಲಿ. |
| " ೨೨ | ಮೊದಲ ಪುಸ್ತಕ (ಕೃಷ್ಣಾಕುಮಾರಿ ಪ್ರಕಟನೆ.) |
| " ೨೯ | ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ 'ಹಕ್ಕಿ ಹಾರುತಿದೆ ನೋಡಿದಿರಾ' ಕವನ ವಾಚನ. |
| " ೩೦ | ಗೆಳೆಯರ ಗುಂಪಿನ ಕವಿಗಳ ಕವನ ಸಂಕಲನ 'ಹಕ್ಕಿ ಹಾರುತಿದೆ' ಪ್ರಕಟನೆ ; ಮೈಸೂರಿನ ಲೇಖಕರ ಗೋಷ್ಠಿಯ ಅಧ್ಯಕ್ಷತೆ. |
| " ೩೨ | ಪ್ರಥಮ ಕವನ ಸಂಕಲನ 'ಗರಿ' ಪ್ರಕಟನೆ, 'ನರಬಲಿ' ಕವನದ ನಿಮಿತ್ತ ಜೇಲುವಾಸ. |
| " ೩೫ | ಎಂ. ಎ. ಪಾಸು ; ಮುಂಬೈ ಕವಿಸಮ್ಮೇಳನದ ಅಧ್ಯಕ್ಷತೆ. |
| " ೪೨ | ಧಾರವಾಡದ ನ್ಯೂ ಇಂಗ್ಲಿಷ್ ಹೈಸ್ಕೂಲಿನಲ್ಲಿ ಶಿಕ್ಷಕ ಕೆಲಸ. |
| " ೪೩ | ಪುಣೆ ಕಾಮರ್ಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ; ಶ್ರೀ ಅರವಿಂದರ ದರ್ಶನಭಾಗ್ಯ. |
| ೨೬-೧೨-೧೯೪೩ | ಶಿವಮೊಗ್ಗದ ೨೬ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. |
| ೧೯೪೪ | ಡಿ.ಎ.ವಿ. ಕಾಲೇಜು ಸೊಲ್ಲಾಪುರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ. |
| ೧೯೪೬ | ಧಾರವಾಡದಲ್ಲಿ ೫೦ನೇ ಹುಟ್ಟುಹಬ್ಬ, ೧೦ ಸಾವಿರ ನಿಧಿ ಅರ್ಪಣೆ. |
| " ೫೬ | ಡಿ.ಎ.ವಿ. ಕಾಲೇಜು ಸೊಲ್ಲಾಪುರದ ಕನ್ನಡ ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ; ಆಕಾಶವಾಣಿ ಧಾರವಾಡ ಕೇಂದ್ರದ ಸಾಹಿತ್ಯ ಸಲಹೆಗಾರರಾಗಿ ಕೆಲಸ ; ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ—೬೦ನೇ ಹುಟ್ಟು ಹಬ್ಬದ ಸನ್ಮಾನ. |

೧೯೫೯ 'ಅರಳು-ಮರಳು' ಕವನ ಗುಚ್ಛಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ.

" ೬೩ ತುಮಕೂರಿನ ಪುರಸಭೆಯವರಿಂದ ಸನ್ಮಾನ.

" ೬೪ ಮೈಸೂರು ದಸರಾ ಉತ್ಸವ ಸಮಿತಿಯವರಿಂದ ಸನ್ಮಾನ.

" ೬೬ 'ಸಂವಾದ' ಮರಾಠಿ ಗ್ರಂಥಕ್ಕೆ ಮಹಾರಾಷ್ಟ್ರದ ಕೇಳಕರರ ಪ್ರಶಸ್ತಿ; ಶಿರಹಟ್ಟಿಯಲ್ಲಿ ೭೦ನೇ ಹುಟ್ಟು ಹಬ್ಬ; ಕರ್ನಾಟಕ ಸರ್ಕಾರದಿಂದ ಆಜನ್ಮ ಗೌರವ ವಿಶ್ರಾಂತಿ ವೇತನ; ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಹೈದರಾಬಾದ್ ಪ್ರಚಾರ ಸಭಾದವರಿಂದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ.

೨– ೮–೧೯೬೬ ಪತ್ನಿ ವಿಯೋಗ.

೧೯೬೮ ಪದ್ಮಶ್ರೀ ಪ್ರಶಸ್ತಿ; ಮೈಸೂರಿನಲ್ಲಿ ಸನ್ಮಾನ; ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್.

" ೬೯ ಕೇಂದ್ರ ಸಾಹಿತ್ಯ ಅಕಾಡೆಮಿ, ದೆಹಲಿ ಅವರಿಂದ 'ಫೆಲೋ' ಪದವಿ ನೀಡಿಕೆ.

" ೭೩ 'ಕರ್ನಾಟಕ ಕವಿ ಕುಲತಿಲಕ' ಪ್ರಶಸ್ತಿ—ಶ್ರೀ ಅದಮಾರು ಮಠ —ಉಡುಪಿ ಇವರಿಂದ, ಕರ್ನಾಟಕ ಸರ್ಕಾರದಿಂದ 'ಸಾಕ್ಷ್ಯ ಚಿತ್ರ' ತಯಾರಿಕೆ.

" ೭೫ನೇ ಹುಟ್ಟು ಹಬ್ಬದ ನಿಮಿತ್ತ ಸೊಲ್ಲಾಪುರದಲ್ಲಿ ಮತ್ತು ಪುಣೆಯಲ್ಲಿ ಸನ್ಮಾನ.

" ೭೪ 'ನಾಕು ತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ.

" ೭೬ ಕಾಶೀ ವಿದ್ಯಾಪೀಠ, ವಾರಣಾಸಿಯಿಂದ ಗೌರವ ಡಾಕ್ಟರೇಟ್.

೨೬–೧೦–೧೯೮೧ ನಿಧನ; ಮುಂಬಯಿಯಲ್ಲಿ. ದುರ್ಮತಿ ಸಂವತ್ಸರ ಅಶ್ವಯುಜ ಬಹುಳ, ಚತುರ್ದಶಿ.

———

# ದ. ರಾ. ಬೇಂದ್ರೆಯವರ ಕೃತಿ ಸೂಚಿ—

## ಕವನ ಸಂಗ್ರಹಗಳು

೧೯೨೨ ಕೃಷ್ಣಾಕುಮಾರಿ
" ೩೨ ಗರಿ
" ೩೪ ಮೂರ್ತಿ ಮತ್ತು ಕಾಮಕಸ್ತೂರಿ
" ೩೪ ಸಖೀಗೀತ
" ೩೮ ಉಯ್ಯಾಲೆ
" ೩೮ ನಾದಲೀಲೆ
" ೪೩ ಮೇಘದೂತ
" ೪೬ ಹಾಡು–ಪಾಡು
" ೫೧ ಗಂಗಾವತರಣ
" ೫೬ ಸೂರ್ಯಪಾನ
" ೫೬ ಅರಳು–ಮರಳು
" ೫೬ ಹೃದಯ ಸಮುದ್ರ
" ೫೬ ಮುಕ್ತಕಂಠ
" ೫೭ ಚೈತ್ಯಾಲಯ
" ೫೭ ಜೀವಲಹರಿ
" ೫೮ ನಮನ
" ೫೯ ಸಂಚಯ
" ೬೦ ಉತ್ತರಾಯಣ
" ೬೧ ಮುಗಿಲಮಲ್ಲಿಗೆ
" ೬೨ ಯಕ್ಷಯಕ್ಷಿ
" ೬೪ ನಾಕುತಂತಿ
" ೬೬ ಮರ್ಯಾದೆ
" ೬೮ ಶ್ರೀಮಾತಾ
" ೬೮ ಬಾಹತ್ತರ
೧೯೭೦ ಇದುನಭೋವಾಣಿ
" ೭೨ ವಿನಯ
" ೭೩ ಮತ್ತೆ ಶ್ರಾವಣಾಬಂತು
" ೭೭ ಒಲವೆ ನಮ್ಮ ಬದುಕು
೧೯೭೮ ಚತುರೋಕ್ತಿ
" ೮೨ ಪರಾಕಿ
" ೮೨ ಕಾವ್ಯವೈಖರಿ
" ೮೩ ಬಾಲಬೋಧೆ
" ೮೩ ತಾ ಲೆಕ್ಕಣಿಕೆ ತಾ ದೌತಿ

## ವಿಮರ್ಶೆ

" ೩೬ ಸಾಹಿತ್ಯ ಮತ್ತು ವಿಮರ್ಶೆ
" ೪೦ ಸಾಹಿತ್ಯ ಸಂಶೋಧನೆ
" ೪೫ ವಿಚಾರ ಮಂಜರಿ
" ೫೪ ಕವಿಲಕ್ಷ್ಮೀಶನ ಜೈಮಿನೀ ಭಾರತಕ್ಕೆ ಮುನ್ನುಡಿ
" ೫೯ ಮಹಾರಾಷ್ಟ್ರ ಸಾಹಿತ್ಯ
" ೬೨ ಕಾವ್ಯೋದ್ಯೋಗ
" ೬೮ ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು
" ೭೪ ಸಾಹಿತ್ಯದ ವಿರಾಟ್ ಸ್ವರೂಪ
" ೭೬ 'ಕುಮಾರವ್ಯಾಸ' ಪುಸ್ತಿಕೆ
" ೭೯ ಮಾನವಧರ್ಮ ಮತ್ತು ಆಧುನಿಕ ಮಾನವ

## ನಾಟಕಗಳು

೧೯೨೦ ಗೋಲ್
" ೨೪ ತಿರುಕರ ಪಿಡುಗು
" ೨೫ ಸಾಯೋಆಟ
" ೩೪ ಜಾತ್ರೆ
" ೩೬ ಹಳೆಯ ಗೆಳೆಯರು
" ೩೬ ದೆವ್ವನ ಮನೆ
" ೩೬ ನಗೆಯ ಹೊಗೆ
" ೪೭ ಉದ್ಧಾರ
" ೪೯ ಮಂದೀಮದಿವಿ
" ೭೬ ಮಕ್ಕಳು ಆಡಿಗಿಮನಿ ಹೊಕ್ಕರೆ
" ೮೦ ಶೋಭನಾ
" ೮೦ ಅಥರಾ ಈಥರಾ
" ೮೧ ಮಂದೀ ಮನಿ

## ಸಣ್ಣಕತೆ, ಹರಟೆ

೧೯೪೦ ನಿರಾಭರಣ ಸುಂದರಿ

## ಭಾಷಣಗಳು

" ೭೧ ಮಾತೆಲ್ಲ ಜ್ಯೋತಿ

## ಕನ್ನಡಕ್ಕೆ ಅನುವಾದ

" ೨೮ ಉಪನಿಷತ್ ರಹಸ್ಯ (ಮೂಲ: ಇಂಗ್ಲಿಷ್ ಗ್ರಂಥ: ಗುರುದೇವ ರಾನಡೆಯವರದು)
೧೯೩೬ ಭಾರತೀಯ ನವಜನ್ಮ (ಮೂಲ: ಇಂಗ್ಲಿಷ್ ಗ್ರಂಥ: ಶ್ರೀಅರವಿಂದರದು)
" ೪೭ ಶ್ರೀ ಅರವಿಂದರಯೋಗ, ಆಶ್ರಮ ಮತ್ತು ತತ್ತ್ವೋಪದೇಶ
" ೬೭ ನೂರೊಂದು ಕವನ (ಮೂಲ: ರವೀಂದ್ರನಾಥ ಟಾಗೋರ್, ಸಾಹಿತ್ಯ ಅಕಾಡೆಮಿಗಾಗಿ)
" ೬೮ ಕಬೀರ ವಚನಾವಲಿ (ಮೂಲ: ಹಿಂದಿ, ಸಾಹಿತ್ಯ ಅಕಾಡೆಮಿಗಾಗಿ)
" ೭೨ ಭಗ್ನಮೂರ್ತಿ (ಮೂಲ: ಮರಾಠಿ: ಶ್ರೀ ಅ. ರಾ. ದೇಶಪಾಂಡೆ, ಸಾಹಿತ್ಯ ಅಕಾಡೆಮಿಗಾಗಿ)

## ಮರಾಠಿ ಭಾಷೆಯಲ್ಲಿ ರಚಿಸಿದ ಕೃತಿಗಳು

೧೯೬೫ ಸಂವಾದ–ಕವನ ಮತ್ತು ವಿಮರ್ಶೆ, ಲೇಖನ ಇವುಗಳ ಸಂಗ್ರಹ
" ೬೫ ವಿಟ್ಠಲ ಸಂಪ್ರದಾಯ–ಒಂದು ಭಾಷಣ.
" ೭೨ ಶಾಂತಲಾ (ಮೂಲ: ಕನ್ನಡ, ಸಾಹಿತ್ಯ ಅಕಾಡೆಮಿಗಾಗಿ)
" ೮೦ ಸಂತ ಮಹಂತಾಂಚಾ ಪೂರ್ಣ ಶಂಭೋವಿಟ್ಠಲ.

(ಬೇಂದ್ರೆ ಅವರ ಛಾಯಾ ಚಿತ್ರಗಳು, ಜೀವನ ಮತ್ತು ಕೃತಿ ಸೂಚಿ ಕೃಪೆ: ಶ್ರೀ ಜಿ. ಕೃಷ್ಣಪ್ಪ)

**ಈ ಸಂಚಿಕೆಯ ಲೇಖಕರು—**

ಸರ್ವಶ್ರೀಗಳಾದ—

೧. ಡಾ॥ ದೇ. ಜವರೇಗೌಡ, ವಿಶ್ರಾಂತ–ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

೨. ವಿಮಾಲಾ ವಾಂಗೀಕರ, ಆಶೀರ್ವಾದ್, ಪುರಂದರ ಲೇನ್, ೧೨೦೪-೨೮,
ಶಿವಾಜಿ ನಗರ, ಪುಣೆ–೪೧೧ ೦೦೪.

೩. ಲತಾ ರಾಜಶೇಖರ್,
ನಂ. ೧೬, ದೇವಸ್ಥಾನ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨.

೪. ಎನ್ಕೆ–'ಪರಿಮಳ', ರೈಲ್ವೆ ಗೂಡ್ಸ್‌ಷೆಡ್ ಬಳಿ, ಧಾರವಾಡ–೫೮೦ ೦೦೭.

೫. ಚಂದ್ರಶೇಖರಾರಾಧ್ಯ, ಸಂಪಾದಕ, ಕ.ರಾ.ವ.ಶಿ.ಸ, ಮೈಸೂರು–೫೭೦ ೦೦೬.

೬. ಡಾ॥ ಆರ್. ರಾಮಕೃಷ್ಣ, ಅಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

೭. ಪ್ರೊ॥ ಎಂ. ರಾಜಗೋಪಾಲಾಚಾರ್ಯ, 'ಸುಗುಣ ಮಾಲಾ', ಉಡುಪಿ (ದ.ಕ.)

೮. ಜಿ. ಟಿ. ನಾರಾಯಣರಾವ್, ನಂ. ೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತೀಪುರಂ, ಮೈಸೂರು–೫೭೦ ೦೦೯.

೯. ಕೆ. ಮೊಹಮ್ಮದ್ ಷರೀಫ್,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬.

೧೦. ಕೆ. ಸಚ್ಚಿದಾನಂದಯ್ಯ (ಚಿರಂತನ) ೧೩೧೬, ಇಂದ್ರಶ್ರೀ, ಪಡುವಣ ರಸ್ತೆ,
ಕುವೆಂಪುನಗರ, ಮೈಸೂರು–೫೭೦ ೦೨೩.

೧೧. ಪ್ರೊ॥ ಕು. ಶಿ. ಹರಿದಾಸಭಟ್ಟ, ಎಂ. ಜಿ. ಎಂ. ಕಾಲೇಜು, ಉಡುಪಿ (ದ.ಕ.)

೧೨. ಎಸ್. ಶ್ರೀಶಬಲ್ಲಾಳ,
ಅಂಬಲಪ್ಪಾಡಿ ದೇವಸ್ಥಾನದ ಬಳಿ, ಅಂಬಲಪ್ಪಾಡಿ, ಉಡುಪಿ–೨ (ದ.ಕ.)

೧೩. ಡಾ॥ ಲಕ್ಷ್ಮೀನಾರಾಯಣ ಅರೋರಾ, 'ಅನುಪಮ' ೧೧೩೬, ಮೊದಲನೇ ಕ್ರಾಸ್,
ಲಲಿತಾದ್ರಿ ರಸ್ತೆ, ಕುವೆಂಪುನಗರ, ಮೈಸೂರು–೫೭೦ ೦೨೩.

೧೪. ಜಿ. ಕೃಷ್ಣಪ್ಪ, ಸೀನಿಯರ್ ಇನ್ಸ್‌ಪೆಕ್ಟರ್, ಪ್ರಾದೇಶಿಕ ಸಾರಿಗೆ ಕಛೇರಿ, ಮೈಸೂರು.

೧೫. ಡಾ॥ ಸಿ. ಪಿ. ಕೃಷ್ಣಕುಮಾರ್, ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬.

೧೬. ಡಾ॥ ಕೆ. ಸುಬ್ರಹ್ಮಣ್ಯಭಟ್ಟ, ಪ್ರಾಧ್ಯಾಪಕ ಮತ್ತು ಅಧ್ಯಕ್ಷ, ಕನ್ನಡ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ, ೫೭೪ ೧೯೯–(ದ.ಕ.)

೧೭. ಸೀತಾರಾಮ ಜಾಗೀರ್‌ದಾರ್, ಮನೆ ನಂ. ೪೦೬/ಬಿ. ೧, ೩ನೇ ಮುಖ್ಯ ರಸ್ತೆ,
ಸರಸ್ವತೀಪುರಂ, ಮೈಸೂರು–೫೭೦ ೦೦೯.

೧೮. ಡಾ॥ ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ, ಪ್ರಾಧ್ಯಾಪಕರು,
ಕನ್ನಡ ವಿಭಾಗ–ಸ್ನಾತಕೋತ್ತರ ಕೇಂದ್ರ ಜ್ಞಾನ ಭಾರತಿ–
ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೧೯. ಡಾ॥ ನಿ. ಮುರಾರಿ ಬಲ್ಲಾಳ, 'ಮಾನಸ', ಅಂಬಲಪಾಡಿ, ಉಡುಪಿ–೫೭೬ ೧೦೩

Reg. No. KRNN.29 / WPP 6

LICENCE No. 21
LICENCED TO POST WITH PAYMENT

**ತಲಾ ರೂ. ೨-೫೦ ದರದಲ್ಲಿ ಸಮಿತಿಯ ಕೆಳಕಂಡ ಪ್ರಕಟಣೆಗಳು ದೊರೆಯುತ್ತವೆ.**

ಪ್ರತಿ ಪುಸ್ತಕಗಳು ಅಷ್ಟದಳದಲ್ಲಿ ಗರಿಷ್ಠ ೩೨ ಪುಟಗಳನ್ನು ಹೊಂದಿರುತ್ತವೆ. ಅಂಚೆ ಮೂಲಕ ಪುಸ್ತಕಗಳನ್ನು ಅಪೇಕ್ಷಿಸುವವರು, ಅಂಚೆ ವೆಚ್ಚ ಪ್ರತ್ಯೇಕವಾಗಿ ಕಳುಹಿಸಬೇಕು.

ಪುಟ್ಟಾಚಾರಿಯ ಕಾಡುಕೋಳಿ—ಕುವೆಂಪು
ಗೋಪಾಲಕೃಷ್ಣ ಗೋಖಲೆ—ಡಾ॥ ದೇ. ಜವರೇಗೌಡ
ಗುರುದೇವ ರವೀಂದ್ರರು—ಡಾ॥ ಹಾ. ಮಾ. ನಾಯಕ
ಮಾನೌಮಿ ಪದಗಳು—ಕೆ. ಆರ್. ಲಿಂಗಪ್ಪ
ಡಾ॥ ಜಕೀರ್ ಹುಸೇನ್—ಭಾರತೀಸುತ
ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರ ಭಟ್ಟ
ಪುಟಾಣಿಗಳ ರಾಜ್ಯ—ಎಸ್. ಅನಂತನಾರಾಯಣ
ನಂಬಿಕೆಯ ನಂಟ—ದೇವನೂರು ಮಹಾದೇವ
ನಾಗಮಹಾಶಯ—ಉ. ಕಾ. ಸುಬ್ಬರಾಯಾಚಾರ್
ತಿರುವಲ್ಲುವರ್—ಸಿಂಪಿ ಲಿಂಗಣ್ಣ
ಸೀತಾ ವನವಾಸ—ತ. ಸು. ಶಾಮರಾವ್
ದ್ರೌಪದಿಯ ಭಂಗ—ಕೂಡಲಿ ಚಿದಂಬರಂ
ಬೆಳಗೊಳದ ಗೊಮ್ಮಟೇಶ—ಜೀ. ಶಂ. ಪರಮಶಿವಯ್ಯ
ಬದುಕು ಬಂಗಾರ—ಕ್ಯಾತನಹಳ್ಳಿ ರಾಮಣ್ಣ
ಕೂಡಲ ಸಂಗಮ—ಈಶ್ವರಚಂದ್ರ ಚಿಂತಾಮಣಿ
ಜಪಾನ್—ಸಿಸು ಸಂಗಮೇಶ
ನನ್ನ ಮಗುವಿನ ಶಾಲೆ—ಮಿರ್ಜಿ ಅಣ್ಣಾರಾಯ
ನಾಗರಮರಿ—ತ.ರಾ.ಸು
ಅಲ್ಲಮ ಪ್ರಭು—ಡಾ॥ ಪ್ರಭುಶಂಕರ್
ಸಾಕ್ರೆಟೀಸ್—ಡಾ॥ ಸಿ. ಪಿ. ಕೃಷ್ಣಕುಮಾರ್
ಶಕುಂತಲೆ—ವಿ. ಸೀತಾರಾಮಯ್ಯ
ಮಾರಿಯ ಕಲ್ಲು—ಕೆ. ಎಸ್. ನರಸಿಂಹಸ್ವಾಮಿ
ಶಾಲುಸಾಬಿ—ಗೊರೂರು ರಾಮಸ್ವಾಮಿ ಅಯ್ಯಂಗಾರ್
ನಳಚರಿತ್ರೆಯ ಸಂಗ್ರಹ—ಎಚ್. ಎಂ. ಶಂಕರನಾರಾಯಣರಾವ್
ಮಕ್ಕಳ ಬೆಳವಣಿಗೆ—ಡಾ॥ ಬಿ. ಕುಪ್ಪುಸ್ವಾಮಿ

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.

Phone: 512485